ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೪

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 14ನೆಯ ಸಂಪುಟ ಮುಗಿಯು ತ್ತದೆ. 15ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿ ಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರ ಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು

ಕೆ. ಟಿ. ವೀರಪ್ಪ

ನಿರ್ದೇಶಕ

ಮಾನ್ಯರೆ,

ದಯವಿಟ್ಟು ನನ್ನನ್ನು / ಈ ಸಂಸ್ಥೆಯನ್ನು 'ಮಾನವಿಕ ಕರ್ಣಾಟಕ'ದ ಹದಿನೈದನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ
(ರುಜು)

1. ಹೆಸರು: —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಮಾನವಿಕ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಮಾನವಿಕ ಕರ್ಣಾಟಕದ ಚಂದಾ ವಿವರ :

ಆಜೀವ ಸದಸ್ಯತ್ವ	:	ರೂ.	100–00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ.	4–00
ಇತರರಿಗೆ	:	ರೂ.	6–00
ಸಂಸ್ಥೆಗಳಿಗೆ	:	ರೂ.	8–00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು–570006

ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೪

೫೬

ಆಗಸ್ಟ್ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೪

MANAVIKA KARNATAKA, Kannada quarterly of the University of Mysore, Volume 14, Number 4, August 1984
Edited by Dr. B.K. Gururaja Rao and Dr. C.K. Renukarya

ಪ್ರಧಾನ ಸಂಪಾದಕರು

ಡಾ|| ಹಾ. ಮಾ. ನಾಯಕ

ಸಂಪಾದಕರು

ಡಾ|| ಬಿ. ಕೆ. ಗುರುರಾಜರಾವ್
ಡಾ|| ಸಿ. ಕೆ. ರೇಣುಕಾರ್ಯ

ಪ್ರಕಾಶಕರು

ಕೆ. ಟಿ. ವೀರಪ್ಪ
ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಸೀತಾರಾಮ ಜಾಗೀರ್‌ದಾರ್	ಶಾಸನಶಾಸ್ತ್ರ ಸಹಾಯಕ, ಎಪಿಗ್ರಾಫಿಯ ಕರ್ನಾಟಿಕ ಪುನರ್ಮುದ್ರಣ ಯೋಜನೆ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬
೨	ಎಸ್. ಲಲಿತ	ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೩	ಆರ್. ರಾಮಕೃಷ್ಣ	ಸಹಾಯಕ ಸಂಪಾದಕ, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–೬
೪	ಶಿ. ರಾಜೇಂದ್ರಪ್ಪ	ತಾಂತ್ರಿಕ ಸಹಾಯಕರು, ವಸ್ತು ಸಂಗ್ರಹಾಲಯ ವಿಭಾಗ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ವೆಲ್ಲಗೋವಾ
೫	ಎಂ. ರಾಧಾ ಪಟೇಲ್	ಅಧ್ಯಾಪಕಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೬	ಕೆ. ಯಶೋಧರ	ಅಧ್ಯಾಪಕಿ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–೬
೭	ಬಿ. ಕೆ. ಗುರುರಾಜರಾವ್ (ಬಿ. ಕೆ. ಜಿ.)	ಪ್ರವಾಚಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಾನಸ ಗಂಗೋತ್ರಿ, ಮೈಸೂರು–6
೮	ಡಿ. ವೆಂಕಟರಾವ್	ಪ್ರಾಚಾರ್ಯರು, ಪ್ರಥಮ ದರ್ಜೆ ಕಾಲೇಜು, ಸಕಲೇಶಪುರ, ಹಾಸನ ಜಿಲ್ಲೆ
೯	ಎಂ. ಎಸ್. ಚಂದ್ರಶೇಖರಪ್ಪ	ಸಮಾಜಕಾರ್ಯ ಅಧ್ಯಾಪಕ, ಸಮಾಜ ಶಾಸ್ತ್ರ ಮತ್ತು ಸಮಾಜಕಾರ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
೧೦	ಕೆ. ಎಸ್. ರಾಮಕೃಷ್ಣರಾವ್	ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕರು, ೩೬, ೧ನೇ ಮುಖ್ಯರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೧೨

೧೧	ಕೆ. ಕೇಶವಮೂರ್ತಿ	ಭೌತಶಾಸ್ತ್ರ ಅಧ್ಯಾಪಕ, ಸರ್ಕಾರಿ ಕಿರಿಯ ಕಾಲೇಜು, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ
೧೨	ಯಮುನಾಬಾಯಿ ಆರ್. ರಾವ್	ಶ್ರೀ, ೪೮೯, ೧೨ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು-೯
೧೩	ಎಂ. ವಿ. ಶ್ರೀನಿವಾಸ್	ಪ್ರವಾಚಕರು, ಇತಿಹಾಸ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೬



ಡಿ. ಡಾ|| ಆರ್. ಶಾಮಶಾಸ್ತ್ರಿಗಳು

(ಜ. 12-1-1868 ; ಮ. 23-1-1944)

ಸೀತಾರಾಮ ಜಾಗೀರ್‌ದಾರ್

ಡಾ|| ಆರ್. ಶಾಮಶಾಸ್ತ್ರಿಗಳು

(ಜ. 12-1-1868 ; ಮ. 23-1-1944)

ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ಸಾಹಿತ್ಯ ಚರಿತ್ರೆಗಳ ಅಭ್ಯಾಸಿಗಳಿಗೆ ಡಾ|. ಶಾಮಶಾಸ್ತ್ರಿಗಳ ಹೆಸರೆಂದರೆ ಬೆಳ್ಳಿ ಚುಕ್ಕೆಯಿದ್ದಂತೆ. ಅವರ ಕೊಡುಗೆ ಅನೇಕರಿಗೆ ಇನ್ನೂ ಮಬ್ಬಿನಲ್ಲಿಯ ವಸ್ತು. ಮಹಾಮಹೋಪಾಧ್ಯಾಯ, ಅರ್ಥಶಾಸ್ತ್ರವಿಶಾರದ ಹಾಗೂ ವಿದ್ಯಾಲಂಕಾರ ಇತ್ಯಾದಿ ಬಿರುದುಗಳೇನೋ ಇದ್ದವು. ಆದರೆ ಅವು ಇತರ ಕೆಲ ವಿದ್ವಾಂಸರ ಹಾಗೆ ಸದ್ದುಗದ್ದಲದ – ಡಬಾಡಬ್ಬಿನ – ವಸ್ತುವಾಗಿರಲಿಲ್ಲ– ಅವರಿಗೆ. ಡಾ|. ಆರ್. ಶಾಮಶಾಸ್ತ್ರೀ ಎಂದರೆ ಯಾರು ? ಎಂದು ಪ್ರಶ್ನಿಸುವಷ್ಟರ ಮಟ್ಟಿಗೆ ಅವರು ಮೌನವಹಿಸಿ ದುಡಿಯುವ ಕೆಲಸಗಾರರಾಗಿದ್ದರು. ವ್ಯಕ್ತಿಯ ಗಂಡಾಗುಂಡಿತನಕ್ಕಿಂತ ಅವರ ಕೃತಿಗಳ ಕಾಂತಿಯೆ ಪ್ರಖರ ; ಅದು ಎಲ್ಲೋ ನೂರಾರು ಬೆಳಕು ವರ್ಷಗಳ (light years) ಅಂತರದಲ್ಲಿರುವ ಒಂದು ಮಹಾನ್ ತಾರೆಯಿದ್ದಂತೆ ; ಭಾರತದಲ್ಲಿದ್ದು ಜರ್ಮನಿ ಇತ್ಯಾದಿ ದೇಶಗಳಲ್ಲಿ ಬೆಳಕನ್ನು ಬೀರುತ್ತಿತ್ತು !

ಆರ್. ಶಾಮಶಾಸ್ತ್ರೀ ಎಂದರೆ ರುದ್ರಪಟ್ಟಣದ ಶಾಮಶಾಸ್ತ್ರಿಗಳು. ರುದ್ರಪಟ್ಟಣ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನಲ್ಲಿ ಕಾವೇರಿ ತೀರದಲ್ಲಿರುವ ಒಂದು ಸಣ್ಣ ಗ್ರಾಮ. ಅದು ಆಗ ಒಂದು ಚಿಕ್ಕ ಅಗ್ರಹಾರವಿದ್ದಂತೆ ಇದ್ದಿತು. ಅಲ್ಲಿ ಸಂಕೇತಿ ಬ್ರಾಹ್ಮಣರ ಒಂದು ಕುಟುಂಬದಲ್ಲಿ ಶಾಸ್ತ್ರಿಗಳ ಜನನ. ತಂದೆ ವೆಂಕಟರಮಣಯ್ಯ, ತಾಯಿ ಪುಟ್ಟಮ್ಮ. ಶಾಸ್ತ್ರಿಗಳ ಪರಿಸರ, ವೇದವೇದಾಂಗ ಪಾರಂಗತರಿಂದ ತುಂಬಿತ್ತು. ಅಧ್ಯಯನದ ಆಳಅಗಲಗಳನ್ನು ಹೆಚ್ಚಿಸಿಕೊಳ್ಳಲು ಶಾಸ್ತ್ರಿಗಳು ಮೈಸೂರಿಗೆ ಪ್ರಯಾಣ ಬೆಳೆಸಿ ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯನ್ನು ಪ್ರವೇಶಿಸಿದರು. ಅಲ್ಲಿ ತಮ್ಮ 23ನೆಯ ವಯಸ್ಸಿನಲ್ಲಿ 'ವಿದ್ವತ್' ಪರೀಕ್ಷೆಯನ್ನು ಪಾಸು ಮಾಡಿದರು. ಮೈಸೂರು ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರ್ ಅವರು ಶಾಸ್ತ್ರಿಗಳಲ್ಲಿ ಹುದುಗಿದ್ದ ಪಾಂಡಿತ್ಯ ಹಾಗೂ ಪ್ರತಿಭೆಗಳನ್ನು ಕಂಡು ಮಾರುಹೋಗಿ ಅವರನ್ನು ತಮ್ಮ ಮನೆಯಲ್ಲಿ ಇದ್ದು ಅಧ್ಯಯನವನ್ನು ಮುಂದುವರಿಸುವಂತೆ ಹೇಳಿ ಸಕಲ ಸಹಾಯಗಳನ್ನು ಒದಗಿಸಿದರು. 1899ರಲ್ಲಿ ಶಾಸ್ತ್ರಿಗಳು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಉತ್ತಮ ಶ್ರೇಣಿಯಲ್ಲಿ ಬಿ. ಎ. ಪರೀಕ್ಷೆಯನ್ನು ಪಾಸು ಮಾಡಿದರು. ಭೌತಶಾಸ್ತ್ರ, ಅವರ ಅಧ್ಯ

ಯದ ವಿಷಯವಾಗಿತ್ತು. ಬಿ. ಎ. ಮುಗಿದ ಕೂಡಲೆ ನೌಕರಿಗಾಗಿ ಪ್ರಯತ್ನಿಸಿದರು. ದಿವಾನ್ ಶೇಷಾದ್ರಿ ಅಯ್ಯರ್ ಅವರು ನೌಕರಿಯನ್ನು ಕೊಡಿಸುವಲ್ಲಿಯೂ ತಮ್ಮ ಪ್ರಭಾವವನ್ನು ಬೀರಿದರು. ಪ್ರಾಚ್ಯವಿದ್ಯಾ (O.R.I.) ಸಂಸ್ಥೆಯಲ್ಲಿ ಸರಸ್ವತೀ ಭಂಡಾರಿಗ (Librarian) ಎಂದು ನೇಮಿಸಲ್ಪಟ್ಟರು. ಅಂದಿನಿಂದ ಶಾಸ್ತ್ರಿಗಳ ಜೀವನ ಚರಿತೆಯನ್ನು ಅಧ್ಯಾಪನ, ಸಂಶೋಧನೆ ಹಾಗೂ ಪ್ರಕಟಣೆ— ಎಂಬ ಮೂರು ವಿಭಾಗಗಳನ್ನಾಗಿ ಮಾಡಿಕೊಂಡು ಪರಿಶೀಲಿಸಬಹುದು.

ಅಧ್ಯಾಪನ :

ಡಾ|. ಶಾಮಶಾಸ್ತ್ರಿಗಳು ಬೆಂಗಳೂರಿನಲ್ಲಿರುವ 'ಚಾಮರಾಜ ಸಂಸ್ಕೃತ ಮಹಾ ಪಾಠಶಾಲಾ' ಸಂಸ್ಥೆಗೆ ಪ್ರಾಂಶುಪಾಲರಾಗಿದ್ದರು (1912-18). ಆದರೆ ಅದಕ್ಕೆ ಮುಂಚೆಯೇ ಅವರು ಪ್ರಾಚ್ಯವಿದ್ಯಾಸಂಶೋಧನಾಲಯ ಸಂಸ್ಥೆಯಲ್ಲಿದ್ದಾಗ, ಹಸ್ತಪ್ರತಿ ಗಳನ್ನು (ಸೂಚೀ ತಯಾರಿಸುವ ಸಂದರ್ಭದಲ್ಲಿ) ಪರಿಶೀಲಿಸುತ್ತಿರುವಾಗ, ಅರ್ಥಶಾಸ್ತ್ರ ಗ್ರಂಥದ ಹಸ್ತಪ್ರತಿಯನ್ನು ಪತ್ತೆಹಚ್ಚಿದರಷ್ಟೆ ಅಲ್ಲ ; ಅದೊಂದು ಅಮೋಘ ಕೃತಿಯೆಂದು ನಿರ್ಣಯಿಸಿ 1909ರಲ್ಲಿ ಪ್ರಕಟಿಸುವ ಕೆಲಸವನ್ನೂ ನಿರ್ವಹಿಸಿದರು. ಇದರ ಖ್ಯಾತಿ ಬಹಳ ದೂರದವರೆಗೆ ಹಬ್ಬಿತು ; ಮತ್ತು ಶಾಸ್ತ್ರಿಗಳಿಗೆ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದಿತು. ಆಗ ಕಲಕತ್ತಾ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿದ್ದ ಪ್ರೊ. ಅಶುತೋಷ ಮುಖರ್ಜಿಯವರು ಶ್ರೀಮಾನ್ ಶಾಸ್ತ್ರಿಗಳನ್ನು ಕಲಕತ್ತಾ ವಿಶ್ವವಿದ್ಯಾನಿಲಯಕ್ಕೆ ಛಾತ್ರ ರಿಗೆ ವಿಶೇಷ ಉಪನ್ಯಾಸವೀಯಲು ಆಹ್ವಾನಿಸಿದರು. ಶಾಸ್ತ್ರಿಗಳು ಹತ್ತು ಉಪನ್ಯಾಸ ಗಳನ್ನು ಕೊಟ್ಟರು. ಮರುವರ್ಷ ಅವು ಆ ವಿಶ್ವವಿದ್ಯಾನಿಲಯದಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದವು. ಕಲಕತ್ತಾ ವಿಶ್ವವಿದ್ಯಾನಿಲಯ ಶಾಸ್ತ್ರಿಗಳಿಗೆ ಡಾಕ್ಟರೇಟ್ ಪದವಿ ಯನ್ನೂ ದಯಪಾಲಿಸಿತು. ಅತ್ತ ಅಮೇರಿಕೆಯ ವಾಷಿಂಗಟನ್ ವಿಶ್ವವಿದ್ಯಾನಿಲಯವು ಶಾಸ್ತ್ರಿಗಳಿಗೆ ಅರ್ಥಶಾಸ್ತ್ರಕ್ಕೆ ಗೌರವ ಡಾಕ್ಟರೇಟ್ ಪದವಿಯನ್ನೂ ಕೊಟ್ಟಿತ್ತು (1919). ಕಲಕತ್ತಾ ವಿಶ್ವವಿದ್ಯಾನಿಲಯ ಪ್ರಕಟಿಸಿದ "The Evolution of Indian Polity" ಮತ್ತು ಅರ್ಥಶಾಸ್ತ್ರದ ಪುಸ್ತಕಗಳು ಇಂದಿಗೂ ಇತಿಹಾಸದ ಅಧ್ಯಯನದಲ್ಲಿ ಪರಿಶೀಲಿಸಲೇಬೇಕಾದ ಗ್ರಂಥಗಳಾಗಿವೆ. 1922-23 ಸುಮಾರಿಗೆ ಕೆಲಕಾಲ ಶಾಮ ಶಾಸ್ತ್ರಿಗಳು ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ದ್ದರು. ಇದೇ ಸುಮಾರಿಗೆ ಆರ್. ನರಸಿಂಹಾಚಾರ್ಯರು ನಿವೃತ್ತರಾದ ಪ್ರಯುಕ್ತ ಪುರಾತತ್ವ ಇಲಾಖೆಯನ್ನು ಡಾ|. ಶಾಮಶಾಸ್ತ್ರಿಗಳಿಗೆ ಅದರ ಕಂಕಾಲಾವಸ್ಥಾ ಸ್ವರೂಪ ದಲ್ಲಿ (Skeleton Shape) ವಹಿಸಿಕೊಡಲಾಯಿತು. ವಿಶ್ವವಿದ್ಯಾನಿಲಯದಲ್ಲಿ ಶಾಸ್ತ್ರಿ ಗಳು ಎಲ್ಲರ ಜೊತೆಗೂ ಸ್ನೇಹಪರರಾಗಿದ್ದರೆಂದು ಅವರ ಸಹೋದ್ಯೋಗಿಗಳಲ್ಲೊಬ್ಬರಾದ ದಿವಂಗತ ಡಾ. ಎಸ್. ರಾಧಾಕೃಷ್ಣನ್ ಅವರು ಬರೆದಿದ್ದಾರೆ. ಎಲ್ಲ ಸ್ಥಳಗಳೂ ಅಧಿಕಾರವೂ ತನಗೇ ಬೇಕೆನ್ನುವ ಅಹಂಕಾರಿ ಶಾಸ್ತ್ರಿಗಳಾಗಿದ್ದಿಲ್ಲ. ಈ ಚಿಂತನ ಮಂಥನ

ದಲ್ಲಿ ಇತಿಹಾಸದ ಪ್ರಾಧ್ಯಾಪಕ ಹುದ್ದೆಯನ್ನು ಬಿಟ್ಟುಕೊಟ್ಟು ಕೇವಲ ಪುರಾತತ್ವ ಇಲಾಖೆಯ ನಿರ್ದೇಶಕನ ಕೆಲಸವನ್ನು ಮಾತ್ರ ಉಳಿಸಿಕೊಂಡರು. ಈ ದಿನ ಇಂಥವರೆಷ್ಟು ಜನ ? ಆ ಹುದ್ದೆಯಿಂದ ಫೆಬ್ರವರಿ 1929ರಲ್ಲಿ ನಿವೃತ್ತರಾದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನ ಕೆಲಸವನ್ನು ಬಿಟ್ಟರೂ ಅವರು ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ತರಗತಿಗಳಿಗೆ ಪ್ರಾಧ್ಯಾಪಕರಾಗಿದ್ದರು (Periodical Lecturer) !

ಸಂಶೋಧನೆ :

ಸೇವಾವಧಿಯಲ್ಲಾಗಲಿ ಅಥವಾ ಅನಂತರ ನಿವೃತ್ತಾವಸ್ಥೆಯಲ್ಲಾಗಲಿ ಸಮಯವನ್ನು ಶಾಮಶಾಸ್ತ್ರಿಗಳು ಪೋಲು ಮಾಡಿದವರಲ್ಲ. ಅಹರ್ನಿಶಿ ದುಡಿದೇ ದುಡಿದರು. ಅದರ ಫಲ ನೂರಾರು ಸಂಪ್ರಬಂಧಗಳು ಮತ್ತು ಹಲವಾರು ಪುಸ್ತಕಗಳು. ಗಣಿತ, ಜ್ಯೋತಿಷ್ಯ ಶಾಸ್ತ್ರ, ಸಂಸ್ಕೃತ, ಕನ್ನಡ ಮುಂತಾಗಿ ಹಲವು ವಿಷಯಗಳಲ್ಲಿ ಶಾಸ್ತ್ರಿಗಳು ಪರಿಣತಮತಿಗಳಾಗಿದ್ದರು. ವೇದಗಳಲ್ಲಿ ಬರುವ ಗ್ರಹಣಗಳ ಬಗ್ಗೆ ಅವರು ನಮಗೆ 'ದ್ರಪ್ಸ' ಮುಂತಾದ ಗ್ರಂಥಗಳಲ್ಲಿ ಆ ಜ್ಞಾನಭಂಡಾರಕ್ಕೆ ಬಿದ್ದಿದ್ದ ಬೀಗಮುದ್ರೆಯನ್ನು ತೆಗೆದಿರಿಸಿದ್ದಾರೆ. ದೇವನಾಗರೀ ಅಕ್ಷರಗಳ ವಿಕಾಸದ ಬಗ್ಗೆ – ಮೂಲದ ಬಗ್ಗೆ – ತಿಳಿವಳಿಕೆಯನ್ನು ನೀಡಿದ್ದಾರೆ. ವೇದ, ಕುರಾನ್ ಮತ್ತು ಬೈಬಲ್ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ನಿಕ್ಷಿಪ್ತವಾಗಿ ಬಂದಿರುವ ಗ್ರಹಣ ಸಂಸ್ಕೃತಿಯನ್ನು ಕುರಿತು ಬರೆದು 'ದ್ರಪ್ಸ'ಕ್ಕೆ ಹೊಸ ಆಯಾಮವನ್ನಿತ್ತಿದ್ದಾರೆ. ಎರಡನೆಯ ಗ್ರಂಥ ಮೊದಲನೆಯದಕ್ಕೆ ಅನುಬಂಧವಂತಿದೆ. ವೇದಕಾಲೀನ ಲೆಕ್ಕಾಚಾರಗಳನ್ನು ಗುಣಿಸಿ ಗುಣಿಸಿ ವೈದಿಕ ಪಂಚಾಂಗ (Vedic Calendar) ವೇದಾಂಗ, ಜ್ಯೌತಿಷ, ಗವಾಮ್ ಅಯನ ಮುಂತಾದವುಗಳನ್ನು ಬರೆದಿದ್ದಾರೆ.

ಶಾಮಶಾಸ್ತ್ರಿಗಳ ಸೇವಾವಧಿಯಲ್ಲಿ ಪುರಾತತ್ವ ಇಲಾಖೆಯ ನಿರ್ದೇಶಕನ ಅಧಿಕಾರಾವಧಿಯು ಒಂದು ಮಹತ್ವದ ಕಾಲವೇ. ಶ್ರೀಯುತರು ಒದಗಿದ ಅಡೆತಡೆಗಳನ್ನೆಲ್ಲ ಧೈರ್ಯದಿಂದ ಎದುರಿಸಿದರು. ಶ್ರೀಯುತರು ಅಧಿಕಾರವನ್ನು ಸ್ವೀಕರಿಸುವ ಮುಂಚೆ ಪೂರ್ವದ ಅಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಅನೇಕ ಸ್ಥಳಗಳನ್ನು ತೆಗೆದುಹಾಕಲಾಗಿತ್ತು. ಕೆಲವರು ನಿವೃತ್ತಿಯನ್ನು ಹೊಂದಿದ್ದರು, ಹೀಗಾಗಿ ಅವರ ಕೈಗೆ ಬಂದ ಕಛೇರಿ ಕೇವಲ ಕಂಕಾಲಾವಸ್ಥೆಯದಾಗಿತ್ತು. 1923ರ ಮೈಸೂರು ಆರ್ಕಿಯಾಲಜಿಕಲ್ ವರದಿಯಿಂದ ಇದು ಸ್ಪಷ್ಟವಿದೆ. ಆದರೂ ಅವರು ಆ ವರ್ಷದ ಇಲಾಖೆಯ ವರದಿಯನ್ನು ಬಹು ಬೆಲೆಯುಳ್ಳದ್ದನ್ನಾಗಿಸಿದ್ದಾರೆ. ಉಪಲಬ್ಧವಿರುವ ಎಲ್ಲ ಪರಂಪರಾಗತ, ಖಗೋಳ ಗಣಿತಕ್ಕೆ ಸಂಬಂಧಪಟ್ಟ ಸಾಕ್ಷಿಯಾಗಬಲ್ಲ ಸಂಗತಿಗಳನ್ನು ಕಾಲಖಂಡಕ್ಕೆ (Chronology) ಸಂಬಂಧಿಸಿದಂತೆ ದಾಖಲೆಗಳನ್ನು ಕ್ರೋಢೀಕರಿಸಿ ಬೃಹದ್‌ಬಾಣ, ಕದಂಬ, ಗಂಗ ಮುಂತಾದ ರಾಜವಂಶಗಳ ಚರಿತ್ರಾಂಶಗಳ ಬೆಳಕಿನಲ್ಲಿ ಗುಪ್ತರ ಕಾಲಮಾನದ

ಮೇಲೆ ಹೊಸಬೆಳಕನ್ನು ಬೀರಿದರು ; ಪ್ರೊ|| ಯಾಕೋಬಿ (Jacobi) ಅಂತಹ ವಿದ್ವಾಂಸರೂ ಮೆಚ್ಚುವಂತೆ ಬರೆದರು. ಶ್ರೀಯುತರು "Your remarks on the Gupta epoch will necessitate a revision of that period of Indian history" ಎಂದು ಬರೆದಿದ್ದಾರೆ (MAR 1924).

ಶಾಮಶಾಸ್ತ್ರಿಗಳ ಆಡಳಿತ ಕಾಲ ಪುರಾತತ್ವ ಇಲಾಖೆಯಲ್ಲಿ ಕೇವಲ ಸುಮಾರು ಆರು ವರ್ಷ : 1923–1929. ಈ ಆರು ವರ್ಷದ ಅವಧಿಯ ವರದಿಗಳನ್ನು (MARs) ನೋಡಿದರೆ ಅವರು ಮಾಡಿದ ಕೆಲಸದ ಅರಿವು ಮೂಡುತ್ತದೆ :

ವರ್ಷಗಳು	1923	1924	1925	1926	1927	1928	Total	Remarks
ಶಾಸನಗಳು	130	124	119	125	172	113	783	ಅಂಕಿಸಂಖ್ಯೆಗಳನ್ನು ಉಪಲಬ್ಧವಿದ್ದಲ್ಲಿ ಮಾತ್ರ ಸಂಗ್ರಹಿಸಿದೆ. ಇದು ಸಂಪೂರ್ಣ ಅಲ್ಲ.
ಹಸ್ತಪ್ರತಿಗಳು	53		63					
ನಾಣ್ಯಗಳು			571	223				

ಈ 783 ಶಾಸನಗಳ ಜೊತೆಗೆ ಭಾರತ ಸರ್ಕಾರದ ಪುರಾತತ್ವ ಇಲಾಖೆಯ ಶಾಸನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ದಿವಂಗತ ಎನ್. ಲಕ್ಷ್ಮೀನಾರಾಯಣ ರಾಯರು, ಯಾರು ಆ ಕಚೇರಿಯಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರೊ, ಅವರ ನೆರವಿನಿಂದ ದಕ್ಷಿಣ ಭಾರತೀಯ ಶಾಸನಗಳ ಒಂಬತ್ತನೆಯ ಸಂಪುಟದ ಎರಡು ಭಾಗಗಳಲ್ಲಿ (S.I.I. Vol. IX pt. I & II) 714 ಶಾಸನಗಳನ್ನು ಪ್ರಕಟಿಸಿದ್ದಾರೆ. ಶಾಸನಗಳ ಒಟ್ಟು ಮೊತ್ತ 1497 (783+714). ಇವು ಕರ್ಣಾಟಕವನ್ನು ಆಳಿದ ಕದಂಬ, ಚುಟು, ಗಂಗ, ಚಳುಕ್ಯ, ರಾಷ್ಟ್ರಕೂಟ, ನೊಳಂಬ, ಚಾಳುಕ್ಯ, ಹೊಯ್ಸಳ, ಕಲಚುರಿ,

ಸೇಉಣ, ವಿಜಯನಗರ ಮುಂತಾಗಿ ದೊಡ್ಡ ದೊಡ್ಡ ಹಾಗೂ ಉಮ್ಮತ್ತೂರು, ಮೈಸೂರು, ಕೆಳದಿ, ಚಿತ್ರದುರ್ಗ ಮುಂತಾಗಿ ಅನೇಕ ಸಣ್ಣ ದೊಡ್ಡ ಸಾಮಂತರ ಮನೆತನಗಳ ಇತಿಹಾಸಕ್ಕೆ ಸಂಬಂಧಿಸಿವೆ. ಕರ್ನಾಟಕದ ಇತಿಹಾಸ, ಸಂಸ್ಕೃತಿ, ಸಾಹಿತ್ಯಗಳ ಚರಿತ್ರೆ ಬರೆಯುವವರಿಗೆಲ್ಲ ಇವು ಮೂಲಭೂತ ಆಕರಗ್ರಂಥಗಳಲ್ಲಿ ಕೆಲವಾಗಿವೆ. ಇವನ್ನು ಅಧ್ಯಯನ ಮಾಡದೆ ಯಾರು ಬರೆದರೂ ಸಾಧಾರ ಕೃತಿ ಆಗದು ; ಎಂದಾಗ ಇವುಗಳ ಮಹತ್ವ ತಂತಾನೆ ಸ್ಪಷ್ಟವಾಗುತ್ತದೆ.

1925ರ ಮೈಸೂರು ಆರ್ಕಿಯಾಲಜಿಕಲ್ ವರದಿಯಲ್ಲಿ ಒಂದು ಅಚ್ಚರಿಯ ಸಂಗತಿ ಕನ್ನಡಿಗರಿಗೆ ಕಾದಿತ್ತು. ಕೇವಲ ಕನ್ನಡ ಬಲ್ಲ ವ್ಯಕ್ತಿ ಇದುವರೆಗಿನ ವರದಿಗಳನ್ನು ಓದಿಕೊಳ್ಳಲು ಸಾಧ್ಯವೇ ಇದ್ದಿಲ್ಲ. ಈ ವರ್ಷದ ವರದಿಯಲ್ಲಿ ಶಾಸನಗಳ ಕನ್ನಡ ರೂಪವನ್ನು ಯಥಾವತ್ತಾಗಿ ಕೊಡಲು ಶಾಸ್ತ್ರಿಗಳು ಆರಂಭಿಸಿದರು. ಇದರಿಂದ ಕನಿಷ್ಟ ಆಯಾ ವರುಷ ಪ್ರಕಟವಾದ ಶಾಸನಗಳ ಮಹತ್ವವನ್ನು ಕೇವಲ ಕನ್ನಡ ಲಿಪಿ ಬಲ್ಲ ವ್ಯಕ್ತಿಯೂ ಓದಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. 1923-24 ಎರಡು ವರ್ಷಗಳ ಅವಧಿಯಲ್ಲಿ ಡಾ॥ ಶಾಸ್ತ್ರಿಗಳಿಗೆ ಈ ವಿಷಯದ ಅರಿವು ಮೂಡಿದಂತೆ ತೋರುತ್ತದೆ. ಇದು ಅವರ ಕನ್ನಡ ನುಡಿಯ, ಕನ್ನಡ ಜನದ ಮೇಲಿನ ಅಪಾರ ಪ್ರೇಮವನ್ನು ಸೂಚಿಸುತ್ತದೆ. ಈ ಪದ್ಧತಿಯನ್ನು 1929ರಲ್ಲಿ ಡಾ॥ ಶಾಮಶಾಸ್ತ್ರಿಗಳ ಅನಂತರ ಬಂದ ಡಾ॥ ಎಂ.ಎಚ್. ಕೃಷ್ಣ ಅವರೂ ಆ ಮುಂದಿನ ವರದಿಗಳಲ್ಲಿ ಉಳಿಸಿಕೊಂಡರು. ಹರಿಜನವಾಗಿದ್ದ ಕನ್ನಡ ಲಿಪಿ ಪುರಾತತ್ವ ಇಲಾಖೆಯ ಮಂದಿರಗಳಲ್ಲಿ ಹರಿಪೂಜಕನಾಯಿತು ; ಇಂಗ್ಲಿಷ್ ಭಾಷೆಯೊಂದಿಗೆ ತಾನೂ ಜನತಾ ಜನಾರ್ದನನ ಸೇವೆ ಮಾಡುವಂತಾಯಿತು. !

ಡಾ॥. ಶಾಮಶಾಸ್ತ್ರಿಗಳು ಮೈಸೂರಲ್ಲಿ ಆದುವರೆಗೆ ಒಂದು ವಸ್ತುಸಂಗ್ರಾಹಲಯ ವಿದ್ದಿಲ್ಲವೆಂಬುದನ್ನು ಗಮನಿಸಿ ಸರ್ಕಾರವನ್ನು ಪುರಾತತ್ವಕ್ಕೆ ಸಂಬಂಧಿಸಿದ ವಸ್ತುಸಂಗ್ರಾಹಾಲಯವೊಂದನ್ನು ಸ್ಥಾಪಿಸಲು ಕೇಳಿಕೊಂಡರು. ಅವರ ಮನವಿಗೆ ಒಪ್ಪಿ, ಸರ್ಕಾರ ವಸ್ತುಸಂಗ್ರಹಾಲಯವನ್ನು ತೆರೆಯಲು ಅನುಮತಿಯನ್ನು ನೀಡಿತು: (Govt. order No. 3025-6-Edn. 142-23-4 dt. 21st December 1923.) ಅವರಿಂದ ಇಲ್ಲಿ ಮುಂದೆ ಪುರಾತತ್ವಕ್ಕೆ ಸಂಬಂಧಿಸಿದ ವಸ್ತುಗಳನ್ನು ಪುರಾತನ ನಾಣ್ಯಗಳನ್ನು ಶೇಖರಿಸಿ ಪ್ರದರ್ಶನಕ್ಕೆ ಇಡಲಾಯಿತು. ಇದು ಇತಿಹಾಸದ ಅಧ್ಯಯನದ ದಾರಿಯಲ್ಲಿ ಇನ್ನೊಂದು ಮುಖ್ಯವಾದ ಮಜಲು. ಹಲವು ನಾಣ್ಯಗಳನ್ನು ಮೊದಲ ಬಾರಿಗೆ ಪರೀಕ್ಷಿಸಿ ವಿಶ್ಲೇಷಿಸಿದ ಮಹನೀಯರಲ್ಲಿ ಅವರೂ ಒಬ್ಬರು. ಅನಂತರ ಕರ್ನಾಟಕದ ನಾಣ್ಯಗಳ ಅಧ್ಯಯನ ಹೆಚ್ಚಾಗಿ ನಡೆಯಿತು. ಅರ್ಥಾತ್ ಈ ಅಧ್ಯಯನಕ್ಕೆ ಒಂದು ಭದ್ರವಾದ ಬುನಾದಿ ಹಾಕಿದವರು ಡಾ॥ ಶಾಮಶಾಸ್ತ್ರಿಗಳು ಎಂದರೆ ತಪ್ಪಾಗುವುದಿಲ್ಲ. ಶ್ರೀ ಶಾಸ್ತ್ರಿಗಳು ಕೂಡಿಹಾಕಿದ ನಾಣ್ಯಗಳಲ್ಲಿ ಚಿನ್ನ, ಬೆಳ್ಳಿ ಹಾಗೂ ತಾಮ್ರ ಮುಂತಾದ ಲೋಹದಲ್ಲಿ ಟಂಕಿಸಿದ ಹಲವು ಬಗೆಯ ನಾಣ್ಯಗಳಿವೆ.

ಪ್ರಕಟಣೆ :

ಡಾ|. ಶಾಮಶಾಸ್ತ್ರಿಗಳು ಬರೆದು, ಬರೆಸಿ, ಪ್ರಕಟಿಸಿದ ಪುಸ್ತಕಗಳ ಪಟ್ಟಿ ಅವರ ಸೇವೆಯ ಚಿತ್ರವನ್ನು ಸೃಜಿಸಿಕೊಡುವಲ್ಲಿ ಹೆಚ್ಚು ಯಶಸ್ವಿಯಾಗುತ್ತದೆಂದು ನನ್ನ ನಂಬಿಕೆ.

1) ಕೌಟಿಲ್ಯನ ಅರ್ಥಶಾಸ್ತ್ರ (ಗ್ರಂಥ–1909 ಮತ್ತು ಅನುವಾದ ಗ್ರಂಥ 1915)
2) ದ್ರಪ್ಸ : ವೇದಗಳಲ್ಲಿ ಗ್ರಹಣಗಳ ಆವರ್ತನ (1938)
3) Eclipse-cult in the Vedas, Bible and Koran (1940)
4) Evolution of Indian Polity (1920)
5) Gavam Ayana (1908)
6) The Theory of the Origin of Devanagari Alphabet (1907)
7) Vedanga Jautisha (Ed. 1936)
8) Vedic Calender (1912)
9) Devana Bhatta's Smritichandrika (Sraddha kanda ; Asaucha kanda–1927)
10) Chalukya's Land and Revenue Policy (1905)
11) Baudhayana Grahya Sutras (1920)
12) Yogananda's Ayurveda Sutras (1922)
13) Alankara-manihara Vol. 3 (1923)
14) Vidya Madhaviya Vyakhyana Muhurta Dipika (1926)
15) Abhilashitartha Chintamani (Three prakaranas–1926)
16) Sarasvati-vilasa of Prataparudra
17) Index of words in Arthasastra (Vol. I, II & III – 1924, 1925, 1925)
18) Vaaraha Grahya Sutras (1921)
19) Surya Prajnapti (Jain Astrological work by Mahavirachari) ಇದನ್ನು ಮಿಥಿಕ್ ಸೊಸೈಟಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ (1927 & 1928)

20) ವೀನಾ ಅಥವಾ ಸ್ಪೈನಿಕನ ಭಾಗ್ಯ (ಜರ್ಮನ್ ನಾಟಕವೊಂದರ ಅನುವಾದ)

ಈ ಮೇಲ್ಕಾಣಿಸಿದ ಸ್ವಂತ ಕೃತಿಗಳಲ್ಲದೆ ಪ್ರಾಚ್ಯ ಸಂಶೋಧನಾಲಯದಲ್ಲಿ (O.R.I.) ಕೆಲಸ ಮಾಡುತ್ತಿದ್ದ ಪಂಡಿತರಿಗೆ ಕೆಳಗೆ ಕಾಣಿಸಿದ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸುವಲ್ಲಿ ಸಹಾಯ ಮಾಡಿದ್ದಾರೆ.

1) ಕುಮಾರವ್ಯಾಸ ಭಾರತ – ವಿರಾಟಪರ್ವ
2) ಕೆಳದಿ ನೃಪವಿಜಯ
3) ಉದ್ಭಟಕಾವ್ಯ
4) ಕುಮಾರವ್ಯಾಸ ಭಾರತ – ಉದ್ಯೋಗಪರ್ವ
5) ಜಗನ್ನಾಥ ವಿಜಯಂ
6) ಅಕ್ರೂರ ಚರಿತೆ
7) ಧರ್ಮಾಮೃತ
8) ಕಂಠೀರವ ನರಸರಾಜ ವಿಜಯ .... ಇತ್ಯಾದಿ.

ಈ ಗ್ರಂಥಗಳ ಪ್ರಕಟಣೆಯಲ್ಲಿ ಸಿಂಹಪಾಲು ಕೆಲಸವನ್ನು ಮಾಡಿದವರು ಆ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ ಪಂಡಿತರುಗಳಾದ ದಿವಂಗತ ಎಸ್.ಜಿ. ನರಸಿಂಹಾಚಾರ್, ದಿವಂಗತ ಎ.ಆರ್. ಕೃಷ್ಣಶಾಸ್ತ್ರಿ, ದಿವಂಗತ ಟಿ.ಎನ್. ಸುಬ್ಬರಾಯಶಾಸ್ತ್ರಿ ಮತ್ತು ದಿವಂಗತ ವಿ. ಶಾಮಚಾರ್ಯ ಮೊದಲಾದವರು. ಆಯಾ ಗ್ರಂಥಗಳ ಮುಖಪುಟದಲ್ಲಿ ಡಾ|. ಶಾಮಶಾಸ್ತ್ರಿಗಳ ಹೆಸರಿದ್ದರೂ ಉಪೋದ್ಘಾತ ಇತ್ಯಾದಿಗಳ ಕೊನೆಯಲ್ಲಿ ಪಂಡಿತರುಗಳ ಹೆಸರಿರುವುದನ್ನೂ ಗಮನಿಸಬೇಕು.

ಉಪಸಂಹಾರ :

ಅನ್ನದ ಪರೀಕ್ಷೆಗೆ ಥಾಲಿಯ ಅಗುಳೊಂದನ್ನು ಎತ್ತಿಕೊಳ್ಳುವಂತೆ ಡಾ|. ಶಾಮಶಾಸ್ತ್ರಿಗಳ ಕಾರ್ಯದ ಪ್ರಶಂಸೆಗೆ, ವಿದ್ವತ್ತಿನ ಮಹತಿಯನ್ನು ಅರಿತುಕೊಳ್ಳಲು, ಅರ್ಥಶಾಸ್ತ್ರ ಗ್ರಂಥವೊಂದನ್ನು ಎತ್ತಿಕೊಂಡರೆ ಸಾಕು. ಅದು ವರ್ಡ್ಸ್‌ವರ್ಥ ಕವಿಯ ಅರಣ್ಯದ ಒಂದು ಕೊಂಬೆ (one vernal wood from the forest) ಇದ್ದ ಹಾಗೆ. 'ಅರ್ಥಶಾಸ್ತ್ರ' ಗ್ರಂಥವನ್ನು ನೋಡಿದ ಕೂಡಲೆ ಪ್ರಸಿದ್ಧ ಇತಿಹಾಸಜ್ಞ ವಿನ್ಸೆಂಟ್ ಸ್ಮಿತ್ ತನ್ನ ಗ್ರಂಥ 'ಭಾರತದ ಚರಿತ್ರೆ' (Indlan History)ಯ ಸಂಬಂಧಪಟ್ಟ ಪುಟಗಳನ್ನು ಪರಿಷ್ಕರಿಸಿದುದಾಗಿ ತಿಳಿಸಿದ್ದಾನೆ. ಹೀಗೆಯೇ ವಿದ್ವಾಂಸರಾದ ಡಾ|. ಜೆ. ಜೋಲೀ (Jolly), ಡಾ|. ಎಲ್ .ಡಿ. ಬಾರ್‌ನೆಟ್, ಡಾ|. ಇ. ಅಜೆಗ್ ಜ್ಯೂರಿಚ್, ಡಾ|. ಎ. ಬಿ. ಕೀಥ್ ಮೊದಲಾದವರೂ ಶಾಸ್ತ್ರಿಗಳ ಪ್ರೌಢ ಪಾಂಡಿತ್ಯ ಹಾಗೂ ವಿದ್ವತ್ತಿನ ಪ್ರಶಂಸೆಯನ್ನು ಮಾಡಿದ್ದಾರೆ. ನಾಲ್ವಡಿ ಕೃಷ್ಣ

ರಾಜೇಂದ್ರ ದೊರೆಗಳು ಜರ್ಮನಿಗೆ ಹೋದಾಗ್ಗೆ ಅಲ್ಲಿನ ವಿಶ್ವವಿದ್ಯಾನಿಲಯವೊಂದರಲ್ಲಿ ಅವರು ತಮ್ಮನ್ನು

"ನಾವು ಮೈಸೂರಿನ ಅರಸರು" ಎಂದು ಪರಿಚಯವನ್ನು ಮಾಡಿಕೊಂಡಾಗ ಅಲ್ಲಿನ ಪ್ರಾಧ್ಯಾಪಕರು ಪಸು "ತಾವು ಡಾ|. ಶಾಮಶಾಸ್ತ್ರಿಗಳ ಮೈಸೂರಿನವರೆ" ಎಂದು ಕೇಳಿದರಂತೆ. ಅದಕ್ಕೆ ಅವರು "ಹೌದು, ಹೌದು, ನಾವು ಅಲ್ಲಿಯವರೆ" ಎಂದು ಕಿಂಚಿತ್ ಅಚ್ಚರಿಯಿಂದ ಉತ್ತರಿಸಿದರಂತೆ. ಸ್ವದೇಶಕ್ಕೆ ಹಿಂದಿರುಗಿದ ಮೇಲೆ ದೊರೆಗಳು ಡಾ|. ಶಾಸ್ತ್ರಿಗಳನ್ನು ಅರಮನೆಗೆ ಕರೆಸಿಕೊಂಡು ನಡೆದ ವೃತ್ತಾಂತವನ್ನು ಸ್ವಾರಸ್ಯವಾಗಿ ವಿವರಿಸಿ, "ಶಾಸ್ತ್ರಿಗಳೇ ನಮ್ಮ ದೇಶದಲ್ಲಿ ನೀವು ನಮ್ಮ ಪ್ರಜೆ; ಆದರೆ ಹೊರದೇಶದಲ್ಲಿ ನಾವು ನಿಮ್ಮ ಪ್ರಜೆ" ಎಂದು ಸಂತುಷ್ಟಭಾವನೆಯಿಂದ ಹೇಳಿದರಂತೆ. ಅದು ಅವರ ವಿದ್ವತ್ತಿನ ಕುರುಹು.

ಮೈಸೂರು ದೊರೆಗಳು "ಅರ್ಥಶಾಸ್ತ್ರ ವಿಶಾರದ", ಅಂದಿನ ಭಾರತ (ಬ್ರಿಟಿಷ್) ಸರ್ಕಾರ "ಮಹಾಮಹೋಪಾಧ್ಯಾಯ" ಮತ್ತು ಇನ್ನೂ ಅನೇಕ ಸಂಘ ಸಂಸ್ಥೆಗಳು ಇನ್ನೂ ಅನೇಕ ಉಪಾಧಿಗಳನ್ನು, ಬಿರುದುಗಳನ್ನು ಡಾ|. ಶಾಸ್ತ್ರಿಗಳಿಗೆ ದಯಪಾಲಿಸಿದರು. ಶಾಸ್ತ್ರಿಗಳ ಕೊಡುಗೆಯ ಕುರಿತ ಈ ಸಣ್ಣ ಟಿಪ್ಪಣಿಯನ್ನು ಅರ್ಥಶಾಸ್ತ್ರ ಗ್ರಂಥಕ್ಕೆ ಬರೆದ ಡಾ|. ಜೆ. ಎಫ್. ಫ್ಲೀಟ್ ಅವರ ಮುನ್ನುಡಿಯಿಂದ ಉಲ್ಲೇಖವೊಂದನ್ನೆತ್ತಿಕೊಂಡು ಮುಗಿಸಬಹುದು; ಅದು ಹೀಗಿದೆ:

It is impossible to speak in too high terms of the service rendered by Mr. Shama sastry, in the first place by practically discovering the work, and then by laying the contents of it before us so satisfactorily, inspite of the difficulties confronting him which can only be appreciated by any one who tries to understand the text without the help of his translation. We are, and shall always remain, under a great obligation to him for a most important addition to our means of studying the general history of ancient India.

1497 ಶಾಸನಾದಿಗಳ, ಇತರ ಪ್ರಕಟಣೆಗಳ, ಮಹತ್ವವು ಇನ್ನೂ ಅಧಿಕವೇ ಆಗಿದೆಯೆಂದರೆ ಅತಿಶಯೋಕ್ತಿಯೇನಿಲ್ಲ. ಶಾಸ್ತ್ರಿಗಳ ಬರವಣಿಗೆ ಅಭ್ಯಾಸಿಗಳಿಗೆ ಗಣಿಗಳಿದ್ದಂತೆ. ಅವರ ಸ್ಮರಣೆ ನಮ್ಮ ಜೀವನಕ್ಕೆ ಕುಂದಣ ಕಟ್ಟಿದಂತೆ.‡

---

‡ ಈ ಲೇಖನವನ್ನು ಬರೆಯುವಲ್ಲಿ ಡಾ|. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳಿಗೆ ನಾನು ಋಣಿಯಾಗಿದ್ದೇನೆ.

ಎನ್. ಲಲಿತ

ಶ್ರೀಕಂಠೇಶ್ವರ ದೇವಾಲಯ

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯವು ಕರ್ನಾಟಕದ ಶ್ರೀಮಂತ ದೇವಾಲಯಗಳಲ್ಲಿ ಒಂದಾಗಿದೆ. ನಂಜನಗೂಡು ಮೈಸೂರಿನಿಂದ ದಕ್ಷಿಣಕ್ಕೆ 25 ಕಿ.ಮೀ. ದೂರದಲ್ಲಿದೆ. ಇದು ಕಪಿಲಾ ನದಿಯ ಬಲದಡದ ಮೇಲಿದೆ. ಇದು ಒಂದು ಮುಖ್ಯ ಯಾತ್ರಾಸ್ಥಳ. ಪ್ರಾಚೀನ ಕಾಲದಿಂದಲೂ ತೀರ್ಥಕ್ಷೇತ್ರವಾಗಿರುವ ನಂಜನಗೂಡು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೊರಕಿದ ಪ್ರೋತ್ಸಾಹದಿಂದ ವಿಶೇಷವಾಗಿ ಬೆಳೆದಿದೆ.

ಶ್ರೀಕಂಠೇಶ್ವರ ದೇವಾಲಯವನ್ನು ಶಾಸನಗಳಲ್ಲಿ ನಂಜುಂಡೇಶ್ವರ ದೇವಾಲಯವೆಂದೂ ಕರೆದಿದ್ದಾರೆ. ಈಗಲೂ ನಂಜುಂಡೇಶ್ವರ ಎಂದು ಜನರಲ್ಲಿ ಕರೆಯುವ ವಾಡಿಕೆಯಿದೆ. ಇದು ಊರಿನ ಪೂರ್ವ ದಿಕ್ಕಿನಲ್ಲಿ ಕಪಿಲಾ ಮತ್ತು ಕೌಂಡಿನ್ಯ (ಗುಂಡ್ಲು) ನದಿಗಳ ಸಂಗಮದ ಬಳಿ ಪೂರ್ವಾಭಿಮುಖವಾಗಿರುವ ದ್ರಾವಿಡ ಶೈಲಿಯ ದೊಡ್ಡ ಕಟ್ಟಡವಾಗಿದೆ. ಇದು 117 ಮೀಟರ್ ಉದ್ದ, 48 ಮೀಟರ್ ಅಗಲವಿದ್ದು ಇದರ ಒಟ್ಟು ಪ್ರದೇಶ 4831 ಚದರ ಮೀಟರ್. ಹೊರಗೋಡೆಗಳು ಸುಮಾರು 3.7 ಮೀಟರ್ ಎತ್ತರವಿದೆ.

ಮಹಾದ್ವಾರದ ಮುಂದಿರುವ ಮುಖಮಂಟಪದಿಂದ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಎರಡು ಕಡೆಯೂ ಕೈಸಾಲೆಗಳಿವೆ. ಮಹಾದ್ವಾರದಿಂದ ಒಳಗೆ ಪ್ರವೇಶಿಸಿದರೆ ದೊಡ್ಡ ಅಂಗಳದ ಮಧ್ಯದಲ್ಲಿ ಸುಂದರವಾದ ಒಂದು ವಸಂತ ಮಂಟಪವಿದೆ. ಆಗ್ನೇಯದಲ್ಲಿ ಪಾಕಶಾಲೆ ಮತ್ತು ಈಶಾನ್ಯದಲ್ಲಿ ಉಗ್ರಾಣಗಳಿವೆ. ದಕ್ಷಿಣದಲ್ಲಿ ಒಂದು ಪ್ರವೇಶದ್ವಾರವಿದೆ. ಅಂಗಳದ ಎರಡು ಕಡೆಗಳಲ್ಲೂ ಎತ್ತರದ ಎರಡು ಕಂಬಗಳ ಸಾಲುಗಳು ಇವೆ. ಒಳಸಾಲಿನ ಹಿಂದಿನ ಅಂಕಣಗಳಲ್ಲಿ ವಿವಿಧ ದೇವತಾ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಅಂಗಳದಿಂದ ಮುಂದೆ ಬಸವನ ಕಟ್ಟೆ ಇದೆ. ಇದು ವಿಶಾಲವಾದ ಜಗತಿ. ಇದರ ಮಧ್ಯದಲ್ಲಿ ಚಾವಣಿಗಿಂತ ಎತ್ತರದಲ್ಲಿರುವ ಅಷ್ಟಮುಖ ಶಿಲಾದೀಪಸ್ತಂಭವಿದೆ. ಇದರ ಈಶಾನ್ಯ ಭಾಗದಲ್ಲಿ ದೊಡ್ಡ ಬಸವನ ಗುಡಿ ಇದೆ. ಕಟ್ಟೆಯ ವಾಯುವ್ಯದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ತಾಂಡವೇಶ್ವರ ಗುಡಿಯಿದೆ.

ಕಟ್ಟೆಯ ಪಶ್ಚಿಮಕ್ಕೆ ಮತ್ತೊಂದು ಮಹಾದ್ವಾರವಿದೆ. ಇದರ ಮುಂದೆ ಬಲಿಪೀಠವಿದೆ. ಮುಂದೆ ನವರಂಗ, ಒಳಮಂಟಪ ಮತ್ತು ಗರ್ಭಗುಡಿಗಳಿವೆ. ಇವನ್ನು ಮೂಲ ದೇವಾಲಯವೆಂದು ತಿಳಿಯಬಹುದು. ಇದಕ್ಕೆ ಸೇರಿದಂತೆ ಎಡಗಡೆ ನಾರಾಯಣಸ್ವಾಮಿ ಗುಡಿಯೂ ಅದರ ಹಿಂದೆ ಚಂಡಿಕೇಶ್ವರ ಗುಡಿಯೂ ಇವೆ. ಇದರ ವಾಯುವ್ಯದಲ್ಲಿ ಪಾರ್ವತಿ ಗುಡಿ ಇದೆ.

ಈ ದೇವಾಲಯ ಒಂದೇ ಕಾಲದಲ್ಲಿ ಕಟ್ಟಿದ್ದಲ್ಲ. ಇದರ ಬೆಳವಣಿಗೆಯಲ್ಲಿ ನಾಲ್ಕು ಘಟ್ಟಗಳನ್ನು ಗಮನಿಸಬಹುದು. ಮೊದಲು ನಿರ್ಮಿಸಿದ್ದ ದೇವಾಲಯ ಸಣ್ಣದಾಗಿದೆ. ಗರ್ಭಗೃಹ, ಪ್ರದಕ್ಷಿಣಾಪಥ ಮತ್ತು ಅರ್ಧಮಂಟಪ ಇವು ಬಹಳ ಪ್ರಾಚೀನವಾದವು. ಇದರ ಕುಳ್ಳಾದ ಚಿಕ್ಕ ಕಟ್ಟಡದ ಗೋಡೆಯನ್ನು ಸರಳವಾಗಿ ಕಲ್ಲುಚಪ್ಪಡಿಗಳಿಂದ ಕಟ್ಟಲಾಗಿದೆ. ಇದರ ಹೊರಭಾಗದಲ್ಲಿ ಅಧಿಷ್ಠಾನ, ಭಿತ್ತಿ ಭಾಗದಲ್ಲಿ ಅರೆಕಂಬಗಳು, ಮೇಲೆ ಕಪೋತ ಇವೆ. ಇದರ ಮೇಲೆ ಸಣ್ಣ ಜಾಳಿ ಸಾಲಿದ್ದಂತೆ ಕಾಣುತ್ತದೆ. ಪೂರ್ವದಲ್ಲಿ ಬಿಟ್ಟು ಉಳಿದ ಗೋಡೆಗಳಲ್ಲಿ ಕಿರಿದಾದ ಜಾಲಂಧ್ರಗಳಿವೆ. ಗರ್ಭಗುಡಿಯ ಸುತ್ತಲಿರುವ ಪ್ರದಕ್ಷಿಣಾಪಥವು ದಕ್ಷಿಣದಲ್ಲಿ ಮುಚ್ಚಲ್ಪಟ್ಟಿದ್ದು ವಾಯುವ್ಯ ಕಡೆಯಲ್ಲಿ ಮಾತ್ರ ದಾರಿಯಿದೆ. ಗರ್ಭಗುಡಿಯಲ್ಲಿ ಶ್ರೀಕಂಠೇಶ್ವರ ಲಿಂಗವಿದೆ. ಈ ಗರ್ಭಗುಡಿಯ ಮೇಲೆ ಚಿಕ್ಕದಾದ ಗಾರೆಯ ಶಿಖರವಿದೆ. ಅರ್ಧಮಂಟಪದ ಕಂಬಗಳು ಕುಳ್ಳಗೆ ದುಂಡಾಗಿವೆ. ಈ ಲಕ್ಷಣಗಳಿಂದ ಈ ಭಾಗವನ್ನು 10-11ನೆಯ ಶತಮಾನಗಳಲ್ಲಿ ಗಂಗರು ಅಥವಾ ಚೋಳರು ಕಟ್ಟಿರಬಹುದೆಂದು ಅಭಿಪ್ರಾಯಪಡಲಾಗಿದೆ. ಇವನ್ನು ಮೂಲದೇವಾಲಯವೆನ್ನಬಹುದು. ಇದರ ಮುಂದೆ ಇರುವ ನವರಂಗ (ಮಂಟಪ) ದಲ್ಲಿ ವಿವಿಧ ಮಾದರಿಯ ಕಂಬಗಳಿವೆ. ಹಿಂದೆ ಇದಕ್ಕೆ 16 ಕಂಬಗಳಿದ್ದು, ಕೆಲವು ಕಂಬಗಳ ಮಧ್ಯೆ ಗೋಡೆಗಳ ನೈಋತ್ಯ, ದಕ್ಷಿಣಾಭಿಮುಖವಾಗಿ ಉತ್ಸವ ವಿಗ್ರಹವಿರುವ ಒಂದು ಗುಡಿಯನ್ನು ಮುಂದೆ ಎರಡು ಪಾರ್ಶ್ವಗಳಲ್ಲಿ ಮೂರು ಮೂರು ಲಿಂಗ ಸ್ಥಾಪಿತ ಗುಡಿಗಳಾಗಿ ವಿಂಗಡಿಸಲಾಗಿದೆ. ನವರಂಗದ ಪೂರ್ವ ಮತ್ತು ದಕ್ಷಿಣದ ಕಡೆಗಳಲ್ಲಿ ದ್ವಾರಗಳಿವೆ. ನವರಂಗದಲ್ಲಿರುವ ಕಂಬಗಳ ಮಾದರಿಯಿಂದ ಇವನ್ನು ಹೊಯ್ಸಳರ ಕಾಲದಲ್ಲಿ ಸುಮಾರು 13ನೆಯ ಶತಮಾನದಲ್ಲಿ ಕಟ್ಟಿಸಿರಬಹುದೆಂದು ತಿಳಿಯಬಹುದು. ನವರಂಗದ ಮುಂದಿರುವ ಬಲಿಪೀಠವೂ ಸಹ ಈ ಕಾಲದ್ದೆಂದು ಊಹಿಸಬಹುದು.

ಇದರ ಮುಂದೆ ಪೂರ್ವಕ್ಕೆ ಒಳಗಿನ ಮಹಾದ್ವಾರವಿದೆ. ಹಿಂದೆ ಇದು ದೇವಾಲಯದ ಮುಖ್ಯ ಪ್ರವೇಶದ್ವಾರವಾಗಿತ್ತು. ಇದರ ಕೆಳಭಾಗ ಕಲ್ಲಿನ ಕಟ್ಟಡ, ಇದರ ಎರಡು ಕಡೆಯೂ ಇರುವ ಕಂಬಗಳು ವಿಜಯನಗರದ ಶೈಲಿಯ ಕಂಬಗಳಂತೆ ಇವೆ. ಇದರ ಚಾವಣಿಯ ಮೇಲೆ ಐದು ಅಂತಸ್ತುಗಳು ಮತ್ತು ಚಿನ್ನದ ಗಿಲಾವಿನ ಐದು ಕಳಶಗಳು ಇರುವ ಇಟ್ಟಿಗೆ ಮತ್ತು ಗಾರೆಯ ಗೋಪುರವಿದೆ. ಇದರ ವಿನ್ಯಾಸದಲ್ಲೂ ವಿಜಯನಗರ ಶೈಲಿಯನ್ನು ಕಾಣಬಹುದು. ದೇವಾಲಯದಲ್ಲಿ ಕೃಷ್ಣದೇವರಾಯನ ಒಂದು

ದತ್ತಿ ಶಾಸನವಿರುವುದರಿಂದ ಈ ಗೋಪುರ ಮತ್ತು ಮಹಾದ್ವಾರ ಕೃಷ್ಣದೇವರಾಯನ ಕಾಲದ ರಚನೆಯಿರಬಹುದು.

ಪಾರ್ವತಿ, ನಾರಾಯಣಸ್ವಾಮಿ ಮತ್ತು ಚಂಡಿಕೇಶ್ವರ ದೇವಾಲಯಗಳು ಶ್ರೀಕಂಠೇಶ್ವರ ಗುಡಿಯ ಎಡಗಡೆಯಿವೆ. ನಾರಾಯಣ ಗುಡಿಯು ಗರ್ಭಗುಡಿ ಮತ್ತು ಅರ್ಧಮಂಟಪವನ್ನು ಹೊಂದಿದೆ. ಈ ವಿಷ್ಣು ವಿಗ್ರಹದ ಕೈಗಳಲ್ಲಿ ಪದ್ಮ, ಚಕ್ರ, ಶಂಖ ಮತ್ತು ಗದೆ ಇವೆ. ಈ ಗರ್ಭಗುಡಿಯ ಮೇಲೆ ಚಿಕ್ಕದಾದ ಗಾರೆಯ ಶಿಖರವಿದೆ. ಪಾರ್ವತಿ ಗುಡಿಯು ಗರ್ಭಗೃಹ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಪಾರ್ವತಿ ವಿಗ್ರಹದ ಕೈಯಲ್ಲಿ ಕಮಲ ಮತ್ತು ಕುಮುದ ಇವೆ. ದೇವಿಯ ಮೇಲಿರುವ ಸರ್ಪ ತೋರಣದಿಂದ ಹೊಯ್ಸಳ ಶೈಲಿಯ ಛಾಯೆಯಿರುವುದನ್ನು ಕಾಣಬಹುದು. ಈ ಮೂರ್ತಿಯು ಸುಂದರವಾಗಿವೆ. ಇದರ ಗರ್ಭಗೃಹದ ಮೇಲೆ ಗಾರೆಯಿಂದ ಕಟ್ಟಿದ ಶಿಖರವಿದೆ. ಚಂಡಿಕೇಶ್ವರನ ಗುಡಿಯು ಶಿಖರವನ್ನು ಹೊಂದಿದೆ.

ಪಾರ್ವತಿ ದೇವಿಯ ಗರ್ಭಗುಡಿಯ ಎಡಗಡೆ ಇರುವ ಗುಡಿಯಲ್ಲಿ ಹಸಿರು ಜಡಿತೆ ಲಿಂಗ ಪ್ರತಿಷ್ಠಾಪಿಸಿದ್ದಾರೆ. ಇದು ಸುಮಾರು 23 ಸೆಂಟಿಮೀಟರ್ ಎತ್ತರವಿದೆ. ಇದನ್ನು ಟಿಪ್ಪುಸುಲ್ತಾನ್ ಅಪ್ಪಣೆಯಂತೆ ಪ್ರತಿಷ್ಠಾಪಿಸಿದ್ದಾರೆ. ಇದನ್ನು ಪಚ್ಚೆಲಿಂಗ ಎಂದು ಕರೆಯುವರು.

ಮೈಸೂರು ಅರಸರು ದೇವಾಲಯದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿರುವರು. ದೇವಾಲಯದ ಒಳಗೆ ಮತ್ತು ಸುತ್ತಲೂ ಇರುವ ಸಾಲುಕಂಬಗಳು ಚತುರ್ಮುಖವಾಗಿದ್ದು ಮಧ್ಯೆ ಮಧ್ಯೆ ಅಷ್ಟಕೋನವಾಗಿವೆ. ಈ ಕಂಬಗಳು ಮತ್ತು ಇವುಗಳ ಮೇಲಿನ ಶಿಲ್ಪಗಳ ಲಕ್ಷಣದಿಂದ ಇವು 17–19ನೆಯ ಶತಮಾನದವೆಂದು ಊಹಿಸಬಹುದು. ಶ್ರೀಕಂಠೇಶ್ವರ ಗುಡಿಯ ನವರಂಗದಲ್ಲಿರುವ ಕೋಷ್ಟಗಳಲ್ಲಿರುವ ಲಿಂಗಗಳು 19ನೆಯ ಶತಮಾನದಲ್ಲಿ ಪ್ರತಿಷ್ಠಿತವಾಗಿವೆ. 1820ರ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯದಲ್ಲಿ ಬದಲಾವಣೆಗಳನ್ನು ಮಾಡಿ ಇಂದಿನ ಕಟ್ಟಡವನ್ನು ರಚಿಸಿದಂತೆ ಕಾಣುತ್ತದೆ.

ಪ್ರಾಕಾರದ ಗೋಡೆಗೆ ಸೇರಿದಂತಿರುವ ಒಳಸಾಲಿನಲ್ಲಿ ಆಗ್ನೇಯದಿಂದ ಸುಮಾರು 63 ಶೈವ ಭಕ್ತರ ವಿಗ್ರಹಗಳು ಇವೆ.[2] ಇವುಗಳು ಈ ರೀತಿಯಾಗಿವೆ :– ನಂದಿನಿ, ಸುಂದರಮೂರ್ತಿ, ಕಮಲಿನಿ, ಅಪ್ಪರ್. ಮಾಣಿಕ್ಯವಾಚಕರ್, ಶಿವಜ್ಞಾನ ಸಂಬಂಧರ್, ತ್ರಿಸಹಸ್ರ ಭೂಸುರರು, ನೀಲಕಂಠರು, ಮಹಾಧನರು, ಮಾರರು, ಸತ್ಯಾರ್ಥರು, ವರಮಿಂದರು, ಅಮರನೀತೀ, ದಾರುಕರು, ಏನಾಥಿನಾಥರು, ಕಾಲನಾಥರು, ಕಣ್ಣಪ್ಪನವರು, ಮಾನಕುಂಜರು, ಸಂಕುಲಾದಾಯರು, ಗೋನಾಥರು, ಮೂರ್ತಿನಾಥರು, ಸ್ಕಂದನಾಥರು ರುದ್ರ ಪಶುಪತಿ, ನಂದರು, ವಿಚಾರನಂತರು, ಚಂಡೀಶ್ವರರು, ಕುಲರಕ್ಷಕರು, ವಿದ್ಯಾಮಂತರು, ಪೂತವತೀ, ಅಭೂತಿಚರರು, ನೀಲಸಗ್ನರು, ನವನಂದಿ, ಕಲಿಕಾಮರು, ಶ್ರೀಮೂಲರು, ಭವಭಕ್ತರು, ದಂಡಭಕ್ತರು, ಮಾರಸೋಮಯಾಜಿಗಳು, ಶಾಕ್ಯನಾಥರು,

ನಿರುದ್ಧ ಶಾರ್ದೂಲರು, ಮತಂಗರು, ಚಾರಭೂಪತಿ, ಗಣನಾಥರು, ಪರಾಂತಕರು, ಸತ್ಯಧರು, ಧರ್ಮಕೇತನರು, ಪ್ರತಾಪರೂಢರು, ಅತಿಭಕ್ತರು, ಮಾನಧನರು, ಕಲಿನೀತಿ ಕೀರ್ತಿನಾಥರು, ಪಂಚಪಾದರು, ಗಾನಸಮುದ್ರರು, ಅವಿಕಾರಿ, ಅಭಿರಾಮರು, ನಿರ್ವಚನರು, ಶಕ್ರನಾಥರು, ಧರ್ಮಭಕ್ತರು, ಧರ್ಮನಾಥರು, ಸಾಹಸಪ್ರಿಯರು, ಕೀರ್ತಿ ಕಥಾವೃತರು, ಶೂರವ್ಯಾಘ್ರರು, ವಿಭೂತಿಚರರು, ಸಹಸ್ರಕರು, ಶಂಭುಚಿತ್ರರು, ಲೋಹಿತಾಕ್ಷರು, ಗೀತಾಕಾರರು.

ನಂತರ ಲಿಂಗಗಳ ಸಾಲು ಇದೆ. ಇವುಗಳು ಈ ರೀತಿಯಾಗಿವೆ :– ಪೃಥ್ವಿಲಿಂಗ, ಅಬಿಲಿಂಗ, ತೇಜೋಲಿಂಗ, ವಾಯುಲಿಂಗ, ಆಕಾಶಲಿಂಗ. ಆ ನಂತರ ಶ್ರೀಕಂಠೇಶ್ವರ ಗುಡಿಯ ನವರಂಗದ ದಕ್ಷಿಣ ದ್ವಾರಕ್ಕೆ ಎದುರಾಗಿ ಭಕ್ತ ವಿಗ್ರಹದ ಕೋಣೆಯಿದೆ. ಇದರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ನಾಲ್ವರು ಪತ್ನಿಯರ ಮತ್ತು ಮಗನ ವಿಗ್ರಹಗಳಿವೆ. ಈ ವಿಗ್ರಹಗಳ ಪೀಠದಲ್ಲಿ ಹೆಸರುಗಳಿವೆ. ನಂತರ ಲಿಂಗದ ಸಾಲು ಮುಂದುವರಿದಿದೆ. ಬ್ರಹ್ಮೇಶ್ವರ, ಪರಶುರಾಮೇಶ್ವರ, ಗೌತಮೇಶ್ವರ, ಮಾರ್ಕಂಡೇಶ್ವರ ಸುಜ್ಞಾನೇಶ್ವರ, ತೀರ್ಥರಾಜೇಶ್ವರ, ಲಕ್ಷ್ಮೀಶ್ವರ, ಸಹಸ್ರಲಿಂಗೇಶ್ವರ ಇವೆ. ಪಶ್ಚಿಮದ ಸಾಲಿನಲ್ಲಿ ಪ್ರಸನ್ನ ಗಣಪತಿ, ನೀಲಕಂಠೇಶ್ವರ, ಶಕ್ತಿ ಗಣಪತಿ, ತ್ರಿನೇಶ್ವರ, ಮಲ್ಲಿಕಾರ್ಜುನೇಶ್ವರ, ಮಹಾಗಣಪತಿ, ಕಪಿಲೇಶ್ವರ, ಭೂಕೈಲಾಸೇಶ್ವರ, ಸಂಗಮೇಶ್ವರ, ಕೌಂಡಿನ್ಯೇಶ್ವರ, ಶ್ರೀ ನಂಜರಾಜಾಭಿದ ಮುಮ್ಮಡಿ ಕೃಷ್ಣರಾಜೇಶ್ವರ, ರಜತ ನಂಜುಂಡೇಶ್ವರ, ಷಣ್ಮುಖ, ದಂಡಪಾಣಿ, ಶಾರದಾ ವಿಗ್ರಹಗಳಿವೆ. ದೇವಾಲಯದ ಎಡಪ್ರಾಕಾರದ ಸಾಲಿನಲ್ಲಿರುವ ಶಿವ ಲೀಲಾ ಮೂರ್ತಿಗಳು ಸುಮಾರು 5 ಅಡಿ ಎತ್ತರದ ವಿಗ್ರಹಗಳು ವೈಶಿಷ್ಟ್ಯಪೂರ್ಣವಾಗಿವೆ. ಇವುಗಳು ಈ ರೀತಿಯಾಗಿವೆ :– ಇದು ಶಕ್ತಿ ಸಮೇತ ಚಂದ್ರಶೇಖರ ಮತ್ತು ಪಾರ್ವತಿ, ಉಮಾಮಹೇಶ್ವರ, ವೃಷಭಾರೂಢ, ಪಾರ್ವತೀ ಸಮೇತನಾದ ತಾಂಡವೇಶ್ವರ, ಗಿರಿಜಾ ಕಲ್ಯಾಣಮೂರ್ತಿ, ಭಿಕ್ಷಾಟನ ಮೂರ್ತಿ, ಕಾಮಸಂಹಾರ ಮೂರ್ತಿ, ಕಾಲಸಂಹಾರ ಮೂರ್ತಿ, ತ್ರಿಪುರ ಸಂಹಾರ ಮೂರ್ತಿ, ಜಲಂಧರಮೂರ್ತಿ, ಬ್ರಹ್ಮಶಿರಚ್ಛೇದನಮೂರ್ತಿ, ವೀರಭದ್ರಮೂರ್ತಿ, ಶಂಕರನಾರಾಯಣ ಮೂರ್ತಿ, ಅರ್ಧನಾರೀಶ್ವರ ಮೂರ್ತಿ, ಕಿರಾತಾರ್ಜುನ ಮೂರ್ತಿ, ಕಂಕಾಲಮೂರ್ತಿ, ಚಂಡಿಕೇಶ್ವರ ವರಪ್ರಸನ್ನ ಮೂರ್ತಿ, ವಿಷಕಂಠಮೂರ್ತಿ, ಚಕ್ರದಾನಮೂರ್ತಿ, ವಿಘ್ನೇಶ್ವರ ವರಪ್ರಸನ್ನ ಮೂರ್ತಿ, ಸೋಮಸ್ಕಂದಮೂರ್ತಿ, ಏಕಪಾದಮೂರ್ತಿ, ಸುಖಾಸೀನಮೂರ್ತಿ, ವಟಮೂಲ ದಕ್ಷಿಣಾಮೂರ್ತಿ, ಲಿಂಗೋದ್ಭವಮೂರ್ತಿ, ಆಗಮೋಕ್ತವಾದ 25 ಶಿವಲೀಲಾ ಮೂರ್ತಿಗಳು ಶಿಲ್ಪಸೌಂದರ್ಯದಿಂದಲೂ ಆಗಮ ದೃಷ್ಟಿಯಿಂದಲೂ ಗಮನಾರ್ಹವಾಗಿವೆ.

ತಾಂಡವೇಶ್ವರ ಗುಡಿಯಲ್ಲಿರುವ ತಾಮ್ರದ ತಾಂಡವೇಶ್ವರ ವಿಗ್ರಹವು ಅಂಧಕಾಸುರ ಸಂಹಾರ ಮಾಡುತ್ತಿರುವ ಶಿವನ ಮೂರ್ತಿಯಾಗಿದೆ. ಈ ವಿಗ್ರಹದ ಪ್ರಭಾವಳಿಯಲ್ಲಿ ಆಗಮಿಕ ಚಂದ್ರಶೇಖರನ ಸೇವೆ ಎಂಬ ಶಾಸನವಿದೆ.[3] ಇದಕ್ಕೆ ಗೋಪುರವಿದೆ.

ನವಗ್ರಹ ಗುಡಿಯು ಈಚಿನದಾಗಿದೆ. ಇದರಲ್ಲಿ 9 ವಿಗ್ರಹಗಳಿವೆ. ಕಪ್ಪುಶಿ

ಯಿಂದ ಮಾಡಿದ ವಿಗ್ರಹಗಳು ಇವೆ. ಇವನ್ನು ಮೈಸೂರಿನ ಪ್ರಸಿದ್ಧ ಶಿಲ್ಪಿಯಾದ ಸಿದ್ಧಲಿಂಗಸ್ವಾಮಿಗಳು ಮಾಡಿರುವರು.

ಬಸವನ ಕಟ್ಟೆಯು ದೊಡ್ಡ ಕಂಬಗಳಿಂದ ಕೂಡಿರುವ ಒಂದು ಮಂಟಪ. ಇದರಲ್ಲಿ ಒಂದು ದೀಪಸ್ತಂಭವಿದೆ. ಇದರಲ್ಲಿ ಒಂದು ಬಸವನ ವಿಗ್ರಹವಿದೆ. ಇದರ ಪಕ್ಕದಲ್ಲಿ ಸುಮಾರು 1.2 ಮೀ. ಎತ್ತರದ ಬಸವನ ವಿಗ್ರಹವಿದೆ. ಇದನ್ನು ಕ್ರಿ. ಶ. 1644 ರಲ್ಲಿ ದಳವಾಯಿ ವಿಕ್ರಮರಾಯ ಸ್ಥಾಪಿಸಿದನೆಂದು ಇದರ ಪೀಠದಲ್ಲಿರುವ ಶಾಸನದಿಂದ ತಿಳಿಯುವುದು.[4]

ದೇವಾಲಯದ ಪ್ರಾಕಾರದ ಮೇಲೆ ಸುತ್ತಲೂ ದೇವ ಮತ್ತು ಇತರ ಮೂರ್ತಿಗಳಿರುವ ಕೂಟ ಮತ್ತು ಶಿಖರಗಳ ಗಚ್ಚಿನ ಹಾರವಿದೆ. ಇದರಲ್ಲಿ ಗಾರೆಯಲ್ಲಿ ಮಾಡಿದ 122 ದೇವ ಮೂರ್ತಿಗಳಿವೆ. ಮಹಾದ್ವಾರದ ಪೂರ್ವದಿಂದ ಪ್ರಾರಂಭವಾಗಿ ಈ ರೀತಿ ಇವೆ :– ಇವುಗಳಲ್ಲಿ ಅಷ್ಟ ದಿಕ್ಪಾಲಕರು, ಮೊಸಳೆಯ ಮೇಲೆ ವರುಣ, ಜಿಂಕೆಯ ಮೇಲೆ ವಾಯು, ಕುದುರೆಯ ಮೇಲೆ ಈಶಾನ, ನಂತರ ಗರುಡ ವಾಹನ ನಾರಾಯಣ, ವೀರಭದ್ರ, ಪೂರ್ವ ಅಸಿತಾಂಗ ಭೈರವ, ನಂದಿ ವಾಹನ ಉಮಾಮಹೇಶ್ವರ, ಮಯೂರ ವಾಹನ ಕುಮಾರ ಮತ್ತು ಕೌಮಾರಿ, ನಿರುಋತಿ, ವರುಣ, ವಾಯು, ಕುಬೇರ, ಈಶಾನ ಇವೆ. ನಂತರ 16 ಸುಬ್ರಹ್ಮಣ್ಯ ವಿಗ್ರಹಗಳಿವೆ. ಇವು ಈ ರೀತಿಯಿವೆ :– ಜ್ಞಾನಶಕ್ತಿ ಸುಬ್ರಹ್ಮಣ್ಯ, ಸ್ಕಂದಸುಬ್ರಹ್ಮಣ್ಯ, ದೇವಸೇನಾಪತಿ ಸುಬ್ರಹ್ಮಣ್ಯ, ಸುಬ್ರಹ್ಮಣ್ಯ, ಗಜಾರೂಢಸುಬ್ರಹ್ಮಣ್ಯ, ಶರಕಾನನಸುಬ್ರಹ್ಮಣ್ಯ, ಕಾರ್ತಿಕೇಯಸುಬ್ರಹ್ಮಣ್ಯ, ಕುಮಾರಸುಬ್ರಹ್ಮಣ್ಯ, ಷಣ್ಮುಖಸುಬ್ರಹ್ಮಣ್ಯ, ತಾರಕಾಂತಕಸುಬ್ರಹ್ಮಣ್ಯ, ಸೇನಾನಿಸುಬ್ರಹ್ಮಣ್ಯ, ಬ್ರಹ್ಮಸುಬ್ರಹ್ಮಣ್ಯ, ಶಸ್ತ್ರಸುಬ್ರಹ್ಮಣ್ಯ, ವಲ್ಲೀ ಸುಬ್ರಹ್ಮಣ್ಯ, ಕಲ್ಯಾಣಸುಬ್ರಹ್ಮಣ್ಯ, ಬಾಲಸುಬ್ರಹ್ಮಣ್ಯ. ನಂತರದಲ್ಲಿ ಏಳು ತಾಂಡವೇಶ್ವರ ವಿಗ್ರಹಗಳಿವೆ. ಆನಂದ ತಾಂಡವ, ಸಂಧ್ಯಾ ತಾಂಡವ, ಉಮಾ ತಾಂಡವ, ಗೌರಿ ತಾಂಡವ, ಕಾಲಿಕಾ ತಾಂಡವ, ತ್ರಿಪುರ ತಾಂಡವ, ಸಂಹಾರ ತಾಂಡವ. ನಂತರ ವೀಣಾ ದಕ್ಷಿಣಾಮೂರ್ತಿ, ಸಂಬ ದಕ್ಷಿಣಾಮೂರ್ತಿ, ಯೋಗ ದಕ್ಷಿಣಾಮೂರ್ತಿ, ಸಂಹಾರ ದಕ್ಷಿಣಾಮೂರ್ತಿ, ಶಕ್ತಿ ದಕ್ಷಿಣಾಮೂರ್ತಿ, ಜ್ಞಾನ ದಕ್ಷಿಣಾಮೂರ್ತಿ, ಅನುಷ್ಠಾನ ದಕ್ಷಿಣಾಮೂರ್ತಿ, ವ್ಯಾಖ್ಯಾನ ದಕ್ಷಿಣಾಮೂರ್ತಿ, ವಿದ್ಯಾ ದಕ್ಷಿಣಾಮೂರ್ತಿ, ವಟಮೂಲ ದಕ್ಷಿಣಾಮೂರ್ತಿ, 10 ವಿಧದ ದಕ್ಷಿಣಾಮೂರ್ತಿ ವಿಗ್ರಹಗಳಿವೆ. ಲಿಂಗೋದ್ಭವಮೂರ್ತಿ ವೇಲಾಯುಧ ಸುಬ್ರಹ್ಮಣ್ಯ ಮೂರ್ತಿ, ಕಾಲಭೈರವ, ಚಾಮುಂಡೇಶ್ವರಿ ವಿಗ್ರಹಗಳಿವೆ.

ಪಶ್ಚಿಮದ ಕಡೆಯಲ್ಲಿ ಚಂದ್ರಶೇಖರ ಮೂರ್ತಿ, ಉಮಾಮಹೇಶ್ವರ ಮೂರ್ತಿ, ವೃಷಭಾರೂಢ ಮೂರ್ತಿ, ತಾಂಡವ ಮೂರ್ತಿ, ಕಲ್ಯಾಣ ಸುಂದರಮೂರ್ತಿ, ಭಿಕ್ಷಾಟನ ಮೂರ್ತಿ, ಕಾಮಸಂಹಾರ ಮೂರ್ತಿ, ಕಾಲಸಂಹಾರ ಮೂರ್ತಿ, ಜಲಂಧರ ಮೂರ್ತಿ, ಗಜಾಸುರ ಮರ್ದನಮೂರ್ತಿ, ತ್ರಿಪುರ ಸಂಹಾರ ಮೂರ್ತಿ, ವೀರಭದ್ರಮೂರ್ತಿ, ಶರಭ ಮೂರ್ತಿ. ಅಘೋರಮೂರ್ತಿ, ಅರ್ಧನಾರೀಶ್ವರ ಮೂರ್ತಿ, ಕಿರಾತಕಮೂರ್ತಿ, ಕಂಕಾಳ

ಮೂರ್ತಿ. ಚಂಡಿಕೇಶ್ವರ ಮೂರ್ತಿ, ವಿಷಹರಮೂರ್ತಿ, ಚಕ್ರದಾನಮೂರ್ತಿ, ವಿಘ್ನೇಶ್ವರ ವರಪ್ರಸನ್ನ ಮೂರ್ತಿ, ಸೋಮಸ್ಕಂದ ಮೂರ್ತಿ, ಸುಖಾಸೀನಮೂರ್ತಿ, ಏಕಪಾದ ಮೂರ್ತಿ, ದಕ್ಷಿಣಾಮೂರ್ತಿ ವಿಗ್ರಹಗಳಿವೆ.

32 ವಿಧದ ಗಣಪತಿ ವಿಗ್ರಹಗಳು ಈ ರೀತಿಯಾಗಿವೆ :– ಭಕ್ತಿ ಗಣಪತಿ, ದುಂಡಿ, ಗಣಪತಿ, ತರುಣ ಗಣಪತಿ, ತಾಂಡವ ಗಣಪತಿ, ವೀರ ಗಣಪತಿ, ಲಕ್ಷ್ಮೀ ಗಣಪತಿ, ಚತುರ್ಮುಖ ಗಣಪತಿ, ಶಕ್ತಿ ಗಣಪತಿ, ವಿಜಯ ಗಣಪತಿ, ಋಣ ವಿಮೋಚನಾ ಗಣಪತಿ ಮಹಾಗಣಪತಿ, ಸೃಷ್ಟಿ ಗಣಪತಿ, ಪಂಚಮುಖ ಗಣಪತಿ, ಸಿದ್ಧಿ ಗಣಪತಿ, ಏಕದಂತ ಗಣಪತಿ, ಉಚ್ಛಿಷ್ಟ ಗಣಪತಿ, ಕ್ಷಿಪ್ರ ಗಣಪತಿ, ಹೇರಂಬ ಗಣಪತಿ, ಊರ್ಧ್ವ ಗಣೇಶಂ ಗಣಪತಿ, ಕ್ಷಿಪ್ರಪ್ರಸಾದ ಗಣಪತಿ, ಮಹಾಗಣಪತಿ, ಬಿಜಾಪ್ರರದ ಗಣಪತಿ, ಸರ್ವಾರ್ಥ ಸಿದ್ಧಿ ಗಣಪತಿ. ಸದಾಶಿವ ಗಣಪತಿ, ವಿಘ್ನರಾಜ ಗಣಪತಿ, ತ್ರ್ಯಕ್ಷರ ಗಣಪತಿ, ಯೋಗ ಗಣಪತಿ, ಶೂರ ಗಣಪತಿ, ಇಭವಕ್ತ್ರ ಗಣಪತಿ, ಕರೀಂದ್ರ ಗಣಪತಿ, ರಮಾ ಗಣಪತಿ, ಗೌರೀಪುತ್ರ ಗಣಪತಿ.

ನಂತರ ಸಪ್ತ ಮಾತೃಕಾ ವಿಗ್ರಹಗಳಿವೆ. ಹಂಸದ ಮೇಲೆ ಬ್ರಾಹ್ಮೀ, ವೃಷಭದ ಮೇಲೆ ಮಾಹೇಶ್ವರೀ.ನವಿಲಿನ ಮೇಲೆ ಕೌಮಾರಿ, ಗರುಡನ ಮೇಲೆ ವೈಷ್ಣವೀ, ಕೋಣನ ಮೇಲೆ ವಾರಾಹಿ, ಆನೆಯ ಮೇಲೆ ಇಂದ್ರಾಣಿ, ರಾಕ್ಷಸನ ಮೇಲೆ ಚಾಮುಂಡಿ ಇವೆ.

ಈಶಾನ್ಯದ ಕೊನೆಯಲ್ಲಿ ಹಂಸದ ಮೇಲೆ ಬ್ರಹ್ಮ, ಆನೆಯ ಮೇಲೆ ಇಂದ್ರ, ಟಗರಿನ ಮೇಲೆ ಅಗ್ನಿ, ಕೋಣನ ಮೇಲೆ ಯಮ, ಮನುಷ್ಯನ ಮೇಲೆ ನಿರುತಿ, ಈ ವಿಗ್ರಹಗಳಿವೆ. ಈ ಎಲ್ಲಾ ವಿಗ್ರಹಗಳು 19ನೆಯ ಶತಮಾನದವಾಗಿವೆ.

ದೇವಾಲಯದಲ್ಲಿ ಸುಮಾರು 240ಕ್ಕೂ ಹೆಚ್ಚು ವಿಗ್ರಹಗಳಿವೆ. ಇವುಗಳಲ್ಲಿ ಅರ್ಧದಷ್ಟು ಲಿಂಗಗಳು. ಹೆಚ್ಚಿನವು ಪ್ರಾಕಾರದ ಗೋಡೆಗೆ ಸೇರಿದಂತಿರುವ ಒಳಸಾಲಿನಲ್ಲಿವೆ. ಒಳಗಿನ ಮಹಾದ್ವಾರದ ಮುಂದಿನ ಕೋಣೆಯಲ್ಲಿ ಹೊಯ್ಸಳ ಶೈಲಿಯ ಒಂದು ನೃತ್ಯ ಗಣಪತಿಯಿದೆ. ಶ್ರೀಕಂಠೇಶ್ವರ ಗುಡಿಯ ನವರಂಗದ ದಕ್ಷಿಣ ದ್ವಾರದ ಬಲಗಡೆ ಇರುವ ಸುಬ್ರಹ್ಮಣ್ಯನ ಗುಡಿಯಲ್ಲಿರುವ ಸುಬ್ರಹ್ಮಣ್ಯ, ಹಿಂದಿನ ಪ್ರಾಕಾರದಲ್ಲಿರುವ ಉಚ್ಛಿಷ್ಟ ಗಣಪತಿ, ಷಣ್ಮುಖ, ಬಲಪ್ರಾಕಾರದಲ್ಲಿರುವ ಶಿವಲೀಲಾ ಮೂರ್ತಿಗಳು ವಿಶಿಷ್ಟವಾಗಿವೆ.

ಪೂರ್ವಭಾಗದಲ್ಲಿರುವ ದೊಡ್ಡ ಮಹಾದ್ವಾರವು 1845ರಲ್ಲಿ ಕೃಷ್ಣರಾಜಒಡೆಯರ ಅನುಮತಿಯಿಂದ ಚಾಮರಾಜ ಒಡೆಯರ ಪತ್ನಿ ದೇವಾಜಮ್ಮಣ್ಣಿಯವರಿಂದ ಕಟ್ಟಿಸಲ್ಪಟ್ಟಿದೆ.[6] ಇದನ್ನು ಸೂಚಿಸುವ ಶಾಸನ ಮಹಾದ್ವಾರದ ಮೂಲಿಯ ಮೇಲಿದೆ. ಒಳ ಚಾವಣಿಯ ಎತ್ತರ ಸುಮಾರು 6 ಮೀಟರ್ ಇದೆ. ವಿಶಾಲವಾದ ಮಂಟಪದಂತಿರುವ ಈ ಭಾಗದಲ್ಲಿನ ಎತ್ತರ ಮತ್ತು ದಪ್ಪವಾದ ಬಾಗಿಲ ಚೌಕಟ್ಟಿನಲ್ಲಿ ದ್ವಾರಪಾಲಕ, ಗಂಗಾ, ಮತ್ತು ಯಮುನಾ ವಿಗ್ರಹಗಳಿವೆ. ಒಳಭಾಗದ ಬಾಗಿಲ ತೋಳುಗಳ ಮೇಲೆ ಕಾಲಭೈರವ ಮತ್ತು ವೀರಭದ್ರ ವಿಗ್ರಹಗಳು ಶಿಲ್ಪಾಲಂಕಾರಗಳು ಇವೆ. ಮಹಾ

ದ್ವಾರದ ಮೇಲೆ ಏಳು ಅಂತಸ್ತುಗಳಲ್ಲಿ ಸುಮಾರು 37 ಮೀಟರ್ ಎತ್ತರದ ದೊಡ್ಡ ಗೋಪುರ ಎದ್ದಿದೆ. ಗೋಪುರದ ಮೇಲ್ತುದಿಯಲ್ಲಿ ಸುಮಾರು 3 ಮೀಟರ್‌ಗಿಂತ ಎತ್ತರವಾಗಿರುವ ಚಿನ್ನದ ಗಿಲಾವಿನ ಏಳು ಕಲಶಗಳನ್ನು ಅದೇ ಎತ್ತರದ ಎರಡು ಕೊಂಬುಗಳ ಮಧ್ಯೆ ಸಾಲಾಗಿ ಜೋಡಿಸಲಾಗಿದೆ. ಈ ಗೋಪುರವನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿದ್ದಾರೆ. ಪ್ರತಿಯೊಂದು ಅಂತಸ್ತಿಗೂ ಪೂರ್ವ ಮತ್ತು ಪಶ್ಚಿಮದಲ್ಲಿ ಬಾಗಿಲಿವೆ. ಇವರ ಎರಡು ಪಕ್ಕಗಳಲ್ಲಿ ದ್ವಾರಪಾಲಕ ವಿಗ್ರಹಗಳಿವೆ.

ಮಹಾದ್ವಾರದ ಮುಂದೆ ದೊಡ್ಡ ದ್ವಾರಮಂಟಪವಿದೆ. ಇದನ್ನು ಸುಮಾರು ಕ್ರಿ. ಶ. 1900 ನೀಲಗಿರಿಯ ಮುದ್ದಣ್ಣ ಕಟ್ಟಿಸಿರುವನು.[7] ಇದರಲ್ಲಿ 8 ದೊಡ್ಡ ಕಂಬಗಳಿವೆ. ಈ ಕಲ್ಲಿನ ಕಂಬಗಳಲ್ಲಿ ಸುಂದರ ಶಿಲ್ಪಗಳಿವೆ. ಬಲಭಾಗದಲ್ಲಿರುವ ಮೊದಲನೆಯ ಕಂಬದ ಮೇಲೆ ನಂದಿಕೇಶ್ವರ, ರಾವಣ, ಉಮಾಮಹೇಶ್ವರ, ಕಾಮಧೇನು, ಭೈರವ ಮತ್ತು ಅಮೃತಕಲಶದೊಡನೆ ಗರುಡನಿರುವ ಶಿಲ್ಪಗಳಿವೆ. ಎರಡನೆಯ ಕಂಬದ ಮೇಲೆ ಭೃಂಗಿ, ಐದು ಹೆಡೆಯ ನಾಗರ, ಆನೆಯೊಡನೆ ಇಂದ್ರ, ಟಗರಿನೊಡನೆ ಅಗ್ನಿ ಮತ್ತು ಕೋಣನೊಡನೆ ಯಮ ಇರುವ ಶಿಲ್ಪಗಳಿವೆ. ಮೂರನೆಯ ಕಂಬದ ಮೇಲೆ ಮನುಷ್ಯನೊಡನಿರುವ ನಿರುಋತಿ, ಅಲಂಕಾರ ಮಾಡಿಕೊಳ್ಳುತ್ತಿರುವ ಸ್ತ್ರೀ, ಕುಳಿತಿರುವ ಋಷಿ ಶಿಲ್ಪಗಳಿವೆ. ನಾಲ್ಕನೆಯ ಕಂಬದ ಮೇಲೆ ನವಿಲಿನೊಡನೆ ಕೌಮಾರಿ, ಸರಸ್ವತಿ, ಬಾಲದ ತುದಿಯ ಮೇಲೆ ನಿಂತಿರುವ ಗರುಡ ಪಕ್ಷಿಯನ್ನು ಹಿಡಿಯುತ್ತಿರುವ ಕಾಳಿಂಗ ಸರ್ಪವೂ ಸೂರ್ಯ ಮತ್ತು ಗರುಡನೊಡನಿರುವ ವಿಷ್ಣುವಿನ ಶಿಲ್ಪಗಳಿವೆ.

ಎಡಭಾಗದಲ್ಲಿರುವ ಕಂಬದಲ್ಲಿ ಕಲಶದೊಡನಿರುವ ಋಷಿ, ನಾಗ, ಜನಾರ್ದನ, ಹನುಮ, ನಂದಿ, ಗಿರಿಜಾ ಕಲ್ಯಾಣದ ಶಿಲ್ಪಗಳಿವೆ. ಎರಡನೆಯ ಕಂಬದಲ್ಲಿ ಋಷಿ, ಮೀನು ನುಂಗುತ್ತಿರುವ ಮೊಸಳೆ, ಮೊಸಳೆಯೊಡನೆ ವರುಣ, ಜಿಂಕೆಯೊಡನೆ ವಾಯುವಿನ ಶಿಲ್ಪಗಳಿವೆ. ಮೂರನೆಯ ಕಂಬದ ಮೇಲೆ ಕುದುರೆಯೊಡನೆ ಕುಬೇರ, ಋಷಿ ಮತ್ತು ಸ್ತ್ರೀ, ಎತ್ತಿನೊಡನೆ ಈಶಾನ, ನಾಗಲಿಂಗವನ್ನು ಕಣ್ಣಪ್ಪ ಒದೆಯುತ್ತಿರುವ ಶಿಲ್ಪಗಳಿವೆ. ನಾಲ್ಕನೆಯ ಕಂಬದ ಮೇಲೆ ಅಮೃತ ಕಲಶದೊಡನೆ ಗರುಡಪಕ್ಷಿ, ಅಮೃತ ಕಲಶ, ವೀರಭದ್ರ, ನೂಪುರವನ್ನು ಹಾಕಿಕೊಳ್ಳುತ್ತಿರುವ ಸ್ತ್ರೀ, ನವಿಲೊಡನೆ ಷಣ್ಮುಖ, ನೃತ್ಯ ಗಣಪತಿ, ಹಂಸದ ಮೇಲೆ ಬ್ರಹ್ಮ, ನಾಗಲಿಂಗ, ನವಿಲೊಡನೆ ಕುಮಾರ ಶಿಲ್ಪಗಳಿವೆ. ದ್ವಾರ ಮಂಟಪದ ಎರಡು ಕಡೆಯೂ ಕಲ್ಲಿನ ಆನೆಗಳಿವೆ.

ಸ್ಥಳ ಪುರಾಣಗಳ ಪ್ರಕಾರ[8] ನಂಜನಗೂಡಿಗೆ ಗರಳಪುರಿ ಕ್ಷೇತ್ರ, ದಕ್ಷಿಣ ಕಾಶಿ ಎಂಬ ಹೆಸರುಗಳಿವೆ. ಪರಸುರಾಮ ತನ್ನ ತಾಯಿಯನ್ನು ಕೊಂದ ಪಾಪವನ್ನು ಇಲ್ಲಿ ಶಿವನ ಅನುಗ್ರಹದಿಂದ ಕಳೆದುಕೊಂಡನೆಂದು, ಕೇಶಿ ರಾಕ್ಷಸನ ಸಂಹಾರ ಈ ಸ್ಥಳದಲ್ಲಿಯೇ ನಡೆಯಿತೆಂದು, ಇದು ಗೌತಮ ಋಷಿಗಳು ತಪಸ್ಸು ಮಾಡಿದ ಪವಿತ್ರ ಕ್ಷೇತ್ರವೆಂದು ತಿಳಿದು ಬರುತ್ತದೆ.

ಹಲ್ಲರೆ ಶಾಸನದಲ್ಲಿ[9] ಈ ದೇವರನ್ನು ಶ್ರೀಮನ್ಮಹಾದೇವ ದೇವೋತ್ತಮ ದೇವತಾ ಸಾರ್ವಭೌಮ ಭವರೋಗ ವೈದ್ಯ ಕಾರುಣ್ಯಾರಣ್ಯ ದಹನದಾವಾನಲ...... ಭಕ್ತಿ ಮುಕ್ತಿ ಫಲ ಪ್ರದಾಯಕ ಕಪಿಲ ಕೌಂಡಿನ್ಯನದೀ ಸಂಗಮ ಕ್ಷೇತ್ರ ಮೂರ್ತಿ... ದೀಪಪ್ರಹಾರ ಶ್ರೀ ನಂಜುಂಡೇಶ್ವರ ಎಂದು ಹೊಗಳಿದೆ. ಈ ದೇವಾಲಯಕ್ಕೆ ವಿಜಯನಗರದ ಇಮ್ಮಡಿ ಹರಿಹರನ ಕಾಲದಲ್ಲಿ ದತ್ತಿಯನ್ನು ಕೊಟ್ಟಿದ್ದಾರೆ. ಕ್ರಿ. ಶ. 1399 ರಿಂದ ನಮಗೆ ಶಾಸನಗಳು ಸಿಗುತ್ತವೆ.[10] ಮೂರನೇ ಹರಿಹರನು ಕ್ರಿ. ಶ. 1422ರಲ್ಲಿ[11] ತನ್ನ ತಂದೆ ದೇವರಾಯನ ಶಾಶ್ವತ ಪುಣ್ಯಕ್ಕಾಗಿ ಗ್ರಾಮವನ್ನು ಧರ್ಮ ಕೊಟ್ಟನು. ಕ್ರಿ. ಶ. 143೧ರಲ್ಲಿ[12] ತೆರಕಣಾಂಬಿಯ ಚಿಕ್ಕಣ್ಣ ಒಡೆಯರು ಆಲತೂರನ್ನು ಸಮರ್ಪಿಸಿದರು. ಕ್ರಿ. ಶ. 1432ರ[13] ಶಾಸನ ಬಲಿಪೀಠದ ಮೇಲಿದೆ; ಇದು ವಿಜಯನಗರದ ಹರಿಹರನ ಕಾಲದ್ದು. ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕ್ರಿ. ಶ. 1537ರಲ್ಲಿ[14] ಉಮ್ಮತ್ತೂರಿನ ನರಸಪ್ಪಯ್ಯನು ಬಿಳಿಗೆರೆ ಗ್ರಾಮವನ್ನು ದೇವರ ನೈವೇದ್ಯಕ್ಕಾಗಿ ಕೊಟ್ಟಿರುವನು. ಕ್ರಿ. ಶ. 1529ರಲ್ಲಿ[15] ತಿರುಮಲರಾಯ ಮಹಾರಾಯರಿಗೆ ಪುಣ್ಯಲೋಕ ವಾಗಬೇಕೆಂದು ನಂಜುಂಡೇಶ್ವರ ದೇವರಿಗೆ ಜೋವನಹಳ್ಳಿಯ ಸುಂಕಾದಾಯವನ್ನು ಕೊಟ್ಟಿರುವರು.

ನಂತರ ಅನೇಕ ಪಾಳೆಯಗಾರರು ಮತ್ತು ಮೈಸೂರು ರಾಜಮನೆತನದವರು ಅನೇಕ ದತ್ತಿಗಳನ್ನು ಕೊಟ್ಟಿದ್ದಾರೆ. ಕ್ರಿ. ಶ. 1819ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಗೌತಮ ರಥವನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ.[16] ಉತ್ಸವಮೂರ್ತಿಗೆ ಬೆಳ್ಳಿಮಂಟಪವನ್ನು,[17] ಬೆಳ್ಳಿಪಲ್ಲಕ್ಕಿಯ ಅಣಸು,[18] ಗಜರಥ,[19] ಅಶ್ವರಥ,[20] ಕೈಲಾಸ ವಾಹನ,[21] ಪಾರ್ವತೀ ರಥ[22]ವನ್ನು ಜೀರ್ಣೋದ್ಧಾರ ಮಾಡಿದ್ದಾರೆಂದು ತಿಳಿಯುವುದು. ಬೆಳ್ಳಿಯ ವಾಹನಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ಮಾಡಿಸಿದ್ದಾರೆ. ಅರಮನೆಯ ಹಲವು ಅಧಿಕಾರಿಗಳು ಶ್ರೀಕಂಠೇಶ್ವರನಿಗೆ ಅನೇಕ ವಾಹನಗಳನ್ನು ಕೊಟ್ಟಿರುವರು. ಪುರೋಹಿತ ನಂಜುಂಡ ಭಟ್ಟರು ಉತ್ಸವ ವಿಗ್ರಹಕ್ಕೆ ಬೆಳ್ಳಿಪೀಠವನ್ನು,[23] ಚಾಕರ ನಮೂನೆ ಬಾಬುರಾಯ ಚಿಕ್ಕ ಬೆಳ್ಳಿಯ ಆನೆ ವಾಹನ,[24] ಬಕ್ಷಿ ಭೀಮರಾಯ ಚಿಕ್ಕ ಬೆಳ್ಳಿ ನಂದಿವಾಹನ,[25] ಚಿಕ್ಕ ಕುದುರೆ ವಾಹನ[26] ಕೊಟ್ಟಿರುವರು.

ಈ ದೇವಾಲಯ ಕರ್ನಾಟಕದಲ್ಲಿ ಪ್ರಸಿದ್ಧವಾದ ಶಿವ ದೇವಾಲಯ. ವರ್ಷವಿಡೀ ದೇಶದ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತದೆ. ಸೋಮವಾರ ಮತ್ತು ಹುಣ್ಣಿಮೆ ದಿವಸಗಳಲ್ಲಿ ವಿಶೇಷವಾಗಿರುತ್ತದೆ. ಪ್ರತಿ ಹುಣ್ಣಿಮೆ ದಿವಸ ರಾತ್ರಿ ರಥೋತ್ಸವ ನಡೆಯುತ್ತದೆ. ವರ್ಷಕ್ಕೆ ಎರಡು ಜಾತ್ರೆಗಳಾಗುತ್ತವೆ. ಕಾರ್ತೀಕ (ಅಕ್ಟೋಬರ್–ನವಂಬರ್) ಮಾಸದ ಚಿಕ್ಕ ಜಾತ್ರೆಯಲ್ಲಿ ಮೂರು ರಥಗಳು ಮತ್ತು ಮೀನ ಮಾಸದಲ್ಲಿ (ಮಾರ್ಚ್–ಏಪ್ರಿಲ್) ದೊಡ್ಡ ಜಾತ್ರೆ ಐದು ರಥಗಳ ಉತ್ಸವ ಜರುಗುವುದು.

ಟಿಪ್ಪಣಿಗಳು

1. M. A. R. 1940
2. E. C. Vol. III-1974 ; Nj. 24-39.
3. Ibid. Nj. 96.
4. Ibid. Nj. 14.
5. Ibid. Nj. 92.
6. Ibid. Nj. 1.
7. M. A. R. 1940.
8. ಗರಳಪುರಿ ಮಹಿಮೆ. 1954.
9. E. C. Vol. III Nj. 374.
10. Ibid. Nj. 135.
11. Ibid Gu. 78.
12. Ibid. Gu. 24.
13. Ibid. Nj. 90.
14. Ibid. Nj. 251.
15. Ibid. Nj. 93.
16. Ibid. Nj. 107.
17. Ibid. Nj. 95.
18. Ibid. Nj. 101.
19. Ibid. Nj. 104.
20. Ibid. Nj 105.
21. Ibid. Nj. 106.
22. Ibid. Nj. 108.
23. Ibid. Nj. 95.
24. Ibid. Nj. 98.
25. Ibid. Nj. 99.
26. Ibid. Nj. 100.

—oOo—

ವಿಖ್ಯಾತ ಶೈವಕ್ಷೇತ್ರವಾದ ನಂಜನಗೂಡಿನಲ್ಲಿ ಶ್ರೀಕಂಠೇಶ್ವರ ದೇವಾಲಯವಲ್ಲದೆ ಪರಶುರಾಮ, ಚಾಮುಂಡೇಶ್ವರಿ, ಸತ್ಯನಾರಾಯಣ, ದತ್ತಾತ್ರೇಯ, ಗಣಪತಿ ಮೊದಲಾದ ಇತರ ದೇವಾಲಯಗಳೂ ಇವೆ. ಇಲ್ಲಿನ ಪರಶುರಾಮ ದೇವಾಲಯದಲ್ಲಿ ಒಂದು ಶಾಸನ ಕಲ್ಲು ಪೂಜಾ ವಸ್ತುವಾಗಿದೆ. ಈ ದೇವಾಲಯವನ್ನು ಸಂದರ್ಶಿಸದಿದ್ದಲ್ಲಿ ನಂಜನಗೂಡಿನ ಯಾತ್ರೆ ಅಪೂರ್ಣವಾಗುವುದೆಂಬ ನಂಬಿಕೆ ಇದೆ.

ನಂಜನಗೂಡಿನಲ್ಲಿ ಶಂಕರ, ವೀರಶೈವ, ಮತ್ತು ಮಾಧ್ವ ಸಂಪ್ರದಾಯದ ಮಠಗಳಿವೆ. ಇವುಗಳಲ್ಲಿ ರಾಘವೇಂದ್ರಸ್ವಾಮಿ ಮಠ ಪ್ರಾಚೀನವಾದುದು. ಸು. ಕ್ರಿ.ಶ. 15 ನೆಯ ಶತಮಾನದಲ್ಲಿ ಶ್ರೀ ವಿಬುಧೇಂದ್ರ ತೀರ್ಥರಿಂದ ಇದು ಸ್ಥಾಪಿತವಾದದ್ದು. ಶ್ರೀ ಸುಧೀಂದ್ರ, ಶ್ರೀರಾಘವೇಂದ್ರ ಮೊದಲಾದ ಪ್ರಸಿದ್ಧ ಆಚಾರ್ಯರು ಈ ಮಠದ ಪರಂಪರೆಗೆ ಸೇರಿದವರು. ಸಾಮಾನ್ಯವಾಗಿ ಶ್ರೀ ರಾಘವೇಂದ್ರ ಮಠಗಳಲ್ಲಿ ರಾಯರ ಬೃಂದಾವನ ಪೂಜಾ ವಸ್ತುವಾಗಿದ್ದರೆ ಇಲ್ಲಿ ಶ್ರೀ ರಾಯರ ಪ್ರತಿಮೆಗೆ ಪೂಜೆ ಸಲ್ಲುವುದು ವೈಶಿಷ್ಟ್ಯಪೂರ್ಣವಾದದ್ದು. ಈ ಮಠದಲ್ಲಿ ಕ್ರಿ.ಶ. 15-16 ನೆಯ ಶತಮಾನಗಳಿಗೆ ಸೇರಿದ ಅನೇಕ ತಾಮ್ರ ಪಟಗಳೂ, ಸನ್ನದುಗಳೂ ಇವೆ. ಇಲ್ಲಿ ಒಳ್ಳೆಯ ಹಸ್ತಪ್ರತಿಗಳ ಸಂಗ್ರಹ ಸಹ ಇದೆ.

ಈ ಮಠದ ಆಡಳಿತ ಸುಪ್ರಸಿದ್ಧ ಮಂತ್ರಾಲಯ ಕ್ಷೇತ್ರದಲ್ಲಿ ವಾಸಿಸುತ್ತಿರುವ ಶ್ರೀರಾಯರ ಪರಂಪರೆಗೆ ಸೇರಿದ ಶ್ರೀ ಸ್ವಾಮಿಗಳವರಿಗೆ ಸೇರಿರುತ್ತದೆ.

ಆರ್. ರಾಮಕೃಷ್ಣ

ಮಾನವ ಭಾಷಾವಿಜ್ಞಾನ

ಪೀಠಿಕೆ

ಮಾನವ ಭಾಷಾವಿಜ್ಞಾನ ಎಂದರೇನು, ಅದರ ಸ್ವರೂಪ ಮತ್ತು ವ್ಯಾಪ್ತಿಯೇನು ಎಂಬ ವಿಷಯಗಳನ್ನು ತಿಳಿಯುವ ಮುಂಚೆ ಮಾನವ ಶಾಸ್ತ್ರ ಎಂದರೇನು, ಭಾಷಾ ವಿಜ್ಞಾನದ ಅವಶ್ಯಕತೆ ಮಾನವ ಶಾಸ್ತ್ರಕ್ಕೆ ಎಷ್ಟರಮಟ್ಟಿಗೆ ಇದೆ ಎಂಬುದನ್ನು ತಿಳಿಯ ಬೇಕಾದುದು ಅವಶ್ಯಕ.

ಮಾನವಶಾಸ್ತ್ರವು ಮಾನವನ ಸಮಗ್ರ ಜೀವನವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ವಿಷಯವಾಗಿದೆ. ಮಾನವಶಾಸ್ತ್ರದ ಸ್ವರೂಪವನ್ನು ಕುರಿತು ಅನೇಕ ವಿದ್ವಾಂಸರು ವ್ಯಾಖ್ಯೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

1 ಮಾನವ, ಅವನ ಕೃತಿಗಳು ಮತ್ತು ವರ್ತನೆ ಇವುಗಳನ್ನು ಅಧ್ಯಯನ ಮಾಡುವ ವಿಜ್ಞಾನಕ್ಕೆ ಮಾನವಶಾಸ್ತ್ರವೆಂದು ಹೆಸರು. (ಕ್ರೋಬರ್)

2 ಮಾನವಶಾಸ್ತ್ರವು ಮಾನವನ ಬಗೆಗಿನ ವಿಜ್ಞಾನ. ಮಾನವನನ್ನು ಶಾರೀರಿಕ ಹಾಗೂ ಸಾಂಸ್ಕೃತಿಕ ಪ್ರಾಣಿಯೆಂದು ಬಗೆದು ತುಲನಾತ್ಮಕ ಪರಿಶೀಲನೆ ಮಾಡಲು ಮೀಸಲಾದ ವಿಜ್ಞಾನ. (ಆಷಲೆ ಮಾಂಟೆಗೊ)

3 ಮಾನವಶಾಸ್ತ್ರವು ಮಾನವನ ಸಮಗ್ರ ವಿಜ್ಞಾನ. ಅದರ ಸಂಪುಟದಲ್ಲಿ ಮಾನವ ಜೀವ ವಿಕಾಸ, ಪ್ರಾಗ್ ಇತಿಹಾಸ, ಶಾರೀರಕ ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ ಇವೆಲ್ಲವೂ ಸೇರಿವೆ. (ದುಬೆ. ಸಿ)

4 ಮಾನವನ ಬಗೆಗಿನ ವೈಜ್ಞಾನಿಕ ಅಧ್ಯಯನವೇ ಮಾನವಶಾಸ್ತ್ರ. (ಪೆನ್ನಿಮನ್)

ಮಾನವ ಮತ್ತು ಅವನ ಸಮಾಜವನ್ನು ಕುರಿತು ಅಧ್ಯಯನ ನಡೆಸಿದ ವಿದ್ವಾಂಸರು ಗಳಲ್ಲಿ ಟೈಲರ್, ಸ್ಪೆನ್ಸರ್, ಡರ್‌ಕ್ಹೈಮ್, ಮ್ಯಾಲಿನೋವ್‌ಸ್ಕಿ, ರ್‍ಯಾಡ್‌ಕ್ಲಿಫ್‌ಬ್ರೌನ್ ಬೋವಾಸ್, ಸಪೀರ್, ಮಾರ್ಗರೇಟ್‌ಮೀಡ್, ರೂತ್ ಬೆನೆಡಿಕ್ಟ್ ಮುಂತಾದವರನ್ನು ಹೆಸರಿಸಬಹುದು. ಭಾರತದಲ್ಲಿ ಮಜುಮ್‌ದಾರ್ ಮತ್ತು ಮದನ್ ಗಮನಾರ್ಹರು.

ಈ ಮಹಾಶಯರುಗಳಲ್ಲಿ ಕೆಲವರು ಮಾನವನ ಭೌತಿಕ ಲಕ್ಷಣಗಳನ್ನು ಮತ್ತೆ ಕೆಲವರು ಮಾನವನ ಸಾಂಸ್ಕೃತಿಕ ಲಕ್ಷಣಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಇದರ ಫಲವಾಗಿ ಭೌತಿಕ ಅಥವಾ ಶಾರೀರಕ (ಜೈವಿಕ) ಮಾನವಶಾಸ್ತ್ರ ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ ಎಂಬ ಎರಡು ಪ್ರಮುಖ ಶಾಖೆಗಳು ಬೆಳೆದು ಬಂದವು. ಭೌತಿಕ ಮಾನವಶಾಸ್ತ್ರವು ಮಾನವನ ಉಗಮ, ವಿಕಾಸ, ಭಿನ್ನತೆ ಮತ್ತು ಜನಾಂಗಗಳನ್ನು ಕುರಿತ ಅಧ್ಯಯನ. ಸಾಂಸ್ಕೃತಿಕ ಮಾನವಶಾಸ್ತ್ರವು ಮಾನವನ ಸಂಸ್ಕೃತಿಯನ್ನು ಪದ್ಧತಿಗಳನ್ನು (Customs)-ಅಥವಾ ಸಾಂಸ್ಕೃತಿಕ ವರ್ತನೆಯನ್ನು (Cultural behaviour) ಕುರಿತ ಅಧ್ಯಯನವಾಗಿದೆ. ಆದರೆ ಸಾಂಸ್ಕೃತಿಕ ಮಾನವಶಾಸ್ತ್ರದ ಅಧ್ಯಯನಕ್ಕೆ ಸಂಬಂಧಿಸಿದ ವಸ್ತುವಿಷಯವನ್ನು ಕುರಿತು ಎಲ್ಲ ಮಾನವಶಾಸ್ತ್ರಜ್ಞರಲ್ಲಿ ಒಮ್ಮತವಿಲ್ಲ. ಈ ವಿಷಯದಲ್ಲಿ ಬೀಲ್ಸ್ ಮತ್ತು ಹಾಯ್ ಜರ್ ಅವರ ಅಭಿಪ್ರಾಯವನ್ನು ಪರಿಶೀಲಿಸುವುದು ಯುಕ್ತ. "ಸಾಂಸ್ಕೃತಿಕ ಮಾನವಶಾಸ್ತ್ರ, ಮಾನವನ ಸಂಸ್ಕೃತಿಗಳ ಉಗಮ ಮತ್ತು ಇತಿಹಾಸ, ಅವುಗಳ ವಿಕಾಸ ಮತ್ತು ಬೆಳವಣಿಗೆ ಮತ್ತು ಪ್ರತಿಯೊಂದು ಪ್ರದೇಶದಲ್ಲೂ, ಸಮುದಾಯದಲ್ಲೂ ಕಂಡುಬರುವ ಮಾನವನ ಸಂಸ್ಕೃತಿಗಳ ರಚನೆ ಮತ್ತು ಕಾರ್ಯಗಳನ್ನು ಅಭ್ಯಸಿಸುತ್ತದೆ" : ಅಂದರೆ ಸಾಂಸ್ಕೃತಿಕ ಮಾನವಶಾಸ್ತ್ರವು ಮುಖ್ಯವಾಗಿ ಸಂಸ್ಕೃತಿಯೊಂದಿಗೆ ಸಂಬಂಧ ಹೊಂದಿರುವ ಅಂಶ ನಮ್ಮ ಗಮನಕ್ಕೆ ಬರುತ್ತದೆ. ಈಗ ಸಂಸ್ಕೃತಿಯೆಂದರೇನು ಎಂಬ ಪ್ರಶ್ನೆ ಏಳುತ್ತದೆ. ಆದುದರಿಂದ ಸಂಸ್ಕೃತಿಯ ಬಗೆಗಿನ ಕೆಲವು ವ್ಯಾಖ್ಯೆಗಳನ್ನು ಈ ಕೆಳಗೆ ಕಾಣಿಸಿದೆ.

1 ಸಮಾಜದ ಸದಸ್ಯನಾಗಿ ಮಾನವ ಅರ್ಜಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನ್ಯಾಯ, ಸಂಪ್ರದಾಯ ಮತ್ತಿತರ ಸಾಮರ್ಥ್ಯ ಹಾಗೂ ಅಭ್ಯಾಸಗಳ ಒಟ್ಟು ಮೊತ್ತ. (ಇ.ಬಿ. ಟೈಲರ್)

2 ನಿರ್ದಿಷ್ಟ ಸಮಾಜವೊಂದರ ಸದಸ್ಯರುಗಳಲ್ಲಿ ಭಾಗಿಯಾಗಿ ವಹಿಸಬಲ್ಲ ಜ್ಞಾನ ಭಾವವಿನ್ಯಾಸ ಮತ್ತು ಸಾಂಪ್ರದಾಯಿಕ ನಡವಳಿಕೆಯ ನಮೂನೆಗಳ ಸಮುದಾಯ. (ಲಿಂಟನ್)

3 ಮನುಷ್ಯ ಚೇತನದ ಸರ್ವತೋಮುಖವೂ ವಿಕಾಸಮಾನವೂ ಆದ ಆತ್ಮಶ್ರೀಯನ್ನು ಸಂಸ್ಕೃತಿ ಎಂದು ಸಂಕೇತಿಸಬಹುದು. (ಕುವೆಂಪು)

4 ಸಾಮಾಜಿಕ ಸಂಪ್ರದಾಯಗಳ ಒಟ್ಟು ಮೊತ್ತ. (ಲೂವಿ)

ಮಾನವ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವ ಸಾಂಸ್ಕೃತಿಕ ಮಾನವಶಾಸ್ತ್ರವನ್ನು ವಿದ್ವಾಂಸರು ಮೂರು ವರ್ಗಗಳಲ್ಲಿ ವಿಂಗಡಿಸಿದ್ದಾರೆ : (1) ಪ್ರಾಕ್ತನಶಾಸ್ತ್ರ 2) ಮಾನವಕುಲಶಾಸ್ತ್ರ ಮತ್ತು 3) ಭಾಷಾವಿಜ್ಞಾನ. ಈ ಪ್ರತಿಯೊಂದು ವರ್ಗವೂ ತನ್ನದೇ ಆದ ಅಧ್ಯಯನ ವಸ್ತುಗಳನ್ನು ಹೊಂದಿವೆ.

ಪ್ರಾಕ್ತನಶಾಸ್ತ್ರ :

ಪುರಾತನ ಸಂಸ್ಕೃತಿಗಳನ್ನು ಮತ್ತು ಆಧುನಿಕ ನಾಗರಿಕತೆಗಳ ಗತಕಾಲದ ಘಟ್ಟಗಳನ್ನು ಕುರಿತಾದ ಅಧ್ಯಯನ. ಇದು ಗತಕಾಲದ ಸಾಂಸ್ಕೃತಿಕ ರೂಪಗಳನ್ನು ಪುನರ್ರಚಿಸಲು ಪ್ರಯತ್ನಿಸುವುದಲ್ಲದೆ, ಕಾಲದ ದೃಷ್ಟಿಯಿಂದ ಅವುಗಳ ಬೆಳವಣಿಗೆ ಮತ್ತು ಅಭಿವೃದ್ಧಿಗಳನ್ನು ಕುರಿತು ಸಂಶೋಧಿಸಲು ಸಹಾಯವಾಗಿದೆ.

ಮಾನವ ಕುಲಶಾಸ್ತ್ರ :

ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಮಾನವ ಸಮೂಹಗಳಲ್ಲಿನ ಭಿನ್ನ ಭಿನ್ನ ಸಂಸ್ಕೃತಿಗಳನ್ನು ಕುರಿತ ಅಧ್ಯಯನ ವಿಷಯ.

ಭಾಷಾವಿಜ್ಞಾನ :

ಭಾಷೆಗೆ ಸಂಬಂಧಿಸಿದ ಆಂತರಿಕ ಮತ್ತು ಬಾಹ್ಯ ಅಂಶಗಳನ್ನು ಪೂರ್ಣವಾಗಿ ವಿವೇಚಿಸಲು ಸಹಾಯಕ. ಭಾಷಾವಿಜ್ಞಾನದ ಸಹಾಯದಿಂದ ಭಾಷೆಯ ಸ್ವರೂಪ, ಭಾಷೆಗಳ ಪರಸ್ಪರ ಸಂಬಂಧ, ಭಾಷಾ ವರ್ಗೀಕರಣ, ಭಾಷಾ ವ್ಯತ್ಯಾಸ ಮುಂತಾದ ವಿಚಾರಗಳನ್ನು ತಿಳಿಯಬಹುದು. ಭಾಷೆಗೂ ಸಮಾಜ ಮತ್ತು ಸಂಸ್ಕೃತಿಗಳಿಗೂ ಇರುವ ಪರಸ್ಪರ ಸಂಬಂಧ ಮತ್ತು ಭಾಷಾವಿಕಾಸಕ್ಕೆ ಸಮಾಜ ಸಂಸ್ಕೃತಿಗಳ ನೆರವು— ಈ ಮುಂತಾದ ವಿಷಯಗಳನ್ನು ತಿಳಿಯಲು ಭಾಷಾವಿಜ್ಞಾನದ ಅರಿವು ಅವಶ್ಯಕ.

ಈ ಶತಮಾನದ ಉತ್ತರಾರ್ಧದಲ್ಲಿ ಮಾನವಶಾಸ್ತ್ರಜ್ಞರು ಭಾಷಾವಿಜ್ಞಾನದ ಉಪಯೋಗವನ್ನು ಮನಗೊಂಡು ಅದನ್ನು ಅಧ್ಯಯನ ಮಾಡಲು ತೊಡಗಿದರು. ಯಾವುದೇ ಒಂದು ನಿರ್ದಿಷ್ಟ ಸಮಾಜದ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಬೇಕಾದರೆ ಆ ಸಮಾಜದ ಜನರ ಭಾಷೆಯನ್ನು ಕಲಿಯಬೇಕಾಗುತ್ತದೆ; ಏಕೆಂದರೆ ಆ ಸಮಾಜದ ಕಟ್ಟುಕಟ್ಟಳೆಗಳು, ಪರಂಪರಾಗತ ಮೌಲ್ಯಗಳು, ಅವರ ಭಾಷೆಯ ಮುಖಾಂತರವೇ ಪ್ರಕಟವಾಗುತ್ತವೆ. ಭಾಷೆಯು ಸಂಸ್ಕೃತಿಯನ್ನೊಳಗೊಂಡಿರುತ್ತದೆ. ಸಂಸ್ಕೃತಿಯಲ್ಲಿ ಉಂಟಾದ ವ್ಯತ್ಯಾಸಗಳು ಭಾಷೆಯಲ್ಲೂ ವ್ಯತ್ಯಾಸ ತರುತ್ತವೆ. ಆದುದರಿಂದ ಭಾಷೆಯನ್ನು ಕಲಿಯದಿದ್ದರೆ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಭಾಷೆ ಮತ್ತು ಸಂಸ್ಕೃತಿಗಳಲ್ಲಿರುವ ಪರಸ್ಪರ ಸಂಬಂಧವನ್ನು ಕುರಿತು ಮ್ಯಾಲಿನೋವ್‌ಸ್ಕಿ, ರೂತ್ ಬೆನೆಡಿಕ್ಟ್, ಮಾರ್ಗರೇಟ್ ಮೀಡ್ ಮುಂತಾದವರು ತಮ್ಮ ಸಂಶೋಧನಾ ಬರಹಗಳಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾನವ ಭಾಷಾವಿಜ್ಞಾನ :

ವ್ಯಕ್ತಿ, ಸಮಾಜ ಮತ್ತು ಸಂಸ್ಕೃತಿಗಳನ್ನು ಒಟ್ಟುಗೂಡಿಸುವ ಮುಖ್ಯ ಸಾಧನ ಭಾಷೆ; ಮಾನವರ ನಡುವೆ ಪರಸ್ಪರ ಭಾವವಿನಿಮಯಕ್ಕೆ ಭಾಷೆ ಸಹಾಯಕವಾಗಿದೆ.

ಆದುದರಿಂದ ಮಾನವಶಾಸ್ತ್ರಜ್ಞರು ತಮ್ಮ ಕ್ಷೇತ್ರಕಾರ್ಯಕ್ಕನುಗುಣವಾಗಿ ಭಾಷಾವಿಜ್ಞಾನದ ಉಪಯೋಗವನ್ನು ಪಡೆದುಕೊಳ್ಳಲು ತೊಡಗಿದುದರ ಫಲವಾಗಿ "ಮಾನವ ಭಾಷಾವಿಜ್ಞಾನ"ವೆಂಬ ಪ್ರತ್ಯೇಕ ಶಾಖೆ ಬೆಳೆದು ಬರಲು ಸಾಧ್ಯವಾಯಿತು.

ಮಾನವಶಾಸ್ತ್ರಜ್ಞರು ಭಾಷೆಯನ್ನು ಸಂಸ್ಕೃತಿಯ ಪ್ರಮುಖ ಅಂಗಗಳಲ್ಲಿ ಒಂದೆಂದು ಪರಿಗಣಿಸಿದ್ದಾರೆ. ಮಾನವನಿಗೂ ಭಾಷೆಗೂ ಇರುವ ಸಂಬಂಧವನ್ನು ವೈಜ್ಞಾನಿಕವಾಗಿ ಪರಿಶೀಲಿಸುವುದು ಮಾನವ ಭಾಷಾವಿಜ್ಞಾನಿಯ ಕೆಲಸವಾದುದರಿಂದ ಆತನು ಭಾಷೆ, ಸಮಾಜ ಮತ್ತು ಸಂಸ್ಕೃತಿಗಳ ಪರಸ್ಪರ ಸಂಬಂಧವನ್ನು ಕುರಿತು ಅಧ್ಯಯನ ಮಾಡುತ್ತಾನೆ. ಸಮಾಜದಲ್ಲಿ ಭಾಷೆಯ ಮುಖ್ಯ ಪಾತ್ರ ಮತ್ತು ಮಾನವನ ನಾಗರಿಕತೆಯ ಬೆಳವಣಿಗೆಯಲ್ಲಿ ಭಾಷೆ ನಿರ್ವಹಿಸಿದ ಪಾತ್ರವೇನೆಂಬುದನ್ನು ತಿಳಿಯಲು ಮಾನವ ಭಾಷಾವಿಜ್ಞಾನಿ ಪ್ರಯತ್ನಿಸುತ್ತಾನೆ.

ಮಾನವ ಭಾಷಾವಿಜ್ಞಾನದಲ್ಲಿ ಮೂರು ವರ್ಗಗಳುಂಟು. ಸಾಮಾಜಿಕ ಸನ್ನಿವೇಶಗಳಲ್ಲಿ ಭಾಷೆ ನಿರ್ವಹಿಸುವ ಪಾತ್ರವನ್ನು ಕುರಿತಾದ ಅಧ್ಯಯನ ವಿಷಯಗಳಿವು.

1 ಮಾನವಕುಲ ಭಾಷಾವಿಜ್ಞಾನ

ಮಾನವ ಭಾಷಾವಿಜ್ಞಾನದ ಒಂದು ಪ್ರಮುಖ ವರ್ಗವಿದು. ಈ ವರ್ಗ ಸಮಾಜದ ಭಾಷಿಕ ಮತ್ತು ಸಾಂಸ್ಕೃತಿಕ ಅಂಶಗಳ ಪರಸ್ಪರ ಸಂಬಂಧವನ್ನು ಕುರಿತಾದ ಅಧ್ಯಯನವೇ ಆದರೂ ಮುಖ್ಯವಾಗಿ ವ್ಯಕ್ತಿಯ ವಾಸ್ತವಿಕ ಗ್ರಹಿಕೆಗಳನ್ನು ಭಾಷೆಯು ನಿಯಂತ್ರಿಸುವ ರೀತಿಯನ್ನು ಮತ್ತು ಭಾಷೆಯು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅನೇಕ ಬಗೆಗಳನ್ನು ಕುರಿತು ಮಾನವಕುಲ ಭಾಷಾವಿಜ್ಞಾನಿ ಅಧ್ಯಯನವನ್ನು ಕೈಗೊಳ್ಳುತ್ತಾನೆ.

1.1 ಭಾಷೆ

ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಸ್ವತಂತ್ರ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ. ಭಾಷೆಯ ಸ್ವರೂಪವನ್ನು ಕುರಿತ ಒಂದು ಸೂತ್ರ ಹೀಗಿದೆ ; 'ಯಾದೃಚ್ಛಿಕ ಮೌಖಿಕ ಧ್ವನಿಸಂಕೇತಗಳ ವ್ಯವಸ್ಥೆಯಿಂದ ಕೂಡಿ, ಒಂದು ಸಾಮಾಜಿಕ ಸಮೂಹದ ಸಹಕಾರಕ್ಕೆ ಕಾರಣವಾಗುವುದೇ ಭಾಷೆ (ಬ್ಲಾಕ್ ಮತ್ತು ಟ್ರೇಗರ್)' ಅಂದರೆ ಭಾಷೆ ಒಂದು ವ್ಯವಸ್ಥೆ ; ಭಾಷೆ, ಸಂಕೇತಗಳ ವ್ಯವಸ್ಥೆ ; ಭಾಷೆ ಉಚ್ಚರಿತ ಸಂಕೇತಗಳ ವ್ಯವಸ್ಥೆ ; ಭಾಷೆ ಯಾದೃಚ್ಛಿಕ ಉಚ್ಚರಿತ ಸಂಕೇತಗಳ ವ್ಯವಸ್ಥೆ ಎಂದು ತಿಳಿದುಬರುತ್ತದೆ. ಒಂದು ಸಮಾಜದ ಜನರು ತಮ್ಮ ಆಂತರಿಕ ಭಾವ, ಭಾವನೆಗಳನ್ನು ಇತರರಿಗೆ ತಿಳಿಸಲು ತಮ್ಮ ಉಚ್ಚಾರಣಾಂಗಗಳಿಂದ ಹೊರಬಂದ ಧ್ವನಿಗಳನ್ನು ಕ್ರಮಬದ್ಧವಾಗಿ ಬಳಸುವ ವ್ಯವಸ್ಥೆಯನ್ನೇ ಭಾಷೆಯೆಂದು ಕರೆಯಬಹುದು.

1.2 ಭಾಷೆಯ ಉಗಮ

ಭಾಷೆಯ ಉಗಮವನ್ನು ತಿಳಿಯಲು ಅನೇಕ ವಿದ್ವಾಂಸರು ಪ್ರಯತ್ನ ನಡೆಸಿರುವರಾದರೂ ಅವರ ಪ್ರಯತ್ನ ಫಲಕಾರಿಯಾಗಲಿಲ್ಲ. ಭಾಷೆಯ ಉಗಮದ ವಿಚಾರವಾಗಿ ಹೊರಬಂದ ಅನುಕರಣವಾದ, ಉದ್ಗಾರವಾದ, ಅನುರಣನವಾದ, ಯೊ-ಹೇ-ಹೋ ವಾದ ಮುಂತಾದವು ಬಿದ್ದುಹೋದವು. ಇವೇ ಅಲ್ಲದೆ ಸಂಜ್ಞಾಭಾಷೆಯೇ ಪ್ರಾಚೀನವಾದುದು ಎಂಬ ವಾದವೂ, ತೊದಲ್ನುಡಿಯೇ ಭಾಷೆಗೆ ಮೂಲ ಎಂದು ಪ್ರತಿಪಾದಿಸಿದವರ ವಾದವೂ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು.

ಆದುದರಿಂದ ಭಾಷೆಯ ಹುಟ್ಟನ್ನು ತಿಳಿಯಲು ಮಾಡಿರುವ ಪ್ರಯತ್ನಗಳೆಲ್ಲವೂ ನಿಷ್ಫಲ ಎಂದು ಸಪೀರ್ ಹೇಳಿದ್ದರೂ ಭಾಷೆಯ ಉಗಮವನ್ನು ಕುರಿತು ಅಧ್ಯಯನ ನಡೆಸಿರುವ ಅನೇಕ ಮಂದಿ ವಿದ್ವಾಂಸರು ಉಂಟು. ಬಾಲ ಭಾಷೆ, ಪ್ರಾಚೀನ ಜನಾಂಗಗಳ ಭಾಷೆ ಮತ್ತು ಭಾಷಾ ಚರಿತ್ರೆಗಳನ್ನೂ ಅಧ್ಯಯನ ಮಾಡುವುದರಿಂದ ಭಾಷೆಯ ಶೈಶವಾವಸ್ಥೆಯನ್ನು ತಿಳಿಯಲು ಸಾಧ್ಯ ಎಂದಿರುವ ಯೆಸ್ಪರ್ಸನ್ನನ ಮಾತು ಬಹು ಮುಖ್ಯವಾದುದು.

1.3 ಪ್ರಾಚೀನ ಭಾಷೆಗಳು

ನಾಗರಿಕರ ಜೀವನ ವಿಧಾನವು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಅವರ ಭಾಷೆ, ಉಡುಪು, ಆಹಾರ, ಆಚರಣೆಗಳು ಎಲ್ಲವೂ ಮಾರ್ಪಾಟಾಗುತ್ತವೆ. ಆದರೆ ನಾಗರಿಕತೆಯಿಂದ ಬಹಳ ದೂರವಾಗಿ, ಬೆಟ್ಟಗುಡ್ಡಗಳಲ್ಲಿ, ದ್ವೀಪಗಳಲ್ಲಿ ವಾಸಿಸುವ ಆದಿವಾಸಿಗಳಲ್ಲಿ ಈ ಮಾರ್ಪಾಟುಗಳು ಕಡಿಮೆ. ಆದ್ದರಿಂದ ಆದಿವಾಸಿಗಳ ಬಗೆಗಿನ ಅಧ್ಯಯನವು ಮಾನವ ನಾಗರಿಕನಾಗುವ ಮುಂಚೆ ಹೇಗೆ ಬದುಕುತ್ತಿದ್ದನೆಂಬುದನ್ನು ತಿಳಿಯಲು ಸಹಾಯಕವಾಗುತ್ತದೆ. ಆದಿವಾಸಿಗಳ ಭಾಷೆಯೂ ಸಹ ಹೆಚ್ಚು ವ್ಯತ್ಯಾಸಗೊಂಡಿರುವುದಿಲ್ಲ. ಅವರ ಭಾಷೆಗಳಲ್ಲಿ ಆದಿಮಾನವನ ಭಾಷಾಲಕ್ಷಣಗಳು ಉಳಿದುಕೊಂಡು ಬಂದಿರುತ್ತವೆ. ಉದಾಹರಣೆಗೆ ಕೇರಳದ ಕಾಡುಗಳಲ್ಲಿ ವಾಸಿಸುವ ಆದಿವಾಸಿಗಳಾದ ಜೇನು ಕುರುಬರ ಭಾಷೆ ; ಆಸ್ಟ್ರೇಲಿಯಾದ ಆದಿವಾಸಿಗಳ ಭಾಷೆ.

1.4 ಭಾಷಾವಿಜ್ಞಾನ

ಆಡು ಭಾಷೆಯ ಅಥವಾ ಬರಹದ ಭಾಷೆಯ ಆಂತರಿಕ ಮತ್ತು ಬಾಹ್ಯ ಅಂಶಗಳ ವೈಜ್ಞಾನಿಕ ಅಧ್ಯಯನವೇ ಭಾಷಾವಿಜ್ಞಾನ ಎನಿಸಿಕೊಳ್ಳುತ್ತದೆ. ಭಾಷಾವಿಜ್ಞಾನದ ಪ್ರಮುಖ ವರ್ಗಗಳೆಂದರೆ ಐತಿಹಾಸಿಕ ಭಾಷಾವಿಜ್ಞಾನ, ತೌಲನಿಕ ಭಾಷಾವಿಜ್ಞಾನ ಮತ್ತು ವಿವರಣಾತ್ಮಕ ಭಾಷಾವಿಜ್ಞಾನ. ಚಾರಿತ್ರಿಕ ಹಿನ್ನೆಲೆಯಲ್ಲಿ ಭಾಷೆ ಬೆಳೆದು ಬಂದ ವಿಧಾನವನ್ನು ಅಧ್ಯಯನ ಮಾಡುವುದೇ ಐತಿಹಾಸಿಕ ಭಾಷಾವಿಜ್ಞಾನದ ಗುರಿ. ಭಾಷೆಗಳ ತೌಲನಿಕ ಅಧ್ಯಯನ ಮಾಡುವುದರಿಂದ ವಿವಿಧ ಭಾಷೆಗಳಲ್ಲಿರುವ ಹೋಲಿಕೆ

ಗಳನ್ನು, ಭಿನ್ನತೆಗಳನ್ನು ಗುರುತಿಸಬಹುದು. ಇದರಿಂದಾಗಿ ಭಾಷಾವರ್ಗೀಕರಣ ಸುಲಭವಾಗಿ ಭಾಷಾ ಕುಟುಂಬಗಳನ್ನು ನಿರ್ಧರಿಸಬಹುದು. ಭಾಷೆಯ ಆಂತರಿಕ ರಚನೆಗೆ ಸಂಬಂಧಿಸಿದ ಅಂಶಗಳನ್ನು ತಿಳಿಯಲು ವಿವರಣಾತ್ಮಕ ಭಾಷಾವಿಜ್ಞಾನ ಸಹಾಯ ಮಾಡುತ್ತದೆ. ಭಾಷೆಯ ವ್ಯಾಕರಣಾಂಶಗಳನ್ನು ವಿವರಿಸಿ, ವಿಶ್ಲೇಷಿಸಲು ಈ ವರ್ಗದ ಜ್ಞಾನ ಅವಶ್ಯಕ. ಇದರಲ್ಲಿ ಧ್ವನಿವಿಜ್ಞಾನ, ಧ್ವನಿಮಾವಿಜ್ಞಾನ, ಆಕೃತಿಮಾ ವಿಜ್ಞಾನ ಮತ್ತು ವಾಕ್ಯ ವಿಜ್ಞಾನ ಎಂಬ ಉಪವರ್ಗಗಳಿವೆ.

ಭಾಷಾಧ್ವನಿಗಳನ್ನು ಕುರಿತ ಅಧ್ಯಯನವೇ ಧ್ವನಿವಿಜ್ಞಾನ. ಇದರಲ್ಲಿ ಉಚ್ಚಾರಣಾತ್ಮಕ ಧ್ವನಿವಿಜ್ಞಾನ, ತರಂಗಾತ್ಮಕ ಧ್ವನಿವಿಜ್ಞಾನ, ಶ್ರವಣಾತ್ಮಕ ಧ್ವನಿವಿಜ್ಞಾನ ಮತ್ತು ಪ್ರಾಯೋಗಿಕ ಧ್ವನಿವಿಜ್ಞಾನ ಎಂಬ ನಾಲ್ಕು ವಿಭಾಗಗಳಿವೆ. ಒಂದು ಭಾಷೆ ಅಥವಾ ಉಪಭಾಷೆಗೆ ಸಂಬಂಧಿಸಿದ ಉಚ್ಚರಿತ ಧ್ವನಿ ಸಮೂಹದಲ್ಲಿರುವ ಧ್ವನಿಮಾಗಳನ್ನು ವಿಶ್ಲೇಷಿಸಲು ಮತ್ತು ವರ್ಗೀಕರಿಸಲು ಧ್ವನಿಮಾವಿಜ್ಞಾನ ಸಹಾಯಕ. ಒಂದು ಭಾಷೆಯ ಪ್ರಧಾನ ಧ್ವನಿಗಳೇ ಧ್ವನಿಮಾಗಳು. ಅವುಗಳ ಸಂಖ್ಯೆ ಭಾಷೆಗಳಲ್ಲಿ ಖಚಿತವಿಲ್ಲ. ಅವು ಭಾಷೆಯಿಂದ ಭಾಷೆಗೆ ಬೇರೆಯಾಗುತ್ತವೆ. ಒಂದು ಭಾಷೆಯಲ್ಲಿ ಕಂಡುಬರುವ ಧ್ವನಿಗಳನ್ನು, ಧ್ವನಿಮಾಗಳನ್ನಾಗಿಯೂ, ಉಪಧ್ವನಿಗಳನ್ನಾಗಿ ವರ್ಗೀಕರಿಸುವುದು ಧ್ವನಿಮಾವಿಜ್ಞಾನದ ಮುಖ್ಯಗುರಿ. ಭಾಷೆಯಲ್ಲಿನ ಅರ್ಥವತ್ತಾದ ಲಘುತಮ ಭಾಷಾಘಟಕಗಳನ್ನು ಆಕೃತಿಮಾ ಎಂದು ಕರೆಯುವರು. ಆಕೃತಿಮಾಗಳ ಅಧ್ಯಯನವೇ ಆಕೃತಿಮಾ ವಿಜ್ಞಾನ. ಪದಗಳನ್ನು ಆಕೃತಿಮಾ, ಉಪಾಕೃತಿ, ಆಕೃತಿ ಎಂಬುದಾಗಿ ವಿಭಜಿಸಿ ಅಧ್ಯಯನ ಮಾಡಬಹುದಾದ ರೀತಿಯನ್ನು ಆಕೃತಿಮಾ ವಿಜ್ಞಾನ ತೋರಿಸಿ ಕೊಡುತ್ತದೆ. ಭಾಷೆಯಲ್ಲಿ ವಾಕ್ಯ ಅತ್ಯಂತ ಹಿರಿಯ ಘಟಕ, ಒಂದೊಂದು ಭಾಷೆಗೂ ತನ್ನದೇ ಆದ ವಾಕ್ಯರಚನಾ ಕ್ರಮವುಂಟು. ಪದಗಳು ಸೇರಿ ಪದಪುಂಜಗಳೂ ವಾಕ್ಯಗಳೂ ಆಗುವ ವಿಧಾನವನ್ನು ವಿವರಿಸುವುದು ವಾಕ್ಯವಿಜ್ಞಾನ.

ಭಾಷೆಯಲ್ಲಿ ಅರ್ಥವೂ ಬಹು ಮುಖ್ಯಪಾತ್ರ ವಹಿಸುತ್ತದೆ. ಭಾಷೆಯ ಧ್ವನಿಗಳಿಗೆ ಅರ್ಥವಿಲ್ಲ. ಧ್ವನಿಮಾಗಳು ಅರ್ಥವ್ಯತ್ಯಾಸ ಮಾಡುವ ಶಕ್ತಿಯುಳ್ಳವೇ ಹೊರತು ಅರ್ಥವತ್ತಾದವುಗಳಲ್ಲ. ಆಕೃತಿ, ಆಕೃತಿಮಾಗಳು, ಪದಗಳು, ಪದಗಳಿಂದ ಕೂಡಿದ ವಾಕ್ಯಗಳು ಅರ್ಥವತ್ತಾದವು. ಪದ ವಾಕ್ಯ ಮುಂತಾದವುಗಳಿಗೂ ಅರ್ಥಕ್ಕೂ ಇರುವ ಸಂಬಂಧವನ್ನು ಅರ್ಥವಿಜ್ಞಾನದ ಸಹಾಯದಿಂದ ತಿಳಿದುಕೊಳ್ಳಬಹುದು.

1·5 ಭಾಷಾಕಾಲಕ್ರಮವಿಜ್ಞಾನ

ಈವರೆಗೆ ವಿವರಿಸಿರುವ ವರ್ಗಗಳ ಜೊತೆಗೆ ಮಾನವ ಭಾಷಾವಿಜ್ಞಾನಿಗೆ ಭಾಷಾ ಕಾಲಕ್ರಮ ವಿಜ್ಞಾನದ ಪರಿಚಯವೂ ಇರಬೇಕು. ಮೂಲಭಾಷೆಯಿಂದ ಒಂದು ಭಾಷೆ ಯಾವ ಕಾಲದಲ್ಲಿ ಬೇರ್ಪಟ್ಟು ಸ್ವತಂತ್ರವಾದ ಅಸ್ತಿತ್ವವನ್ನು ಪಡೆಯಿತು ಎಂಬ ವಿಷಯವನ್ನು ಕುರಿತು ನಡೆಸುವ ವೈಜ್ಞಾನಿಕ ಅಧ್ಯಯನವೇ ಭಾಷಾಕಾಲಕ್ರಮವಿಜ್ಞಾನವೆನಿಸಿ

ಕೊಂಡಿವೆ. ಎಂ. ಎಸ್. ಆಂಡ್ರೊನೋವ್ ಎಂಬ ಭಾಷಾವಿಜ್ಞಾನಿ ಈ ನಿಟ್ಟಿನಲ್ಲಿ ಹೆಚ್ಚು ಅಧ್ಯಯನ ನಡೆಸಿದ್ದಾರೆ.

1·6 ಪಿಜನ್ ಮತ್ತು ಕ್ರೀಯೋಲ್ ಭಾಷೆಗಳು

ಎರಡು ಬೇರೆ ಬೇರೆ ಭಾಷೆಗಳನ್ನು ಮಾತನಾಡುವವರು ಪರಸ್ಪರ ಸಂಪರ್ಕ ಸಾಧಿಸಲು ನಡೆಸುವ ಪ್ರಯತ್ನದಿಂದ ಹುಟ್ಟುವ ಒಂದು ಸಹಾಯಕ ಭಾಷೆ—ಪಿಜನ್. ಇವರ ಪದಗಳು, ಉಚ್ಚಾರಣೆ ಮತ್ತು ವ್ಯಾಕರಣಾಂಶಗಳು ಸಂಪರ್ಕಕ್ಕೊಳಗಾದ ಎರಡು ಭಾಷೆಗಳನ್ನಾಡುವ ಜನರಿಗೆ ಸಾರ್ವತ್ರಿಕವಾದ ಅಂಶಗಳನ್ನು ಪಡೆದಿರುತ್ತವೆ. ಉದಾಹರಣೆಗೆ ಚೀನಿ ಪಿಜನ್, ಬೀಚ್-ಲಾ-ಮಾರ್ ಪಿಜನ್, ನಿಯೊಮೆಲನೇಷ್ಯನ್ ಪಿಜನ್, ಬಾಜಾರ್ ಮಲಯ್ ಪಿಜನ್. ಪಿಜನ್ ಕಾಲಾನುಕ್ರಮವಾಗಿ ಒಂದು ಭಾಷಾಸಮುದಾಯದ ಮಾತೃಭಾಷೆಯೆನಿಸಿದಾಗ ಅದನ್ನು ಕ್ರೀಯೋಲ್ ಎನ್ನುತ್ತಾರೆ. ದಕ್ಷಿಣ ಕ್ಯಾರೋಲೀನದ ಪಿಜನ್, ಲ್ಯಾಂಟಿಲೀಸಿನ ನೀಗ್ರೋ ಇಂಗ್ಲಿಷ್ ಇಂದು ಕ್ರೀಯೋಲುಗಳಾಗಿವೆ. ಪಿಜನ್ ಮತ್ತು ಕ್ರೀಯೋಲ್ ಭಾಷೆಗಳನ್ನು ಮಿಶ್ರಭಾಷೆಗಳೆಂದು ಕರೆಯುವರು.

1·7 ಸಂಜ್ಞಾ ಅಥವಾ ಸಂಕೇತ ಭಾಷೆ

ಮಾನವರಲ್ಲಿ ಸಂವಹನ ಕ್ರಿಯೆ ಒಂದೇ ರೀತಿಯಾಗಿಲ್ಲ. ಮಾತನಾಡುವಾಗ ಕೆಲವೊಮ್ಮೆ ಅಭ್ಯಾಸದಿಂದ ನಾವು ಕೆಲವು ಸಂಜ್ಞೆಗಳನ್ನು ಬಳಸುತ್ತೇವೆ. ಆದರೆ ಕೆಲವು ಬಾರಿ ಮಾತನಾಡದೆಯೇ ಕೇವಲ ಸಂಕೇತಗಳನ್ನೇ ಬಳಸುವುದು ಉಂಟು. ಉತ್ತರ ಅಮೇರಿಕಾದ ಇಂಡಿಯನ್ನರು, ಆಡುವ ಭಾಷೆಗಿಂತ ಸಂಜ್ಞೆಗಳನ್ನೇ ಹೆಚ್ಚಾಗಿ ಬಳಸುತ್ತಾರೆ. ಆಫ್ರಿಕ, ಪೆಸಿಫಿಕ್, ಮಧ್ಯ ಮತ್ತು ದಕ್ಷಿಣ ಅಮೇರಿಕಾದ ಕೆಲವು ಬುಡಕಟ್ಟು ಜನರು ವಾದ್ಯಗಳ ಮೂಲಕ ಸಂಕೇತ, ಸಂಭಾಷಣೆ ನಡೆಸುತ್ತಾರೆ. ಇದಕ್ಕಾಗಿ ಅವರು ಸಿಳ್ಳು, ಕೊಳಲು, ಕೊಂಬು, ಡ್ರಂ (ತಮಟೆ, ನಗಾರಿ, ಡೋಲು) ಜಾಗಟೆ ಮುಂತಾದ ವಾದ್ಯಗಳನ್ನು ಬಳಸುವರು.[1] ಕುಂಗ್ ಬೇಟೆಗಾರರಲ್ಲಿ ಅನೇಕ ಬಗೆಯ ಆಂಗಿಕ ಸಂಜ್ಞೆಗಳಿವೆ. ಮಾತುಬಾರದ ಚಿಂಪಾಂಜಿಗಳು, ಗೊರಿಲ್ಲಾಗಳೂ ಕೆಲವು ಸಂಜ್ಞೆಗಳನ್ನು ಬಳಸುತ್ತವೆ. ಅವುಗಳಿಗೆ ಸಂಕೇತ ಭಾಷೆಯನ್ನು ಕಲಿಸುವ ಪ್ರಯತ್ನಗಳು ಅಮೇರಿಕ ದೇಶದಲ್ಲಿ ನಡೆಯುತ್ತಿವೆ.[2]

1·8 ಭಾಷೆಯ ಸಾರ್ವತ್ರಿಕ ಸಿದ್ಧಾಂತಗಳು

ಪ್ರಪಂಚದ ಎಲ್ಲ ಭಾಷೆಗಳಲ್ಲೂ ಇರುವ ಸಾಮಾನ್ಯ ಲಕ್ಷಣಗಳನ್ನು ಕಂಡುಹಿಡಿದು ಭಾಷೆಯ ಸಾರ್ವತ್ರಿಕ ಸಿದ್ಧಾಂತಗಳನ್ನು ರೂಪಿಸಲು ಪೈಕ್, ಚಾಮ್‌ಸ್ಕಿ ಮೊದಲಾದ ಭಾಷಾವಿಜ್ಞಾನಿಗಳು ಶ್ರಮಿಸುತ್ತಿದ್ದಾರೆ.

1·9 ಬರಹ

ವ್ಯಕ್ತಿ—ವ್ಯಕ್ತಿ ನಡುವೆ ಸಂವಹನತೆಗಾಗಿ ಬಳಸುವ ಸಾಂಪ್ರದಾಯಿಕ ಚಾಕ್ಷುಷ ವ್ಯವಸ್ಥೆ. ಭಾಷೆಯ ಮಾಧ್ಯಮ ಧ್ವನಿ, ಬರಹದ ಮಾಧ್ಯಮ ಲಿಪಿ. ಭಾಷೆಯ ಪ್ರಯೋಜನ ಕಂಡುಕೊಂಡ ಸಾವಿರಾರು ವರ್ಷಗಳ ತರುವಾಯ ಮಾನವ ಬರಹದ ಉಪಯೋಗ ಕಂಡುಕೊಂಡ. ಬರಹ ಬಳಕೆಗೆ ಬಂದ ಮೇಲೆ ಭಾಷೆ ಬಹುವೇಗವಾಗಿ ಬೆಳೆಯುತ್ತಾ ಹೋಯಿತು. ಭಾಷೆ ಮತ್ತು ಬರಹಗಳ ಸಂಬಂಧ ಅತಿ ನಿಕಟ. ಪ್ರಪಂಚದಲ್ಲಿ ಭಾಷೆ ಇಲ್ಲದ ಜನಾಂಗವೇ ಇಲ್ಲ. ಆದರೆ ಬರಹ ತಿಳಿಯದ ಅನೇಕ ಜನಾಂಗಗಳಿವೆ. ಆದುದರಿಂದ ಭಾಷೆಗೆ ಬರಹ ಅನಿವಾರ್ಯವಲ್ಲ. ಬರಹ ಇಲ್ಲದೆ ಭಾಷೆ ಬದುಕಬಲ್ಲದು.

2·0 ಭಾಷೆ ಮತ್ತು ಸಮಾಜ

ಮಾನವನು ಸಮಾಜಜೀವಿ. ಆತನು ಸಮಾಜದಿಂದ ದೂರವಾಗಿ ಏಕಾಂಗಿಯಾಗಿ ಬಾಳಲು ಸಾಧ್ಯವಿಲ್ಲ. ಅವನು ತನ್ನ ಆಲೋಚನೆ, ಮಾತು ಮತ್ತು ಕ್ರಿಯೆಗಳ ಮೂಲಕ ಸಮಾಜದ ಇತರ ಸದಸ್ಯರೊಡನೆ ಸಂಬಂಧಗಳನ್ನು ಬೆಳೆಸಿಕೊಳ್ಳುವನು. ತನ್ನ ಬೇಡಿಕೆಗಳನ್ನು ಅವನು ಸುಸಂಸ್ಕೃತ ಜೀವನದ ಚೌಕಟ್ಟಿನಲ್ಲಿ ಪಡೆಯಲು ಪ್ರಯತ್ನಪಡುತ್ತಾನೆ. ಈ ಪ್ರಯತ್ನದಲ್ಲಿ ಅವನ ಪಾತ್ರ ವೈವಿಧ್ಯದಿಂದ ಕೂಡಿರುತ್ತದೆ. ಅವನ ಕಾರ್ಯಕಲಾಪಗಳು, ಸಮಾಜದ ಕ್ರಿಯೆಗೆ ಕಾರಣವಾಗುತ್ತದೆ. ಸಮಾಜದ ಇತರರೊಡನೆ ಕಲೆತಾಗ ಅವನು ತನ್ನ ಅನುಭವಗಳನ್ನು ಹೇಳಿಕೊಳ್ಳುತ್ತಾನೆ. ಇತರರ ಅನುಭವಗಳಿಂದ ಅವನೂ ಅನೇಕ ವಿಷಯಗಳನ್ನು ಕಲಿಯುತ್ತಾನೆ. ಅವನು ನಡೆಸುವ ವಿಚಾರವಿನಿಮಯಗಳಿಂದ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು, ಆ ಸ್ಥಿತಿಗತಿಗಳಿಗೆ ಅನುಗುಣವಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಸಮಾಜದಲ್ಲಿ ಕೂಡಿ ಬಾಳುವುದರಿಂದ ಅವನಿಗೆ ಮಾನಸಿಕ ಶಾಂತಿ, ತೃಪ್ತಿ ದೊರಕುತ್ತದೆ.

ಮಾನವನು ಸಮಾಜವಿಲ್ಲದೆ ಜೀವಿಸಲಾರ; ಸಮಾಜವಿಲ್ಲದೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲಾರ; ಅದನ್ನು ಪ್ರಕಟಿಸಲಾರ; ಸಮಾಜವಿಲ್ಲದೆ ತನ್ನ ಗುರಿಗಮ್ಯಗಳನ್ನು ಆಸೆ ಆಕಾಂಕ್ಷೆಗಳನ್ನು ಸಾಧಿಸಿಕೊಳ್ಳಲಾರ. ಶಿಕ್ಷಣ, ನೌಕರಿ, ಆಹಾರ, ಮೈಥುನ, ಸ್ನೇಹ, ಮನರಂಜನೆ ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಂಘಜೀವನ ಅಗತ್ಯವಾಗಿ ಬೇಕಾಗುತ್ತದೆ. ಹಲವಾರು ಬಗೆಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಲವಾರು ಬಗೆಯ ಸಂಘಸಂಸ್ಥೆಗಳಲ್ಲಿ ಸಮೂಹಗಳಲ್ಲಿ ಮಾನವನು ಆಜೀವ ಪರ್ಯಂತ ಬಾಳಬೇಕಾಗುತ್ತದೆ.[3]

ಯಾವುದೇ ವ್ಯಕ್ತಿಯಾಗಲಿ, ಅವನ ಸ್ಥಾನವು ಸಾಮಾಜಿಕ ಮನ್ನಣೆಯನ್ನು ಪಡೆದಿದೆ. ಆ ವ್ಯಕ್ತಿ ಜೀವನದಲ್ಲಿ ವಹಿಸುವ ಪಾತ್ರ ಸಮಾಜವನ್ನೇ ಅವಲಂಬಿಸಿದೆ. ಅವನ ಆದರ್ಶ, ಆಸೆ ಆಕಾಂಕ್ಷೆಗಳು ಸಮಾಜದ ಆದರ್ಶ ಆಕಾಂಕ್ಷೆಗಳಿಂದಲೇ ಮೂಡಿ

ಬಂದಿವೆ. ಆದ್ದರಿಂದಲೇ ಅವನ ಚಿಂತನೆ, ಕ್ರಿಯೆ, ಭಾಷೆ–ಇವೆಲ್ಲವೂ ಸಾಮಾಜಿಕವಾದವು.

ಮಾನವನ ಜೀವನವು ಸಂಸ್ಕೃತಿಯ ಆಧಾರದ ಮೇಲೆ ರೂಪಿತವಾಗಿದೆ. ಸಂಸ್ಕೃತಿಯು ವ್ಯಕ್ತಿಯ ಜೀವನವನ್ನು ವ್ಯಕ್ತಪಡಿಸುವುದು, ಹೂವಿನೊಡನಿರುವ ಸುವಾಸನೆಯಂತೆ, ಹಾಲಿನೊಂದಿಗಿರುವ ಕೆನೆಯಂತೆ, ಮಾನವನ ಜೀವನದೊಂದಿಗೆ ಸಂಸ್ಕೃತಿ ಸಾಗಿಬರುತ್ತದೆ. ಸಮಾಜದ ವ್ಯಕ್ತಿಗಳ ಮೇಲೆ ಸಂಸ್ಕೃತಿಯು ತನ್ನ ಪ್ರಭಾವವನ್ನು ಸತತವಾಗಿ ಬೀರುತ್ತದೆ. ತಮ್ಮ ಪೂರ್ವಜರಿಂದ ಬಂದ ಸಂಸ್ಕೃತಿಯ ಆಧಾರದ ಮೇಲೆ ಈಗಿನವರು ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೆ. ಅಲ್ಲದೆ ಆ ಸಂಸ್ಕೃತಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರಲು ಪ್ರಯತ್ನಿಸುತ್ತಾರೆ.

ಆದುದರಿಂದ, ಮಾನವನು ಸಮಾಜದಿಂದ ಸಂಪೂರ್ಣವಾಗಿ ಸ್ವತಂತ್ರನಾಗಿರಲು ಖಂಡಿತ ಸಾಧ್ಯವಿಲ್ಲ. ಹಾಗೆಯೇ ಸಮಾಜ ಸಂಸ್ಕೃತಿಗಳು ವ್ಯಕ್ತಿಯಿಂದ ಬೇರ್ಪಟ್ಟು ಸ್ವತಂತ್ರ ಅಸ್ತಿತ್ವ ನಡೆಯಲು ಸಾಧ್ಯವಿಲ್ಲ. ಮಾನವ ಸಮಾಜ ಮತ್ತು ಸಂಸ್ಕೃತಿಗಳ ಸಂಬಂಧ ವಿಘಟಿಸಿದರೆ, ಸಾಮಾಜಿಕ ಜನ ಜೀವನಕ್ಕೆ ತೊಂದರೆ ಉಂಟಾಗುತ್ತದೆ.[4]

2·1 ಭಾಷೆ ಮತ್ತು ಸಂಸ್ಕೃತಿ

ಭಾಷೆ ಮತ್ತು ಸಂಸ್ಕೃತಿಗಳ ಸಂಬಂಧವಾಗಿ ಕೆಲವೊಮ್ಮೆ ಅನುಮಾನಗಳು ಉಂಟಾಗುವುದು ಸ್ವಾಭಾವಿಕ. ಭಾಷೆ ಸಹಜವಾದುದೆ ಅಥವಾ ಅದು ಒಂದು ಸಂಸ್ಕೃತಿಯೆ ? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗುತ್ತದೆ. ಭಾಷೆ ಸಂಸ್ಕೃತಿಯೊಂದಿಗೆ ಪರಸ್ಪರ ಸಂಬಂಧ ಪಡೆದು ಬೆಳೆದು ಬಂದಿದೆಯೆಂಬುದನ್ನು ಮಾನವಶಾಸ್ತ್ರಜ್ಞರು ಒಪ್ಪಿಕೊಳ್ಳುತ್ತಾರೆ. ಸಾಂಸ್ಕೃತಿಕ ಚಟುವಟಿಕೆಗಳು ಅನಿವಾರ್ಯವಾಗಿ ಮಾನವನ ಭಾವನೆಗಳನ್ನು ಆಧರಿಸಿವೆ. ಈ ಭಾವನೆಗಳನ್ನು ಮಾತಿನ ಮೂಲಕ ಸೂತ್ರೀಕರಿಸಿ ಕಾರ್ಯಾಚರಣೆಗೆ ತರಬಹುದು. ಸಂಸ್ಕೃತಿ ಬಹುಶಃ ಅಮೂರ್ತ ಭಾವನೆಗಳ ಆಧಾರದ ಮೇಲೆಯೇ ಕಾರ್ಯ ನಡೆಸಬಹುದು. ಈ ಅಮೂರ್ತ ಭಾವನೆಗಳು ಮಾತಿನ ಮೂಲಕ ಅಥವಾ ಬರವಣಿಗೆ, ಗಣನೆ, ಗಣಿತ, ವೈಜ್ಞಾನಿಕ ಮತ್ತು ರಾಸಾಯನಿಕ ಸಂಖ್ಯಾಲೇಖನ ಮುಂತಾದವುಗಳಂಥ ಆಡು ಭಾಷೆ ಅನುಷಂಗಿಕ ಬದಲಿಯೊಂದರ ಮೂಲಕವೇ ಸಾಧ್ಯವೆಂದು ತೋರುತ್ತದೆ. ಆದ್ದರಿಂದ ಮಾತು ಆರಂಭವಾದಾಗ ಸಂಸ್ಕೃತಿ ಆರಂಭವಾಯಿತೆಂಬುದು ಮಾನವಶಾಸ್ತ್ರಜ್ಞರ ಅಭಿಪ್ರಾಯ.[5]

ಭಾಷೆ ಮತ್ತು ಸಂಸ್ಕೃತಿಗಳು ಎಷ್ಟರಮಟ್ಟಿಗೆ ಪರಸ್ಪರ ಒಂದಕ್ಕೊಂದು ಅವಲಂಬಿತವಾಗಿವೆ ಎಂಬುದನ್ನು ತಿಳಿಯಲು ಪ್ರಪಂಚದ ಭಿನ್ನ ಭಿನ್ನ ಜನಪದ ಸಂಸ್ಕೃತಿಗಳನ್ನು ಕುರಿತಾದ ಅಧ್ಯಯನ ನಡೆದಿದೆ. ಭಾಷೆ–ಸಂಸ್ಕೃತಿ ನಿರ್ವಹಿಸುವ ಕಾರ್ಯಗಳ ಮೂಲಕ ಅವು ಪರಸ್ಪರ ಒಂದನ್ನೊಂದು ನಿಯಂತ್ರಿಸುವ ವಿಚಾರ ತಿಳಿಯಬರುತ್ತದೆ.

2.2 ಭಾಷೆಯ ಮೇಲೆ ಸಂಸ್ಕೃತಿಯ ಪ್ರಭಾವಗಳು

ಯಾವುದೇ ಒಂದು ಸಮಾಜದ ಸಂಸ್ಕೃತಿಯನ್ನು ತಿಳಿಯುವಲ್ಲಿ ಆ ಸಮಾಜದ ಜನರಾಡುವ ಭಾಷೆಯ ಪದಕೋಶ ನೆರವಾಗುತ್ತದೆ. ಆ ಸಮಾಜದ ಸಂಸ್ಕೃತಿಗನುಗುಣವಾಗಿ ಪದಗಳು ಸಿದ್ಧಗೊಂಡಿರುತ್ತವೆ. ಸಮಾಜದ ಜನರ ವಿಶಿಷ್ಟ ಅನುಭವಗಳು, ಘಟನೆಗಳು, ವಸ್ತು ವಿಶೇಷಗಳು ಮತ್ತು ಇವುಗಳಿಗೆ ಸಂಬಂಧಿಸಿದಂತೆ ಅನೇಕ ಪದಗಳು ಹುಟ್ಟಿಕೊಂಡಿರುತ್ತವೆ. ಒಂದು ಸಮಾಜದ ಸಂಸ್ಕೃತಿಯಲ್ಲಿ ಬದಲಾವಣೆಯಾದರೆ ಆ ಸಮಾಜದ ಜನರಾಡುವ ಭಾಷೆಯಲ್ಲೂ ಬದಲಾವಣೆ ಆಗುತ್ತದೆ. ಉದಾಹರಣೆಗೆ ಯಾವುದೋ ಒಂದು ವಸ್ತು ಅಥವಾ ಪದಾರ್ಥ ಸಮಾಜದಲ್ಲಿ ಇಲ್ಲದಿದ್ದಾಗ ಅದರ ಬಗೆಗಿನ ಯಾವ ಮಾಹಿತಿಯೂ ಆ ಸಮಾಜದ ಜನರಾಡುವ ಭಾಷೆಯಲ್ಲಿ ದೊರಕುವುದಿಲ್ಲ. ಕಾರಣಾಂತರಗಳಿಂದ ಆ ವಸ್ತು ವಿಶೇಷ ಸಮಾಜದಲ್ಲಿ ಬಳಕೆಗೆ ಬಂದರೆ ಅದಕ್ಕೆ ಅನುಗುಣವಾದ ಪದವನ್ನು ಆ ಸಮಾಜ ಸಿದ್ಧಗೊಳಿಸಿಕೊಳ್ಳಬೇಕಾಗುತ್ತದೆ ಅಥವಾ ಬೇರೆ ಭಾಷೆಯಿಂದ ಪದವನ್ನು ಎರವಲು ಪಡೆಯಬೇಕಾಗುತ್ತದೆ.

ಪ್ರಪಂಚದ ಬೇರೆ ಬೇರೆ ಸಮಾಜಗಳಲ್ಲಿ ಬಳಕೆಯಲ್ಲಿರುವ ವಿವಿಧ ಬಣ್ಣಗಳಿಗೆ ಸಂಬಂಧಿಸಿದ ಪದಗಳ ಸಂಖ್ಯೆಯನ್ನು ಕುರಿತು ಬ್ರೆಂಟ್ ಬರ್ಲಿನ್ (Brent Berlin) ಮತ್ತು ಪಾಲ್ ಕೇ (Paul Kay) ಅಧ್ಯಯನ ನಡೆಸಿದ್ದಾರೆ. ಸುಮಾರು ನೂರಕ್ಕೂ ಮೇಲ್ಪಟ್ಟ ಭಾಷೆಗಳನ್ನು ಪರಿಶೀಲಿಸಿದ ಅವರಿಗೆ ಕೆಲವು ಭಾಷೆಗಳಲ್ಲಿ 'ಕತ್ತಲು' ಮತ್ತು 'ಬೆಳಕ'ನ್ನು ಸೂಚಿಸಲು ಎರಡು ಸಾಮಾನ್ಯ ಪದಗಳು ಮಾತ್ರ ಬಳಕೆಯಲ್ಲಿರುವ ಅಂಶ ತಿಳಿದುಬಂತು. ಈ ಭಾಷೆಗಳಲ್ಲಿ ಬೇರೆ ಬೇರೆ ಬಣ್ಣಗಳನ್ನು ಸೂಚಿಸಲು ಸಂಯೋಜಕ ಪದಗಳಿವೆ. ಉದಾಹರಣೆಗೆ ಹಸಿರು ಬಣ್ಣಕ್ಕೆ 'ಹೊಚ್ಚ ಹೊಸ (ತಾಜಾ) ಎಲೆ, ಎಂಬ ಪದವೂ, ಹಳದಿ ಬಣ್ಣಕ್ಕೆ 'ಕತ್ತರಿಸಿದ ಸೀತಾಳೆ ಗಿಡದ ಎಳೆಗಳು' ಎಂಬ ಪದ ಇದೆ. ಸಾಂಸ್ಕೃತಿಕ ಸಂಕೀರ್ಣತೆ ಕಂಡುಬಂದಾಗ, ಬಣ್ಣಗಳಿಗೆ ಸಂಬಂಧಿಸಿದ ಪದಗಳ ಸಂಖ್ಯೆಯು ಹೆಚ್ಚುತ್ತದೆ ಎಂದು ಬರ್ಲಿನ್ ಮತ್ತು ಕೇ ಹೇಳುತ್ತಾರೆ.[6] ಇವರ ಹೇಳಿಕೆಯು ಅನಂತರದ ಸಂಶೋಧನೆಗಳಿಂದ ದೃಢಪಟ್ಟಿದೆ.[7] ಹೆಚ್ಚು ಸಂಕೀರ್ಣ ಸಮಾಜಗಳು ತಮ್ಮ ಭಾಷೆಯಲ್ಲಿ ಬಣ್ಣಗಳಿಗೆ ಸಂಬಂಧಿಸಿದ ಪದಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪಡೆದಿರುತ್ತವೆ. ಇದಕ್ಕೆ ಕಾರಣ ಆ ಸಮಾಜವು ಹೆಚ್ಚು ಅಲಂಕೃತ ಸಾಮಗ್ರಿಗಳನ್ನು ಹೊಂದಿರುವುದು ಅಥವಾ ಬಣ್ಣಗಳು ಮತ್ತು ರಂಗುಗಳಿಗೆ ಸಂಬಂಧಿಸಿದಂತೆ ಹೆಚ್ಚು ತಾಂತ್ರಿಕ ಪ್ರಾವೀಣ್ಯತೆಯನ್ನು ಗಳಿಸಿರುವುದೇ ಆಗಿದೆ.

ಬಣ್ಣಗಳಿಗೆ ಸಂಬಂಧಿಸಿದ ಪದಗಳ ಸಂಖ್ಯೆಯ ವ್ಯತ್ಯಯಗಳಿಗೆ ಕೆಲವೊಮ್ಮೆ ಜೈವಿಕ ಅಂಶಗಳು ಕಾರಣವಾಗುತ್ತವೆ ಎಂಬ ವಿಚಾರವನ್ನು ಮಾರ್ಕ್ ಎಚ್. ಬಾರ್ನ್‌ಸ್ಟೀನ್ (Marc H. Bornstein) ತಮ್ಮ ಸಂಶೋಧನೆಗಳಿಂದ ತೋರಿಸಿಕೊಟ್ಟಿದ್ದಾರೆ.[8] ಅವರ ಪ್ರಕಾರ ಕಪ್ಪು ಕಣ್ಣುಗಳನ್ನುಳ್ಳ ವ್ಯಕ್ತಿಗಳಲ್ಲಿ ಬಣ್ಣಗಳಿಗೆ ಸಂಬಂಧಿಸಿದ

ಪದಗಳು ಕಡಿಮೆ, ಏಕೆಂದರೆ ಆ ವ್ಯಕ್ತಿಗಳು ಬೇರೆ ಬೇರೆ ಬಣ್ಣಗಳನ್ನು ಗುರ್ತಿಸಲು ಹೆಚ್ಚು ಕಷ್ಟಪಡುತ್ತಾರೆ. ಬಣ್ಣಗಳಿಗೆ ಸಂಬಂಧಿಸಿದ ಪದಗಳ ಸಾಂಖ್ಯಾ ವ್ಯತ್ಯಾಸಗಳಿಗೆ ಸಾಂಸ್ಕೃತಿಕ ಮತ್ತು ಜೈವಿಕ ವಿವರಣೆಗಳು ಅವಶ್ಯಕವೆಂದು ಇತ್ತೀಚಿನ ಸಂಖ್ಯಾಕಲನವೈಜ್ಞಾನಿಕ ಅಧ್ಯಯನದಿಂದ ತಿಳಿದುಬಂದಿದೆ. ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಸಂಕೀರ್ಣತೆಯನ್ನು ಪಡೆದಿರುವ ಹಾಗೂ ಕಪ್ಪು ಕಣ್ಣುಗಳನ್ನು ಹೊಂದಿಲ್ಲದ ವ್ಯಕ್ತಿಗಳ ಸಮಾಜದಲ್ಲಿ ಬಣ್ಣಗಳಿಗೆ ಸಂಬಂಧಿಸಿದ ಪದಗಳು ಹೆಚ್ಚು ಸಂಖ್ಯೆಯಲ್ಲಿರುತ್ತವೆ. ಒಂದು ಸಮಾಜವು ಸರಳವಾಗಿದ್ದಾಗ ಅಥವಾ ಸಮಾಜದ ವ್ಯಕ್ತಿಗಳು ಕಪ್ಪು ಕಣ್ಣುಗಳನ್ನು ಪಡೆದಿರುವವರಾಗಿದ್ದರೆ ಅಂತಹ ಸಮಾಜದಲ್ಲಿ ಬಣ್ಣಗಳಿಗೆ ಸಂಬಂಧಿಸಿದ ಪದಗಳು ಕಡಿಮೆ ಸಂಖ್ಯೆಯಲ್ಲಿರುತ್ತವೆ. ಆದುದರಿಂದ ಸಾಂಸ್ಕೃತಿಕ ಮತ್ತು ಜೈವಿಕ ಅಂಶಗಳು ಪರಸ್ಪರ ಪೂರಕವೆಂದು ತೋರುತ್ತವೆ' ಎಂದು ಮೆಲ್ವಿನ್ ಎಂಬರ್ ಅಭಿಪ್ರಾಯಪಡುತ್ತಾರೆ.[9]

ಬೇರೆ ಬೇರೆ ಬಣ್ಣಗಳಿಗೆ ಸಂಬಂಧಿಸಿದ ಪದವರ್ಗಗಳಲ್ಲಿ ಒಂದು ನಿರ್ದಿಷ್ಟಕ್ರಮವನ್ನು ಕಾಣಬಹುದು ಎಂದು ಬರ್ಲಿನ್ ಮತ್ತು ಕೇ ಹೇಳಿದ್ದಾರೆ. ಅವರ ಹೇಳಿಕೆಯನ್ನು ಇತ್ತೀಚಿನ ಸಂಶೋಧನೆಗಳು ಪ್ರತಿಧ್ವನಿಸಿವೆ. ಭಾಷೆಯಲ್ಲಿ ಬಣ್ಣಗಳಿಗೆ ಸಂಬಂಧಿಸಿದ ಪದವರ್ಗಗಳಲ್ಲಿ ಮೊದಲನೆಯದು ಬೆಳಕು ಅಥವಾ ಬಿಳಿ (Light or White) ಮತ್ತು ಕತ್ತಲು (ಅಥವಾ ಕಪ್ಪು) (dark or black) ಎರಡನೆಯದು ಕೆಂಪು, ಮೂರನೆಯದು ಹಳದಿ ಅಥವಾ ಹಸಿರು/ನೀಲಿ (grue). ಅನಂತರ ಹಸಿರು ಮತ್ತು ನೀಲಿಗೆ ಸಂಬಂಧಿಸಿದ ಬೇರೆ ಬೇರೆ ಮೂಲ ಪದಗಳು (basic terms) ; ಅವುಗಳಾದ ಮೇಲೆ ಕಂದು (brown) , ಅನಂತರ ನಸುಗೆಂಪು (pink), ಕಿತ್ತಳೆ (orange) ಮತ್ತು ಊದಾ (purple) ಇವುಗಳನ್ನು ನಾವು ಸಾರ್ವತ್ರಿಕ ಕ್ರಮಗಳಲ್ಲಿ (universal sequence) ಪುನರ್ರಚಿಸಬಹುದು. ಉದಾಹರಣೆಗೆ ಒಂದು ಭಾಷೆ 'ಹಳದಿ' ಎನ್ನುವ ಪದವನ್ನು ಹೊಂದಿದ್ದರೆ, ಆ ಭಾಷೆ 'ಕೆಂಪು' ಎನ್ನುವ ಪದವನ್ನೂ ಹೊಂದಿರುತ್ತದೆ—ಆದರೆ ಅದರಲ್ಲಿ ಅದಲು ಬದಲು ಕ್ರಮ ಕಾಣಿಸಿಕೊಳ್ಳುವುದಿಲ್ಲ.

ಗಿಡಗಳಿಗೆ ಸಂಬಂಧಿಸಿದ ಸಾಮಾನ್ಯ ಅಥವಾ ಜೈವಿಕ ಪದಗಳ ವಿಷಯದಲ್ಲೂ (life forms) ಒಂದು ಸಾರ್ವತ್ರಿಕ ರೂಪದ ಬೆಳವಣಿಗೆ ಕಂಡುಬರುತ್ತದೆ.[10] ಉದಾಹರಣೆಗೆ ಸಸ್ಯ ಪದದ ಅನಂತರ 'ಮರ' ಎಂಬ ಪದವೂ, ಅನಂತರ ಗ್ರೆರ್ಬ್ (Grerb) ಹಸಿರು ಎಲೆ ಮತ್ತು ಕಾಂಡ ಹೊಂದಿರುವ ಸಸ್ಯ), ಅನಂತರ 'ಪೊದೆ (bush) ಮರ ಮತ್ತು ಗ್ರೆರ್ಬ್ ನಡುವಣ ಸಸ್ಯಗಳು) ; ಅನಂತರ ಹುಲ್ಲು (grass) ; ಅದಾದಮೇಲೆ ವೈನ್ (vine)— ಇದೇ ರೀತಿ ಪ್ರಾಣಿಗಳಿಗೆ ಸಂಬಂಧಿಸಿದ ಪದಗಳನ್ನು ಗಮನಿಸಬಹುದು, ಪ್ರಾಣಿ ಪದದ ಅನಂತರ 'ಮೀನು', ಅನಂತರ 'ಹಕ್ಕಿ', ಅನಂತರ 'ಹಾವು', ಅನಂತರ ವಗ್ (wug) ಮೀನು, ಹಕ್ಕಿ ಹಾವುಗಳಿಗಿಂತ ಹೊರತಾದ ಸಣ್ಣ ಜೀವಿಗಳು_ಉದಾಹರಣೆಗೆ ಹುಳುಗಳು ಅನಂತರ 'ಸ್ತನಿಗಳು'[11]

2.2.1 ಪದಸಮೂಹಗಳು

ಒಂದು ಭಾಷೆಯ ಸಮಸ್ತ ಪದಸಮೂಹವನ್ನು ಪರಿಶೀಲಿಸಿದಾಗ, ಹೆಚ್ಚು ಸಂಕೀರ್ಣ ಸಮಾಜಗಳು ಹೆಚ್ಚು ಪದಸಮೂಹಗಳನ್ನು ಹೊಂದಿರುವ ಅಂಶ ತಿಳಿದುಬರುತ್ತದೆ.[12] ಇಲ್ಲಿ ನಾವು ನೆನಪಿಡಬೇಕಾದ ವಿಚಾರವೆಂದರೆ, ಸಂಕೀರ್ಣ ಸಮಾಜಗಳು ವಿವಿಧ ಬಗೆಯ ತಜ್ಞರನ್ನು ಹೊಂದಿರುತ್ತವೆ ಅಲ್ಲದೆ ತಜ್ಞರುಗಳು ಆವಿಷ್ಕಾರ ಮಾಡಿದ ಪದಗಳು ಆ ಸಮಾಜಗಳ ಕೋಶಗಳಲ್ಲಿರುತ್ತವೆ. ಇದರಿಂದ ಹೊರತಾದ ಪದಸಮೂಹವನ್ನು ಒಂದು ಭಾಷೆಯಲ್ಲಿ ಗಮನಿಸಿದಾಗ ಎಲ್ಲ ಭಾಷೆಗಳು ಮೂಲತಃ ಒಂದೇ ಪ್ರಮಾಣದ ಪದಸಮೂಹವನ್ನು ಹೊಂದಿರುವ ವಿಚಾರ ಕಂಡುಬರುತ್ತದೆ.[13] ಆದರೆ ಕೆಲವು ಸಾರಿ ಸಾಂಸ್ಕೃತಿಕ ಸಂಕೀರ್ಣತೆಯಿಂದಾಗಿ ಪದಸಮೂಹಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಮತ್ತೆ ಕೆಲವು ಸಾರಿ ಸಮಾನಸಂಖ್ಯೆಯಲ್ಲಿರುತ್ತವೆ. ಪದಸಮೂಹಗಳ ಸಂಖ್ಯೆ ಅತಿ ಕಡಿಮೆಯಿರುವ ನಿದರ್ಶನಗಳೂ ಉಂಟು. ಸಸ್ಯಗಳ ನಿರ್ದಿಷ್ಟ ಹೆಸರುಗಳನ್ನು ಕುರಿತಂತೆ ಸಂಕೀರ್ಣ ಸಮಾಜದಲ್ಲೂ ಪದಸಮೂಹಗಳ ಸಂಖ್ಯೆ ಚಿಕ್ಕದಾಗಿರಬಹುದು.

2.2.2 ಕೇಂದ್ರ ಕ್ಷೇತ್ರಗಳು

ಯಾವುದೇ ಒಂದು ಭಾಷಿಕ ಅಂಶ ಒಂದು ಪ್ರದೇಶದಲ್ಲಿ ಹುಟ್ಟಿ ಸುತ್ತಮುತ್ತಲಿನ ಪ್ರದೇಶವನ್ನು ಸಂಪೂರ್ಣವಾಗಿ ವ್ಯಾಪಿಸಿಕೊಂಡರೆ ಆ ಪ್ರದೇಶವನ್ನು ಕೇಂದ್ರ ಕ್ಷೇತ್ರವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಸಾಂಸ್ಕೃತಿಕ ಕೇಂದ್ರಗಳು ರಾಜಕೀಯ ಕಾರಣಗಳಿಂದ ಮಹತ್ವ ಪಡೆದಿರುವ ಸ್ಥಳಗಳು ಮತ್ತು ಅವುಗಳ ಸುತ್ತಲಿನ ಪ್ರದೇಶ ಕೇಂದ್ರ ಕ್ಷೇತ್ರಗಳಾಗುತ್ತವೆ. ಉದಾಹರಣೆಗೆ ಬಳ್ಳಾರಿ ಕನ್ನಡ, ವಿಜಯನಗರ ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದ, ಸಾಂಸ್ಕೃತಿಕ ಕೇಂದ್ರವಾಗಿರುವುದರಿಂದ ಇಲ್ಲಿನ ಅನೇಕ ಭಾಷಿಕ ಅಂಶಗಳು ಬಳ್ಳಾರಿ ಜಿಲ್ಲೆಯ ಸುತ್ತಮುತ್ತಲಿನ ಅನೇಕ ಪ್ರದೇಶಗಳವರೆಗೆ ಅಂದರೆ ಬಳ್ಳಾರಿ, ಹೊಸಪೇಟೆ, ಸೊಂಡೂರು, ರಾಯಚೂರು ಜಿಲ್ಲೆಯ ಗಂಗಾವತಿ, ಸಿಂಧನೂರುಗಳವರೆಗೂ ವ್ಯಾಪಿಸಿವೆ,

ಭಾಷೆಯ ಮೇಲೆ ಭೌಗೋಳಿಕ ಪರಿಸರವೂ ಪ್ರಭಾವ ಬೀರಬಲ್ಲದು. ವ್ಯಕ್ತಿ ವಾಸಿಸುವ ಪರಿಸರಕ್ಕೆ ಅನುಗುಣವಾಗಿ ಹೊಸ ಹೊಸ ಪದಗಳು ಸೃಷ್ಟಿಯಾಗುತ್ತವೆ. ಎಸ್ಕಿಮೋ ಜನರು ಹಿಮ/ಮಂಜು ವಿವಿಧ ಗಾತ್ರ ಮತ್ತು ಆಳತೆಗೆ ಸಂಬಂಧಿಸಿದಂತೆ ತಮ್ಮ ಭಾಷೆಯಲ್ಲಿ ಸುಮಾರು ನಲವತ್ತಕ್ಕೂ ಹೆಚ್ಚು ಪದಗಳನ್ನು ಬಳಸುತ್ತಾರೆ.[14] ಕನ್ನಡ ಭಾಷೆಯಲ್ಲಿ ಈ ಪದಗಳಿಲ್ಲ. ಎಸ್ಕಿಮೋಗಳು ಬದುಕುವ ಪರಿಸರ ನಮ್ಮಲ್ಲಿ ಇಲ್ಲದ ಮೇಲೆ ಅಲ್ಲಿನ ಪದಗಳು ಹೇಗೆ ಬರಬೇಕು ? ಆದುದರಿಂದ ಪರಿಸರ ಪದಗಳ ಸೃಷ್ಟಿಗೆ ಕಾರಣವಾಗುತ್ತದೆ.

ಪೆಸಿಫಿಕ್ ಕರಾವಳಿ ಪ್ರದೇಶದಲ್ಲಿ ವಾಸಿಸುವ ಕ್ವಾಕಿತಲ್ ಜನರ ಭೌಗೋಳಿಕ ಪದಾವಳಿಗಳನ್ನು ಅಧ್ಯಯನ ಮಾಡಿದ ಬೋವಾಸ್ ಎಂಬ ಮಾನವಶಾಸ್ತ್ರಜ್ಞನಿಗೆ, ಕ್ವಾಕಿತಲ್ ಜನರ ಭಾಷೆಯು, ಅವರು ವಾಸಿಸುವ ಭೌಗೋಳಿಕ ಪರಿಸರವನ್ನು (with the forms of land and water) ಪ್ರತಿಬಿಂಬಿಸುತ್ತವೆ ಎನ್ನುವ ವಿಚಾರ ತಿಳಿದುಬಂದಿತು. ಕ್ವಾಕಿತಲ್ ಜನರು ತಮ್ಮ ಜೀವನ ನಿರ್ವಹಣೆಗಾಗಿ ಸಮುದ್ರಕ್ಕೆ ಹೋಗಿ ಮೀನು ಹಿಡಿಯುತ್ತಾರೆ; ನೆಲದ ಮೇಲಿನ ಪ್ರಾಣಿಗಳನ್ನು ಬೇಟೆಯಾಡುತ್ತಾರೆ; ಅಲ್ಲದೆ ಇತರ ಆಹಾರ ಪದಾರ್ಥಗಳಿಗೆ ತಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಶೋಧಿಸುತ್ತಾರೆ. ಆದುದರಿಂದ ಅವರಲ್ಲಿ ನೀರು ಮತ್ತು ನೆಲದ ತಾಣಗಳಿಗೆ ಸಂಬಂಧಿಸಿದ ಅನೇಕ ಪದಗಳಿವೆ.[15] ಈ ಪದಗಳು ಅವರ ಪರಿಸರಕ್ಕೆ ಸಂಬಂಧಿಸಿರುವುದರಿಂದ ನಾವಿಕರಿಗೂ, ಬೆಸ್ತರಿಗೂ ಬಹು ಮುಖ್ಯ ಪದಗಳಾಗಿವೆ.[16]

2.2.3 ವ್ಯಾಕರಣ

ವ್ಯಾಕರಣದ ಮೇಲೆ ಸಾಧಾರಣವಾಗಿ ಸಂಸ್ಕೃತಿಯ ಪ್ರಭಾವ ಕಡಿಮೆ. ಆದರೆ ಇದಕ್ಕೆ ಅಪವಾದಗಳೂ ಉಂಟು. ನವಾಹೋ ಭಾಷೆ ಇದಕ್ಕೊಂದು ಒಳ್ಳೆಯ ಉದಾಹರಣೆ. ಸಾಂಸ್ಕೃತಿಕ ಕಾರಣಗಳಿಂದಾಗಿ ಈ ಭಾಷೆಯಲ್ಲಿ ಘಟನೆ, ಸಂದರ್ಭಗಳನ್ನು ಸೂಚಿಸುವ ಕ್ರಿಯಾಪದಗಳಲ್ಲಿ ಎರಡು ವರ್ಗಗಳುಂಟು. ಒಂದು ವರ್ಗ ಚಲನೆಯನ್ನು ಸೂಚಿಸುವಂತಹವು ಮತ್ತೊಂದು ವರ್ಗ ನಿಲುಗಡೆಯನ್ನು ಸೂಚಿಸುವಂತಹವು. ಅನೇಕ ಶತಮಾನಗಳು ಉರುಳಿದರೂ ನವಾಹೋಗಳು ಅನುಭವಿಸುತ್ತಿರುವ ಸ್ವಂತ ಅಲೆಮಾರಿ ಜೀವನಾನುಭವ ಇದಕ್ಕೆ ಕಾರಣವಿರಬಹುದೆಂದು ವಿದ್ವಾಂಸರ ಊಹೆ. ನವಾಹೋಗಳ ಅನುಭವಗಳು ಜೀವನ ವಿಧಾನಗಳು ಅವರ ಜಾನಪದದಲ್ಲಿ ಪ್ರತಿಬಿಂಬಿತವಾಗಿವೆ.[17]

2.3 ಸಂಸ್ಕೃತಿಯ ಮೇಲೆ ಭಾಷಿಕ ಪ್ರಭಾವಗಳು

ಭಾಷೆ ಸಂಸ್ಕೃತಿಯ ಒಂದು ಮುಖ್ಯ ಭಾಗ. ಮಾನವನ ಬಹುತೇಕ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಬಿಂದು ಭಾಷೆ. ಭಾಷೆಯ ಮೂಲಕವೇ ಸಂಸ್ಕೃತಿ ವಹನ ಕಾರ್ಯ ನಡೆಯುವುದು. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಭಾಷೆ ಸಾಗಿಬರುವಂತೆ ಸಂಸ್ಕೃತಿಯೂ ಸಾಗಿಬರುತ್ತದೆ. ಏಕೆಂದರೆ ಭಾಷೆ ಸಂಸ್ಕೃತಿಯನ್ನು ಹೊಂದಿಕೊಂಡೇ ಸಾಗುತ್ತದೆ. ಸಂಸ್ಕೃತಿಯ ಅಧ್ಯಯನಕ್ಕೆ ಭಾಷೆ ಸಹಾಯಕ. ಭಾಷಾಧ್ಯಯನದಿಂದ ಅದನ್ನಾಡುವ ಜನರ ಜನಪದ ಸಂಸ್ಕೃತಿಯನ್ನು ಅರಿಯಬಹುದು.

2.3.1 ಸಪೀರ್ ವ್ಹರ್ಫ್ ವಾದ

ಭಾಷೆ ಪ್ರಧಾನವಾಗಿ ಒಂದು ಸಾಮಾಜಿಕ ಚಟುವಟಿಕೆ. ನಾವಾಡುವ ನುಡಿ ನಮ್ಮ— ಸಾಮಾಜಿಕ ಅಂತಸ್ತನ್ನು ಸಾಂಸ್ಕೃತಿಕ ಹಿನ್ನೆಲೆಯನ್ನೂ ಬಿಂಬಿಸುತ್ತದೆ.

"ಮಾನವನ ವಿಚಾರಧಾರೆ (ವಿವೇಚನೆ, ಆಲೋಚನೆ, ಭಾವನೆ), ಅವನು ಮಾತನಾಡುವ ಭಾಷೆಯಿಂದ ನಿಯಂತ್ರಿಸಲ್ಪಡುವ ಸಾಧ್ಯತೆ ಇದೆ"—ಎಂದು ಸಪೀರ್ (1884-1939) ಮತ್ತು ವೋರ್ಫ್ (1897-1941) ಅಭಿಪ್ರಾಯಪಟ್ಟಿದ್ದಾರೆ.

ನಿರ್ದಿಷ್ಟ ಸಂಸ್ಕೃತಿಯೊಂದರ ಅಧ್ಯಯನ ನಡೆಸಬೇಕೆಂದಿರುವ ಮಾನವ ಭಾಷಾವಿಜ್ಞಾನಿಗೆ ಸಮಾಜದ ವ್ಯಕ್ತಿ ತಾನು ಗ್ರಹಿಸಿದ ವಿಚಾರವನ್ನು ಯಾವ ರೀತಿಯಲ್ಲಿ ಅಭಿವ್ಯಕ್ತಿಸುತ್ತಾನೆ ಎಂಬ ವಿಚಾರ ಬಹುಮುಖ್ಯವಾದುದು. ಸಾಮಾಜಿಕ ಸನ್ನಿವೇಶಗಳಿಗೆ ಅನುಗುಣವಾಗಿ ವ್ಯಕ್ತಿಯ ಅಭಿವ್ಯಕ್ತಿ ಮತ್ತು ಪ್ರತಿಕ್ರಿಯೆ ಬದಲಾಗುತ್ತವೆ. ಆಯಾ ಜನಪದ ಅವಶ್ಯಕತೆಗೆ ತಕ್ಕಂತೆ ಪದಗಳು ಸೃಷ್ಟಿಯಾಗಿ ಬಳಕೆಗೊಳ್ಳುತ್ತವೆ. ಉದಾಹರಣೆಗೆ ಹೋಪಿ ಜನರು ಮಳೆಗಾಗಿ ಪ್ರಾರ್ಥನೆ ಮಾಡುವಾಗ, ಮೋಡಗಳನ್ನು ನಿರ್ದೇಶಿಸಲು ಯಾವಾಗಲೂ ಸಚೇತನ ಬಹುವಚನವನ್ನೇ ಬಳಸುವರು! ಈ ಬಗ್ಗೆ ಕುತೂಹಲ ತಳೆದ ವೋರ್ಫ, ಹೋಪಿ ಜನರು ಬಳಸುವ ಸಚೇತನ ಬಹುವಚನವು ರೂಪಕವೋ ಅಥವಾ ಅವರು ಮೋಡಗಳ ಬಗ್ಗೆ ಹೊಂದಿರುವ ಭಾವನೆಯನ್ನು ಪ್ರತಿನಿಧಿಸುವುದೋ ಎಂಬುದನ್ನು ತಿಳಿಯಲು, ಹೋಪಿ ಭಾಷೆಯ ಲಿಂಗವ್ಯವಸ್ಥೆಯಲ್ಲಿ ಸಚೇತನ ಮತ್ತು ಅಚೇತನ ರೂಪವುಂಟೇ ಎಂದು ಪರಿಶೀಲಿಸಿದ. ಮೊದಲು ಅವನು ಕಂಡುಕೊಂಡ ವಿಚಾರವೆಂದರೆ, ಹೋಪಿ ಭಾಷೆಯ ವ್ಯಾಕರಣದಲ್ಲಿ ಬಾಹ್ಯ ಲಿಂಗ ವ್ಯವಸ್ಥೆ (overt gender system) ಇಲ್ಲದಿರುವುದು. ಎರಡನೆಯದಾಗಿ, ಮೋಡಗಳನ್ನು ನಿರ್ದೇಶಿಸಲು ಹೋಪಿ ಜನರು ಸಚೇತನ ಬಹುವಚನ ನಾಮಪದಗಳನ್ನು ಮಾತ್ರ ಬಳಸುತ್ತಾರೆ. ಎಂಬುದು. ಹೋಪಿಗಳು ನಾಮಪದಗಳನ್ನೇ ಏಕೆ ಬಳಸುತ್ತಾರೆ ಎಂಬುದು ಮುಖ್ಯ ಪ್ರಶ್ನೆ. ಪ್ರಕೃತಿ ಬಗೆಗೆ ಹೋಪಿಗಳು ತಳೆದಿರುವ ಜನಪದ ನಂಬಿಕೆ ಮತ್ತು ಆಚರಣೆಗಳೇ ಕಾರಣವಿರಬಹುದು ಎಂದು ವೋರ್ಫ ಊಹಿಸಿದ್ದಾನೆ.

3 ಮಾನವಕುಲ ಭಾಷಿಕಅರ್ಥವಿಜ್ಞಾನ

ಈ ಕ್ಷೇತ್ರದ ಬಹುಮುಖ್ಯ ಪ್ರಶ್ನೆಗಳಿವು. ವ್ಯಕ್ತಿಯ ಮಾತು ಸಾಮಾಜಿಕ ಸಂದರ್ಭಗಳಿಗೆ ತಕ್ಕಂತೆ ಬೇರೆ ಬೇರೆ ಅರ್ಥಗಳನ್ನು ಏಕೆ ಪಡೆಯುತ್ತದೆ? ವ್ಯಕ್ತಿಯ ಪ್ರಾಪಂಚಿಕ ಜ್ಞಾನವನ್ನು ಬಿಂಬಿಸುವುದರಲ್ಲಿ ಭಾಷಿಕ ಅಂಶಗಳು ಎಷ್ಟರಮಟ್ಟಿಗೆ ಸಹಾಯಕವಾಗಿವೆ?—ಇವುಗಳಿಗೆ ಮಾನವ ಭಾಷಾವಿಜ್ಞಾನಿ ಉತ್ತರವನ್ನು ಕಂಡುಕೊಳ್ಳಬೇಕಾಗುತ್ತದೆ.

4 ಆಡುನುಡಿಯ ಮಾನವಕುಲ ವೃತ್ತಾಂತ

ಇದು ವಿವಿಧ ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಯ ಆಡುನುಡಿಯ ಸಾಂಸ್ಕೃತಿಕ ಬಗೆಗಳನ್ನು ಕುರಿತ ಅಧ್ಯಯನ ವಿಷಯ. ಒಬ್ಬ ವ್ಯಕ್ತಿ ಅಪರಿಚಿತನೊಬ್ಬನನ್ನು ಸಂಧಿಸಿದಾಗ ಅವನು ಯಾವ ಯಾವ ವಸ್ತು ವಿಷಯಗಳನ್ನು ಕುರಿತು ಸಂಭಾಷಣೆ ನಡೆಸುತ್ತಾನೆ?

ಪರಸ್ಪರ ಭೇಟಿಯಾದಾಗ, ಒಬ್ಬರನ್ನು ಪರಿಚಯಿಸುವಾಗ ಅಥವಾ ಸ್ವಾಗತಿಸುವಾಗ ವ್ಯಕ್ತಿ ಯಾವ ಬಗೆಯ ಪದಗಳನ್ನು ವಿಶೇಷಣಗಳನ್ನು ಬಳಸುತ್ತಾನೆ ?—ಮುಂತಾದ ಕುತೂಹಲಕರ ಪ್ರಶ್ನೆಗಳಿಗೆ ಮಾನವಭಾಷಾ ವಿಜ್ಞಾನ ಉತ್ತರವನ್ನು ಹುಡುಕಬೇಕಾಗುತ್ತದೆ. ಉದಾಹರಣೆಗೆ : ವ್ಯಕ್ತಿಯೊಬ್ಬರನ್ನು ಸಂಬೋಧಿಸಲು ನಾವು ಶ್ರೀ, ಶ್ರೀಮತಿ, ಕುಮಾರಿ, ಡಾ||, ಪ್ರೊ ||, ಚಿ||, ಚಿ. ಸೌ|| ಇತ್ಯಾದಿ ಪದಗಳನ್ನು ಬಳಸುತ್ತೇವೆ. ವ್ಯಕ್ತಿಗಳ ಸಂಬೋಧನ ರೀತಿಗಳನ್ನು ಕುರಿತು ಅಧ್ಯಯನ ನಡೆಸಿರುವ ರೋಜರ್‌ಬ್ರೌನ್ ಮತ್ತು ಮಾರ್ಗರೇಟ್ ಫೋರ್ಡ್ ಅವರು ಕೊಡುವ ಕಾರಣವಿದು ; ಜನರಲ್ಲಿ ಬಳಕೆಯಲ್ಲಿರುವ ವಿವಿಧ ಬಗೆಯ ಸಂಬೋಧನೆಗಳು, ವ್ಯಕ್ತಿಯೊಡನೆ ನಾವು ಹೊಂದಿರುವ ಸಂಬಂಧದ ಸ್ವರೂಪಕ್ಕೆ ಅನುಗುಣವಾಗಿ ಬದಲಾಗುತ್ತವೆ.[18]

ಕೆಲವು ಸಮಾಜಗಳಲ್ಲಿ ಸಂಬೋಧನ ರೀತಿಗಳು ವ್ಯಕ್ತಿಯ ಸ್ಥಾನಮಾನವನ್ನು ಸೂಚಿಸುತ್ತವೆ. ಸೂಡಾನಿನ ನ್ಯೂಯರ್ ಎಂಬ ಬುಡಕಟ್ಟು ಜನರಲ್ಲಿ, ತಮ್ಮ ಪಂಗಡಕ್ಕೆ ಸೇರಿದ ವ್ಯಕ್ತಿಗೆ, ಬೇರೆ ಬೇರೆ ಹೆಸರುಗಳನ್ನು ಇಡುವುದರ ಮೂಲಕ ವ್ಯಕ್ತಿಗಳ ಲಿಂಗಭೇದ, ವಯಸ್ಸು ಮತ್ತು ಯಾವ ಗುಂಪಿಗೆ ಸೇರಿದವರು ಎಂಬ ವಿಷಯವನ್ನು ಸ್ಪಷ್ಟವಾಗಿ ತಿಳಿಯುತ್ತಾರೆ. ಉದಾಹರಣೆಗೆ ನ್ಯೂಯರ್ ಕುಟುಂಬದಲ್ಲಿ ಗಂಡುಮಗು ಹುಟ್ಟಿದ ತಕ್ಷಣ, ಆ ಮಗುವಿಗೆ ತಂದೆ ಕಡೆಯ ಸಂಬಂಧಿಗಳು ಮತ್ತು ಅವರ ಆಪ್ತ ಸ್ನೇಹಿತರು ಯಾವುದೋ ಒಂದು ಹೆಸರನ್ನಿಡುತ್ತಾರೆ. ಇದೇ ರೀತಿ ತಾಯಿಯ ಕಡೆಯ ಸಂಬಂಧಿಗಳು (ಮುಖ್ಯವಾಗಿ ಅಜ್ಜ, ಅಜ್ಜಿ) ಮತ್ತು ಅವರ ಆಪ್ತ ಸ್ನೇಹಿತರು ಮಗುವಿಗೆ ಮತ್ತೊಂದು ಹೆಸರನ್ನಿಡುತ್ತಾರೆ. ಎರಡೂ ಕಡೆಯ ಈ ಸಂಬಂಧಿಗಳು ಮತ್ತು ಸ್ನೇಹಿತರು ಮಗುವಿಗೆ ತಾವಿಟ್ಟ ಹೆಸರನ್ನೇ ಬಳಸುವರು. ಮಗು ದೊಡ್ಡವನಾದಾಗ, ಅವನ ಧಾರ್ಮಿಕ ದೀಕ್ಷೆಯ ಸಮಾರಂಭ ನಡೆಸುವರು. ಆ ಸಂದರ್ಭದಲ್ಲಿ ಅವನಿಗೆ ಒಂದು ಎತ್ತನ್ನು (ಎತ್ತಿಗೆ ಹೆಸರಿರುತ್ತದೆ) ಬಳುವಳಿಯಾಗಿ ನೀಡುವರು. ಇದರಿಂದ ಅವನು ಆ ಎತ್ತಿನ ಹೆಸರನ್ನು (Ox-name) ಪಡೆಯುತ್ತಾನೆ. ಮುಂದೆ ಅವನಿಗೆ ಆ ಎತ್ತಿನ ಹೆಸರೇ ಹೆಸರಾಗುತ್ತದೆ ! ಅಂತೆಯೇ, ಒಬ್ಬ ಹುಡುಗಿ ತಾನು ಹಾಲು ಕರೆಯುವ ಹಸುವಿನ ಕರುವಿಗೆ (ಗಂಡು ಕರು) ಇಟ್ಟಿರುವ ಹೆಸರನ್ನು (ox-name) ಇಟ್ಟುಕೊಳ್ಳಬಹುದು. ಆದರೆ ಈ ಹೆಸರನ್ನು ಆಕೆಯ ಸ್ನೇಹಿತರು ಮಾತ್ರ ಬಳಸುವರು. ಕೆಲವೊಮ್ಮೆ ವ್ಯಕ್ತಿ ನೃತ್ಯ ಮಾಡುವಾಗ, ಗೆಳೆಯ ಗೆಳತಿಯರೊಡನೆ ಸಹನರ್ತನ ಮಾಡುವಾಗ, ಸ್ನೇಹದ ಸಲುಗೆಯಿಂದ ಅವರು ತಮ್ಮ ಸ್ನೇಹಿತರ ಎತ್ತಿನ ಹೆಸರುಗಳನ್ನೇ ಅಲ್ಲದೆ ಗೋಪ್ಯವಾಗಿ ತಾವಿಟ್ಟಿರುವ ಹೆಸರುಗಳಿಂದಲೂ ಕೂಗಿ ಕರೆದು ಸಂತೋಷಪಡುವರು.

ಕೆಲವು ಭಾಷೆಗಳ ಪದಸಮೂಹಗಳು ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತವೆ. ಉದಾಹರಣೆಗೆ ಜಾವಾ ಜನರು (ಮುಖ್ಯವಾಗಿ ರೈತರು, ನಗರವಾಸಿಗಳು ಮತ್ತು ಶ್ರೀಮಂತ ಪ್ರಭುವರ್ಗಗಳು) ಬಳಸುವ ಪದಸಮೂಹಗಳು, ಅವರವರ ಸಾಮಾಜಿಕ ಸ್ಥಾನಮಾನಗಳನ್ನು ಸೂಚಿಸುತ್ತವೆ ಎಂಬ ವಿಚಾರವನ್ನು ಕ್ಲಿಫೋರ್ಡ್ ಗೀರ್ಟ್ಜ್

ಎಂಬಾತ ತೋರಿಸಿಕೊಟ್ಟಿದ್ದಾನೆ. 'ಈಗ' (Now) ಎಂಬ ಪದವನ್ನು ರೈತ ಸೈಕಿ (Saiki—ಕೆಳದರ್ಜೆಯ ಒರಟು ರೂಪ) ಎಂದೂ, ನಗರವಾಸಿ ಸನಿಕಿ (Saniki—ಸುಸಂಸ್ಕೃತ ಪದ) ಎಂದೂ, ಶ್ರೀಮಂತ ಪ್ರಭುವರ್ಗ ಸಮೆನಿಕ (Samenika—ಹೆಚ್ಚು ಸುಸಂಸ್ಕೃತ ಪದ) ಎಂಬುದಾಗಿ ಬಳಸುವರು.

ಲಿಂಗಭೇದದ ಆಧಾರದಿಂದ ವಾಕ್‌ಶೈಲಿಯಲ್ಲಿ ವ್ಯತ್ಯಾಸಗಳನ್ನು ಪಡೆದಿರುವ ಭಾಷೆಗಳು ಹಲವಾರಿವೆ. ಕೆನಡ, ಕ್ಯಾಲಿಫೋರ್ನಿಯ ಮತ್ತು ದಕ್ಷಿಣ ಅಮೇರಿಕದಲ್ಲಿ ವಾಸಿಸುವ ಕೆಲವು ಅಮೆರಿಕನ್ ಇಂಡಿಯನ್ ಸಮಾಜಗಳಲ್ಲೂ ಥೈಲೆಂಡ್ ಮತ್ತು ಸೈಬೀರಿಯಗಳಲ್ಲಿ ವಾಸಿಸುವ ಕೆಲವು ಸಮಾಜಗಳಲ್ಲೂ ಇಂತಹ ಭಾಷೆಗಳನ್ನು ಕಾಣಬಹುದು. ಮೇರಿ ಹಾಸ್ ಎಂಬಾಕೆ ಲೂಸಿಯಾನದ ನೈರುತ್ಯ ಭಾಗದಲ್ಲಿ ಬಳಕೆಯಲ್ಲಿರುವ ಕೊಸತಿ ಭಾಷೆಯನ್ನಾಡುವ ಗಂಡು ಮತ್ತು ಹೆಣ್ಣಿನ ಆಡುನುಡಿಗಳನ್ನು ವಿಶ್ಲೇಷಿಸಿ, ಆ ಭಾಷೆಯ ಅನೇಕ ಕುತೂಹಲಕಾರಿ ವ್ಯಾಕರಣಾಂಶಗಳನ್ನು ಪ್ರಕಟಪಡಿಸಿದ್ದಾರೆ. ಕೊಸತಿ ಭಾಷೆಯ ಕೆಲವು ನಿರ್ದೇಶಾರ್ಥಕ ಮತ್ತು ಆಜ್ಞಾರ್ಥಕ ಕ್ರಿಯಾಪದರೂಪಗಳಲ್ಲಿ ಗಮನಾರ್ಹ ವ್ಯತ್ಯಾಸವಿರುವುದನ್ನು ಹಾಸ್ ಗಮನಿಸಿದ್ದಾರೆ. ಅವರ ಕ್ಷೇತ್ರ ಕಾರ್ಯದಲ್ಲಿ ನೆರವಾದ ಭಾಷಾನಿವೇದಕನೊಬ್ಬ ಕೊಸತಿ ಭಾಷೆಯನ್ನಾಡುವ ಹೆಣ್ಣಿನ ಆಡುನುಡಿಯ ಕೆಲವು ಲಕ್ಷಣಗಳನ್ನು ಹೇಳಿದ್ದಾನೆ. ಅವು : ಸರಳ—ಸುಲಭ ವಿಧಾನ ಮತ್ತು ಕೋಮಲ. ಕೊಸತಿ ಬುಡಕಟ್ಟಿನ ಗಂಡು, ಹೆಣ್ಣಿನ ಆಡುನುಡಿಯನ್ನು ಬಳಸುವುದಿಲ್ಲ. ಕೊಸತಿ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನಗಳು ಕಡಿಮೆ ಇರುವುದೇ ಇದಕ್ಕೆ ಕಾರಣವೆನ್ನಬಹುದು. ಆದ್ದರಿಂದಲೇ ಕೊಸತಿ ಭಾಷೆಯಲ್ಲಿ ಗಂಡಿಗೆ ಮತ್ತು ಹೆಣ್ಣಿಗೆ ಪ್ರತ್ಯೇಕ ಪದಸಮೂಹಗಳಿವೆ.

ಲಿಂಗಭೇದಕ್ಕನುಗುಣವಾಗಿ ಕಂಡುಬರುವ ಭಾಷಾವ್ಯತ್ಯಾಸಗಳಿಗಿಂತಲೂ ಹೆಚ್ಚು ವ್ಯತ್ಯಾಸಗಳು ವ್ಯಕ್ತಿಯ ವಯೋಮಾನಕ್ಕನುಗುಣವಾಗಿ ಕಂಡುಬರುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆ— ಬಾಲಭಾಷೆ.19 ತಾಯಿ ತನ್ನ ಮಗುವಿನೊಡನೆ ಸಂಭಾಷಿಸುವ ರೀತಿ ನಮಗೆಲ್ಲಾ ತಿಳಿದೇ ಇದೆ. ಕೊಮ್ಯಾಂಚಿ ಇಂಡಿಯನ್ನರ ಮಕ್ಕಳಾಡುವ ಭಾಷೆ ವಿಶಿಷ್ಟ ರೀತಿಯದು. ಅವರಲ್ಲಿ ಸುಮಾರು ನಲವತ್ತು ಪದಗಳು ಸಂವಹನಕ್ಕೆ ಸಂಬಂಧಿಸಿದುವುಗಳೆಂದು ಭಾಷಾತಜ್ಞರು ಹೇಳುತ್ತಾರೆ. ಆ ಪದಗಳು ಮೂರು ಮುಖ್ಯ ಗುಣಗಳನ್ನು ಹೊಂದಿವೆ. 1) ಅವು ಪೂರ್ಣವಾಕ್ಯಗಳನ್ನು ಪ್ರತಿನಿಧಿಸುತ್ತವೆ, 2) ಸರಳವಾದ ಸುಲಭವಾದ ಧ್ವನಿಗಳನ್ನು ಹೊಂದಿವೆ, ಮತ್ತು 3) ಧ್ವನಿಗಳ ಪುನರಾವರ್ತನೆಯ ಮೇಲೆ ಆ ಪದಗಳು ಅವಲಂಬಿತವಾಗಿವೆ.

* * *

ಸಂಸ್ಕೃತಿ ಮಾನವನನ್ನು ದೈಹಿಕವಾಗಿ, ಬೌದ್ಧಿಕವಾಗಿ ಮತ್ತು ನೈತಿಕವಾಗಿ ನಿರ್ಧರಿಸುತ್ತದೆಯಲ್ಲದೆ ಅವನಾಡುವ ಭಾಷೆಯನ್ನು ನಿರ್ಣಯಿಸುತ್ತದೆ. ಆದರೆ ಸಂಸ್ಕೃತಿ

ವಹನ ಸಾಧ್ಯವಾಗುವುದು ಭಾಷೆಯ ಮೂಲಕವೇ. ಆದ್ದರಿಂದ ಸಂಸ್ಕೃತಿಯ ಅಧ್ಯಯನಕ್ಕೆ ಭಾಷೆ ಅತ್ಯಗತ್ಯ. ಭಾಷೆ ಮತ್ತು ಸಂಸ್ಕೃತಿಯ ಸಂಬಂಧವನ್ನು ಕುರಿತ ಹ್ಯಾಮಂಡ್ ಅವರ ಈ ಹೇಳಿಕೆ ಹೆಚ್ಚು ಅರ್ಥಪೂರ್ಣವಾಗಿವೆ ; "ಭಾಷೆ ಮತ್ತು ಸಂಸ್ಕೃತಿಗೆ ಇರುವ ಸಂಬಂಧ ಅತಿ ನಿಕಟವಾದುದು. ಅವೆರಡೂ ಪರಸ್ಪರ ಪೂರಕವಾಗಿವೆ. ಸಂಸ್ಕೃತಿ ಕಲಿಕೆಯಿಂದ ವಹನಗೊಳ್ಳುವಂಥದು. ಭಾಷೆಯ ನೆರವಿಲ್ಲದೆ ಸಂಸ್ಕೃತಿ ಸಿದ್ಧಿಸುವುದಿಲ್ಲ, ನಾಗರಿಕತೆ ಬೆಳೆಯುವುದಿಲ್ಲ, ಸಮಾಜ ಬದಲಾಗುವುದಿಲ್ಲ."[20]

ಟಿಪ್ಪಣಿಗಳು

1. ನೋಡಿ :— ಆರ್. ರಾಮಕೃಷ್ಣ "ವಾದ್ಯಗಳ ಮೂಲಕ ಸಂಕೇತ ಮತ್ತು ಸಂಭಾಷಣೆ", ಪುಸ್ತಕ ಪ್ರಪಂಚ, ಅಕ್ಟೋಬರ್ 1982. ಪುಟ 19–23.
2. ನೋಡಿ :— ಆರ್. ರಾಮಕೃಷ್ಣ – ಚಿಂಪಾಂಜಿಗಳಲ್ಲಿ ಭಾಷಾಕಲಿಕೆ, ಪುಸ್ತಕ ಪ್ರಪಂಚ, ಡಿಸೆಂಬರ್ 1982. ಪುಟ 46–51.
3. ಎಂ. ನಂಜಮ್ಮಣ್ಣಿ, ಸಮಾಜಶಾಸ್ತ್ರ ಪರಿಚಯ ಭಾಗ–2, 1976 ಪುಟ 2.
4. ಡಾ|| ಎಚ್.ಎಸ್. ಸದಾಶಿವಯ್ಯ, ಸಮಾಜಶಾಸ್ತ್ರ ಭಾಗ–1 1979 ಪುಟ 59–60.
5. ಡಿ.ಎಚ್. ಮಲ್ಲಿನಾಥಯ್ಯ, ಸಾಂಸ್ಕೃತಿಕ ಮಾನವಶಾಸ್ತ್ರ. 1974. ಪುಟ 78
6. Brent Berlin and Pual kay ; Basic color ferms ; Their Universality and evolution 1969.
7. Stanley, R., Witkewsky & Cecil H. Brown ; Lexical Universals ; Annual review of Anthropology, 7 (1978) 427–51
8. Marc H. Bornsten ; The Psychophysiological component of cultural difference in color naming and illusion susceptibility–Behavior science Notes, P. 8 (1973), 41–101
9. Melvin Ember ; Size of color lexicon ; Interaction of Cultural and Biological factors. American Anthropologist, 80 (1978) 364–67.
10. Cecil H. Brown ; Folk Botanical life forms ; Their Universality and Growth ; American Anthropologist, 79, (1977) p. 317–42.

11. Cecil H. Brown ; "Zoological life forms ; Their Universality and Growth ; American Anthropologist, 81, (1979), 791–817.
12. Stanley R. Witkowski and Harrold W. Burris ; Societal Complexity and lexical Growth ; Behavioral Science reasearch Pub.
13. Ibid.
14. ಉದಾಹರಣೆಗೆ softly falling snow, dry wind driven snow drifting snow, powder snow, wet packed snow, dry packed snow, suitable for cutting into blocks (for igloo building), ice crust surface snow ಇತ್ಯಾದಿ.
15. ನೆಲದ ತಾಣಗಳಿಗೆ ಸಂಬಂಧಿಸಿದಂತೆ having elder berries, having elder bark — ಮುಂತಾದ ಪದಗಳಿವೆ. ನೀರ ಮೇಲಿನ ತಾಣಗಳಿಗೆ having swell, breakets at rear end, having trout, having sock eye salmon ಮುಂತಾದ ಪದಗಳಿವೆ.
16. Franz Boas ; Geographical names of the Kwakiutl Indians, 1934.
17. Harry Hoijer ; Cultural implications of some Novaho linguistic categories. Language, 27, (1951), 111–120.
18. Roger Brown & Marguerite Ford. "Address in American English" Journal of Abnormal and Social Psychology, 62 (1961) ; 375–85.
19. ನೋಡಿ : ಆರ್. ರಾಮಕೃಷ್ಣ, ಬಾಲಭಾಷಾ ವಿಜ್ಞಾನ ; ಪುಸ್ತಕ ಪ್ರಪಂಚ, ಜುಲೈ 1982. 51–57.
20. Hammond : An Introduction to Cultural and Social Anthropology 1971.

ಸಹಾಯಕ ಗ್ರಂಥಗಳು

1. Jacobs and Stern : General Anthropology, 1955
2. Harry Hoijer (ed) : Language and culture, 1963
3. Harbert Landar : Language and culture, 1966

4. Peter B. Hammand : An Introduction to Cultural and Social Anthropology, 1971
5. Noel Minnis (ed) : Linguistics at Large, 1973
6. Herskovits .M.J. : Cultural Anthropology, 1974
7. Murray J. Leaf (ed) : Frontiers of Anthropology-An Introduction to Anthropological thinking, 1974
8. Renete Bartsch and Theo Vennemann (Ed.) : Linguistics and Neighboring Disciplines, 1975
9. David E. Hunter and Philip Whitten (Ed.) Encyclopaedia of Anthropology, 1976
10. John Friedl : Cultural Anthropology, 1976
11. E. Adamson Hoebel and Everett L. Frost : Cultural and Social Anthropology, 1976
12. Carol R. Ember and Melvin Ember : Anthropology, 1981
13. ಚಿದಾನಂದಮೂರ್ತಿ, ಎಂ. : ಭಾಷಾವಿಜ್ಞಾನದ ಮೂಲತತ್ವಗಳು, 1965
14. ಹಂಪ ನಾಗರಾಜಯ್ಯ : ಭಾಷಾವಿಜ್ಞಾನ,
15. ಐನಾಪೂರ, ಎಲ್.ಎಸ್. : ಮಾನವಶಾಸ್ತ್ರ ಪರಿಚಯ, 1971
16. ಕುಳ್ಳಿ, ಜೆ.ಎಸ್. : ಐತಿಹಾಸಿಕ ಭಾಷಾವಿಜ್ಞಾನ, 1973
17. ಗುರುಮೂರ್ತಿ, ಕೆ.ಜಿ. ಹಳಬರ್, ಬಿ.ಜಿ. ಹಿರೇಮಠ, ಎ.ಜಿ. ಮಾನವಶಾಸ್ತ್ರ, 1973
18. ಮಲ್ಲಿನಾಥಯ್ಯ. ಡಿ.ಎಚ್. : ಸಾಂಸ್ಕೃತಿಕ ಮಾನವಶಾಸ್ತ್ರ, 1974
19. ಕೆಂಪೇಗೌಡ, ಕೆ. : ಭಾಷವಿಜ್ಞಾನ ಕೋಶ, 1976
20. ಕೆಂಪೇಗೌಡ, ಕೆ., ಅಲ್ಬಿಯುಸ್. ಸುಂದರಂ : ಭಾಷೆ ಮತ್ತು ಭಾಷಾವಿಜ್ಞಾನ, 1978
21. ಶಾಲಿನಿ ರಘುನಾಥ : ಉಪಭಾಷಾ ಅಧ್ಯಯನ, 1979
22. ನಾಯಕ, ಹಾ.ಮಾ. : ಸಮೂಹ, 1982

o O o

ಭಾಷೆ ಮಾನವ ಸೃಷ್ಟಿಯಷ್ಟೇ ಪ್ರಾಚೀನ. ಮಾನವ ತನ್ನ ದಿನ ನಿತ್ಯದ ಅನುಭವಗಳನ್ನು ಸಹವಾಸಿಗಳಿಗೆ ಮತ್ತು ತನ್ನ ಮುಂದಿನ ಪೀಳಿಗೆಯವರಿಗೆ ತಿಳಿಸಲು ಹಲವಾರು ಸಂಕೇತಗಳನ್ನು ಬಳಸುತ್ತಿದ್ದ. ಕಾಲಕ್ರಮೇಣ ಈ ಸಂಕೇತಗಳು ನಿರ್ದಿಷ್ಟವಾದ ಅರ್ಥವ್ಯಾಪ್ತಿಯನ್ನು ಪಡೆಯಲಾರಂಭಿಸಿತು. ಅಂಥ ನಿರ್ದಿಷ್ಟ ರೂಪ ತಳೆದ ಸಂಕೇತಗಳ, ಅನಂತರ ಕಾಲದಲ್ಲಿ ಪದಗಳ, ಸಮೂಹವನ್ನು 'ಭಾಷೆ' ಎಂದು ಕರೆಯಲಾಗುತ್ತದೆ. ವಿವಿಧ ಪರಿಸರಗಳಲ್ಲಿ ವಿಭಿನ್ನ ವೃತ್ತಿಗಳನ್ನು ಅನುಸರಿಸುತ್ತಿದ್ದ ಮಾನವ ವರ್ಗಗಳಲ್ಲಿ ಸಹಜವಾಗಿಯೇ ಪ್ರತ್ಯೇಕವಾದ ಅನುಭವಗಳೇರ್ಪಡುತ್ತಿದ್ದವು. ಆದುದರಿಂದ ವಿಶ್ವದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಭಾಷೆಗಳು ಉಗಮವಾಗಿ ವಿಕಾಸಗೊಳ್ಳಲಾರಂಭಿಸಿದವು.

ಮಾನವಶಾಸ್ತ್ರಜ್ಞರು, ಭಾಷಾಶಾಸ್ತ್ರಜ್ಞರು ಪ್ರಾಚೀನ ಮಾನವನ ಸಂಸ್ಕೃತಿ ಅಧ್ಯಯನದಲ್ಲಿ ತೊಡಗಿದಾಗ, ಆಯಾ ಮಾನವ ವರ್ಗಗಳ ಸಂಸ್ಕೃತಿಯನ್ನು, ಅವುಗಳ ಬೆಳವಣಿಗೆಯನ್ನು ತಿಳಿಯಲು ಅವರ ಭಾಷೆಗಳನ್ನು ವಿಶ್ಲೇಷಿಸಿ, ಆಯಾ ಪಂಗಡಗಳ ಪ್ರಾರಂಭಿಕ ಜೀವನ ರೀತಿ, ಸಾಂಸ್ಕೃತಿಕ ಅನುಭವಗಳನ್ನು ತಿಳಿಯಲು ಸಾಧ್ಯ. ಈ ದೃಷ್ಟಿಯಿಂದ ಈಚಿನ ದಶಕಗಳಲ್ಲಿ ಮಾನವ ಭಾಷಾ ವಿಜ್ಞಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ.

ಭಾಷೆ, ಲಿಪಿ ಪ್ರತ್ಯೇಕವಾದವು. ಸುದೀರ್ಘಕಾಲ ಭಾಷೆ ಬೆಳೆದು ಬಂದ ನಂತರ, ಸಾಂಸ್ಕೃತಿಕ ವಿಕಸನದ ತರುವಾಯ ದೂರ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಜನರೊಂದಿಗೆ ಸಂಪರ್ಕ ಬೆಳೆಸಲು ಮತ್ತು ಮುಂದಿನ ಪೀಳಿಗೆಯವರಿಗೆ ಅನುಭವಗಳನ್ನು ಕಾದಿರಿಸಲು ಮಾನವ ಲಿಪಿಯನ್ನು ಆವಿಷ್ಕರಿಸಿದ. ಲಿಪಿಯ ಆವಿಷ್ಕಾರದಿಂದ ಸಾಹಿತ್ಯ ಬೆಳೆಯಲು ಸಾಧ್ಯವಾಯಿತು.

o O o

ಶಿ. ರಾಜೇಂದ್ರಪ್ಪ

ಬಾದಾಮಿ ಚಲುಕ್ಯರ ಆಳ್ವಿಕೆಯಲ್ಲಿ ಕೃಷಿ

ಇತಿಹಾಸದ ರಚನೆಯಲ್ಲಿ ಆಧಾರಗಳ ಪಾತ್ರ ಮಹತ್ವಪೂರ್ಣವಾದುದು. ಆಧಾರ ರಹಿತವಾದ ಚರಿತ್ರೆ ಮರಳು ಪಾಯದ ಮೇಲೆ ನಿರ್ಮಿಸಿದ ಕಟ್ಟಡದಷ್ಟೆ ಅಸ್ಥಿರ, ಅವೈಜ್ಞಾನಿಕ. ಸಮೃದ್ಧ ಸಾಹಿತ್ಯಿಕ ಆಧಾರಗಳ ಕೊರತೆಯು ಶಾಸನಾಧಾರಗಳ ಪ್ರಾಮುಖ್ಯತೆಯನ್ನು ನೂರ್ಮಡಿಗೊಳಿಸಿದೆ. ಇಲ್ಲಿಯವರೆಗೂ ಸುಮಾರು ಎಂಭತ್ತು ಸಾವಿರ ಶಾಸನಗಳು ರಾಷ್ಟ್ರಾದ್ಯಂತ ದೊರೆತಿದ್ದು ಅವರಲ್ಲಿ ಕರ್ನಾಟಕದಲ್ಲೆ ಸುಮಾರು ಮೂವತ್ತು ಸಾವಿರ ಶಾಸನಗಳು ಕಂಡುಬಂದಿವೆಯೆಂದು ವಿದ್ವಾಂಸರು ಅಂದಾಜು ಮಾಡಿದ್ದಾರೆ. ಈ ಅಂಕಿ–ಅಂಶಗಳು ಭಾರತೀಯ ಇತಿಹಾಸ ಶಾಸನಗಳ ಮೇಲೆ ಎಷ್ಟು ಮಟ್ಟಿಗೆ ಅವಲಂಬಿಸಿದೆಯೆಂಬುದನ್ನು ಪ್ರತಿಬಿಂಬಿಸುತ್ತದೆ. ಈ ಹಿನ್ನೆಲೆಯಲ್ಲಿ ಬಾದಾಮಿ ಚಲುಕ್ಯರ ಕಾಲದ ಕೃಷಿ ವ್ಯವಸ್ಥೆಯನ್ನು ಅರಿಯುವಲ್ಲಿ ಶಾಸನಾಧಾರಗಳ ಪ್ರಾಮುಖ್ಯ ವನ್ನು ಗುರುತಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಸುಮಾರು ಎರಡೂವರೆ ಶತಮಾನಗಳಷ್ಟು ಸುದೀರ್ಘಕಾಲ ಆಳ್ವಿಕೆ ನಡೆಸಿದ ಈ ರಾಜಮನೆತನದ ಅರಸರ, ಹಾಗೂ ಅವರ ಸಾಮಂತರ ಇತಿಹಾಸಕ್ಕೆ ಸಂಬಂಧಿಸಿದಂತೆ ಸುಮಾರು 380 ಶಾಸನಗಳು ದೊರೆತಿದ್ದು, ಸಾಹಿತ್ಯಿಕ ಆಧಾರಗಳು ಬಹುಮಟ್ಟಿಗೆ ವಿದೇಶಿ ಬರವಣಿಗೆಗೆ ಸೀಮಿತವಾಗಿರುವುದರಿಂದ ಚಲುಕ್ಯರ ಇತಿಹಾಸವನ್ನು ತಿಳಿಯುವಲ್ಲಿ ನಾವು ಹೆಚ್ಚಾಗಿ ಶಾಸನಗಳನ್ನು ಆಶ್ರಯಿಸಬೇಕಾಗಿದೆ. ಕರ್ನಾಟಕದಲ್ಲೇ ಚಲುಕ್ಯರಿಗೆ ಸಂಬಂಧಿಸಿದಂತೆ ಶೇಕಡ ಅರವತ್ತರಷ್ಟು ಶಾಸನಗಳು ದೊರತಿದ್ದು ಅವು ಕನ್ನಡ ಭಾಷೆಯ ಬೆಳವಣಿಗೆಯ ಮೇಲೆ 'ಕ್ಷ' ಕಿರಣವನ್ನು ಬೀರುತ್ತವೆ. ಶಾಸನಗಳು ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ವೈವಿಧ್ಯಮಯವಾದ ಅಂಶಗಳ ಆಗರವಾಗಿದ್ದು ಇವುಗಳ ಸಂಘಟಿತ ಅಧ್ಯಯನದಿಂದ ಆ ಕಾಲದ ಇತಿಹಾಸವನ್ನು ಸಮಗ್ರವಾಗಿ ನಿರೂಪಿಸಲು ಸಹಾಯಕ ವಾಗಿವೆ.

ಚಲುಕ್ಯರ ಶಾಸನಗಳು ಕೇವಲ ರಾಜಕೀಯ ಇತಿಹಾಸದ ರಚನೆಗೆ ಮಾತ್ರ ಸಹಕಾರಿಯಾಗಿರದೇ ಸಾಮಾಜಿಕ–ಆರ್ಥಿಕ ಇತಿಹಾಸದ ರಚನೆಯಲ್ಲೂ ಸಹಕಾರಿಯಾಗ ಬಲ್ಲವೆಂಬ ಅಂಶವನ್ನು ಹೆಚ್ಚಿನ ವಿದ್ವಾಂಸರು ಮನಗಾಣದಿರುವುದು ಸೋಜಿಗವೇ ಸರಿ !

ಈ ರಾಜಮನೆತನದ ಇತಿಹಾಸವನ್ನು ಆಳವಾಗಿ ಈಚೆಗೆ ಅಭ್ಯಸಿಸಿರುವ ಸಂಶೋಧಕ ದ್ವಯರಾದ ಡಿ.ಪಿ. ದೀಕ್ಷಿತ್[1] ಹಾಗೂ ಕೆ.ವಿ. ರಮೇಶ್[2] ಅವರುಗಳು ಚಲುಕ್ಯ ಶಾಸನಗಳು ಸಾಮಾಜಿಕ–ಆರ್ಥಿಕ ಇತಿಹಾಸದ ರಚನೆಗೆ ಪೂರಕವಾದ ಮಾಹಿತಿಗಳನ್ನು ಸಾಕಷ್ಟು ಒಳಗೊಂಡಿಲ್ಲವೆಂದು ಅಭಿಪ್ರಾಯಪಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಚಲುಕ್ಯ ಶಾಸನಗಳು ಸಾಕಷ್ಟು ಮಾಹಿತಿಗಳನ್ನು ಒದಗಿಸಿ ಮೇಲಿನ ವಿದ್ವಾಂಸರ ನಿಲುವನ್ನು ದೂರೀಕರಿಸುವಂತೆ ಪ್ರಚೋದಿಸುತ್ತವೆ.

ಚಲುಕ್ಯ ಶಾಸನಗಳಲ್ಲಿ ಹೆಚ್ಚಿನವು ದಾನ ಶಾಸನಗಳಾಗಿದ್ದು ರಾಜಮಹಾರಾಜರು ಸಾಮಂತರು, ಪುರಪ್ರಮುಖರು, ಅಧಿಕಾರಿಗಳು, ವ್ಯಾಪಾರಿ ಸಂಘಸಂಸ್ಥೆಗಳು ಬ್ರಾಹ್ಮಣರಿಗೆ, ದೇವಸ್ಥಾನಗಳಿಗೆ, ಅಗ್ರಹಾರಗಳಿಗೆ, ವಿದ್ಯಾಕೇಂದ್ರಗಳಿಗೆ, ಮಠಗಳಿಗೆ ಭೂಮಿಯನ್ನೋ ಇಲ್ಲವೇ ಕರ ಸಂಗ್ರಹಣಾ ಹಕ್ಕನ್ನೋ ದತ್ತಿಯಾಗಿ ನೀಡುತ್ತಿದ್ದು ಒಮ್ಮೊಮ್ಮೆ ನೇರವಾಗಿ ಕೆಲವೊಮ್ಮೆ ಪರೋಕ್ಷವಾಗಿ ಆ ಕಾಲದ ಕೃಷಿ, ಕೈಗಾರಿಕೆ, ವಾಣಿಜ್ಯಗಳೇ ಮುಂತಾದ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಯಥೇಚ್ಛವಾಗಿ ಮಾಹಿತಿಯನ್ನು ಒದಗಿಸುವಲ್ಲಿ ಸಫಲವಾಗಿವೆ. ಈ ಶಾಸನಗಳು ಚಲುಕ್ಯ ಸಾಮ್ರಾಜ್ಯದಲ್ಲಿದ್ದ ನೈಸರ್ಗಿಕ ಸಂಪತ್ತು, ನದಿ–ಪರ್ವತಗಳು, ಭೂಫಲವತ್ತತೆ, ಮಣ್ಣಿನಬಣ್ಣ, ಭೂಹಿಡುವಳಿ, ಭೂವರ್ಗೀಕರಣ, ಭೂಒಡೆತನ, ನೀರಾವರಿ, ಕೃಷಿ ಉತ್ಪನ್ನಗಳು, ಕೃಷಿ–ಕೈಗಾರಿಕೆ, ವಾಣಿಜ್ಯ, ತೆರಿಗೆ ನೀತಿ, ಕ್ಷಾಮ–ಡಾಮರ, ಕೃಷಿಕನ ಜೀವನಮಟ್ಟ ಮುಂತಾದವುಗಳಿಗೆ ಸಂಬಂಧಿಸಿದಂತೆ ಸಮೃದ್ಧ ಮಾಹಿತಿ ಒದಗಿಸುವುದರ ಮೂಲಕ ತಮ್ಮ ಪ್ರಾಮುಖ್ಯವನ್ನು ಎತ್ತಿ ತೋರಿಸುತ್ತವೆ.

ಚಲುಕ್ಯರ ಕಾಲದಲ್ಲಿ ಭೂಮಿಯನ್ನು ಅದರ ಮಣ್ಣಿನ ಗುಣ, ಬಣ್ಣ ಫಲವತ್ತತೆ, ನೀರಾವರಿ ಸೌಲಭ್ಯ ಹಾಗೂ ಉತ್ಪನ್ನ ಆಧಾರಗಳ ಮೇಲೆ ಐದು ವಿಧವಾಗಿ ವಿಭಜಿಸಲಾಗಿತ್ತು. ತರಿ, ಖುಷ್ಕಿ, ಕಾಡು, ತೋಟ ಹಾಗೂ ಗೋಮಾಳ ಇವುಗಳೇ ಆ ಐದು ವಿಧಗಳಾಗಿದ್ದು ಇದನ್ನು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಗೂಟಿ ತಾಲ್ಲೂಕಿನ ಚಿಟ್ಟಪಲ್ಲಿ ಶಾಸನವು[3] ಪುಷ್ಟೀಕರಿಸುತ್ತದೆ. ಈ ಶಾಸನವನ್ನು ವಿನಯಾದಿತ್ಯನ ಸಾಮಂತನೂ ಬಾಣರಸನ ಚಿಕ್ಕಪ್ಪನೂ ಆದ ವಿಕ್ರಮಾದಿತ್ಯನು ತಾಳೆರಿಯರ್ ಎಂಬುವವನಿಗೆ ನೀಡಿದ್ದು, ದಾನವು 25 ಮತ್ತರ್ ಕಪ್ಪುಮಣ್ಣಿನ (ಎರೆಕಾಡ್), 50 ಮತ್ತರ್ ಕೆಂಪು ಮಣ್ಣಿನ(ಕೆಂಗಾಡು), ಮೂವತ್ತಾರು ಮಡಿ ಕಾಡನ್ನು(ಮೂವತಾರ್ಮಡಿ ಕಾಡು), ಒಂದು ಮತ್ತರ್ ಖುಷ್ಕಿ ಭೂಮಿಯನ್ನು ಹಾಗೂ ಎರಡು ಮತ್ತರ್ ತೋಟವನ್ನು ಒಳಗೊಂಡಿತ್ತೆಂದು ತಿಳಿದುಬರುತ್ತದೆ. ಈ ಶಾಸನದಿಂದ ಚಲುಕ್ಯರ ಸಾಮ್ರಾಜ್ಯದಲ್ಲಿ ಭೂಮಿಯನ್ನು ಫಲವತ್ತತೆ, ಮಣ್ಣಿನ ಗುಣ–ಲಕ್ಷಣ, ನೀರಾವರಿ ಸೌಲಭ್ಯ ಹಾಗೂ ಬೆಳೆಯ ಆಧಾರದ ಮೇಲೆ ವಿಭಜಿಸಲಾಗುತ್ತಿತ್ತೆಂಬ ಅಂಶ ಬೆಳಕಿಗೆ ಬರುತ್ತದೆ. ಅಷ್ಟೇ ಅಲ್ಲದೆ ಈ ಅಂಶಗಳೇ ರಾಜನ ಭೂಕಂದಾಯದ ದರವನ್ನು ನಿರ್ಧರಿಸಿರುವ ಮಾನದಂಡವಾಗಿತ್ತೆಂಬ ಅಂಶವೂ ಗೋಚರಿಸುತ್ತದೆ.

ಈ ಕಾಲವು ದಕ್ಷಿಣ ಭಾರತದಲ್ಲಿ ಆರ್ಯೀಕರಣದ ಸಂಕ್ರಮಣದ ಕಾಲವಾಗಿದ್ದು[4] ವ್ಯವಸಾಯದ ವಿಸ್ತರಣೆಗೆ ಪ್ರೋತ್ಸಾಹದಾಯಕವಾಗಿತು. ಏರುತ್ತಿದ್ದ ಜನಸಂಖ್ಯೆ, ಪಲ್ಲವ-ಚಲುಕ್ಯರ ನಡುವಣ ನಿರಂತರ ಹೋರಾಟಗಳಿಗೆ ಪೂರಕವಾಗಿ ಕೃಷಿ ಉತ್ಪಾದನೆಯನ್ನು ಪರಿವರ್ತಿಸುವ ಸಲುವಾಗಿ ಕಾಡನ್ನು ನೆಲಸಮ ಮಾಡಿ ಭೂಮಿಯನ್ನು ಉಳುಮೆಗೆ ತರುವ ಕಾರ್ಯದಲ್ಲಿ ರಾಜರು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರೆಂಬುದಕ್ಕೆ ಪಲ್ಲವರ ಶಾಸನಗಳು ಸಾಕಷ್ಟು ಪುರಾವೆಗಳನ್ನು ಒದಗಿಸುತ್ತದೆ. ಇದಕ್ಕೆ ಪೂರಕವಾಗಿ ಪಲ್ಲವರ ಶಾಸನವೊಂದು[5] 1000 ನೇಗಿಲು ಹಾಗೂ ಸುವರ್ಣದ ವಿತರಣೆಯ ಬಗೆಗೆ ಹೇಳಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹಾಗೆಯೇ ಚಲುಕ್ಯರ ಚಿಟ್ಟಪ್ಪಲ್ಲಿ ಶಾಸನವು ಮೂವತ್ತಾರು ಮಡಿ ಕಾಡನ್ನು ದಾನವಾಗಿ ಕೊಟ್ಟಿರುವುದನ್ನು ಉಲ್ಲೇಖಿಸುತ್ತದೆ. ಇದು ಆ ಕಾಲದ ಕೃಷಿ ವಿಸ್ತರಣಾ ನೀತಿಗೆ ದ್ಯೋತಕವಾಗಿದೆ.

ಚಲುಕ್ಯ ಸಾಮ್ರಾಜ್ಯದಲ್ಲಿ ಬ್ರಹ್ಮದೇಯ, ದೇವದಾನ, ಅಗ್ರಹಾರ, ಮಠಪುರ, ಬಾಳ್ಗಚ್ಚು, ವೈಯುಕ್ತಿಕ ಹಿಡುವಳಿಗಳು ಪ್ರಚಲಿತದಲ್ಲಿದ್ದು ಇದನ್ನು ಕ್ರಮವಾಗಿ ಚಲುಕ್ಯರ ಸುಮಾರು 50 ಬ್ರಹ್ಮದೇಯ ಶಾಸನಗಳು,[6] 40 ದೇವದಾನ ದತ್ತಿಗಳು,[7] ನಾಲ್ಕಾರು ಮಠಪುರ ದತ್ತಿಗಳು[8] ಹಾಗೂ ಭೂಒಡೆತನವನ್ನು ಅನುಭವಿಸುತ್ತಿದ್ದ ಅನೇಕ ಕ್ಷೇತ್ರರಿದ್ದ 'ರಾಯತವಾರಿ' ಹಳ್ಳಿಗಳು ಸ್ಪಷ್ಟಪಡಿಸುತ್ತವೆ. ಇವಷ್ಟೆ ಅಲ್ಲದೆ ಅಧಿಕಾರಿಗಳ ವೇತನಗಳಿಗೆ ಬದಲಾಗಿ ಸೇವಾದತ್ತಿಗಳನ್ನು ನೀಡಲಾಗುತ್ತಿತ್ತು. ವೀರರ ಶೌರ್ಯ-ಪರಾಕ್ರಮವನ್ನು ಮೆಚ್ಚಿ ಪ್ರಶಂಸಿಸಿ ನೀಡುತ್ತಿದ್ದ ಬಾಳ್ಗಚ್ಚು, ನೆತ್ತರು ಕೊಡುಗೆಯ ಮಾದರಿಯ ಭೂಹಿಡುವಳಿ[9] ಸಹ ಚಾಲ್ತಿಯಲ್ಲಿತ್ತು. ಈ ಶಾಸನಗಳು ಚಲುಕ್ಯರ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಧೋರಣೆಯ ಬಗೆಗೆ ಪರೋಕ್ಷವಾಗಿ ಮಾಹಿತಿಗಳನ್ನು ಒದಗಿಸುತ್ತವೆ.

ಚಲುಕ್ಯರ ಶಾಸನಗಳಲ್ಲಿ ಭೂ ಅಳತೆಗೆ ಸಂಬಂಧಿಸಿದಂತೆ 'ರಾಜಮಾನ' ಎಂಬ ಪದ ಪದೇ ಪದೇ ಉಲ್ಲೇಖಿಸಲ್ಪಟ್ಟಿದೆ. ಇದು ಭೂಮಿಯನ್ನು ಅಳೆಯುವ ಅಳತೆಗೋಲಾಗಿದ್ದು ರಾಜನಿಂದ ಮಾನ್ಯತೆ ಪಡೆದಿತ್ತು. ದತ್ತಿಯನ್ನು ನೀಡುವ ಮೊದಲು ಭೂಮಿಯನ್ನು ಈ ದಂಡದಿಂದ ಅಳೆಯಲಾಗುತ್ತಿತ್ತು ಎಂಬ ಅಂಶವನ್ನು ಶಾಸನಗಳಲ್ಲಿ ಕಂಡುಬರುವ 'ರಾಜಮಾನೇನ' ಎಂಬ ಪದದಿಂದ ಅರಿಯಬಹುದಾಗಿದೆ. ಇದಕ್ಕೆ ಪೂರಕವಾಗಿ ಇಮ್ಮಡಿ ವಿಕ್ರಮಾದಿತ್ಯನ ತಿಪ್ಪಲೂರು ಶಿಲಾಶಾಸನವು ಪನ್ನಾಸವಾಗಿ ಭೂಮಿದಾನ ಮಾಡುವ ಮುನ್ನ ಅದನ್ನು ಅಳೆದ ಐದು ಮಂದಿಯನ್ನು ಹೆಸರಿಸಿರುವುದು ಮಹತ್ವದ ಸಂಗತಿಯಾಗಿದೆ.[10] ಚಲುಕ್ಯರ ಕಾಲದಲ್ಲಿ ಭೂಮಿಯನ್ನು ಅಳೆಯಲು ಅಳತೆಗೋಲು ಉಪಯೋಗಿಸುತ್ತಿದ್ದರು ಎಂಬುದನ್ನು ಕುರುಗೋಡಿನ[11] ಚಲುಕ್ಯ ಶಾಸನವೊಂದು ಪುಷ್ಟೀಕರಿಸುತ್ತದೆ. ಈ ಶಾಸನ ಕುರುಗೋಡಿನ ಜನತೆಯನ್ನು 18 ಗೇಣಿನ ಅಳತೆಗೋಲನ್ನು ಹಾಗೂ ಸವಿಲು ಪೊನ್ನನ್ನು ಉಪಯೋಗಿಸುವಂತೆ ಒತ್ತಾಯಪಡಿಸುತ್ತದೆ. ಈ ಶಾಸನವನ್ನು ಲಿಪ್ಯಾಧಾರದ ಮೇಲೆ ವಿದ್ವಾಂಸರು ಇಮ್ಮಡಿ ಪುಲಿಕೇಶಿಯ

ಶಾಸನವೆಂದು ನಿರ್ಧರಿಸಿದ್ದಾರೆ. ಮೇಲ್ಮುಖದಲ್ಲಿ ನವಿಲು ಹಿಮ್ಮೊಗದಲ್ಲಿ 'ವಿಕ್ರ' ಎಂಬ ಅಂಕಿತವುಳ್ಳ ಸುವರ್ಣ ನಾಣ್ಯವೊಂದು ದೊರೆತಿದ್ದು ಇದನ್ನು ವಿದ್ವಾಂಸರು ಒಂದನೇ ವಿಕ್ರಮಾದಿತ್ಯನದೆಂದು ಗುರುತಿಸಿದ್ದಾರೆ. ಇದರ ಹಿನ್ನೆಲೆಯಲ್ಲಿ ಮೇಲೆ ಹೇಳಿರುವ ಕುರುಗೋಡಿನ ಶಾಸನದಲ್ಲಿ 'ನವಿಲು ಪೊನ್ನ'ನ ಉಲ್ಲೇಖವಿರುವುದರಿಂದ ಈ ಶಾಸನವನ್ನು ಒಂದನೇ ವಿಕ್ರಮಾದಿತ್ಯನ ಆಳ್ವಿಕೆಗೆ ಸೇರಿದ್ದೆಂದು ಅಭಿಪ್ರಾಯಪಡಬಹುದಾಗಿದೆ. ಈ ಶಾಸನಾಧಾರಗಳ ಮೇಲೆ ಭೂಮಿಯನ್ನು ನಿರ್ದಿಷ್ಟವಾದ ಅಳತೆಗೋಲಿನಿಂದ ಅಳೆಯಲಾಗುತ್ತಿತ್ತು ಹಾಗೂ ಅಳೆಯಲು ಗೊತ್ತಾದ ಸಿಬ್ಬಂದಿವರ್ಗವಿತ್ತೆಂದು ಅಭಿಪ್ರಾಯಪಡಬಹುದಾಗಿದೆ.

ಭೂಮಿಯ ಗಾತ್ರ-ವಿಸ್ತಾರವನ್ನು ಸೂಚಿಸಲು ಶಾಸನಗಳಲ್ಲಿ ನಿವರ್ತನ, ಮತ್ತರ್ ಮಡಿ, ವೀಸ, ಕೂರಿಗೆ, ಖಂಡುಗ ಮುಂತಾದ ಶಬ್ದಗಳನ್ನು ಉಪಯೋಗಿಸಲಾಗಿದೆ. ಹಾಗೆಯೇ ಪನ್ನಾಸ, ಪನ್ನಾವೀಸ, ವೀಸ ಎಂಬ ಪದಗಳು ಸಹ ಅಪರೂಪಕ್ಕೊಮ್ಮೆ ಉಪಯೋಗಿಸಿರುವುದುಂಟು. ಇವುಗಳ ಗಾತ್ರಕ್ಕೆ ಸಂಬಂಧಿಸಿದಂತೆ ನಿಖರವಾದ ಮಾಹಿತಿ ದೊರಕಿಲ್ಲವಾದುದರಿಂದ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಆದರೂ ನಿವರ್ತನ ಇಂದಿನ ಐದು ಎಕರೆಗೂ ಹಾಗೂ ಮತ್ತರು ಇಂದಿನ ನಾಲ್ಕು ಎಕರೆಗೂ ಸಮವೆಂದು ಕ್ರಮವಾಗಿ ಆಲ್ತೇಕರ್[12] ಹಾಗೂ ಸಂಗಿಮಠ[13] ಅಭಿಪ್ರಾಯಪಡುತ್ತಾರೆ. ಶಾಸನಗಳಲ್ಲಿ ಒಮ್ಮೆಗೆ ನೂರಾರು ನಿವರ್ತನಗಳ ದಾನದ ಬಗ್ಗೆ ಉಲ್ಲೇಖವಿರುವುದರಿಂದ ಈ ಮೇಲಿನ ಅಭಿಪ್ರಾಯವನ್ನು ಸ್ವೀಕರಿಸಲು ಬರುವುದಿಲ್ಲ. ಇನ್ನು ಪನ್ನಾಸ, ಪನ್ನಾವೀಸ, ವೀಸಗಳು ಸಂಸ್ಕೃತದ ಪಂಚಾಶತ್, ಪಂಚವಿಂಶತಿ ಹಾಗೂ ವಿಂಶತಿಗಳ ಕನ್ನಡ ರೂಪವೆಂದು ಅನೇಕ ವಿದ್ವಾಂಸರು[14] ಸೂಚಿಸಿದ್ದು ಔಚಿತ್ಯಪೂರ್ಣವಾಗಿದೆ. ಕೂರಿಗೆ, ಖಂಡುಗಗಳು ಬಿತ್ತನೆಯ ಸಾಮರ್ಥ್ಯವನ್ನು ಸೂಚಿಸುವುದಿದ್ದು ಅದರ ಆಧಾರದ ಮೇಲೂ ಸಹ ಜಮೀನಿನ ಗಾತ್ರವನ್ನು ಸೂಚಿಸಲಾಗುತ್ತಿತ್ತೆಂಬುದನ್ನು ವ್ಯಕ್ತಪಡಿಸುತ್ತವೆ.

ಭೂಒಡೆತನ ಬೇಸಾಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕೃಷಿಯ ಏಳ್ಗೆ ಭೂ ಒಡೆತನದ ಮೇಲೆ ನಿಂತಿದೆ. ಪ್ರಾಚೀನ ಕಾಲದಿಂದಲೂ ಭೂಒಡೆತನ ವಾದ-ವಿವಾದಗಳ ಸುಳಿಯಲ್ಲಿ ಸಿಲುಕಿ ಚರ್ಚೆಗೆ ಎಡೆಮಾಡಿಕೊಟ್ಟಿದೆ. ಭೂಒಡೆತನ ರಾಜನ ಏಕಸ್ವಾಮ್ಯ ಹಕ್ಕಾಗಿತ್ತೇ ಇಲ್ಲ ತನ್ನ ಬೆವರನ್ನು ಸುರಿಸಿ ಬೆಳೆ ತೆಗೆಯುತ್ತಿದ್ದ ಮಣ್ಣಿನ ಮಗನೇ ಒಡೆಯನಾಗಿದ್ದನೇ ಎಂಬ ಸಮಸ್ಯೆಯನ್ನು ಸಾಕಷ್ಟು ವಿದ್ವಾಂಸರು ಸುದೀರ್ಘವಾಗಿ ಚರ್ಚಿಸಿದ್ದು ವಿಭಿನ್ನ ಅಭಿಪ್ರಾಯ ತಳೆದಿದ್ದಾರೆ. ಭೂಒಡೆತನ ರಾಜನ ಏಕಸ್ವಾಮ್ಯ ಹಕ್ಕಾಗಿತ್ತು ಎಂದು ಹೇಳುವ ಅನೇಕ ಬ್ರಿಟಿಷ್ ವಸಹಾತುಶಾಹಿ ವಿದ್ವಾಂಸರಲ್ಲಿ ವಿ.ಎ. ಸ್ಮಿತ್[15] ಪ್ರಮುಖರು. ಆದರೆ ಭಾರತೀಯ ಧರ್ಮಶಾಸ್ತ್ರಗಳು ಇದಕ್ಕೆ ವಿರುದ್ಧವಾಗಿ ವ್ಯಕ್ತಿಗತ ಭೂಒಡೆತನ ಹಿಂದಿನಿಂದಲೂ ಅಸ್ತಿತ್ವದಲ್ಲಿತ್ತೆಂದು ಘೋಷಿಸುತ್ತವೆ. ಈ ಧೋರಣೆಯನ್ನು ಪ್ರತಿಪಾದಿಸಿದ ಭಾರತೀಯ ವಿದ್ವಾಂಸರಲ್ಲಿ ಕೆ.ಪಿ. ಜಯಸ್ವಾಲ್[16] ಅಗ್ರಗಣ್ಯರು. ಇದಕ್ಕೆ ಪೂರಕವಾಗಿ ಚಲುಕ್ಯ ಶಾಸನಗಳು ಕೂಡ ಭೂಮಿಯ

ಮೇಲಿನ ರೈತನ ಒಡೆತನದ ಹಕ್ಕನ್ನು ಪುಷ್ಟೀಕರಿಸುತ್ತವೆ. ಇಮ್ಮಡಿ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ ಪಟ್ಟದಕಲ್ಲಿನ ಸ್ತಂಭಶಾಸನವು[17] ಆರ್ಯಭಟ್ಟ ಗಂಗಾಧರನ ಮಗನು ತನ್ನ ಮಾತಾಪಿತೃಗಳ ಧಾರ್ಮಿಕ ಶ್ರೇಯಸ್ಸಿಗೆ ಹಾಗೂ ತನ್ನ ಏಳ್ಗೆಗಾಗಿ ಬೆಳವೊಲದ ವಿಷಯದ ಅರಪುಣಸೆ ಗ್ರಾಮದಲ್ಲಿ ಮೂವತ್ತು ನಿವರ್ತನ ಭೂಮಿಯನ್ನು ಮೂವತ್ತು ಗದ್ಯಾಣಗಳಿಗೆ ಖರೀದಿಸಿ ದೇವರಿಗೆ ದಾನ ಮಾಡಿದನೆಂದು ತಿಳಿಸುತ್ತದೆ. ಈ ಶಾಸನವು ಜಮೀನಿನ ಮೌಲ್ಯವನ್ನು ತಿಳಿಸಿದ್ದು, ಅದು ನಿವರ್ತನ ಒಂದಕ್ಕೆ ಒಂದು ಗದ್ಯಾಣವಾಗಿದ್ದು ಅಷ್ಟೇನೂ ದುಬಾರಿಯಾಗಿದ್ದಿಲ್ಲವೆಂದು ಸೂಚಿಸುತ್ತದೆ. ಹಾಗೆಯೇ ಚಲುಕ್ಯ ಸಾಮಂತ ಸೇಂದ್ರಕ ಭೋಜಶಕ್ತಿಯ ಅಂಜನೇರಿ ತಾಮ್ರ ಶಾಸನವು[18] ರಾಜ ತೇಜವರ್ಮನು ಜಯಪುರದ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಉಚಿತ ಗೋಮಾಳವನ್ನಾಗಿ ಪರಿವರ್ತಿಸಿ ಅದರ ಪರಿಹಾರಾರ್ಥವಾಗಿ ನೂರು ರೂಪಾಯಿಗಳನ್ನು ನಗರದ ವರ್ತಕ ಶ್ರೇಣಿಗೆ ಸಲ್ಲಿಸಿ ಆ ಹಣದಿಂದ ಬರುವ ಬಡ್ಡಿಯನ್ನು ದೇವರ ದೈನಂದಿನ ಪ್ರಸಾದ ಸೇವೆಗೆ ವಿನಿಯೋಗಿಸಬೇಕೆಂದು ಅಪೇಕ್ಷಿಸಿದ್ದನ್ನು ತಿಳಿಸುತ್ತದೆ. ಯಾವುದೇ ಸಮಾಜದಲ್ಲಿ ಭೂಒಡೆತನ ಅಸ್ತಿತ್ವದಲ್ಲಿ ಇರದಿದ್ದಲ್ಲಿ ಭೂಮಿಯ ಕೊಂಡು-ಕೊಳ್ಳುವ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ. ಇದರ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಚಲುಕ್ಯ ಸಾಮ್ರಾಜ್ಯದಲ್ಲಿ ಭೂಒಡೆತನದ ಹಕ್ಕನ್ನು ರೈತನು ಅನುಭವಿಸುತ್ತಿದ್ದನೆಂಬ ಅಂಶ ಗೋಚರಿಸುತ್ತದೆ.

ಕಾಡಿನ ಮೇಲೂ ಸಹ ರಾಜ ಸಂಪೂರ್ಣ ಒಡೆತನದ ಸ್ವಾಮ್ಯವನ್ನು ಹೊಂದಿದ್ದನೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಹಿಂದೂ ಧರ್ಮಶಾಸ್ತ್ರಗಳು ಇದನ್ನು ವಿರೋಧಿಸುತ್ತವೆ. ಹಾಗಿದ್ದಾಗ್ಯೂ ಕಾಡಿನ ಮೇಲೆ ರಾಜನು ಏಕಸ್ವಾಮ್ಯ ಹಕ್ಕನ್ನು ಪಡೆದಿದ್ದನೆಂದು ಹೆಚ್ಚು ಪಂಡಿತರು ಒಪ್ಪಿದ್ದಾರೆ.[19] ಮನುಧರ್ಮಶಾಸ್ತ್ರ,[20] ಮಿಳಿಂದಪಣ್ಣ,[21] ಮಹಾಭಾರತ,[22] ಜಗನ್ನಾಥ ಹಾಗೂ ಜೈಮಿನಿ,[23] ಮುಂತಾದ ಸ್ಮೃತಿ-ಶಾಸ್ತ್ರ ಬರಹಗಾರರೂ ಇದನ್ನು ವಿರೋಧಿಸಿ "ಜಿಂಕೆಯನ್ನು ಯಾರು ಮೊದಲು ಕೊಲ್ಲುವರೋ, ಕಾಡನ್ನು ಮೊದಲು ಯಾರು ತೆರವು ಮಾಡುತ್ತಾರೋ ಅವರೇ ಅದರ ಮಾಲೀಕರು"[24] ಎಂದು ಪ್ರತಿಪಾದಿಸಿದ್ದಾರೆ. ಇದರ ಹಿನ್ನೆಲೆಯಲ್ಲಿ ವೀಕ್ಷಿಸಿದಾಗ ರಾಜನಿಗೆ ಕಾಡಿನ ಮೇಲೆ ಏಕಸ್ವಾಮ್ಯ ಹಕ್ಕಿರಲಿಲ್ಲವೆಂದು ತೋರುತ್ತದೆ. ಅವನು ಕೇವಲ ಅದರ ರಕ್ಷಕನಾಗಿದ್ದು ಕಾಡನ್ನು ಸಂಪೂರ್ಣ ನಾಶಮಾಡದಂತೆ ರಕ್ಷಿಸಿಕೊಂಡು ಅಗತ್ಯಬಿದ್ದಲ್ಲಿ ಅಲ್ಪ-ಸ್ವಲ್ಪ ಕಾಡನ್ನು ಸಮಾಜದ ಏಳ್ಗೆಗಾಗಿ ಕಡಿಯಲು ಅನುಮತಿಸುತ್ತಿದ್ದಂತೆ ಕಾಣುತ್ತದೆ. ಆದುದರಿಂದ ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆ ಸ್ವೇಚ್ಛೆಯಿಂದ ಕಾಡನ್ನು ಕಡಿದು ಜಮೀನನ್ನು ಉಳುಮೆಗೆ ತಂದಾಗ ರಾಜನು ಅದರ ಮೇಲೆ ಸಂಬಂಧಪಟ್ಟ ವ್ಯಕ್ತಿ ಅಥವಾ ಸಂಘ-ಸಂಸ್ಥೆಯ ಹಕ್ಕನ್ನು ಒಪ್ಪಿಕೊಳ್ಳುತ್ತಿದ್ದುದು ತಾನು ಕಾಡಿನ ಒಡೆಯನೆಂಬ ದೃಷ್ಟಿಯಿಂದಾಗಿರದೆ ಇತರರು ಆ ವ್ಯಕ್ತಿ ಇಲ್ಲವೇ ಸಂಘ-ಸಂಸ್ಥೆಯ ಶ್ರಮದ ಫಲವನ್ನು ದುರುಪಯೋಗಪಡಿಸಿಕೊಳ್ಳದಿರಲಿ ಎಂಬ ಕಾರಣಕ್ಕಾಗಿ ಎಂದು ವಿಶ್ಲೇಷಿಸಬಹುದಾಗಿದೆ.[25]

ಕೃಷಿಗೆ ಭೂಮಿಯಷ್ಟೆ ಅವಶ್ಯಕವಾದುದು ನೀರು. ಕೃಷಿಯ ಪ್ರಗತಿ ನೀರಾವರಿಯನ್ನು ಅವಲಂಬಿಸಿದೆ. ಕೆರೆ–ಕಾಲುವೆ, ಬಾವಿಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಿ ಕೃಷಿ ಉತ್ಪನ್ನವನ್ನು ಇಮ್ಮಡಿಗೊಳಿಸುವ ಕಲೆ ಬೃಹತ್ ಶಿಲಾಯುಗದ ಮಾನವನಷ್ಟೆ ಪ್ರಾಚೀನವಾದುದು. ಈ ದಿಸೆಯಲ್ಲಿ ಚಲುಕ್ಯ ಶಾಸನಗಳು ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಇಮ್ಮಡಿ ಪುಲಿಕೇಶಿಯ ಮೂಡಲಿಂಬ ತಾಮ್ರ ಶಾಸನವು[26] ಕೆರೆಯನ್ನು ನಿರ್ಮಿಸಲೆಂದೇ ಬ್ರಾಹ್ಮಣನೋರ್ವನಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಹಾಗೆಯೇ ಇತ್ತೀಚೆಗೆ ಬೆಳಕಿಗೆ ಬಂದ ಆಲಂಪುರದ ಬಾಲಬ್ರಹ್ಮ ದೇವಸ್ಥಾನದ ಸ್ತಂಭದ ಮೇಲಿರುವ ವಿಜಯಾದಿತ್ಯನ ಪ್ರಶಸ್ತಿಯು[27] ಬಹಳ ಸುದೀರ್ಘವಾಗಿದ್ದು ಕರ್ನಾಟಕದ ಹಾಥಿಗುಂಪ ಶಾಸನವೆಂದರೆ ಉತ್ಪ್ರೇಕ್ಷೆಯಾಗಲಾರದು. ಈ ಪ್ರಶಸ್ತಿಯು ಖಾರವೇಲನ ಹಾಥಿಗುಂಪ ಶಾಸನದಂತೆ ವಿಜಯಾದಿತ್ಯನ ಬಾಲ್ಯ, ಯೌವನ, ಯೌವರಾಜತ್ವ ಹಾಗೂ ಅವನ ಆಳ್ವಿಕೆಗೆ ಸಂಬಂಧಿಸಿದಂತೆ ಮಹತ್ತರವಾದ ಅಂಶಗಳನ್ನು ಹೊರಪಡಿಸುತ್ತದೆ. ಈ ಶಾಸನವು ವಿಜಯಾದಿತ್ಯನನ್ನು ಪ್ರಶಂಸಿಸುತ್ತಾ ಸಾಮ್ರಾಜ್ಯದ ಎಲ್ಲೆಡೆಗಳಲ್ಲೂ ಕೆರೆಗಳನ್ನು ನಿರ್ಮಿಸಿದ್ದನೆಂದು ಹೇಳುತ್ತದೆ. (ತಟಾಕ ಬಹವಸ್ತೇನ ದೇಸೇದೇಸೇ ಚ ಕಾರಿತಃ). ಚಲುಕ್ಯ ಸಾಮ್ರಾಜ್ಯವು ಕೆರೆ–ಕಟ್ಟೆ–ಬಾವಿಗಳಿಂದ ಸಮೃದ್ಧವಾಗಿತ್ತೆಂದು ಅನೇಕ ಶಾಸನಗಳು ಅನುಮೋದಿಸುತ್ತವೆ. ಶಿಗ್ಗಾಂವ್ ತಾಮ್ರ ಶಾಸನವು[28] ಕುಂಕುಮ ದೇವಿಯು ಗುಡಿಗೆರೆಯಲ್ಲಿ ನಿರ್ಮಿಸಿದ್ದ ಜೈನ ಬಸದಿಗೆ ನೀಡಿರುವ ದತ್ತಿಯ ಎಲ್ಲೆಯನ್ನು ಸೂಚಿಸುತ್ತ ಸುಮಾರು ಹದಿನಾಲ್ಕು ತಟಾಕಗಳನ್ನು ಹೆಸರಿಸುತ್ತದೆ. ಇಮ್ಮಡಿ ವಿಕ್ರಮಾದಿತ್ಯನ ಗುಡಗುಡಿ ಶಾಸನವು[29] ಕೆರೆಯ ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತದೆ. ಒಂದನೇ ಪುಲಿಕೇಶಿಯ ತ್ರುಟಿತ ಆಸ್ತಿಂ ಶಾಸನವು[30] ನಾಲ್ಕಾರು ತಟಾಕಗಳನ್ನು ಹೆಸರಿಸುತ್ತದೆ. ಸಾಮಂತ ಭೋಜಶಕ್ತಿಯ ಅಂಜನೇರಿ ತಾಮ್ರಪಟವು[31] ಭೋಗಶಕ್ತಿಯನ್ನು ದೇವಸ್ಥಾನಗಳ ದುರಸ್ತಿ, ಕೆರೆಗಳ ನಿರ್ಮಾಣ ಮುಂತಾದ ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದುದಕ್ಕಾಗಿ ಬಹುವಾಗಿ ಕೊಂಡಾಡುತ್ತದೆ. ವಿಜಯಾದಿತ್ಯನ ಚಿಪ್ಪಗೇರಿ ಶಾಸನವು[32] ಆರು ಮತ್ತರ್ ಜಮೀನನ್ನು, ಕೆರೆ, ಬಾವಿಯನ್ನೂ ದತ್ತಿಯಾಗಿ ದೇವಸ್ಥಾನಕ್ಕೆ ನೀಡಿದ್ದನ್ನು ಪ್ರಕಟಿಸುತ್ತದೆ. ಈ ಎಲ್ಲಾ ಶಾಸನಗಳು ಚಲುಕ್ಯ ಸಾಮ್ರಾಜ್ಯದಲ್ಲಿದ್ದ ನೀರಾವರಿ ಸೌಲಭ್ಯ ಹಾಗೂ ಅದರ ಸೂಕ್ತ ಪ್ರಯೋಜನದ ಬಗೆಗೆ ಮಾಹಿತಿಯನ್ನು ಒದಗಿಸುತ್ತವೆ.

ಚಲುಕ್ಯರ ಕಾಲದಲ್ಲಿ ಚಾಲ್ತಿಯಲ್ಲಿದ್ದ ಕೃಷಿ ಉಪಕರಣಗಳಾವುವು ಎಂಬುವಕ್ಕೂ ಶಾಸನಗಳು ಉತ್ತರಿಸುತ್ತವೆ. ಚಲುಕ್ಯ ಶಾಸನಗಳು ಮೆಂಡಿ, ನೇಗಿಲು, ಕುಡುಗೋಲು, ಕೊಡಲಿ ಮುಂತಾದುವುಗಳ ಬಗೆಗೆ ಉಲ್ಲೇಖಿಸುತ್ತವೆ.

ಚಲುಕ್ಯ ಶಾಸನಗಳು ಕೃಷಿ ಉತ್ಪನ್ನಗಳ ಬಗೆಗೆ ಮಹತ್ತರವಾದ ಸಂಗತಿಗಳನ್ನು ಒದಗಿಸುತ್ತವೆ. ಕೃಷಿ ಉತ್ಪನ್ನಗಳಾದ ಬತ್ತ,[33] ಜೋಳ,[34] ರಾಗಿ,[35] ಗೋಧಿ[36], ಮುಂತಾದ ದವಸ ಧಾನ್ಯಗಳು, ಮಾವು,[37] ಹಲಸು,[38] ಹುಣಸೆ,[39] ದಾಳಿಂಬೆ[40],

ಖರ್ಜೂರ[41], ತೆಂಗು[42] ಮುಂತಾದ ಫಲಗಳನ್ನು ಉಲ್ಲೇಖಿಸುತ್ತವೆ. ಹತ್ತಿ ಬೆಳೆ ಹಾಗೂ ಅದರ ಸಿದ್ಧಪಡಿಸಿದ ವಸ್ತುಗಳಿಗೆ ಚಲುಕ್ಯ ಸಾಮ್ರಾಜ್ಯ ಪ್ರಸಿದ್ಧವಾಗಿದ್ದಿತು. ಹತ್ತಿಯ ಬಗೆಗೆ ಶಾಸನಗಳು ಮೌನದಿಂದ ಇರುವುದು ಆಶ್ಚರ್ಯವೇ ಸರಿ. ಒಂದನೇ ಪುಲಿಕೇಶಿಯ ಆಲ್ತೆಂ ತ್ರುಟಿತ ತಾಮ್ರ ಶಾಸನವು[43] ಪ್ರಥಮ ಬಾರಿಗೆ ರಾಗಿ ಮತ್ತು ಗೋಧಿಯನ್ನು ಉಲ್ಲೇಖಿಸುತ್ತದೆ. ಈ ಶಾಸನವನ್ನು ಲಿಪ್ಯಾಧಾರದ ಮೇಲೆ 10–11ನೇ ಶತಮಾನಕ್ಕೆ ಸೇರಿದ್ದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಈ ಶಾಸನದ ತೇದಿಯು ಶಕ 411 ಎಂದು ನಮೂದಿಸಲಾಗಿದೆ. ಆದುದರಿಂದ ಶಾಸನತಜ್ಞರು ಇದನ್ನು ತ್ರುಟಿತವೆಂದು ತೀರ್ಮಾನಿಸಿದ್ದಾರೆ. ಆದರೆ ಅದರಲ್ಲಿ ಉಕ್ತವಾಗಿರುವ ಐತಿಹಾಸಿಕ ಅಂಶಗಳನ್ನು ಒಂದನೇ ಪುಲಿಕೇಶಿಯ ಕಾಲಕ್ಕೆ ಸಂಬಂಧಿಸಿದ್ದೆಂದು ಸ್ವೀಕರಿಸುವುದಾದರೆ ರಾಗಿ ಹಾಗೂ ಗೋಧಿಯನ್ನು ಉಲ್ಲೇಖಿಸಿರುವ ಪ್ರಾಚೀನತಮ ಶಾಸನವಾಗುವುದಿದ್ದು ರಾಗಿ ಮತ್ತು ಗೋಧಿಯ ಪ್ರಾಚೀನತೆಯನ್ನು ಆಧಾರಪೂರಕವಾಗಿ 5ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ.

ಚಲುಕ್ಯ ಶಾಸನಗಳು ಕೃಷಿ ಕೈಗಾರಿಕೆ, ವಾಣಿಜ್ಯೋದ್ಯಮ, ವಣಿಕ ಸಂಘಗಳಿಗೆ ಸೇರಿದಂತೆ ಪ್ರಮುಖ ಅಂಶಗಳನ್ನು ಅರುಹುತ್ತವೆ. ನೇಯುವುದು[44], ಎಣ್ಣೆಗಾಣ[45], ಕಬ್ಬಿನ ಗಾಣಗಳು[46] ಕಾರ್ಯ ನಿರ್ವಹಿಸುತ್ತಿದ್ದವೆಂದು ಶಾಸನಗಳು ವಿವರಿಸುತ್ತವೆ. ಐಹೊಳೆ ಶಾಸನ ಐಹೊಳೆ 500 ವಣಿಕ ಸಂಘದ ಬಗೆಗೆ ಹೇಳುತ್ತದೆ. ಹಾಗೆಯೇ ಸೇಂದ್ರಕ ಭೋಜಶಕ್ತಿಯ ಅಂಜನೇರಿ ತಾಮ್ರ ಶಾಸನ[47] ವಣಿಕ ಶ್ರೇಣಿಯ ಕಾರ್ಯದ ಬಗೆಗೆ ಮಾತನಾಡುತ್ತದೆ. ವಾಣಿಜ್ಯಕ್ಕೆ ಸಂಬಂಧಿಸಿದಂತೆ ಕೆ.ವಿ. ರಮೇಶ್[48] ಅವರು ಪರಿಷ್ಕರಿಸಿರುವ ಶಾಸನವೊಂದು ಅಂಗೀಕೃತವಾದಲ್ಲಿ ನೂತನ ಅಂಶಗಳನ್ನು ನಿವೇದಿಸುತ್ತದೆ.

ಸರ್ಕಾರದ ಭೂ ತೆರಿಗೆ ನೀತಿ, ಸಂಗ್ರಹಣೆ, ವಿತರಣೆಗಳಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಉಲ್ಲೇಖಗಳಿದ್ದರೂ ಅಸ್ಪಷ್ಟತೆಯಿಂದಾಗಿ ಮತ್ತು ಆ ಪದಗಳು ಇಂದು ಬಳಕೆಯಲ್ಲಿ ಇಲ್ಲದಿರುವುದರಿಂದ ಅವುಗಳನ್ನು ಅರ್ಥೈಸುವುದು ಕ್ಲಿಷ್ಟವಾಗಿದೆ. ಚಲುಕ್ಯ ಶಾಸನಗಳಲ್ಲಿ ರೈತನ ಕೃಷಿ ಉತ್ಪನ್ನದಲ್ಲಿ ರಾಜ್ಯದ ಪಾಲೇನು ಎಂಬುದರ ಬಗ್ಗೆ ಖಚಿತವಾದ ಉಲ್ಲೇಖವಿಲ್ಲ. ಆದರೂ ಹಲವಾರು ತೆರಿಗೆಗಳ ಬಗೆಗೆ ಉಲ್ಲೇಖಿಸುತ್ತವೆ. ಪೊಗ್ ತೆರೆ,[49] ಭೋಗ, ಕರ, ಉಪರಿಕರ, ಪರಿಕರ ಹಾಗೂ ಉಪ್ಪಿನ ಸುಂಕ,[50] ಉದ್ರಂಗ,[51] ಪೆರಿಯ ಒಸಕ,[52] ಅರುಹಣ,[53] ಸುಂಕ,[54] ಜನನ–ಮುಂಜಿ–ಮದುವೆ ತೆರಿಗೆ,[55] ಊಂಭವೃತ್ತಿ,[56] ಪಡ್ಡರಾಹುಲ[57] ಮುಂತಾದವುಗಳ ಉಲ್ಲೇಖವಿದೆ. ಆದರೂ ಇವುಗಳ ಕಾರ್ಯಾರ್ಥಗಳ ವ್ಯಾಪ್ತಿಯ ಬಗೆಗೆ ವಿವರಗಳು ದೊರೆತಿಲ್ಲ. ಶಾಸನಗಳ ಪುನರ್ ಪರಿಶೀಲನೆ ಇದನ್ನು ಪರಿಹರಿಸಬಹುದೇನೋ ?

ಚಲುಕ್ಯರ ಆಳ್ವಿಕೆಯಲ್ಲಿ ಕೃಷಿಕನ ಜೀವನಮಟ್ಟ ಹೇಗಿತ್ತು ? ಅತಿಯಾದ ತೆರಿಗೆ ಹೊರೆಯಿಂದ ರೈತನ ಜೀವನ ಅಧೋಗತಿಗಿಳಿದಿತ್ತೆ ಇಲ್ಲ ರಾಜರ ಉದಾರ ತೆರಿಗೆ ನೀತಿ

ಯಿಂದಾಗಿ ರೈತರು ಸಂತೃಪ್ತ ಜೀವಿಗಳಾಗಿದ್ದರೆ ಎಂಬುದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಸಾಮ್ರಾಜ್ಯವು ಕ್ಷಾಮ-ಡಾಮರಗಳಿಗೆ ತುತ್ತಾದಾಗ ರಾಜನು ಪ್ರಜೆಗಳ ನೆರವಿಗೆ ಧಾವಿಸುತ್ತಿದ್ದನೊ ಇಲ್ಲ ತಟಸ್ಥನಾಗಿರುತ್ತಿದ್ದನೊ ಎಂಬುದರ ಬಗೆಗೆ ಶಾಸನಗಳು ಮೌನದಿಂದಿವೆ. ಆಧಾರಗಳ ಗೈರುಹಾಜರಿಯಲ್ಲಿ ಇವುಗಳ ಬಗ್ಗೆ ಏನನ್ನು ಹೇಳಲು ಬರುವುದಿಲ್ಲ. ಆದರೂ ಮುಂದೆ ದೊರಕಬಹುದಾದ ಶಾಸನಗಳು ಇದರ ಬಗೆಗೆ ಮಾಹಿತಿಯನ್ನು ಒದಗಿಸಿಕೊಡಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಚಲುಕ್ಯರ ಶಾಸನಗಳು ರಾಜನ ಔದಾರ್ಯದ ಬಗೆಗೂ ಅಗೊಮ್ಮೆ-ಈಗೊಮ್ಮೆ ಬೆಳಕು ಚೆಲ್ಲಿರುವುದುಂಟು. ಚಲುಕ್ಯರು ಕನ್ಯಾದಾನಾರ್ಥವಾಗಿ ಜಮೀನನ್ನು ಬ್ರಾಹ್ಮಣರಿಗೆ ದತ್ತಿ ನೀಡಿರುವುದುಂಟು. ವಿನಯಾದಿತ್ಯನ ಪ್ರೊನಾ ಶಾಸನವು[58] ರಾಣಿಯ ಬೇಡಿಕೆಯ ಮೇರೆಗೆ ದುರ್ಗಶರ್ಮ ಮತ್ತು ರವಿಶರ್ಮರಿಗೆ 50 ನಿವರ್ತನ ಭೂಮಿಯನ್ನು ಕನ್ಯಾದಾನಾರ್ಥವಾಗಿ ವಿನಯಾದಿತ್ಯನು ನೀಡಿದನೆಂದು ತಿಳಿಸುತ್ತದೆ. ಹಾಗೆಯೇ ಕರ್ನೂಲ್ ತಾಮ್ರ ಶಾಸನವು[59] ವಿವಿಧ ಗೋತ್ರಗಳ ಅನೇಕ ಬ್ರಾಹ್ಮಣರಿಗೆ ಭೂಮಿಯನ್ನು ದತ್ತಿ ನೀಡುತ್ತ, ಆ ಗುಂಪಿನಲ್ಲಿ ಓರ್ವ ಬ್ರಾಹ್ಮಣ ಸ್ತ್ರೀ ಹಾಗೂ ಇರ್ವರು ಬ್ರಾಹ್ಮಣರಿಗೆ ಕ್ರಮವಾಗಿ ೧೩, ೨೫, ೩೦ ನಿವರ್ತನ ಭೂಮಿಯನ್ನು ಪ್ರಾಜಾಪತ್ಯವಾಗಿ ನೀಡಿರುವುದಾಗಿ ತಿಳಿಸುತ್ತದೆ. ಪ್ರಾಜಾಪತ್ಯವೆಂದರೆ, ಹಿಂದೂ ವಿವಾಹ ಪದ್ಧತಿಯಲ್ಲಿ ಬರುವ 8 ವಿಧಗಳಲ್ಲಿ ನಾಲ್ಕನೆಯದೆಂದು ಸಾಮಾನ್ಯವಾಗಿ ಎಲ್ಲಾ ಅರ್ಥಕೋಶಗಳೂ,[60] ಹಾಗೂ ಮನುಧರ್ಮಶಾಸ್ತ್ರ[61] ಅರ್ಥೈಸುತ್ತವೆ. ಇದನ್ನು ಚರ್ಚಿಸುತ್ತ ಕೆ.ವಿ. ರಮೇಶ್ "ಪ್ರಾಜಾಪತ್ಯವೆಂದರೆ ಇತರ ಅರ್ಥಗಳೊಡನೆ, 'ಪುತ್ರ ಸಂತಾನವಿಲ್ಲದಿದ್ದಲ್ಲಿ ಮಗಳ ಮೂಲಕ ಉತ್ತರಾಧಿಕಾರಿಯನ್ನು ಪಡೆಯುವ ಮುನ್ನ ಮಾಡುವಂತಹ ನಿರ್ದಿಷ್ಟವಾದೊಂದು ಹೋಮ"[62] ಎಂಬ ಅರ್ಥವು ಬರುವುದೆಂದು ಅಭಿಪ್ರಾಯಪಡುತ್ತಾರೆ. ಈ ಅರ್ಥ ಬರುವ ವಿವರಣೆಯನ್ನು ನೀಡುವ ಅರ್ಥಕೋಶಗಳು[63] ವಿರಳವಾಗಿದ್ದು, ಹೆಚ್ಚಿನವು ಇದೊಂದು ಮಾನವೀಯ ವಿವಾಹವೆಂದೇ ತಿಳಿಸುತ್ತವೆ. ಕೆ.ವಿ. ರಮೇಶರ ಅರ್ಥ ವಿವರಣೆಯು ಮನುಧರ್ಮಶಾಸ್ತ್ರದಲ್ಲಿ ಬರುವ "ಪುತ್ರಿಕ"[64] ವಿವರಣೆಗೆ ಸಮೀಪ ಬರುತ್ತದೆ. ಈ ಹಿನ್ನೆಲೆಯಲ್ಲಿ "ಪ್ರಾಜಾಪತ್ಯಕ್ಕೆ ಹಲವಾರು ಅರ್ಥ ಛಾಯೆಗಳು ಇರುವುದು ಸ್ಪಷ್ಟವಾಗಿದ್ದು ಪ್ರಸ್ತುತ ಶಾಸನದಲ್ಲಿ ಇದನ್ನು ವಿವಾಹ ಎಂಬ ಅರ್ಥದಲ್ಲಿ ಬಳಸಲಾಗಿರಬಹುದು ಮತ್ತು ವಿವಾಹದ ಹಿನ್ನೆಲೆಯಲ್ಲೇ ಮೇಲಿನ ದತ್ತಿಯನ್ನು ನೀಡಿರಬಹುದು ಎಂಬ ಅನುಮಾನವುಂಟಾಗುತ್ತದೆ. ಆದರೂ ಇವಕ್ಕೇ ಸಂಬಂಧಿಸಿದಂತೆ 'ಇದ-ಮಿತ್ಥಂ' ಎಂದು ಹೇಳಲು ಬರುವುದಿಲ್ಲ.

ಈ ಮೇಲೆ ಚರ್ಚಿಸಿರುವ ಅಂಶಗಳು ಚಲುಕ್ಯರ ಕಾಲದಲ್ಲಿ ಪ್ರಚಲಿತವಾಗಿದ್ದ ಕೃಷಿ ಪದ್ಧತಿಯ ಅಧ್ಯಯನದಲ್ಲಿ ಶಾಸನಗಳ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತದೆ. ಅಷ್ಟೆ ಅಲ್ಲದೆ ಈ ಕಾಲದ ಸಾಮಾಜಿಕ-ಆರ್ಥಿಕ ಇತಿಹಾಸದ ಅಧ್ಯಯನಕ್ಕೆ ಆಧಾರಗಳ

ಕೊರತೆಯಿದೆ ಎಂಬ ವಿದ್ವಾಂಸರ ನುಡಿಯನ್ನು ಗಾಳಿಗೆ ತೂರಲು ಸಂಶೋಧಕರನ್ನು ಪ್ರೇರೇಪಿಸುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದು.

ಟಿಪ್ಪಣಿಗಳು

1. ದೀಕ್ಷಿತ್, ಡಿ. ಪಿ., (1981) : ಪೊಲಿಟಿಕಲ್ ಹಿಸ್ಟರಿ ಆಫ್ ದ ಚಲುಕ್ಯಸ್ ಆಫ್ ಬಾದಾಮಿ.
2. ರಮೇಶ್, ಕೆ. ವಿ., (1984) : ಚಲುಕ್ಯಸ್ ಆಫ್ ವಾತಾಪಿ ಆಗಮ್ ಕಲಾ ಪ್ರಕಾಶನ್, ದೆಹಲಿ, ಪು. i. ಮುನ್ನುಡಿ ನೋಡಿ.
3. S. I. I. IX ಭಾಗ–1, ನಂ. 47, ಪು. 27.
4. ಥಾಪರ್ (ರೋಮಿಲ್ಲ((1966) ಎ ಹಿಸ್ಟರಿ ಆಫ್ ಇಂಡಿಯಾ, ಪೆಂಗ್ವಿನ್, ಪು. 176–204.
5. ಪೂರ್ವೋಕ್ತ.
6. ತಂಬೂರ್ನಿ ತಾಮ್ರ ಶಾಸನ, ವಿವರಗಳಿಗೆ ಕೆ.ವಿ. ರಮೇಶ್‌ರ ಪೂರ್ವೋಕ್ತ ಗ್ರಂಥ ನೋಡಿ, ಪುಟ 122 ; ಹಾಗೂ ಅಸಂಖ್ಯಾತ ಶಾಸನಗಳು.
7. I. A. XXX ಪು. 209 ; E. I. XXX ಪು. 293–98 ಮತ್ತು ಇತರೇ ಶಾಸನಗಳು.
8. I. A. XXX ನಂ. 135, ಪು. 7–20 ಹಾಗು ಇತರೇ ಶಾಸನಗಳು
9. S. I I. IX P. 20 ; ಶೇಷಶಾಸ್ತ್ರಿ (1982), ಕರ್ನಾಟಕದ ವೀರಗಲ್ಲುಗಳು ಕ. ಸಾ. ಪ., ಬೆಂಗಳೂರು. ಪು. 271.
10. S. I. I. IX 1–ಭಾಗ, ನಂ. 53, ಪು. 30.
11. E. I. XXX. ಪು. 13–17.
12. ಆಲ್ತೇಕರ್, ಎ.ಎಸ್. (1967) ರಾಷ್ಟ್ರಕೂಟಾಸ್ ಅಂಡ್ ದೇರ್ ಟೈಮ್ಸ್ ಓರಿಯಂಟಲ್ ಬುಕ್ ಹೌಸ್, ಪು. 19.
13. ನಂದಿಮಠ, ಎಸ್. ಸಿ. (1957) ಕನ್ನಡ ಸಾಹಿತ್ಯ ಚರಿತ್ರೆ. ಭಾಗ–೨, ಕ. ಸಾ. ಪ. ಬೆಂಗಳೂರು.
14. ರಮೇಶ್ ಕೆ. ವಿ. ; ಪೂರ್ವೋಕ್ತ ಗ್ರಂಥ, ಪು. 93.
15. ಸ್ಮಿತ್, ವಿ. ಎ. (1924) ಅರ್ಲಿ ಹಿಸ್ಟರಿ ಆಫ್ ಇಂಡಿಯಾ, ಆಕ್ಸ್‌ಫರ್ಡ್, ಪು. 271

16. ಜಯಸ್ವಾಲ್, ಕೆ.ಪಿ. (1943) ಹಿಂದೂ ಪಾಲಿಟಿ.
17. E. I. ಪು. 1.
18. E. I XXV ಪು. 227.
19. ಶರ್ಮ, ಆರ್. ಎಸ್. (1965), ಇಂಡಿಯನ್ ಫ್ಯೂಡಲಿಸಮ್, ಯೂನಿವರ್ಸಿಟಿ ಅಫ್ ಕಲ್ಕತ್ತ, ಕಲ್ಕತ್ತ.
20. ಮಗನ್‌ಲಾಲ್ ಎ. ಬೂಚ್ (1924), ಎಕನಾಮಿಕ್ ಲೈಫ್ ಇನ್ ಏನ್‌ಸೆಂಟ್ ಇಂಡಿಯ, ಸಂ. 1, ಬರೋಡ, ಪು. 26.
21. ಬೋಸ್ ಎ. (1970), ಸೋಷಿಯಲ್ ಅಂಡ್ ರೂರಲ್ ಲೈಫ್ ಇನ್ ನಾರ್ತ್ ಇಂಡಿಯ, ಕಲ್ಕತ್ತ, ಪು. 39.
22. ಮಗನ್‌ಲಾಲ್ ಎ. ಬೂಚ್, ಪೂರ್ವೋಕ್ತ ಗ್ರಂಥ, ಪು. 29–30.
23. ಆಲ್ತೇಕರ್, ಎ.ಎಸ್., ಪೂರ್ವೋಕ್ತ ಗ್ರಂಥ, ಪು. 29–30.
24. ದತ್ತ, ಎಂ.ಎನ್., ದ ಧರ್ಮಶಾಸ್ತ್ರ, ಸಂಪುಟ. 5 ಮತ್ತು 6 ಅನುವಾದ ಪತ್ಯ ಅಧ್ಯಾಯ–9.
25. ರಾಜೇಂದ್ರಪ್ಪ, ಶಿ. (1981) : ಬದಾಮಿ ಚಾಲುಕ್ಯರ ಕಾಲದ ಬೇಸಾಯ ಕ್ಷೇತ್ರದಲ್ಲೊಂದು ಇಣುಕು ನೋಟ, ಎ. ವಿ. ವೆಂಕಟರತ್ನಂ (ಪ್ರ. ಸಂ.) ಸ್ವಾತಂತ್ರ್ಯ ಪೂರ್ವ ಕರ್ನಾಟಕದಲ್ಲಿ ಕೃಷಿ (ಇತಿಹಾಸ ಸಂಚಿಕೆ–15) ಇತಿಹಾಸ ವಿಭಾಗ, ಮೈಸೂರು, ಪು. 14–31.
26. E I. XXXVIII ಪು. 215–18 ; ಕೆ. ವಿ. ರಮೇಶ, ಪೂರ್ವೋಕ್ತ ಗ್ರಂಥ.
27. ರಮೇಶ್, ಕೆ. ವಿ. (1983), ರೀಸೆಂಟ್ ಇನ್‌ಸ್ಕ್ರಿಪ್ಷನ್ಸ್ ರಿಲೇಟಿಂಗ್ ಟು ಕರ್ನಾಟಕ ಹಿಸ್ಟರಿ, Q. J. M. S. ಸಂ. 74, ಭಾಗ–4, ಪು. 325–26.
28. I. A. XVIII ಪು. 35.
29. ARIE, 194, 1947–48 ಪು. 23.
30. I. A. VII ಪು. 209.
31. E. I. XXV ಪು. 227.
32. S. I. I. IX ನಂ. 48, ಪು. 28.
33. M. A. R. 1930, No. 50, ಪು. 129–57.
34. I. A. X ಪು. 16.
35. I. A. VII ಪು. 209.
36. ಅದೇ.
37. E. I. XXVI ಪು. 6–9.
38. E. I. V ಪು. 6–9.
39. E. I. XXXV ಪು. 317.

40. ನಾಗೇಗೌಡ, ಎಚ್.ಎಲ್. (1964), ಪ್ರವಾಸಿ ಕಂಡ ಇಂಡಿಯ, ಪ್ರಸಾರಾಂಗ, ಪು. 205.
41. I. A. VII, ನಂ. 46, ಪು. 240.
42. ನಾಗೇಗೌಡ, ಎಚ್.ಎಲ್. ಪೂರ್ವೋಕ್ತ ಗ್ರಂಥ.
43. I. A. VII, ಪು. 209.
44. I. A. VII, ನಂ. 48, ಪು. 30.
45. ದಾಸ್, ದೀಪಕ್ ರಂಜನ್ (1969), ಎಕನಾಮಿಕ್ ಹಿಸ್ಟರಿ ಆಫ್ ದ ದಖ್ಖನ್ ಮುನ್ಸಿರಾಮ್ ಮನೋಹರ್‌ಲಾಲ್, ದೆಹಲಿ, ಪು. 30.
46. ಅದೇ.
47. E. I. XXVI, ಪು. 227.
48. ರಮೇಶ್ ಕೆ. ವಿ. (1971), ಕರ್ನಾಟಕದ ಶಾಸನ ಸಮೀಕ್ಷೆ, ಬೆಂಗಳೂರು ವಿ. ವಿ., ಬೆಂಗಳೂರು ಪು. 56.
49. S. I I. IX ಭಾಗ–1, ನಂ. 48, ಪು. 28.
50. ದೀಕ್ಷಿತ್ ಡಿ.ಪಿ., ಪೂರ್ವೋಕ್ತ ಗ್ರಂಥ ಪು. 246–48
51. I A. VII, ನಂ. 44, ಪು. 209–16.
52. I. A. XIX, 86, ಪು. 142–46.
53. E. I. XXVII, ಪು. 125.
54. E I. ನಂ.1, ಪು. 2–4.
55. I. A. VIII, ಪು. 287.
56. I A. XI, 66, ಪು. 68–69.
57. ಐಹೊಳೆ ಶಾಸನ (ವಿಕ್ರಮಾದಿತ್ಯ II) ; ರಮೇಶ್ ಕೆ.ವಿ. ಪೂರ್ವೋಕ್ತಗ್ರಂಥ ಪು. 165.
58. E I. XXV, ಪು. 289.
59. I. A. VI, 30, ಪು. 88–91.
60. ಆಪ್ಟೆ ಎ. ಎಸ್. (1975), ದಿ ಪ್ರಾಕ್ಟಿಕಲ್ ಸಂಸ್ಕೃತ್ ಇಂಗ್ಲಿಷ್ ಡಿಕ್ಷನರಿ, ಮೋತಿಲಾಲ್ ಬನಾರಸಿದಾಸ್, ದೆಹಲಿ ಪು. 678.
    ಪಂಡರಿನಾಥ ಪ್ರಭು (1954), ಹಿಂದು ಸೋಷಿಯಲ್ ಇನ್‌ಸ್ಟಿಟ್ಯೂಶನ್ಸ್, ಪಾಪ್ಯುಲರ್ ಪ್ರಕಾಶನ, ಬಾಂಬೆ, ಪು. 154.
61. ದತ್ತ ಎಂ.ಎನ್. (1975), ದ ಧರ್ಮಶಾಸ್ತ್ರ, ಸಂ. V, ಕಾಸ್ಮೊ ಪಬ್ಲಿಕೇಷರ್ಸ್, ದೆಹಲಿ, ಪು. 86.
62. ರಮೇಶ್ ಕೆ.ವಿ., ಪೂರ್ವೋಕ್ತಗ್ರಂಥ, ಪು. 133.

63. ಜೋಶಿ ಗು.ಭೀ. (1965), ಸಂಸ್ಕೃತ-ಕನ್ನಡ ಶಬ್ದಕೋಶ, ಅರುಣ ಪ್ರಕಾಶನ ಹುಬ್ಬಳ್ಳಿ, ಪು. 498.

64. ಪತ್ರ ಎಂ.ಎಸ್., ಪೂರ್ವೋಕ್ತಗ್ರಂಥ, ಪು. 333.

o-O-o

ಒಂದು ಸಮಾಜದ ಸಂಯುಕ್ತ ಲಕ್ಷಣಗಳನ್ನು ಅಭಿವ್ಯಕ್ತಪಡಿಸುವ ಮತ್ತು ರಕ್ಷಿಸುವ ಉಪಾಯ ಕ್ರಮವೇ ಸಂಯುಕ್ತ ಸರಕಾರವೆಂದು ಲಿವಿಂಗ್‌ಸ್ಟನ್ ಅವರು ನುಡಿದಿರುವರು. ತಾತ್ಪರ್ಯವೆಂದರೆ, ಅನೇಕ ವಿರುದ್ಧ ಗುಣಲಕ್ಷಣಗಳಿಂದ ಕೂಡಿರುವ ಸಮಾಜ ಘಟಕಗಳು ಕೆಲವು ವಿಷಯಗಳಲ್ಲಿ ಸಹಕಾರಿ ಮನೋಭಾವನೆಗಳನ್ನು ತಳೆದು ರಾಜ್ಯ ನಿಬಂಧವೊಂದರ ಅಡಿಯಲ್ಲಿ ರಾಜ್ಯ-ಸಮಾಜದ ನಿರ್ಮಾಣವನ್ನು ಕೈಗೊಳ್ಳುವ ಕ್ರಮಕ್ಕೆ ಸಂಯುಕ್ತ ರಾಜ್ಯ ವ್ಯವಸ್ಥೆಯೆಂದು ಹೇಳಬಹುದು.

ಪ್ರೊ. ಎನ್. ಆರ್. ರಾವ್.

ಎಂ. ರಾಧಾಪಟೇಲ್

ಹೊಯ್ಸಳ ಕಾಲದ ಯುದ್ಧೋದ್ಯಮ : ಒಂದು ಶಿಲ್ಪಾಧಾರಿತ ಅಧ್ಯಯನ


ತಮ್ಮ ಆಳ್ವಿಕೆಯ ಅವಧಿಯಲ್ಲಿ ಹೊಯ್ಸಳ ವಂಶದ ರಾಜರು ಹಲವಾರು ದೇವಾಲಯಗಳನ್ನು ಕಟ್ಟಿಸಿದರು. ಈ ದೇವಾಲಯಗಳಲ್ಲಿ ಅನೇಕ ಯುದ್ಧ ಸಂಬಂಧ ಶಿಲ್ಪ ದೃಶ್ಯಗಳು ಕೆತ್ತಲ್ಪಟ್ಟಿರುವುದನ್ನು ನಾವು ಕಾಣುತ್ತೇವೆ. ಈ ಶಿಲ್ಪ ದೃಶ್ಯಗಳ ಅಧ್ಯಯನದಿಂದ ಆ ಕಾಲದ ಯುದ್ಧಗಳ ಕ್ರಮ, ವಿವಿಧ ಸಮರೋಪಕರಣಗಳು, ಉಡುಪು ಮುಂತಾದುವುಗಳನ್ನು ತಿಳಿಯಬಹುದಾಗಿದೆ. ಹೊಯ್ಸಳ ಸೈನ್ಯ ಪದಾತಿ, ಅಶ್ವದಳ, ರಥದಳ, ಗಜಸೈನ್ಯ ಮತ್ತು ಒಂಟೆಗಳಿಂದ ಕೂಡಿತ್ತು.

ಪದಾತಿ :

ಹೊಯ್ಸಳ ಸೈನ್ಯದಲ್ಲಿ ಪದಾತಿ ಅಥವಾ ಕಾಲುದಳವೇ ತುಂಬಾ ದೊಡ್ಡದಾದ ಘಟಕವಾಗಿತ್ತು. ಕೋಟೆಗಳನ್ನು ರಕ್ಷಿಸಲು ಅವರು ಬಿಲ್ಲು ಬಾಣಗಳನ್ನು ಬಳಸುತ್ತಿದ್ದರು. ನೇರವಾದ ಯುದ್ಧದಲ್ಲಿ ಈಟಿ, ಕತ್ತಿ ಮತ್ತು ಗುರಾಣಿಗಳನ್ನು ಉಪಯೋಗಿಸುತ್ತಿದ್ದರು. ಹೊಯ್ಸಳ ಕಾಲದ ಹಳೇಬೀಡು, ಸೋಮನಾಥಪುರ, ಮತ್ತು ಬೇಲೂರು ದೇವಾಲಯಗಳಲ್ಲಿ ಹಲವಾರು ಪದಾತಿ ಸೈನ್ಯದ ದೃಶ್ಯಗಳನ್ನು ಕಡೆಯಲಾಗಿದೆ. ಸೋಮನಾಥಪುರದ ಕೇಶವ ದೇವಾಲಯದ ಶಿಲ್ಪಭಿತ್ತಿಯಲ್ಲಿ ಯುದ್ಧ ಪ್ರಯಾಣ ಮಾಡುತ್ತಿರುವ ಪದಾತಿ ದಳದ ದೃಶ್ಯವಿದೆ. ಅವರು ತಮ್ಮೊಂದಿಗೆ ಗುರಾಣಿ, ಕತಿ , ಬಿಲ್ಲು-ಬಾಣ ಮತ್ತು ಈಟಿಗಳನ್ನು ಕೊಂಡೊಯ್ಯುತ್ತಿದ್ದಾರೆ. ಸೈನಿಕರು ಕಿವಿಯವರೆಗೆ ಇಳಿಬಿಟ್ಟಿರುವ ಚಪ್ಪಟೆಯಾದ ಶಿರಸ್ತ್ರಾಣಗಳನ್ನು ಧರಿಸಿದ್ದಾರೆ. ನಿಡುದೋಳಿನ, ಬಲುಮಟ್ಟಿಗೆ ತೊಡೆ ಮಧ್ಯದವರೆಗೆ ಇಳಿಬಿಟ್ಟಿರುವ ಕುಡತ ಅವರ ಮೇಲು ಉಡುಪಾಗಿದೆ. ಮೊಣಕಾಲು ಮುಟ್ಟುವ, ನಡು ಮತ್ತು ತೊಡೆಗಳನ್ನು ಸುತ್ತಿದ ದಪ್ಪನೆಯ ಧೋತಿ ಅವರ ಮುಚ್ಚು ಉಡುಪು. ಧೋತಿಯ ತುದಿಗಳು ಇಳಿಬಿದ್ದಿರುತ್ತವೆ. ಮೊಣಕಾಲಿನ ಕೆಳಭಾಗ ಬತ್ತಲಾಗಿರುತ್ತದೆ. ಕೆಲವು ಸೈನಿಕರು ತಮ್ಮ ಎಡಗೈಯಲ್ಲಿ ಗುರಾಣಿಗಳನ್ನೂ ಬಲಗೈಯಲ್ಲಿ ಕತ್ತಿಗಳನ್ನೂ ಹಿಡಿದಿದ್ದಾರೆ. ಗುರಾಣಿಗಳು ಚಚ್ಚೌಕನೆಯ ಆಕಾರದವಾದರೆ,

ಕತ್ತಿಗಳು ಒಮ್ಮುಖದ ಹರಿತ ಹೊಂದಿವೆ. ಕೆಲವರು ಸೈನಿಕರು ಬಿಲ್ಲು ಬಾಣಗಳನ್ನು ಹಿಡಿದಿದ್ದರೆ, ಮತ್ತೆ ಕೆಲವರು ಉದ್ದನೆಯ ಚೂಪಾದ ಈಟಿಗಳನ್ನು ತಮ್ಮ ಎರಡೂ ಕೈಗಳಲ್ಲಿ ಹಿಡಿದಿದ್ದಾರೆ.

ಈ ದೇವಾಲಯದಲ್ಲಿಯೇ ಕೆಲವು ಯುದ್ಧ ದೃಶ್ಯಗಳನ್ನು ಕೆತ್ತಲಾಗಿದೆ. ಯುದ್ಧ ಪ್ರಯಾಣ ಸನ್ನದ್ಧವಾಗಿರುವ ಒಂದು ಸೈನ್ಯ ದೃಶ್ಯ ಇಲ್ಲಿದೆ. ಕತ್ತಿ-ಗುರಾಣಿ, ಬಿಲ್ಲು-ಬಾಣಗಳನ್ನು ಹಿಡಿದಿರುವ ಪದಾತಿಗಳು, ಆನೆಗಳು, ಅಶ್ವಾರೋಹಿಗಳು, ಇಬ್ಬರು ನಾಯಕರೊಂದಿಗಿರುವ ರಥ, ಭೇರಿ-ನಗಾರಿಗಳಿರುವ ಒಂಟೆಗಳು ಇಲ್ಲಿವೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದಲ್ಲಿ ಅನೇಕ ಸಮರ ದೃಶ್ಯಗಳನ್ನು ನಿರೂಪಿಸಲಾಗಿದೆ. ವೀರನೊಬ್ಬ ತನ್ನ ಬಿಲ್ಲು ಬಾಣಗಳಿಂದ ಶತ್ರುಗಳನ್ನು ನೋಯಿಸಿ ಅವರ ಕೈಗೆ ಬಾಣ ನಾಟಿಸಿರುವ ದೃಶ್ಯವೊಂದನ್ನು ಇಲ್ಲಿಯ ಒಂದು ಭಿತ್ತಿಪಟ್ಟಿಯ ಕೊನೆಯಲ್ಲಿ ಅದ್ಭುತವಾಗಿ ಕೆತ್ತಲಾಗಿದೆ. ಹಳೇಬೀಡಿನ ಕೇದಾರೇಶ್ವರ ದೇವಾಲಯದಲ್ಲೂ ಯುದ್ಧ ದೃಶ್ಯಗಳನ್ನು ಶಿಲ್ಪಿಸಲಾಗಿದೆ. ಅಲ್ಲಿಯ ಒಂದು ಪದಾತಿ ದೃಶ್ಯದಲ್ಲಿ ಯುದ್ಧವೀರರು ಕತ್ತಿ ಮತ್ತು ದೀರ್ಘಚತುರಸ್ರಾಕಾರದ ಗುರಾಣಿಗಳನ್ನು ಹಿಡಿದಿರುವುದುಂಟು.



ಸೈನ್ಯದಲ್ಲಿ ಬಿಲ್ಲುಗಾರರು ತುಂಬ ಪ್ರಮುಖರಾಗಿದ್ದವರು. ಕೋಟೆಗಳನ್ನು ರಕ್ಷಿಸುವಲ್ಲಿ, ಶತ್ರುಗಳ ಮೇಲೆ ದೂರದಿಂದ ಆಕ್ರಮಣ ಮಾಡುವಲ್ಲಿ ಬಿಲ್ಲು ಬಾಣಗಳು ತುಂಬ ಉಪಯುಕ್ತವೆನಿಸುತ್ತಿದ್ದವು.

ಅಶ್ವಸೈನ್ಯ :

ಇದು ಹೊಯ್ಸಳ ಸೈನ್ಯದ ಒಂದು ಮುಖ್ಯ ವಿಭಾಗವಾಗಿತ್ತಲ್ಲದೆ, ಅವರ ಸಮರ ಶಕ್ತಿಯ ಬೆನ್ನೆಲುಬಾಗಿತ್ತು. ಬಸರಾಳು, ಸೋಮನಾಥಪುರ, ನುಗ್ಗಿಹಳ್ಳಿ, ಹಾರನಹಳ್ಳಿ, ಜೇಲೂರು, ಕಂಬದಹಳ್ಳಿ, ನಾಗಲಾಪುರ, ಅರಳಗುಪ್ಪೆ, ಹಳೇಬೀಡು ಮುಂತಾದ

ಹೊಯ್ಸಳ ದೇವಾಲಯಗಳ ಸಮರವ್ಯೂಹ ದೃಶ್ಯಗಳಲ್ಲಿ ಬಹುಸಂಖ್ಯೆಯ ಅಶ್ವಸೈನ್ಯ ಚಿತ್ರಗಳನ್ನು ಕೆತ್ತಲಾಗಿದೆ.

ಬಸರಾಳಿನ ಮಲ್ಲಿಕಾರ್ಜುನಸ್ವಾಮಿ ದೇವಾಲಯವು ಸಾಮಾನ್ಯವಾಗಿ ಕಂಡುಬರುವ ಅಶ್ವಸೈನ್ಯ ದೃಶ್ಯಗಳನ್ನು ಹೊಂದಿದೆ. ಇಲ್ಲಿ ಕೆಲವರು ಕತ್ತಿಗಳನ್ನೂ ಮತ್ತೆ ಕೆಲವರು ಕಹಳೆಗಳನ್ನೂ ಹಿಡಿದಿದ್ದಾರೆ. ಅಶ್ವಾರೋಹಿಗಳು ತಮ್ಮ ಕುದುರೆಗಳನ್ನು ಮುಂದಕ್ಕೆ ಓಡಿಸುತ್ತಿರುವುದು ಇಲ್ಲಿ ಕಂಡುಬರುತ್ತದೆ. ಅಶ್ವಾರೋಹಿಗಳು ಷರಾಯಿಗಳನ್ನೂ ಎತ್ತರದ ಪಾದುಕೆಗಳನ್ನೂ ಧರಿಸಿದ್ದಾರೆ. ಷರಾಯಿಗಳು ಮೊಣಕಾಲಿನಿಂದ ಕೆಳಕ್ಕೆ ಇಳಿಬಿದ್ದಿದ್ದು ಪಾದದ ಮೇಲ್ಭಾಗವನ್ನು ಆವರಿಸಿವೆ. ಕೆಲವರು ಸೊಂಟಪಟ್ಟಿಗಳನ್ನು ಕಟ್ಟಿರುವುದೂ ಉಂಟು. ನಾಗಾಲೋಟ ಕ್ರಮದಲ್ಲಿರುವ ಕುದುರೆಗಳ ದಿಕ್ಕನ್ನು ಸವ್ಯ ಮಾರ್ಗವಾಗಿ ತೋರಿಸಿವೆ. ಕುದುರೆಗಳ ಮೈಯನ್ನು ತನುತ್ರಾಣಗಳಿಂದ ರಕ್ಷಿಸಲಾಗಿದೆ. ಅಶ್ವಾರೋಹಿಗಳು ಸಾಮಾನ್ಯವಾಗಿ ಇರಿವಾಯುಧವಾದ ಉದ್ದನೆಯ ಭಲ್ಲೆಯನ್ನೂ ಗುರಾಣಿಯನ್ನೂ ಹಿಡಿದಿರುತ್ತಾರೆ. ಇವರು ಸೊಂಟಪಟ್ಟಿಗೆ ಕಠಾರಿ, ಚೂರಿಗಳನ್ನು ಸಿಕ್ಕಿಸಿಕೊಂಡು ಒಯ್ಯುತ್ತಿದ್ದುದೂ ಉಂಟು. ಹೊಯ್ಸಳರ ಕಾಲದಲ್ಲಿ ಯುದ್ಧೋದ್ದೇಶಗಳಿಗೆ ಕುದುರೆಗಳನ್ನು ಹೆಚ್ಚಾಗಿ ಬಳಸಿರಬೇಕು.

ನುಗ್ಗಿಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದ ಅಶ್ವಾರೋಹಿಗಳ ಅಲಂಕಾರ ಪಟ್ಟಿಕೆಗಳಲ್ಲಿ ಮೈಜೋಡಿರುವ ಕುದುರೆಗಳನ್ನು ಕಾಣಬಹುದು. ಇದರಲ್ಲಿ ಕೆಲವು ಕುದುರೆಗಳು ಮುಂದಕ್ಕೆ ಪ್ರಯಾಣಿಸುತ್ತಿದ್ದರೆ, ಮತ್ತೆ ಕೆಲವು ಚೆದುರಿವೆ. ಇನ್ನೂ ಕೆಲವು ಮೆಲ್ಲಗೆ ಮೆರವಣಿಗೆಯಲ್ಲಿ ಚಲಿಸುತ್ತಿವೆ. ಹಾರನಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯದಲ್ಲೂ ಇದೇ ಬಗೆಯ ದೃಶ್ಯವಿದೆ. ಬೇಲೂರಿನ ಕೇಶವಾಲಯದಲ್ಲಿ ಸಮರವ್ಯೂಹದಲ್ಲಿರುವ ಅಶ್ವಾರೋಹಿಗಳ ಪಟ್ಟಿಕೆಗಳಿವೆ. ಕಂಬದಹಳ್ಳಿಯ ಶಾಂತಿನಾಥ ಬಸದಿಯಲ್ಲೂ ಅಶ್ವಸೈನ್ಯದ ಚಿತ್ರವಿದೆ. ಇದರಲ್ಲಿ ಕುದುರೆಗಳು ಬಹಳ ಆಕರ್ಷಕವಾಗಿಯೂ ಸಹಜವಾಗಿಯೂ ಮೂಡಿರುವುದು ಉಲ್ಲೇಖನೀಯವಾಗಿದೆ. ಕುದುರೆಗೆ ವಿಶೇಷವಾದ ಮೈಜೋಡನ್ನು ಒದಗಿಸಿರುವುದು ಇಲ್ಲಿಯ ವೈಶಿಷ್ಟ್ಯ. ಅರಳಗುಪ್ಪೆಯ ಚೆನ್ನಕೇಶವ ದೇವಾಲಯದಲ್ಲಿ ಅಶ್ವಾರೋಹಿಗಳು ಷರಾಯಿ ಮತ್ತು ಕಣಕಾಲಕಾಸುಗಳನ್ನು ತೊಟ್ಟಿದ್ದಾರೆ ; ಕೈಯಲ್ಲಿ ಕತ್ತಿ ಹಿಡಿದಿದ್ದಾರೆ. ಕೆಲವು ಪ್ರಾಣಿಗಳು ಕವಚ ತೊಟ್ಟಿವೆ. ಹಳೇಬೀಡಿನ ಕೇದಾರೇಶ್ವರ ದೇವಾಲಯದ ಅಶ್ವಾರೋಹಿಗಳ ಅಲಂಕಾರ ಪಟ್ಟಿಕೆ ಕುತೂಹಲಕರವಾದ ದೃಶ್ಯಗಳನ್ನು ಒಳಗೊಂಡಿದೆ. ಇದರಲ್ಲಿ ಶತ್ರುಗಳೊಂದಿಗೆ ಹೋರಾಡುತ್ತಿರುವ ಅಶ್ವರೋಹಿಗಳು ಕೈಯಲ್ಲಿ ಕತ್ತಿ ಹಿಡಿದಿರುವಂತೆ ಚಿತ್ರಿಸಲಾಗಿದೆ. ಕೆಲವರು ಗುರಾಣಿಗಳನ್ನು ಮತ್ತೆ ಕೆಲವರು ಉದ್ದನೆಯ ಈಟಿಗಳನ್ನೂ ಹಿಡಿದಿದ್ದಾರೆ. ಸೋಮನಾಥಪುರದ ಮತ್ತು ನಾಗಲಾಪುರದ ಕೇಶವಾಲಯಗಳಲ್ಲೂ ಅಶ್ವ ಸೈನ್ಯದ ದೃಶ್ಯಗಳಿವೆ.

ರಥಗಳು

ರಥಗಳು ಕುದುರೆಗಳಿಂದ ಎಳೆಯಲ್ಪಡುತ್ತಿದ್ದವು ; ಅವು ರಾಜ ಸಂಬಂಧಿಗಳಿಗೆ ಓಡಾಟದ ವಾಹನವೂ ಆಗಿದ್ದುವು. ಸೋಮನಾಥಪುರದ ದೇವಾಲಯ, ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಬೇಲೂರಿನ ಚೆನ್ನಕೇಶವಾಲಯಗಳು, ಜಾವಗಲ್ಲಿನ ಲಕ್ಷ್ಮೀ ನರಸಿಂಹಾಲಯಗಳ ಶಿಲ್ಪಗಳಿಂದ ಹೊಯ್ಸಳರ ಯುದ್ಧೋದ್ಯಮದಲ್ಲಿನ ರಥಗಳ ಬಳಕೆಯನ್ನು ತಿಳಿಯಬಹುದಾಗಿದೆ.

ಸೋಮನಾಥಪುರದ ದೇವಾಲಯದ ಅಲಂಕಾರ ಪಟ್ಟಿಕೆಗಳು ಹಲವಾರು ರಥ ಯುದ್ಧ ದೃಶ್ಯಗಳನ್ನು ಹೊಂದಿವೆ. ಸಾಮಾನ್ಯವಾಗಿ ನಾಲ್ಕು ಚಕ್ರಗಳ ರಥವು ಎರಡು ಕುದುರೆಗಳಿಂದ ಎಳೆಯಲ್ಪಡುತ್ತದೆ; ಕೆಲವೊಮ್ಮೆ ನಾಲ್ಕು ಕುದುರೆಗಳಿಂದಲೂ ಎಳೆಯಲ್ಪಡಬಹುದು. ಸಾರಥಿ ಕುದುರೆಗಳನ್ನು ಲಗಾಮು ಮತ್ತು ಚಾವಟಿಗಳಿಂದ ನಿಯಂತ್ರಿಸುತ್ತ ಮುಂಭಾಗದಲ್ಲಿ ಕುಳಿತಿರುತ್ತಾನೆ. ಯುದ್ಧ ವೀರರು ರಥದೊಳಗೆ ನಿಂತಿರುತ್ತಾರೆ. ಕೆಲವರು ಬಿಲ್ಲು ಬಾಣಗಳನ್ನು ಹಿಡಿದಿದ್ದರೆ ಮತ್ತೆ ಕೆಲವರು ಕತ್ತಿ ಹಾಗೂ ಚಚ್ಚೌಕನೆಯ ಗುರಾಣಿಗಳನ್ನು ಹಿಡಿದಿರುತ್ತಾರೆ. ಕುಸುತಗಳನ್ನು ಧರಿಸಿರುವ ಅವರು ತೋಳುಡುಪನ್ನು ಸಹ ಧರಿಸಿರುತ್ತಾರೆ. ತೊಡೆಗಳನ್ನು ದಪ್ಪನೆಯ ಧೋತಿಯಿಂದ ಮುಚ್ಚಿ ಮೊಣಕಾಲ ಕೆಳಗಣಭಾಗ ಕಾಣದಂತೆ ರಥದ ಮುಖ್ಯಾವಯವದಿಂದ ಮುಚ್ಚಲ್ಪಟ್ಟಿರುತ್ತವೆ. ಎರಡು ಬಗೆಯ ಬಿಲ್ಲುಗಳಿದ್ದು, ಬಾಣಗಳ ಮೊನೆ ತುಂಬ ಹರಿತವಾದುವಾಗಿರುತ್ತವೆ. ರಥಗಳು ಸೈನ್ಯದ ಮುಂಚೂಣಿಯಲ್ಲಿರುತ್ತಿದ್ದುವು. ರಥಿಕರು ಶತ್ರುಗಳು ದೂರದಲ್ಲಿದ್ದಾಗ ಬಾಣ ಪ್ರಯೋಗ ಮಾಡುತ್ತಿದ್ದರು. ಹತ್ತಿರಕ್ಕೆ ಬಂದಾಗ ಕೈಯಳತೆಯ ಯುದ್ಧದ ಸಂದರ್ಭದಲ್ಲಿ ಅವರು ಬಿಲ್ಲುಬಾಣಗಳನ್ನು ಬಿಸುಟು, ಕತ್ತಿ ಗುರಾಣಿಗಳನ್ನು ಹಿಡಿಯುತ್ತಿದ್ದರು. ಎತ್ತರದ ಜಾಗದಲ್ಲಿದ್ದುದರ ಫಲವಾಗಿ ಈ ರಥಿಕರಿಗೆ, ಶತ್ರು ಸೈನ್ಯದಮೇಲೆ ಆಕ್ರಮಣ ಮಾಡಲು ಉತ್ತಮ ಅವಕಾಶವಿರುತ್ತಿತ್ತು. ಜಾವಗಲ್ಲಿನ ಲಕ್ಷ್ಮೀನರಸಿಂಹ ದೇವಾಲಯದ ಯುದ್ಧ ದೃಶ್ಯದಲ್ಲಿ ರಥಗಳು ಯುದ್ಧದಲ್ಲಿ ಭಾಗವಹಿಸಿರುವುದನ್ನು ಕಾಣಬಹುದಾಗಿದೆ.

ಗಜಸೈನ್ಯ

ಹೊಯ್ಸಳರ ಕಾಲದಲ್ಲಿ ಇದು ಯುದ್ಧೋದ್ಯಮದಲ್ಲಿ ಮುಖ್ಯಪಾತ್ರ ವಹಿಸಿತ್ತು. ಆನೆಗಳ ಭೀಮಾಕಾರ ಮತ್ತು ಬಾಣ ಪ್ರಯೋಗಕ್ಕೆ ಬೆದರದ ಅವುಗಳ ಪ್ರವೃತ್ತಿ ಶತ್ರು ಸೈನ್ಯದ ಮೇಲೆ ಅವನ್ನು ಪರಿಣಾಮಕಾರಿಯಾಗಿ ಹಾಯಿಸಲು ನೆರವಾಗುತ್ತಿತ್ತು. ಕಂಬದಹಳ್ಳಿ, ಹಳೇಬೀಡು, ನುಗ್ಗಿಹಳ್ಳಿ, ನಾಗಲಾಪುರ, ಸೋಮನಾಥಪುರ, ಬೇಲೂರು ಹಾರನಹಳ್ಳಿ ಮುಂತಾದ ದೇವಾಲಯ ಶಿಲ್ಪಗಳಲ್ಲಿ ಕೆತ್ತಲ್ಪಟ್ಟಿರುವ ಆನೆಯ ದೃಶ್ಯಗಳು ಯುದ್ಧದಲ್ಲಿಯ ಅವುಗಳ ಪ್ರಾಮುಖ್ಯವನ್ನು ವಿಶದೀಕರಿಸುತ್ತವೆ.

ಕಂಬದಹಳ್ಳಿಯ ಶಾಂತಿನಾಥ ಬಸದಿಯ ಗಜಶಿಲ್ಪ ಪಟ್ಟಿಕೆ ತುಂಬಾ ಕುತೂಹಲಕರವಾದದ್ದಾಗಿದೆ. ಅವರ ಕಲೆಗಾರಿಕೆಯ ಕುಸುರು ಇತರ ಯಾವುದೇ ಹೊಯ್ಸಳ ದೇವಾಲಯದ್ದಕ್ಕಿಂತ ತುಂಬ ಶ್ರೇಷ್ಠಮಟ್ಟದ್ದಾಗಿದೆ. ಇಲ್ಲಿ ಆನೆಗಳನ್ನು ವಿವರವಾಗಿ ಕೆತ್ತಲಾಗಿದೆ. ಗಜಮಸ್ತಕವನ್ನು ಮುತ್ತಿನಮಾಲೆಯಿಂದ ಅಲಂಕರಿಸಿರುವುದಲ್ಲದೆ, ಪಕ್ಕದಲ್ಲಿ ಆಭರಣಗಳನ್ನು ತೊಡಿಸಲಾಗಿದೆ. ಪ್ರತಿಯೊಂದು ಆನೆಯೂ ಇಬ್ಬರು ವೀರರನ್ನು ಹೊಂದಿರುತ್ತವೆ. ಮೊದಲು ಕುಳಿತಿರುವವನನ್ನು ಅಂಕುಶಧಾರಿ ಎಂದು ಕರೆಯುತ್ತಾರೆ. ಆತ ಯಾವಾಗಲೂ ತನ್ನ ಕೈಯಲ್ಲಿ ಅಂಕುಶ ಹಿಡಿದಿದ್ದು, ಆನೆಯನ್ನು ನಿರ್ದೇಶಿಸುವುದರಿಂದ ಈ ಹೆಸರು ಆತನಿಗೆ ಬಂದಿದೆ. ಆತನ ಹಿಂದೆ ಕೈಯಲ್ಲಿ ಈಟಿ ಹಿಡಿದು ಶತ್ರುಗಳ ಮೇಲೆ ಆಕ್ರಮಣ ಮಾಡಲು ಸಿದ್ಧನಾಗಿರುವ ವೀರ ಕುಳಿತಿರುತ್ತಾನೆ. ಉದ್ದನೆಯ ತೋಳಿನ ಕುಡುತ ಅವರ ಉಡುಪು. ಮೊಣಕಾಲವರೆಗಿನ ತೊಡೆಯ ಭಾಗವನ್ನು ಅವರ ದಪ್ಪನೆಯ ಧೋತಿ ಮುಚ್ಚಿರುತ್ತದೆ. ಕಿವಿಯವರೆಗೆ ಇಳಿಬೀಳುವ ಉದ್ದನೆಯ ದುಂಡು ಶಿರಸ್ತ್ರಾಣವನ್ನು ಅವರು ಧರಿಸಿರುತ್ತಾರೆ.

ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯದ ಗಜಶಿಲ್ಪ ಪಟ್ಟಿಕೆ ಕೂಡ ಕುತೂಹಲಕರವಾದದ್ದಾಗಿದೆ. ನುಗ್ಗಿಹಳ್ಳಿಯ ಲಕ್ಷ್ಮೀನರಸಿಂಹಾಲಯದ ಗಜಶಿಲ್ಪ ಪಟ್ಟಿಕೆಯಲ್ಲಿ ಸಾಮಾನ್ಯವಾಗಿ ಆನೆಗಳ ಮೇಲೆ ಇಬ್ಬರು ಕುಳಿತಿರುತ್ತಾರೆ. ನಾಗಲಾಪುರದ ಚೆನ್ನಕೇಶವಾಲಯ ಸೋಮನಾಥಪುರದ ಗಜಶಿಲ್ಪ ಪಟ್ಟಿಕೆಯನ್ನು ಹೆಚ್ಚು ಹೋಲುವುದಾಗಿದೆ. ಸೋಮನಾಥಪುರದ ಕೇಶವಾಲಯ, ಬೇಲೂರಿನ ಚೆನ್ನಕೇಶವಾಲಯ, ಹಾರನಹಳ್ಳಿಯ ಲಕ್ಷ್ಮೀನರಸಿಂಹಾಲಯಗಳು ಗಜಯುದ್ಧದ ಪಟ್ಟಿಕೆಗಳನ್ನು ಹೊಂದಿವೆ. ಈ ದೇವಾಲಯ ಶಿಲ್ಪಗಳಲ್ಲಿ ಆನೆಗಳ ಮೇಲೆ ಸಾಮಾನ್ಯವಾಗಿ ಒಬ್ಬರು ಅಥವಾ ಇಬ್ಬರು ಕುಳಿತಿರುತ್ತಾರೆ. ಆನೆಗಳು ಪರಸ್ಪರ ಯುದ್ಧಮಾಡುವ, ಆನೆಗಳ ಮೇಲೆ ಬಿಲ್ಲು-ಬಾಣಗಳಿಂದ, ಈಟಿಗಳಿಂದ ಮನುಷ್ಯರು ಆಕ್ರಮಿಸುವ, ಮನುಷ್ಯರನ್ನು ಆನೆಗಳು ಕಾಲಿನಿಂದ ತುಳಿಯುತ್ತಿರುವ, ಯುದ್ಧಸನ್ನದ್ಧರಾಗಿ ಗಜಾರೋಹಿಗಳು ಮುಂದುವರಿಯುತ್ತಿರುವ ದೃಶ್ಯಗಳು ಇಲ್ಲಿವೆ.

ಒಂಟೆಗಳು ಸೈನ್ಯದ ಒಂದು ಭಾಗವಾಗಿತ್ತು ; ಶಾಸನೋಲ್ಲೇಖಗಳು ಯುದ್ಧದಲ್ಲಿಯ ಅವುಗಳ ಬಳಕೆಯನ್ನು ತಿಳಿಸುತ್ತವೆ. ಆದರೆ ಅವು ಬಲುಮಟ್ಟಿಗೆ ಸಾರಿಗೆ ಮಾಧ್ಯಮವಾಗಿಯೋ, ಸೈನ್ಯಾನುಕೂಲತೆಗಳನ್ನು ಪೂರೈಸಲೋ ಬಳಕೆಯಾಗುತ್ತಿದ್ದುದೇ ಹೆಚ್ಚು.

ಈ ಮೇಲಣ ಹೊಯ್ಸಳ ಕಾಲದ ದೇವಾಲಯ ಶಿಲ್ಪಗಳ ಅಧ್ಯಯನದಿಂದ ಆ ಕಾಲದ ಯುದ್ಧೋಪಕರಣಗಳು, ಯುದ್ಧವೀರರ ಉಡುಪು, ಪ್ರಾಣಿಗಳ ಆಗತ್ಯ ಬಳಕೆ, ಯುದ್ಧವಿಧಾನವೇ ಮುಂತಾದ ಸಂಗತಿಗಳು ತಿಳಿಯುತ್ತವೆ.

ಟಿಪ್ಪಣಿಗಳು

1. ಎಂ. ಎ. ಆರ್. 1933, ಪು. 21.
2. ಅದೇ ,, 1933, ಪು. 54.
3. ಅದೇ ,, 1939, ಪು. 47.
4. ಅದೇ ,, 1935, ಪು. 3.
5. ಹೊಯ್ಸಳ ಡೈನಾಸ್ಟಿ, ಸಂ. ಶೇಕ್ ಅಲಿ, ಪು. 217.
6. ಎಂ. ಎ. ಆರ್. 1933, ಪು. 72.
7. ಅದೇ ,, 1939, ಪು. 51.
8. ಮೈಸೂರ್ ಶಾಸನಗಳು, ಲೂಯಿ ರೈಸ್, ಪು. 272.

o–O–o

ಶಿಲ್ಪ ಗ್ರಂಥಗಳಲ್ಲಿ ಬಹಳ ಪ್ರಧಾನವಾಗಿ ಕಟ್ಟಡಗಳನ್ನು ನಾಗರ, ದ್ರಾವಿಡ ಮತ್ತು ವೇಸರ ಶೈಲಿಯವೆಂದು ವರ್ಗೀಕರಿಸಲಾಗಿದೆ : ಕಟ್ಟಡಗಳ ತಳ ವಿನ್ಯಾಸ ಮತ್ತು ಏರು ನೋಟದ ಆಧಾರದ ಮೇಲೆ ಚಚ್ಚೌಕ ಅಥವ ಆಯಾಕಾರದ ಕಟ್ಟಡಗಳು ನಾಗರ ಶೈಲಿಗೆ ಸೇರಿದವೆಂದೂ, ಆರು ಅಥವಾ ಎಂಟು ಮುಖಗಳುಳ್ಳವು ದ್ರಾವಿಡ ಶೈಲಿಯವೆಂದೂ, ವೃತ್ತ, ದೀರ್ಘವೃತ್ತ ಅಥವ ಅರ್ಧ ದೀರ್ಘವೃತ್ತ (ಗಜಪೃಷ್ಠ) ಆಕಾರದವು ವೇಸರಶೈಲಿಯವೆಂದೂ ಗುರುತಿಸಲಾಗಿದೆ. ಒಂದೇ ಪ್ರದೇಶದ ಕಟ್ಟಡಗಳಲ್ಲಿ ಮೂಲಭೂತ ಪ್ರತ್ಯೇಕ ಲಕ್ಷಣಗಳು ಕಂಡುಬಂದಾಗ ಅವುಗಳ ವಿಭಿನ್ನ ವ್ಯಕ್ತಿತ್ವಗಳನ್ನು ಗುರುತಿಸಲು ಈ ಪದಗಳನ್ನು ಬಳಸಲಾಗಿದೆ.

ಕೆ. ಯಶೋಧರ

ಕಲಿಕಾ ನ್ಯೂನತೆಗಳು ಹಾಗೂ ಶಿಕ್ಷಕ ತರಬೇತಿ ಕಾರ್ಯಕ್ರಮ

ಇಂದು ಸಾರ್ವತ್ರಿಕ ಶಿಕ್ಷಣ ದೊರಕಿಸುವ ದಿಸೆಯಲ್ಲಿ ಮುಂದುವರೆದು, ಎಲ್ಲ ಮಕ್ಕಳಿಗೂ ಶಾಲಾಸೌಲಭ್ಯ ಒದಗಿಸಲಾಗದಿದ್ದರೂ ಪ್ರತಿವರ್ಷವೂ ವಿದ್ಯಾರ್ಥಿಗಳ ಸಂಖ್ಯೆ ಅಧಿಕ ಪ್ರಮಾಣದಲ್ಲಿ ವೃದ್ಧಿಯಾಗುತ್ತಿರುವುದು ಗಮನಾರ್ಹವಾಗಿದೆ. ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವಂತೆ ಶಾಲಾಕಲಿಕೆಯಲ್ಲಿ ಹಿಂದುಳಿಯುತ್ತಿರುವವರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿ ಕಂಡು ಬರುತ್ತದೆ. ಹಿಂದುಳಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಶಾಲಾ ವಿಷಯಗಳ ಕಲಿಕೆಯಲ್ಲಿ ಸಾಮಾನ್ಯ ಮಟ್ಟದ ವಿದ್ಯಾರ್ಥಿಗಳೊಡನೆ ಅಭಿವೃದ್ಧಿ ಹೊಂದಲು ಅಸಮರ್ಥರಾಗಿರುತ್ತಾರೆ, ಅಂದರೆ ಕಲಿಕೆಯಲ್ಲಿ ಹಲವು ನ್ಯೂನತೆಗಳನ್ನಾಗಲಿ ಕ್ಲಿಷ್ಟತೆಗಳನ್ನಾಗಲಿ ಉಳ್ಳವರಾಗಿರುತ್ತಾರೆ. ಪ್ರತಿ ತರಗತಿಯಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗಿರುವುದರಿಂದಲೂ, ವ್ಯಾಪಕವಾದ ವೈಯಕ್ತಿಕ ಭಿನ್ನತೆ ಕಂಡು ಬರುವುದರಿಂದಲೂ ವಿದ್ಯಾರ್ಥಿಗಳಿಗೆ ವೈಯುಕ್ತಿಕ ಗಮನ ನೀಡಿ ಪರಿಣಾಮಕಾರಿ ಕಲಿಕೆಯನ್ನುಂಟು ಮಾಡುವುದು ಕಷ್ಟ ಸಾಧ್ಯವಾಗುತ್ತಲಿದ್ದು, ಕಲಿಕಾ ನ್ಯೂನತೆಗಳುಳ್ಳ ಮಕ್ಕಳ ಸಮಸ್ಯೆ ವ್ಯಾಪಕವಾಗಿ ಬೆಳೆಯುತ್ತಿದೆ. ಆದ್ದರಿಂದ ಇಂತಹ ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ಸಮಸ್ಯೆಗಳ ನಿವಾರಣೆಗೆ ಸೂಕ್ತ ಕಾರ್ಯಕ್ರಮ ಕೈಗೊಂಡು ಅವರು ಫಲಪ್ರದ ಕಲಿಕೆಯಲ್ಲಿ ಮುಂದುವರೆಯುವಂತೆ ಮಾಡುವ ಹೊಣೆಗಾರಿಕೆ ಕಷ್ಟದಾಯಕವಾದರೂ ಪ್ರಮುಖವಾಗಿ ಪರಿಗಣಿಸಬೇಕಾದ ವಿಷಯವಾಗಿದೆ.

ಸಾಮಾನ್ಯವಾಗಿ ಕಲಿಕಾ ನ್ಯೂನತೆಗಳನ್ನುಳ್ಳ ಮಕ್ಕಳು ನಿರೀಕ್ಷಿತ ಮಟ್ಟದ ಸಾಧನೆಗಿಂತ ಹಿಂದುಳಿಯುವುದರಿಂದ ದೈನಂದಿನ ಶಾಲಾ ಚಟುವಟಿಕೆಗಳಿಗೆ ಹೊಂದಿಕೊಳ್ಳಲು ದುಸ್ತರವೆನಿಸುತ್ತದೆ ; ಸಾಧನಾ ಮಟ್ಟದಲ್ಲಿ ಪುನಃ ಪುನಃ ಸೋಲನ್ನಪ್ಪುವಂತಾಗುವುದರಿಂದ ಸಂವೇಗಾತ್ಮಕವಾಗಿ ಹೊಂದಿಕೊಳ್ಳಲಸಾಧ್ಯವಾಗಿ ಸಂವೇಗಾತ್ಮಕ ತೊಂದರೆಗಳಿಗೆ ಈಡಾಗುವುದಲ್ಲದೆ ನಿಕೃಷ್ಟತಾ ಭಾವನೆಯನ್ನೂ ಬೆಳೆಸಿಕೊಳ್ಳಬಹುದಾಗುತ್ತದೆ. ಈ ಕಾರಣಗಳಿಂದ ಅವರ ಶೈಕ್ಷಣಿಕ ಪ್ರಗತಿ ಕುಂಠಿತವಾಗುವುದಲ್ಲದೆ ಶಾಲಾ

ಚಟುವಟಿಕೆಗಳ ಬಗೆಗೆ ಋಣಾತ್ಮಕ ಅಭಿವೃತ್ತಿಯನ್ನು ಬೆಳೆಸಿಕೊಂಡು ಕ್ರಮೇಣ 3–4 ವರ್ಷಗಳಲ್ಲಿ ಶಾಲೆಯಿಂದ ದೂರ ಸರಿಯುವ ಸಂಭವ ಹೆಚ್ಚಾಗುತ್ತದೆ. ಸಾಮಾನ್ಯವಾಗಿ ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಅವರು ಗಳಿಸುವ ಅಂಕ ಹಾಗೂ ಶ್ರೇಣಿಗಳ ಮಟ್ಟವನ್ನಾಧರಿಸಿ ತಿಳಿಯುವ ಮಾತಾಪಿತೃಗಳು—ಪೋಷಕರು ತಮ್ಮ ಮಕ್ಕಳು ಕಡಿಮೆ ಅಂಕಗಳನ್ನು ಗಳಿಸಲು ಕಾರಣವೇನೆಂದು ವಿವೇಚಿಸದೆ ಶಿಕ್ಷಕ ವರ್ಗದವರನ್ನು ಪ್ರಶ್ನಿಸಲು ಮುಂದಾಗುತ್ತಾರೆ. ತಮ್ಮ ಕಲಿಕಾ ದೋಷಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುವ ಪ್ರಯತ್ನ ನಡೆಸದೆ, ಶಿಕ್ಷಕರು ಮಕ್ಕಳ ಕಲಿಯುವಿಕೆಗೆ ಸರಿಯಾದ ಗಮನ ನೀಡುವುದಿಲ್ಲವೆಂದು ಆರೋಪಿಸುತ್ತಾರೆ. ಪ್ರತಿವರ್ಷವೂ ಬಹುಸಂಖ್ಯೆಯ ಮಕ್ಕಳಿಗೆ ಶಾಲಾ ಸೌಲಭ್ಯವನ್ನೊದಗಿಸಬೇಕಾಗಿರುವುದರಿಂದ ಕಡಿಮೆ ಅಂಕ ಗಳಿಸುವ ಅಂದರೆ ಕಲಿಕೆಯಲ್ಲಿ ಹಿಂದುಳಿಯುವ ಮಕ್ಕಳೆಲ್ಲರನ್ನು ಅದೇ ತರಗತಿಯಲ್ಲಿರಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ. ಅಂತೆಯೇ ಅವರನ್ನು ಮುಂದಿನ ತರಗತಿಗೆ ಕಳುಹಿಸುವುದರಿಂದ ಅವರ ಕಲಿಕಾ ನ್ಯೂನತೆಗಳನ್ನು ಕ್ಲಿಷ್ಟತೆಗಳನ್ನು ಜೊತೆಯಲ್ಲಿಯೇ ಕೊಂಡೊಯ್ದು ಇನ್ನೂ ಉಲ್ಬಣಾವಸ್ಥೆಗೆ ತಲುಪಲು ಸಹಾಯಕವಾಗುತ್ತದೆ. ಹೀಗೆ ಪ್ರತಿವರ್ಷವೂ ಬಡ್ತಿ ಹೊಂದುತ್ತಾ ಮುಂದುವರಿದ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ನಿರೀಕ್ಷಿತ ಮಟ್ಟವನ್ನು ತಲುಪಲು ಅಸಮರ್ಥರಾಗುತ್ತಾರೆ. ಈ ಎಲ್ಲ ಸಾಧ್ಯತೆಗಳನ್ನು ತಡೆಗಟ್ಟಲೋಸುಗ ಶಾಲೆಗಳಲ್ಲಿ ಕಲಿಕಾ ನ್ಯೂನತೆಗಳನ್ನುಳ್ಳ ಮಕ್ಕಳನ್ನು ಪತ್ತೆ ಹಚ್ಚಿ ಆ ಮಕ್ಕಳು, ನ್ಯೂನತೆಗಳನ್ನು ನಿವಾರಿಸಿಕೊಂಡು ಕಲಿಕೆಯಲ್ಲಿ ಮುಂದುವರೆಯಲು ಸಹಕರಿಸುವುದು ಶಾಲಾ ಶಿಕ್ಷಕರ ಪ್ರಮುಖ ಕರ್ತವ್ಯಗಳಲ್ಲೊಂದಾಗಿದೆ.

ಕಲಿಕಾ ನ್ಯೂನತೆಯು ಬಹುತೇಕ ವಿದ್ಯಾರ್ಥಿಗಳಿಗೆ ಒಂದೇ ರೀತಿಯದಾಗಿದ್ದು ಸಾಮಾನ್ಯವೆನಿಸಬಹುದು, ಇಲ್ಲವೇ ಒಬ್ಬ ವ್ಯಕ್ತಿಗೆ ಸೀಮಿತವಾಗಿದ್ದು ನಿರ್ದಿಷ್ಟವೆನಿಸಬಹುದು. ಕಲಿಕಾ ನ್ಯೂನತೆಯು ಶಾಲೆಯ ಎಲ್ಲ ಪಠ್ಯ ವಿಷಯಗಳಲ್ಲಿಯೂ ವ್ಯಾಪಕವಾಗಿರಬಹುದು, ಇಲ್ಲವೇ ಯಾವುದೇ ಒಂದು ನಿರ್ದಿಷ್ಟ ಪಠ್ಯ ವಿಷಯಕ್ಕೆ ಅಥವಾ ಬೌದ್ಧಿಕ ಕ್ರಿಯೆಗೆ ಸೀಮಿತವಾಗಿರಬಹುದು. ಮೂಲಭೂತ ಕೌಶಲಗಳಲ್ಲಿ ದೋಷಗಳು ಕಂಡುಬರಬಹುದು. ಒಟ್ಟಿನಲ್ಲಿ ಪ್ರತಿಯೊಂದು ಕಲಿಕಾ ಕ್ಷೇತ್ರದಲ್ಲಿಯೂ ವಿಭಿನ್ನ ರೀತಿಯ ನ್ಯೂನತೆಗಳನ್ನು ಗುರುತಿಸಬಹುದು.

ಉದಾಹರಣೆಗಳು : ಓದುಗಾರಿಕೆಯ ದೋಷದಿಂದಾಗಿ ಎಲ್ಲಾ ವಿಷಯಗಳ ಕಲಿಯುವಿಕೆಯಲ್ಲಿ ಹಿಂದುಳಿಯುವಂತಾಗುತ್ತದೆ. ಗಣಿತವನ್ನಾಗಲಿ ವಿಜ್ಞಾನವನ್ನಾಗಲಿ, ಅಥವ ಯಾವುದೇ ವಿಷಯವನ್ನಾಗಲಿ ಸ್ವತಃ ಓದಿ ಗ್ರಹಿಸಬೇಕಾದರೆ ಓದುಗಾರಿಕೆಯ ಕೌಶಲ ಅತ್ಯಗತ್ಯ. ಮೂಲಭೂತವಾದ ಓದುಗಾರಿಕೆಯಲ್ಲಿಯೇ ದೋಷವಿದ್ದಲ್ಲಿ ಅದನ್ನಾಧರಿಸಿದ ಇತರ ವಿಷಯಗಳಲ್ಲಿ ಕಲಿಕೆ ಕುಂಠಿತವಾಗುವುದು ಸಹಜ. ಓದುಗಾರಿಕೆಯ ದೋಷ ಹಲವಾರು ರೀತಿಯಲ್ಲಿರಬಹುದು—ಮಿತವಾದ ಶಬ್ದಭಂಡಾರ ಪಡೆದಿರುವುದು ಪದಗಳ ಚಾಕ್ಷುಷ ವಿಶ್ಲೇಷಣೆ ಪರಿಣಾಮಕಾರಿಯಾಗಿಲ್ಲದಿರುವುದು,

ಭಾಷಾ ಸಂರಚನೆ ಹಾಗೂ ಭಾಷಾ ಧ್ವನಿಮೂಲಗಳ ಬಗೆಗೆ ಸಂಕುಚಿತ ಜ್ಞಾನ ಪಡೆದಿರುವುದು, ಪದಗಳನ್ನು ಸರಿಯಾಗಿ ಗುರುತಿಸಲಾಗದಿರುವುದು, ಪದಗಳನ್ನು ಸರಿಯಾದ ಅರ್ಥದೊಡನೆ ಸಂಬಂಧೀಕರಿಸಲಾಗದಿರುವುದು, ಅತಿ ವೇಗವಾಗಿ ತಪ್ಪಿಲ್ಲದೆ ಓದಿದರೂ ಗ್ರಹಣಶಕ್ತಿಯಿಲ್ಲದಿರುವುದು, ಯಥೋಚಿತವಲ್ಲದ ಓದುಗಾರಿಕೆ ಅಭ್ಯಾಸಗಳನ್ನು ರೂಢಿಸಿಕೊಂಡಿರುವುದು ಇತ್ಯಾದಿ.

ಮೂಲಭೂತವಾಗಿ ಬರವಣಿಗೆ ಕೌಶಲದಲ್ಲಿ ದೋಷವಿರುವುದಾದರೆ ಯಾವುದೇ ಪಠ್ಯ ವಿಷಯದಲ್ಲಿಯಾಗಲೀ ಮೌಖಿಕವಾಗಿ ಉತ್ತಮವುಟ್ಟ ಸಾಧಿಸಬಹುದಾದರೂ ಬರವಣಿಗೆ ಹಂತದಲ್ಲಿ ಮುಗ್ಗರಿಸುನಂತಾಗುತ್ತದೆ. ಇಂದಿನ ಶಾಲೆಗಳಲ್ಲಿ ಲಿಖಿತ ರೂಪದ ಪರೀಕ್ಷಾಕ್ರಮವೇ ಜಾರಿಯಲ್ಲಿರುವುದರಿಂದ ಬರವಣಿಗೆ ದೋಷವಿರುವ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಗಳಿಸಲಸಮರ್ಥರಾಗಿರುತ್ತಾರೆ. ಕ್ರಮೇಣ ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗುತ್ತದೆ. ಬರವಣಿಗೆಗೆ ಸಂಬಂಧಿಸಿದ ನ್ಯೂನತೆಗಳು ಹಲವಾರು ರೀತಿಯಲ್ಲಿರಬಹುದು—ಕೈ ಬರಹ ಉತ್ತಮವಾಗಿಲ್ಲದಿರುವುದು, ಅಕ್ಷರ ಜೋಡಣೆ ಹಾಗೂ ಕಾಗುಣಿತ ದೋಷಗಳನ್ನು ಹೊಂದಿರುವುದು, ಬರವಣಿಗೆಗೆ ಅಗತ್ಯವಾದ ಕೈಚಳಕ ಹಾಗೂ ಸಂಘಟನಾಶಕ್ತಿಯಿಲ್ಲದಿರುವುದು, ವಾಕ್ಯರಚನಾ ದೋಷವಿರುವುದು ಇತ್ಯಾದಿ.

ಕೆಲವು ಮಕ್ಕಳು ಯಾಂತ್ರಿಕವಾಗಿ ಕಂಠಪಾಠಮಾಡಿ ಪರೀಕ್ಷೆಯಲ್ಲಿಯೂ ಅದನ್ನೇ ಯಥಾವತ್ತಾಗಿ ನಿರೂಪಿಸಿ ಹೆಚ್ಚು ಅಂಕಗಳನ್ನು ಪಡೆಯಬಲ್ಲವರಾಗಿದ್ದರೂ ನಿರ್ದಿಷ್ಟ ವಿಷಯದ ಪರಿಣಾಮಕಾರೀ ಕಲಿಕೆಗೆ ಅಗತ್ಯವಾದ ಮೂಲಭೂತ ತಿಳುವಳಿಕೆ, ಪರಿಕಲ್ಪನೆ ಹಾಗೂ ಕೌಶಲಗಳನ್ನು ಬೆಳೆಸಿಕೊಳ್ಳುವಲ್ಲಿ ನ್ಯೂನತೆ ಹೊಂದಿರಬಹುದು. ಮತ್ತೆ ಕೆಲವು ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಕಲಿಕೆಗೆ ಅಗತ್ಯವಾದ ಉನ್ನತ ಮಟ್ಟದ ಬೌದ್ಧಿಕ ಕ್ರಿಯೆಗಳಲ್ಲಿಯೇ ನ್ಯೂನತೆಯಿರಬಹುದು. ಉದಾ: ಸ್ಮರಣಶಕ್ತಿಯಿಲ್ಲದಿರುವುದು, ತಾರ್ಕಿಕ ಸಾಮರ್ಥ್ಯವಿಲ್ಲದಿರುವುದು, ಅವಧಾನ ಬಲವಿಲ್ಲದಿರುವುದು ಇತ್ಯಾದಿ. ಶಾಲೆಯಲ್ಲಿ ಬೋಧಕ ಗುರುತಿಸಿ, ಪರಿಹಾರಾತ್ಮಕ ಬೋಧನೆ ಕೈಗೊಂಡು ನಿವಾರಿಸಲಾಗದಂತಹ ತೀವ್ರಸ್ವರೂಪ ನ್ಯೂನತೆಗಳನ್ನು ಕಲಿಕಾ ದೌರ್ಬಲ್ಯ (Learning disabilities) ಗಳೆಂದು ಪರಿಗಣಿಸಿ ವಿಶೇಷ ವಿಶ್ಲೇಷಣೆ ಕೈಗೊಳ್ಳಬೇಕಾಗುವುದು.

ಕಲಿಕಾ ನ್ಯೂನತೆಗಳಿಗೆ ಕಾರಣೀಭೂತವಾದ ಅಂಶಗಳನ್ನು ಕೆಳಕಂಡಂತೆ ನಿರೂಪಿಸಬಹುದು—ವಿದ್ಯಾರ್ಥಿಗಳು ಮಂದಗತಿಯಲ್ಲಿರುವುದು, ಪರಿಪಕ್ವತೆ, ಆಸಕ್ತಿಯಿಲ್ಲದಿರುವುದು, ಇಂದ್ರಿಯ ದೋಷಗಳು, ಮಾತುಗಾರಿಕೆ ದೋಷಗಳು, ಸಂವೇಗಾತ್ಮಕ ಕೊರತೆಗಳು, ನಿರಂತರ ರೋಗರುಜಿನಗಳು, ಉತ್ತಮವಲ್ಲದ ಕೌಟುಂಬಿಕ ಹಾಗೂ ಶಾಲಾ ಪರಿಸರಗಳು, ಪರಿಣಾಮಕಾರಿಯಲ್ಲದ ಬೋಧನಾಕ್ರಮಗಳು, ಪಠ್ಯ ವಿಷಯದ ಬಗೆಗೆ ಇಲ್ಲವೇ ಬೋಧಕರ ಬಗೆಗೆ ವಿದ್ಯಾರ್ಥಿಯ ಅಭಿವೃತ್ತಿ, ಬೌದ್ಧಿಕ ಮಂದಗಾಮ್ಯತೆ ಮತ್ತು ಕಲಿಕಾ ದೌರ್ಬಲ್ಯಗಳು ಇತ್ಯಾದಿ.

ಕಲಿಕಾ ನ್ಯೂನತೆಗಳನ್ನುಳ್ಳ ಮಕ್ಕಳನ್ನು ಗುರುತಿಸಲು ಹಾಗೂ ಪರಿಹಾರಾತ್ಮಕ ಕಾರ್ಯ ಕೈಗೊಳ್ಳಲು ಸಮರ್ಥರೆನಿಸುವ ಶಿಕ್ಷಕರಿಗೆ ಕೆಳಕಂಡ ಅಂಶಗಳು ಅಗತ್ಯವಾಗಿರಬೇಕು.

1 ಕಲಿಕಾ ನ್ಯೂನತೆಗಳ ಸ್ವರೂಪ ಹಾಗೂ ಈ ನ್ಯೂನತೆಗಳನ್ನು ಹೊಂದಿರುವ ವಿದ್ಯಾರ್ಥಿಗಳು ಪ್ರಕಟಪಡಿಸುವ ಲಕ್ಷಣಗಳ ಬಗೆಗೆ ತಿಳುವಳಿಕೆ.

2 ಕಲಿಕಾ ನ್ಯೂನತೆಗಳಿಗೆ ಕಾರಣವಾದ ಅಂಶಗಳ ಬಗೆಗೆ ಯಥೋಚಿತ ಜ್ಞಾನ.

3 ಕಲಿಕಾ ನ್ಯೂನತೆಗಳನ್ನುಳ್ಳ ವಿದ್ಯಾರ್ಥಿಗಳನ್ನು ಗುರುತಿಸಲು ಸೂಕ್ತವಾದ ವಿಧಾನ ಹಾಗೂ ತಂತ್ರಗಳ ಅರಿವು ; ವಿವಿಧ ಸಾಧನಗಳನ್ನು ಹಾಗೂ ತಂತ್ರಗಳನ್ನು ರೂಪಿಸುವ ಮತ್ತು ಉಪಯೋಗಿಸುವ ಕೌಶಲ.

4 ನ್ಯೂನತೆಗಳನ್ನು ಗುರುತಿಸಿದ ನಂತರ, ಅವುಗಳಿಗೆ ಕಾರಣೀಭೂತವಾದ ಅಂಶಗಳನ್ನು ವಿಶ್ಲೇಷಿಸಿ ನಿವಾರಣೆಗೆ ಉಪಯುಕ್ತವಾದ ಪರಿಹಾರಾತ್ಮಕ ಬೋಧನಾ ಕಾರ್ಯಕ್ರಮವನ್ನು ನಿರೂಪಿಸುವ ಸಾಮರ್ಥ್ಯ.

ಆದರೆ ಇಂದು ಈ ದಿಸೆಯಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಲು ದಕ್ಷರಾದ ಶಿಕ್ಷಕರಿಲ್ಲದಿರುವುದು ಗಮನಾರ್ಹವಾಗಿದೆ. ಶಿಕ್ಷಕರಲ್ಲಿ ಮೇಲೆ ಹೇಳಿದ ಸಾಮರ್ಥ್ಯಗಳನ್ನು ವೃದ್ಧಿ ಮಾಡುವುದು ಶಾಲಾ ಬೋಧಕರ ತರಬೇತಿ ಕಾರ್ಯಕ್ರಮದ ಧ್ಯೇಯಗಳಲ್ಲೊಂದಾಗಿದ್ದರೂ ಅಪೇಕ್ಷಿತ ಮಹತ್ವ ದೊರೆಯುತ್ತಿಲ್ಲವೆನ್ನಬಹುದಾಗಿದೆ. ಆದುದರಿಂದ ಪ್ರಸ್ತುತ ಶಿಕ್ಷಕ ತರಬೇತಿ ಕಾರ್ಯಕ್ರಮದಲ್ಲಿ ಕೆಳಕಂಡ ಅಂಶಗಳಿಗೆ ಗಮನ ನೀಡುವುದು ಉಪಯುಕ್ತವಾಗಿದೆ.

1) ಪ್ರತಿಯೊಂದು ಪಠ್ಯ ವಿಷಯದಲ್ಲಿಯೂ ಮೂಲಭೂತವಾದ ತಿಳುವಳಿಕೆ, ಪರಿಕಲ್ಪನೆಗಳು ಹಾಗೂ ಕೌಶಲಗಳ ಕಲಿಕೆಗೆ ವಿಶೇಷ ಗಮನ ನೀಡುವುದು. ಉದಾ : ಶಬ್ದಭಂಡಾರ, ವ್ಯಾಕರಣ ಜ್ಞಾನ, ಓದುಗಾರಿಕೆ ಕೌಶಲ, ಗಣಿತ ಶಾಸ್ತ್ರಕ್ಕೆ ಆವಶ್ಯಕವಾದ ಕೌಶಲಗಳು, ತಾರ್ಕಿಕ ಸಾಮರ್ಥ್ಯ ಇತ್ಯಾದಿಗಳನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುವುದು.

2) ಪ್ರತಿಯೊಂದು ವಿಷಯ, ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿವಿಧ ಬೋಧನಾ ಗುರಿಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳ ಸಾಧನಾಮಟ್ಟವನ್ನು ಅಳೆಯುವುದು ಅಂದರೆ ಜ್ಞಾನ, ತಿಳುವಳಿಕೆ, ಅನ್ವಯ ಇತ್ಯಾದಿ ಮಟ್ಟದ ಗುರಿಗಳಿಗನುಗುಣವಾಗಿ ಸಾಧನಾ ಮಟ್ಟದ ಮೌಲ್ಯಮಾಪನ ಮಾಡಲು ಗಮನ ನೀಡುವುದು.

3) ನೈದಾನಿಕ ಸಾಧನಗಳನ್ನು (Diagnostic tools) ಉಪಯೋಗಿಸಿಕೊಂಡು ಕಲಿಕಾ ನ್ಯೂನತೆಗಳಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಆ ನ್ಯೂನತೆಗಳನ್ನು ತಿಳುವಳಿಕೆ, ಕೌಶಲಗಳು ಹಾಗೂ ಪರಿಕಲ್ಪನೆಗಳೆಂಬುದಾಗಿ ವಿಶ್ಲೇಷಿಸುವುದು.

4) ನ್ಯೂನತೆಗಳ ನಿವಾರಣೆಗೆ ಉಪಯುಕ್ತ ಪರಿಹಾರಾತ್ಮಕ ಕಾರ್ಯಕ್ರಮವನ್ನು ಯೋಜಿಸಿ, ಅನುಸರಣಾಕಾರ್ಯದೊಂದಿಗೆ ಮುಂದುವರಿಸಿಕೊಂಡು ಹೋಗುವುದು,

ನ್ಯೂನತೆ ಅತಿ ತೀವ್ರವಾಗಿದ್ದಾಗ ಕಲಿಕಾ ದೌರ್ಬಲ್ಯಕ್ಕೆ ಕಾರಣವಾಗುವ ಅಂಶಗಳ ವಿಶ್ಲೇಷಣೆ ಕೈಗೊಳ್ಳುವುದು ಇಲ್ಲವೇ ವಿಶೇಷ ತಜ್ಞರ ಸಹಾಯ ಪಡೆಯುವುದು.

5) ಬೋಧನಾ ಕ್ರಮವನ್ನು ಪಠ್ಯ ವಿಷಯ ವಿಶ್ಲೇಷಣೆಯೊಂದಿಗೆ ಸಮಗ್ರೀಕೃತ ಗೊಳಿಸುವುದು. ಪ್ರತಿಯೊಂದು ಬೋಧನಾ ವಿಷಯಗಳಲ್ಲಿಯೂ ತಿಳುವಳಿಕೆ, ಕೌಶಲ ಗಳು, ಪ್ರಕ್ರಿಯೆಗಳು, ಪರಿಕಲ್ಪನೆಗಳು ಇತ್ಯಾದಿ ವರ್ಗಗಳಿಗನುಗುಣವಾಗಿ ವಿಷಯ ವಿಶ್ಲೇಷಣೆ ಕೈಗೊಳ್ಳುವುದು. ಪ್ರತಿಯೊಂದು ವಿಷಯದಲ್ಲಿಯೂ ಪ್ರತಿಯೊಂದು ಘಟಕ ವನ್ನು ಎಷ್ಟು ಪರಿಣಾಮಕಾರಿಯಾಗಿ ಬೋಧಿಸಬಹುದು ; ವೈವಿಧ್ಯಮಯ ಬೋಧನಾ ಕ್ರಮಗಳನ್ನು, ಮಾಧ್ಯಮಗಳನ್ನು ಮತ್ತು ಚಟುವಟಿಕೆಗಳನ್ನು ಎಷ್ಟರಮಟ್ಟಿಗೆ ಬಳಸಿ ಕೊಳ್ಳಬಹುದೆಂಬುದರ ಬಗೆಗೆ ವಿಶೇಷ ಗಮನ ನೀಡುವುದು.

6) ಈ ಮೇಲೆ ನಮೂದಿಸಿರುವ ವಿಷಯಗಳೆಲ್ಲವನ್ನೂ ಕೇವಲ ತಾತ್ವಿಕವಾಗಿ ಬೋಧಿಸದೆ, ಪ್ರಾಯೋಗಿಕ ಕಾರ್ಯಕ್ರಮ ಕೈಗೊಳ್ಳುವುದರ ಮೂಲಕ ಶಿಕ್ಷಕರು ಈ ಬಗೆಗೆ ಕಾರ್ಯರೂಪ ಅನುಭವ ಪಡೆಯುವಂತಾಗಲು ಅವಕಾಶ ಕಲ್ಪಿಸಿಕೊಡುವುದು.

7) ತರಬೇತಿ ಪಡೆದು ಈಗಾಗಲೇ ಸೇವೆ ಸಲ್ಲಿಸುತ್ತಿರುವ ಶಿಕ್ಷಕರುಗಳಿಗಾಗಿ ಮೇಲಿನ ಉದ್ದೇಶವನ್ನೇ ಆಧರಿಸಿ ಹಲವಾರು ಸೇವಾವಧಿ ಕಾರ್ಯಕ್ರಮಗಳನ್ನು ಕೈ ಗೊಳ್ಳುವುದು—ವಿಚಾರ ಗೋಷ್ಠಿಗಳು, ಕಾರ್ಯಾಗಾರ ಶಿಬಿರಗಳು, ನವೀಕರಣ ಶಿಕ್ಷಣ ಕಾರ್ಯಕ್ರಮಗಳು, ಇತ್ಯಾದಿ. ಈ ದಿಸೆಯಲ್ಲಿ ರಾಜ್ಯ ಶಿಕ್ಷಣ ಸಂಸ್ಥೆ, ಪ್ರಾಂತೀಯ ಶಿಕ್ಷಣ ಕಾಲೇಜು, ಅಖಿಲ ಭಾರತ ವಾಕ್‌ಶ್ರವಣ ಸಂಸ್ಥೆ, ಭಾರತೀಯ ಭಾಷಾ ಕೇಂದ್ರೀಯ ಸಂಸ್ಥೆ ಮತ್ತು ಸ್ನಾತಕೋತ್ತರ ಶಿಕ್ಷಣ ವಿಭಾಗಗಳು ಸಹಾಯ ಹಸ್ತವನ್ನು ನೀಡುವುದು ಅತ್ಯಗತ್ಯ.

ಕಲಿಕಾ ನ್ಯೂನತೆಗಳನ್ನುಳ್ಳ ವಿದ್ಯಾರ್ಥಿಗಳ ಸಮಸ್ಯೆಯನ್ನೆದುರಿಸಲು ಶಿಕ್ಷಕ ತರಬೇತಿ ಕಾರ್ಯಕ್ರಮದ ಸುಧಾರಣೆಯ ಜೊತೆಯಲ್ಲಿಯೇ ಪರಿಗಣಿಸಬೇಕಾದ ಇತರ ಅಂಶಗಳು ಕೆಳಕಂಡಂತಿವೆ.

1) ಕಲಿಕಾ ನ್ಯೂನತೆಗಳನ್ನುಳ್ಳ ವಿದ್ಯಾರ್ಥಿಗಳನ್ನು ಗುರುತಿಸಲು ಅವಶ್ಯಕವಾದ ನೈದಾನಿಕ ಸಾಧನಗಳಿಲ್ಲದಿರುವುದು ಗಮನಾರ್ಹವಾಗಿದೆ. ಹಲಕೆಲವು ನೈದಾನಿಕ ಪರೀಕ್ಷಣಗಳು ಪರಕೀಯ ಭಾಷೆಯಲ್ಲಿದ್ದು ಪ್ರಾಂತೀಯ ಭಾಷಾ ಮಾಧ್ಯಮವಿರುವ ಶಾಲೆಗಳಲ್ಲಿ ಉಪಯೋಗಿಸಲಶಕ್ಯವಾಗಿವೆ. ಆದಕಾರಣ ಈ ಶಾಸನಗಳ ತಯಾರಿಕೆಗೆ ವಿಶೇಷ ಗಮನ ನೀಡಿ ಉಚಿತ ಕಾರ್ಯಕ್ರಮ ಕೈಗೊಳ್ಳಬೇಕು.

2) ತಮ್ಮ ಮಕ್ಕಳ ಶಿಕ್ಷಣದ ಬಗೆಗೆ ಉತ್ತಮವಾದ ಮನೋವೃತ್ತಿಗಳನ್ನು ಬೆಳೆಸಿಕೊಳ್ಳಲೂ, ಅವರ ಕಲಿಯುವಿಕೆಗೆ ಪ್ರೋತ್ಸಾಹ ನೀಡಲೂ, ಕಲಿಕಾ ನ್ಯೂನತೆಗಳು, ಅವುಗಳಿಗೆ ಕಾರಣಗಳು ಹಾಗೂ ನಿವಾರಣೋಪಾಯ ಕ್ರಮಗಳು ಇತ್ಯಾದಿ ಬಗೆಗೆ ತಿಳುವಳಿಕೆ ಪಡೆಯಲು ಸಹಾಯಕವಾಗುವಂತೆ ಪೋಷಕರಿಗೂ ಔಪಚಾರಿಕವಾಗಿ

ಯಾಗಲೀ ಲೋಕಾಭಿರಾಮವಾಗಿಯಾಗಲೀ (non-formal way) ಶಿಕ್ಷಣ ನೀಡ ಬೇಕು.

3) ಮಾರ್ಗದರ್ಶನ ಹಾಗೂ ಉಪಬೋಧೆ(counselling) ಕಾರ್ಯಕ್ರಮ ಗಳನ್ನು ಯಶಸ್ವಿಯಾಗಿ ಉಪಯೋಗಿಸಿಕೊಳ್ಳಬೇಕು. ಇದಕ್ಕೆ ಸಂಬಂಧಿಸಿದ ಸಾಧನ ಗಳನ್ನು ಪಡೆಯಲೂ, ಜ್ಞಾನಾರ್ಜನೆಯನ್ನುಂಟುಮಾಡಿಕೊಳ್ಳಲೂ, ಪ್ರತಿಯೊಂದು ಶಾಲೆಯು ಇದರ ಉಪಯೋಗವನ್ನು ಪಡೆಯುವಂತಾಗಲೂ 'ಸಂಪನ್ಮೂಲ ಕೇಂದ್ರ (Resource centres) ಗಳನ್ನು ನಿರ್ಮಿಸಿ ಯೋಜನಾಬದ್ಧವಾಗಿ ಕಾರ್ಯ ಕೈ ಗೊಳ್ಳಬೇಕು.

ಒಟ್ಟಿನಲ್ಲಿ ಕಲಿಕಾ ನ್ಯೂನತೆಗಳನ್ನು ಗುರುತಿಸುವುದು, ವಿಶ್ಲೇಷಿಸುವುದು ಹಾಗೂ ಉಪಯುಕ್ತ ಪರಿಹಾರಾತ್ಮಕ ಕಾರ್ಯಕ್ರಮ ಕೈಗೊಳ್ಳುವುದು—ಈ ಎಲ್ಲ ಜವಾಬ್ದಾರಿ ಕೇವಲ ಶಾಲಾ ಬೋಧಕರಿಗೆ ಮಾತ್ರ ಸೀಮಿತವಾದುದಲ್ಲ. ಈ ಸಮಸ್ಯೆಯನ್ನೆದುರಿಸಲು ಸಮರ್ಥರಾದ ವ್ಯಕ್ತಿಗಳನ್ನು ತಯಾರುಮಾಡುವಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿರುವ ಶಿಕ್ಷಕ ನಿರ್ಮಾಪಕರು, ಆಡಳಿತ ವರ್ಗದವರು, ವಿವಿಧ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕರು ಮುಂತಾದವರೆಲ್ಲರೂ ಸಹಕರಿಸಬೇಕಾದುದು ಅತ್ಯಗತ್ಯವಾಗಿದೆ.

ಆಧಾರ :

1 Bruckner, Leo J. K., Bond, Guy L.—The Diagnosis and Treatment of Learning difficulties, Appleton Centung crafts Inc. New York, 1955.

2 Manjunathaiah B.N. and Yeshodhara K. — Training in Analysis of Learning Deficiencies." Paper presented in the 16th Annual conference of the Karnataka State Association of Teacher Educators, at Davanagere Jan. 1984.

ಬಿ. ಕೆ. ಗುರುರಾಜರಾವ್

ಭಾರತದಲ್ಲಿ ವಿಜ್ಞಾನ-ತಂತ್ರಜ್ಞಾನ ಇತಿಹಾಸದ ಒಂದು ಮುಖ†

ಯೂರೋಪಿನಲ್ಲಿ ವಿಜ್ಞಾನ-ತಂತ್ರಜ್ಞಾನಗಳು ಒಂದು ಪ್ರಭಾವಶಾಲೀ ಸಾಮಾಜಿಕ ಶಕ್ತಿಯಾಗಿ ಬೌದ್ಧಿಕ ಕ್ರಾಂತಿಯಯುಗದಲ್ಲಿ ಕಾಣಿಸಿಕೊಳ್ಳಲು ಅಂಧಕಾರಯುಗದಲ್ಲಿ ಅವನ್ನು ಸಂರಕ್ಷಿಸಿಟ್ಟಿದ್ದ ಅರಬ್ಬೀ ವಿದ್ವಾಂಸರ ಪ್ರಯತ್ನಗಳು ಮುಖ್ಯಕಾರಣವೆಂದು ವಿಜ್ಞಾನದ ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ. ಭಾರತ ಮತ್ತು ಚೀನ ದೇಶಗಳ ವೈಜ್ಞಾನಿಕ ಪದ್ಧತಿಗಳ ಪ್ರಭಾವ ಅರಬ್ಬೀ ವಿದ್ವಾಂಸರ ಮೇಲಿದ್ದುದು ಸಂದೇಹಾತೀತವೆಂದೂ ವಿದ್ವಾಂಸರು ಒಪ್ಪುತ್ತಾರೆ. ಇಷ್ಟಾದರೂ ಭಾರತ-ಚೀನಗಳಲ್ಲಿ ವಿಜ್ಞಾನ ಆಧುನಿಕ ಯೂರೋಪಿನ ಮಟ್ಟಕ್ಕೆ ಏಕೆ ಬೆಳೆಯಲಿಲ್ಲವೆಂಬುದು ವಿಚಾರಾರ್ಹ.

ಒಂದು ಪ್ರಭಾವೀ ಗುಂಪಿನ ವಿದ್ವಾಂಸರು "ವ್ಯಕ್ತಿಗತವಾಗಿ ಚೀನೀಯರಲ್ಲಿ ವಿಜ್ಞಾನವನ್ನು ಅಳವಡಿಸಿಕೊಳ್ಳುವ ಆಂತರಿಕ ಶಕ್ತಿಯ ಅಭಾವವಿತ್ತು ಮತ್ತು ಚೀನೀ ವೈಜ್ಞಾನಿಕ ಸಾಧನೆ ನಿಜಕ್ಕೂ ಅಗ್ರಾಹ್ಯ. ಚೀನವನ್ನು ಅದರ ಪಾಡಿಗೆ ಬಿಟ್ಟಿದ್ದಿದ್ದರೆ ಅದು ವಿಜ್ಞಾನರಂಗದಲ್ಲಿ ಯಾವುದೇ ಪ್ರಗತಿಯನ್ನು ಸಾಧಿಸುತ್ತಿತ್ತೆಂದು ಹೇಳಲಾಗದು. ಭಾರತದ ಒಗೆಗಂತೂ ಇದು ಸತ್ಯ" ಎಂದು ಖಚಿತವಾಗಿ ನಂಬಿದ್ದರು.

ಜೋಸೆಫ್ ನೀಡ್ಹ್ಯಾಮರ ಪ್ರಗಲ್ಭ ಸಂಶೋಧನೆಯು ಚೀನೀಯರು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ಜಡರಾಗಿರಲಿಲ್ಲ ಮತ್ತು ಸಾಮಾಜಿಕ ಆವಶ್ಯಕತೆಯಿಂದ ಕಳಚಿಕೊಂಡಿರಲಿಲ್ಲವೆಂಬ ಸತ್ಯವನ್ನು ನಿರೂಪಿಸಬೇಕಾಯಿತು. ದುರಾದೃಷ್ಟವಶಾತ್ ಇತ್ತೀಚೆಗಷ್ಟೇ ಭಾರತ ಉಪಖಂಡದ ವಿಜ್ಞಾನ-ತಂತ್ರಜ್ಞಾನ ಸಂಪ್ರದಾಯದ ಬಗ್ಗೆ ಅನ್ವೇಷಣೆಯ ಪ್ರಯತ್ನ ನಡೆದಿದೆ. "ರಾಷ್ಟ್ರೀಯ ವಿಜ್ಞಾನ-ತಂತ್ರಜ್ಞಾನ ಮತ್ತು ಅಭಿವೃದ್ಧಿಪರ ಅಧ್ಯಯನಗಳ ಸಂಸ್ಥೆ"ಯ ನಿರ್ದೇಶಕ ಮತ್ತು "ಸಂಸ್ಕೃತ, ಅರಬ್ಬೀ ಮತ್ತು ಪರ್ಶಿಯ ಭಾಷೆಗಳಲ್ಲಿ ಮಧ್ಯಯುಗದ ವಿಜ್ಞಾನ-ತಂತ್ರಜ್ಞಾನದ ಬಗೆಗಿರುವ ಸಾಹಿತ್ಯದ ಗ್ರಂಥಸೂಚಿ"ಯ ಸಂಪಾದಕರಾದ ಪ್ರಾ। ರಹಮಾನ್ ಈ ಕ್ಷೇತ್ರದಲ್ಲಿ ಆದ್ಯಪ್ರವರ್ತಕ

---

† ಮೂಲ : ಜಿ. ಬಾಲಚಂದ್ರನ್ – ದಿ ಹಿಂದೂ, ಶುಕ್ರವಾರ 9-3-1984, ಪುಟ-11.

ರೊಬ್ಬರಾಗಿದ್ದಾರೆ. ಮೂಲತಃ ಜೀವ ವಿಜ್ಞಾನಿಯಾದ ಪ್ರಾ| ರಹಮಾನ್ ವಿಜ್ಞಾನ ಇತಿಹಾಸದಲ್ಲಿ ಅಗ್ರಗಣ್ಯರಾದ ಜಾರ್ಜ್ ಸಾರ್ಟನ್ನರ ಒಂದು ಭಾಷಣವನ್ನು ಕೇಳಿದ ನಂತರ ವಿಜ್ಞಾನ ಇತಿಹಾಸದ ಅಧ್ಯಯನದತ್ತ ಗಮನ ಹರಿಸಿದರು. '12ನೇ ಶತಮಾನದ ನಂತರ ಭಾರತದಲ್ಲಿ ವಿಜ್ಞಾನವೇ ಇರಲಿಲ್ಲ, ಏಕೆಂದರೆ ಮುಸ್ಲಿಮರು ಅದನ್ನು ಹಾಳು ಮಾಡಿದರು ಎಂಬ ಸಾರ್ಟನ್ನರ ಹೇಳಿಕೆ ನಮ್ಮ ಗ್ರಂಥ ಭಂಡಾರಗಳಲ್ಲಿರುವ ಸಾಮಗ್ರಿಗಳಿಂದ ಸತ್ಯದೂರವೆಂಬುದನ್ನು ನಾನು ಈಗ ಅರಿತಿದ್ದೇನೆ' ಎಂದು ಪ್ರಾ| ರಹಮಾನ್ ಹೇಳಿದ್ದಾರೆ. ಅವರು ಭಾರತಕ್ಕೆ ಹಿಂದಿರುಗಿದ ನಂತರ ಭಾರತ ರಾಷ್ಟ್ರೀಯ ವಿಜ್ಞಾನ ಸಂಸ್ಥೆಯನ್ನು ವಿಜ್ಞಾನ ಇತಿಹಾಸದ ಅಧ್ಯಯನ ಮಾಡಲು ಒಂದು ಸಣ್ಣ ತಂಡವನ್ನು ಯೋಜಿಸುವಂತೆ ಪ್ರೇರಿಸಿದರು. ಈ ಶತಮಾನದ ಐದನೇ ದಶಕದಲ್ಲಿ ಅಧ್ಯಯನ ಪ್ರಾರಂಭವಾಗಿ ಎರಡು ದಶಕಗಳ ತರುವಾಯ 1982ರಲ್ಲಿ ವಿಜ್ಞಾನ ಸಾಮಗ್ರಿಗಳ ಗ್ರಂಥಸೂಚಿ ಪ್ರಕಟವಾಯಿತು.

ಈ ಗ್ರಂಥಸೂಚಿ ಸುಮಾರು 10,000 ಹಸ್ತಪ್ರತಿಗಳ ವಿವರಗಳನ್ನೊಳಗೊಂಡಿದ್ದು ಇದು ಒಟ್ಟು ದೊರಕುವ ಸಾಹಿತ್ಯದಲ್ಲಿ ಸುಮಾರು ಅರ್ಧವಷ್ಟಿದೆ.

30 ವರ್ಷಗಳಿಗೂ ಹೆಚ್ಚು ಕಾಲದಿಂದ ಭಾರತದ ವಿಜ್ಞಾನ-ತಂತ್ರಜ್ಞಾನಗಳ ಮಧ್ಯಯುಗೀನ ಇತಿಹಾಸದ ಅಧ್ಯಯನದಲ್ಲಿ ತೊಡಗಿರುವ ಪ್ರಾ| ರಹಮಾನ್ ಭಾರತೀಯ ವಿಜ್ಞಾನದ ಬಗೆಗಿನ ಐರೋಪ್ಯ ಭಾವನೆಗಳಿಗೆ ಹೇಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆಂಬುದನ್ನು ಪರಿಶೀಲಿಸೋಣ.

ಮೂಲತಃ ಏನಾಯಿತೆಂದರೆ ಬ್ರಿಟಿಷರ ವಸಾಹತುಶಾಹಿ ಭಾರತೀಯ ವಿಜ್ಞಾನ-ತಂತ್ರಜ್ಞಾನಗಳ ನೈಸರ್ಗಿಕ ಪ್ರಗತಿಯನ್ನು ಕುಂಠಿತಗೊಳಿಸಿತು. ಅದನ್ನು ಈ ರೀತಿ ಹೇಳಬಹುದು. ಯುರೋಪಿನಲ್ಲಿ ವಿಜ್ಞಾನ-ತಂತ್ರಜ್ಞಾನಗಳ ಪರಂಪರೆಯನ್ನು ವಿಶ್ಲೇಷಿಸಿದ್ದೇ ಆದರೆ ಅವು ಏಕರೂಪಕವಾದ ಮತ್ತು ಕ್ರಮಾನುಗತವಾದ ಬೆಳವಣಿಗೆಯಾಗಿರಲಿಲ್ಲವೆಂಬುದನ್ನು ಕಾಣಬಹುದು. ಸಮುಚಲನೆಯಿದ್ದ ಮೂರು ಸ್ವತಂತ್ರ ಹೊನಲುಗಳನ್ನು ಕಾಣುತ್ತೇವೆ. ಅವುಗಳಲ್ಲೊಂದು ಚರ್ಚೆಗೆ ಸಂಬಂಧಿಸಿದುದು—ಬೌದ್ಧಿಕ ಮೂಲದ ಗಣಿತಶಾಸ್ತ್ರ, ಖಗೋಳಶಾಸ್ತ್ರ ಮತ್ತು ವೈದ್ಯ ಇವುಗಳಲ್ಲಿ ಅರಬ್ಬೀ ಭಾಷಾಂತರ ಮೂಲಕ ಏಷ್ಯ ಸಂಸ್ಕೃತಿಗಳಿಂದ ಬಹುಮಟ್ಟಿಗೆ ಎರವಲು ಪಡೆಯಲಾಗಿತ್ತು. ಎರಡನೇ ಹೊನಲು ಗಣಿವಿಜ್ಞಾನ, ಲೋಹಶಾಸ್ತ್ರಗಳಿಗೆ ಸಂಬಂಧಿಸಿದ ಅನ್ವಯಿಕ ಕಾರ್ಯಗಳಿಗೆ ಸಂಬಂಧಿಸಿದುದು. ಮೂರನೇ ಹೊನಲು ಪ್ರವಾಸಿಗಳಿಂದ, ತದನಂತರದ ಕಾಲದಲ್ಲಿ ವರ್ತಕರು ಮತ್ತು ಅನ್ವೇಷಕರಿಂದ ಬೆಳೆಸಲಾದ ಭೂಗೋಳಶಾಸ್ತ್ರ, ಭೂಗರ್ಭಶಾಸ್ತ್ರ ಮತ್ತು ಮಾನವಶಾಸ್ತ್ರಗಳಿಗೆ ಸಂಬಂಧಿಸಿದುದಾಗಿವೆ. ಈ ವರ್ಗಗಳ ಜನರು ಹೊಸದಾದ ನಮೂನೆಗಳನ್ನು ಹೊರದೇಶಗಳಿಂದ ಯೂರೋಪಿಗೆ ತಂದರು. ಈ ಬಗ್ಗೆ ಬಹಳಷ್ಟು ಮಂದಿಗೆ ಸರಿಯಾದ ತಿಳುವಳಿಕೆ ಇಲ್ಲವೆಂದೇ ಹೇಳಬೇಕು. ಈ ಹೊಸ ನಮೂನೆಗಳ ಶೋಧನೆಗಳಿಂದ ಜ್ಞಾನಾಭಿವೃದ್ಧಿಯಾಯಿತು. 19 ನೇ ಶತಮಾನದ ಪರಿಸರದಲ್ಲಿ ಈ

ಪ್ರಮುಖ ಹೊನಲುಗಳ ಸಮ್ಮಿಳನವಾದುದರ ಫಲವಾಗಿ ಸಂಶೋಧನ ವಿಧಾನಗಳ ಆವಿಷ್ಕಾರ ಒಂದು ಪ್ರಮುಖ ಸಾಧನವಾಯಿತು.

"ನನ್ನ (ರಹಮಾನರ) ಸೀಮಿತವಾದ ಸಂಶೋಧನೆಯ ಆಧಾರದ ಮೇಲೆ ಮಧ್ಯ ಯುಗೀನ ಭಾರತದಲ್ಲಿ ಗಣಿತಶಾಸ್ತ್ರ, ಖಗೋಳಶಾಸ್ತ್ರ ಮತ್ತು ವೈದ್ಯಕೀಯ ಶಾಸ್ತ್ರಗಳ ಬಗೆಗೆ ಬಹಳ ಉನ್ನತ ಮಟ್ಟದ ಜ್ಞಾನವಾಹಿನಿ ಪ್ರವಹಿಸುತ್ತಿತ್ತೆಂದು ತಿಳಿದು ಬರುತ್ತದೆ. ಹಾಗೆಯೇ ಕೃಷಿ, ಗಣಿ ವಿಜ್ಞಾನ ಮತ್ತು ಲೋಹಶಾಸ್ತ್ರ ಮೊದಲಾದ ಆನ್ವಯಿಕ ವೃತ್ತಿಗಳ ಬಗೆಗೂ ಪ್ರಗತಿಶೀಲ ವೈಜ್ಞಾನಿಕ ಸ್ರೋತ ಅಸ್ತಿತ್ವದಲ್ಲಿತ್ತು. 17 ನೇ ಹಾಗೂ 18 ನೇ ಶತಮಾನಗಳವರೆಗೂ ಇಂಥ ಆನ್ವಯಿಕ ವಿಷಯಗಳಲ್ಲಿ ಭಾರತೀಯರ ತಿಳಿವಳಿಕೆ ಯುರೋಪಿಯರಿಗಿಂತಲೂ ಬಹಳ ಮುನ್ನಡೆಯನ್ನು ಹೊಂದಿತ್ತು. ಉದಾ: ಸತುವಿನ ಬಗೆಗೆ ನೋಡೋಣ. ಸತುವಿನ ಬಗೆಗೆ ಯೂರೋಪೀಯರು 16 ನೇ, ಬಹುಶಃ 17ನೇ ಶತಮಾನದವರೆಗೂ ಏನನ್ನೂ ತಿಳಿದಿರಲಿಲ್ಲ. ಅವರು ಬಹುಶಃ ಏಷ್ಯನ್ನರಿಂದ ಅದರ ಬಗೆಗೆ ಮಾಹಿತಿ ಪಡೆದುಕೊಂಡರು. ಆದರೆ ನಾವು ಭಾರತೀಯರು ಕ್ರಿ.ಶ. 10 ನೇ ಶತಮಾನದಿಂದ ಸತುವನ್ನು ಬಳಸುತ್ತಿದ್ದುದಕ್ಕೆ ಭೂಗರ್ಭ ಶಾಸ್ತ್ರ ಧಾರಗಳು ಖಚಿತವಾಗಿವೆ. ಐನ್–ಇ–ಅಕ್ಬರೀ ಗ್ರಂಥವು ಇದು ಯೂರೋಪೀಯರಿಗೆ ತಿಳಿದಿರಲಿಲ್ಲವೆಂದು ಖಚಿತವಾಗಿ ಹೇಳಿದೆ ಮತ್ತು ಆ ಬಗ್ಗೆ ಒಂದು ವಿಧಾನವನ್ನು ವಿವರಿಸಿದೆ."

ಹಾಗಾದರೆ ಭಾರತದಲ್ಲಿ ಈ ವೈಜ್ಞಾನಿಕ ಅರಿವಿನ ವರ್ಗೀಕರಣ ಮತ್ತು ವ್ಯವಸ್ಥೀ ಕರಣ ಕಾರ್ಯಗಳು ಏಕೆ ನಡೆಯಲಿಲ್ಲವೆಂಬ ಪ್ರಶ್ನೆ ಸಹಜವಾಗಿಯೇ ಏಳುತ್ತವೆ. ಪ್ರಾ॥ ರಹಮಾನ್‌ರ ಅಭಿಪ್ರಾಯದಲ್ಲಿ "ಉತ್ಪಾದನಾ ತಂತ್ರಗಳು ಬದಲಾದಾಗ ಮಾತ್ರ ತುಲನೆ ಮತ್ತು ವರ್ಗೀಕರಣದ ಪ್ರಶ್ನೆ ಹುಟ್ಟುತ್ತದೆ. ಲಾಭಕ್ಕೋಸ್ಕರ ಕೆಲಸ ಮಾಡು ವಾಗ ಪ್ರತಿಯೊಂದನ್ನು (ಖರ್ಚು, ಬಳಸಿದ ಸಾಮಗ್ರಿ ಮುಂತಾದವನ್ನು) ತುಲನಾತ್ಮಕ ವಾಗಿ ನೋಡಬೇಕಾಗುತ್ತದೆ. ಭಾರತದಲ್ಲಿ ಉತ್ಪಾದನಾ ಸಂಬಂಧದಲ್ಲಿ ಬದಲಾವಣೆ ಗಳು ಆಗಲೇ ಇಲ್ಲ. ಆದರೆ "ಕೆಲವು ಪ್ರಗತಿದಾಯಕ ಅಂಶಗಳು ಅಸ್ತಿತ್ವದಲ್ಲಿದ್ದುದರ ಬಗೆಗೆ ಸೂಚನೆಗಳು ಅಲ್ಲಲ್ಲಿ ಕಂಡು ಬರುತ್ತದೆ. ಮತ್ತು ವಸಾಹತುಶಾಹಿ ಈ ಕಾರ್ಯಕ್ಕೆ ಅಡ್ಡಿ ಮಾಡದಿದ್ದಿದ್ದರೆ ನಾವು ಈ ದಿಶೆಯಲ್ಲಿ ಸಂಯೋಜನೆಯನ್ನು ಸಾಧಿಸಬಹುದಿತ್ತು. ಆದರೆ ಇದು ಊಹಾತ್ಮಕವಾದುದು"

ಪ್ರಗತಿದಾಯಕ ಅಂಶಗಳಾವುವು ? ಉದಾ : ವೈಜ್ಞಾನಿಕ ತಿಳುವಳಿಕೆಯನ್ನು ಸಮಾಜೀಕರಣಗೊಳಿಸುವ ಪ್ರಯತ್ನಗಳು ನಡೆದವು. "1341ರಲ್ಲಿ ಹಾಜಿ ಮೊಹ ಮ್ಮದ್ ಅಲ್ ಘಜ್ನವಿ ಎಂಬುವವನೊಬ್ಬನಿಂದ ಗಣಿತಶಾಸ್ತ್ರ ಗ್ರಂಥವೊಂದು ರಚಿತ ವಾಯಿತು. ಆತನು ಧಾರ್ಮಿಕ ವ್ಯಕ್ತಿ. ಆತನು ತನ್ನ ಗ್ರಂಥದಲ್ಲಿ ಬರೆದ ಒಂದು ವಾಕ್ಯ ಈ ರೀತಿಯಾಗಿದೆ : ಗಣಿತಶಾಸ್ತ್ರ ಯಾವುದೇ ವಿವಾದಾಸ್ಪದ ಅಥವಾ ಭಿನ್ನಾಭಿ ಪ್ರಾಯಗಳಿಗೆ ಎಡೆಕೊಡುವ ಕ್ಷೇತ್ರವಲ್ಲ, ಆದರೆ ಮತೀಯ ವಿಷಯಗಳು ಸಂದೇಹಗಳಿಗೆ

ಮತ್ತು ವಿವಾದಗಳಿಗೆ ಒಳಪಡುವಂಥ ಕ್ಷೇತ್ರ. ಮತ ಮತ್ತು ವಿಜ್ಞಾನಗಳ ನಡುವಣ ಇಂಥ ವಿಭಿನ್ನತೆ ಅದನ್ನು ಸಮಾಜೀಕರಿಸುವ ಒಂದು ಪ್ರಯತ್ನವೆಂದು ನಾನು ಭಾವಿಸುತ್ತೇನೆ" ಎಂದು ಪ್ರೊ| ರಹಮಾನ್ ಹೇಳಿದ್ದಾರೆ. ಅಥವಾ ಜಯಪುರದ ರಾಜಾ ಜಯಸಿಂಹನ ಬಗ್ಗೆ ವಿಚಾರಿಸೋಣ: ಆತನು ಪಂಚಾಂಗದ ಸುಧಾರಣೆಯನ್ನು ಮಾಡಲೆಳಸಿದನು; ಏಕೆಂದರೆ ವೀಕ್ಷಿಸಿದ ಮತ್ತು ಗುಣಿಸಿದ ಋತುಮಾನಗಳಲ್ಲಿ ವ್ಯತ್ಯಾಸಗಳಿದ್ದುದರಿಂದ ಕೃಷಿಕಾರ್ಯ, ಹಬ್ಬಹರಿದಿನಗಳು, ಸಮಾರಂಭಗಳು ಮೊದಲಾದವುಗಳ ಆಚರಣೆಯಲ್ಲಿ ಬಹಳಷ್ಟು ಗಲಿಬಿಲಿಯುಂಟಾಗುತ್ತಿತ್ತು. ಪಂಚಾಂಗ ಸುಧಾರಣೆಯ ದಿಶೆಯಲ್ಲಿ ಆತ ಮಾಡಿದ್ದಾದರೂ ಏನು? ಯುರೋಪ್, ಮಧ್ಯ ಏಷ್ಯ ಮತ್ತು ಪಶ್ಚಿಮ ಏಷ್ಯದ ದೇಶಗಳಿಗೆ ತನ್ನ ದೂತರನ್ನು ಕಳಿಸಿದನು; ಅವರು ಆ ಪ್ರದೇಶಗಳಲ್ಲಿ ಖಗೋಳಶಾಸ್ತ್ರದ ಅಧ್ಯಯನದಲ್ಲಿ ಆಗಿದ್ದ ನೂತನ ಪ್ರಗತಿಯನ್ನು ತಿಳಿದುಬರುವುದು ಅವರ ಕರ್ತವ್ಯವಾಗಿತ್ತು. ಅವರ ಕೃತಿಗಳನ್ನು ಭಾಷಾಂತರ ಮಾಡಿಸಿದನು ಮತ್ತು ಅವರನ್ನು ತನ್ನ ರಾಜ್ಯಕ್ಕೆ ಆಹ್ವಾನಿಸಿದನು. ಫಾದರ್ ಬೂಡಿಯರ್ (Boudier) ತನ್ನ ದೂರದರ್ಶಕದೊಂದಿಗೆ ಜಯಪುರಕ್ಕೆ ಬಂದನು. ಮಹಾರಾಜಾ ಜಯಸಿಂಹನು ತನ್ನ ಉಪಕರಣಗಳ ನ್ಯೂನತೆಗಳೇನೆಂಬುದನ್ನು ತಿಳಿದುಕೊಳ್ಳಬಯಸಿದ್ದನು. ಅವನು ಐದು ಗ್ರಹವೀಕ್ಷಣಾಗಾರಗಳನ್ನು ಕಟ್ಟಿಸಿದನು. ಇದಕ್ಕಿಂತಲೂ ಹೆಚ್ಚು ಸುವ್ಯವಸ್ಥಿತವಾದ ವಿಧಾನವೇನಾದರೂ ಉಂಟೆಂದು ಭಾವಿಸಲು ಸಾಧ್ಯವೇ? ಆತನು ತಾನು ಹಿಂದೂ ಮತ್ತು ಮುಸ್ಲಿಮರ ಸಲಹೆಗಳನ್ನು ಮಾತ್ರ ಪಡೆಯುವುದಾಗಿ ಹೇಳಲಿಲ್ಲ; ಅದು ನಿಜಕ್ಕೂ ಒಂದು ಅಂತರರಾಷ್ಟ್ರೀಯ ವಿಜ್ಞಾನವೆಂದು ಅರಿತಿದ್ದನು.

"ಈ ಕುತೂಹಲಕಾರಿ ಕ್ಷೇತ್ರಗಳ ಸಾಕಷ್ಟು ಆಳವಾದ ಅಧ್ಯಯನ ಆಗಿಲ್ಲ. ಈ ಜ್ಞಾನವನ್ನು ಸಮೀಕರಿಸುವ ಮತ್ತು ಸಾಂಘಿಕಗೊಳಿಸುವ ದಿಶೆಯಲ್ಲಿ ಪ್ರಯತ್ನಗಳು ನಡೆದಿವೆ. ಇದು ಹೀಗಿರುವಲ್ಲಿ ಮಧ್ಯಯುಗದಲ್ಲಿ ಇದನ್ನು ಅಭಿವೃದ್ಧಿಗೊಳಿಸುವತ್ತ ಪ್ರಮುಖ ಪ್ರಯತ್ನ ನಡೆದಿರಲೇಬೇಕು. ಈ ಪ್ರಯತ್ನ ಸಹ ಮಧ್ಯಯುಗದ ವಸಾಹತುಶಾಹಿಯಿಂದ ಅಡ್ಡಿಗೊಂಡಿರಬಹುದೇ? ವಸಾಹತುಶಾಹಿ ಬಂದಿರದಿದ್ದರೆ ಏನು ಆಗುತ್ತಿತ್ತೆಂದು ನಾವು ಈಗ ಊಹಿಸಿಕೊಳ್ಳಬಹುದಷ್ಟೆ." ಸಹಜವಾಗಿಯೇ ಅದನ್ನು ತಿಳಿಯಲು ಸಹ ಸತತವಾದ ಸಂಶೋಧನೆ ನಡೆಯಬೇಕಾಗಿದೆ.

ಪ್ರಚಲಿತ ಸಮಸ್ಯೆಗಳಿಗೆ ಇಂಥ ಐತಿಹಾಸಿಕ ಸಂಶೋಧನೆಗಳ ಸಾಂಗತ್ಯವೇನು ಎಂಬ ಪ್ರಶ್ನೆಗೆ ಪ್ರೊ|| ರಹಮಾನ್ ಅವು ಬಹಳ ಅವಶ್ಯವೆನ್ನುತ್ತಾರೆ.

ಉದಾ: ಆಲಿಘರ್ ಜಿಲ್ಲೆಯ ಹೆಸ್ಸಿಯನ್ ಗ್ರಾಮದವರು ಗುಲಾಬಿಯನ್ನು ವ್ಯಾಪಕವಾಗಿ ಬೆಳೆಯುತ್ತಾರೆ. ಅಲ್ಲಿ ಸುಗಂಧದ್ರವ್ಯ ಮತ್ತು ಅಂಗರಾಗಗಳ ತಯಾರಿಕಾ ಉದ್ಯಮ ನೆಲೆಸಿದೆ. ಅದೊಂದು ಗ್ರಾಮೀಣ ಕೈಗಾರಿಕೆ. ಒಂದು ಕಾಲದಲ್ಲಿ ಭಾರತವು ಸುಗಂಧದ್ರವ್ಯ-ಅಂಗರಾಗ ಉತ್ಪಾದನೆಗೆ ಬೇಕಾದ ಗುಲಾಬಿ ಸಾರವನ್ನು ಒದಗಿಸುತ್ತಿತ್ತು; ಈಗ ಬಲ್ಗೇರಿಯಾ ಅದನ್ನು ನಿರ್ವಹಿಸುತ್ತಿದೆ. ಈಗ ವಿಜ್ಞಾನ ಮತ್ತು

ಕೈಗಾರಿಕಾ ಸಂಶೋಧನಾ ಸಂಸ್ಥೆಯ ಅಂಗವಾಗಿ ನಾವು ಅವರ ತಂತ್ರಜ್ಞಾನವನ್ನು ಸುಧಾರಿಸುವುದರ ಮೂಲಕ ಅವರ ಉದ್ಯಮ ಫಲದಾಯಕವಾಗಿಯೂ ಮತ್ತು ಸ್ಪರ್ಧಾತ್ಮಕವಾಗಿಯೂ ಆಗುವಂತೆ ಮಾಡಬಯಸುತ್ತೇವೆ. ಅಲ್ಲಿಗೆ ಹೋಗಿ ಅದನ್ನು ಭಟ್ಟಿಯಿಳಿಸುವ ಯಾಂತ್ರಿಕ ಉಪಕರಣಗಳೇನೆಂದು ಅವರನ್ನು ವಿಚಾರಿಸಿದಾಗ ನೂರ್‌ಜಹಾನಳ ಭಟ್ಟಿಯಂತ್ರವನ್ನು — ನೂರ್‌ಜಹಾನ್-ಕಾ-ಬಾಬ್ಕಾ — ಬಳಸುತ್ತಿರುವುದಾಗಿ ತಿಳಿದುಬಂತು. ಜಹಾಂಗೀರನ ದಿನಚರಿ ಪುಸ್ತಕದಲ್ಲಿರುವ ಒಂದು ವಿವರಣೆಯಲ್ಲಿ ನೂರ್‌ಜಹಾನಳ ತಾಯಿ ಈ ಸುಗಂಧದ್ರವ್ಯವನ್ನು ತಯಾರಿಸುತ್ತಿದ್ದಳೆಂದು ಸ್ಪಷ್ಟವಾಗಿ ತಿಳಿದುಬಂದಿದೆ ; ಮತ್ತು ಆಕೆಯೇ ಅದಕ್ಕೆ ಆ ಹೆಸರನ್ನು ನೀಡಿದ್ದಾಳೆಂದು ಹೇಳಲಾಗಿದೆ. ಇದರಿಂದ 17ನೇ ಶತಮಾನದಿಂದ ಈವರೆಗೆ ಅದೇ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರಲಾಗಿದೆ. ಇದರಿಂದ ತಿಳಿದುಬರುವುದೇನೆಂದರೆ, ಜಪಾನಿನಲ್ಲಾದಂತೆ ವಿಜ್ಞಾನ-ತಂತ್ರಜ್ಞಾನ ಸಂಶೋಧನೆಗಳು ಕುಶಲಕರ್ಮಿ-ವೃತ್ತಿನಿರತರ ಮೇಲೆ ಪ್ರಭಾವ ಬೀರಿರುವಂತೆ ಭಾರತದ ಕುಶಲ ಕರ್ಮಿಗಳ ವೈಜ್ಞಾನಿಕ-ತಂತ್ರಜ್ಞಾನಗಳ ಮೇಲೆ ಪ್ರಭಾವವೇರ್ಪಟ್ಟಿಲ್ಲ. ಈ ಕಾರಣದಿಂದ ದ್ವಿಮುಖ ಉತ್ಪಾದನಾ ವಿಧಾನ ಬೆಳೆದು ಬಂದಿದೆ. ಒಂದು, ಆಮದಾದ ವಿದೇಶೀಯ ಆಧುನಿಕ ತಂತ್ರಜ್ಞಾನ ಆಧಾರಿತ. ಮತ್ತೊಂದು, ದೇಶೀಯ ಸಂಪ್ರದಾಯಸ್ಥ ವೃತ್ತಿನಿರತರ ವಿಧಾನ ; ಇವರು ಈಗ ಹೆಚ್ಚು ಬಡವರಾಗುತ್ತಿದ್ದಾರೆ. ಏಕೆಂದರೆ ಅವರ ಮಾರುಕಟ್ಟೆ ನಶಿಸುತ್ತಿದೆ, ಅವರವರ ಉತ್ಪನ್ನಗಳು ಹಿಂದುಳಿದ ತಂತ್ರಜ್ಞಾನದ ಕಾರಣದಿಂದ ಸುಧಾರಣೆಗೊಂಡಿಲ್ಲ.

ನಮ್ಮ ಸಮಾಜದಲ್ಲಿ ನೆಲೆಗೊಂಡಿರುವ ಇಂಥ ದ್ವೈಧೀಕರಣದ ವಿಸರ್ಜನೆಗೆ ಐತಿಹಾಸಿಕ ದೃಷ್ಟಿ ಬಹಳ ಅವಶ್ಯಕವಾಗಿದೆ. ಸಾಂಪ್ರದಾಯಿಕ ವಿಧಾನಗಳೊಂದಿಗೆ ಆಧುನಿಕ ತಂತ್ರಜ್ಞಾನದ ಆವಿಷ್ಕಾರಗಳನ್ನು ಮಿಲನಗೊಳಿಸದಿದ್ದರೆ ನಮ್ಮ ಪರಿಸ್ಥಿತಿ ಕ್ಲಿಷ್ಟವಾಗುತ್ತದೆ.

ಪ್ರಾ|| ರಹಮಾನ್ ನಮ್ಮ ಪೂರ್ವಾರ್ಜಿತ ವಿಜ್ಞಾನ-ತಂತ್ರಜ್ಞಾನಗಳ ಸರಿಯಾದ ಮೌಲ್ಯಮಾಪನದ ದಿಶೆಯಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳಾಗಬೇಕಾಗಿದೆಯೆಂದು ಭಾವಿಸಿದ್ದಾರೆ. ಅವರ ಪ್ರಕಾರ, ಅವರ ಗ್ರಂಥಸೂಚಿ ಸಂಸ್ಕೃತ, ಅರಬ್ಬೀ ಮತ್ತು ಪರ್ಷಿಯನ್ ಗ್ರಂಥಗಳಿಗೆ ಸೀಮಿತವಾಗಿದೆ. ತಮಿಳು, ಮಲೆಯಾಳಂ ಮತ್ತಿತರ ಭಾಷೆಯಲ್ಲಿರುವ ಗ್ರಂಥಗಳನ್ನು ಪರಿಶೀಲಿಸಿಲ್ಲ. ಅವುಗಳನ್ನು ನೋಡಬೇಕಾಗಿದೆ. ತಮಿಳು ವಿಶ್ವವಿದ್ಯಾನಿಲಯ (ತಂಜಾವೂರು) ಸಹಯೋಗದೊಂದಿಗೆ ಕೈಗೊಂಡಿರುವ ಒಂದು ಯೋಜನೆಯಲ್ಲಿ ಸಮುದ್ರಯಾನಕ್ಕೆ ಸಂಬಂಧಿಸಿದ ವಿಜ್ಞಾನದ ಬಗ್ಗೆ ಸಂಶೋಧನೆ ಮಾಡಲಾಗುತ್ತದೆ ; ಆ ಯೋಜನೆಯಡಿಯಲ್ಲಿ ಸಮುದ್ರಯಾನಕ್ಕಿಂತ ಭಿನ್ನವಾದ ಇತರ ವಿಷಯಗಳ ಅಧ್ಯಯನ ನಡೆಸುವ ಸಾಧ್ಯತೆಯಿದೆ ; ಏಕೆಂದರೆ ರಸತಂತ್ರವಿದ್ಯೆ, ಖಗೋಳ ಶಾಸ್ತ್ರ ಮತ್ತು ಗಣಿತಶಾಸ್ತ್ರಗಳ ಬಗ್ಗೆ ತಮಿಳಿನಲ್ಲಿ ಸಾಕಷ್ಟು ಸಾಹಿತ್ಯ ಲಭ್ಯವಿದೆ.

ಈವರೆಗೆ ಭಾರತೀಯ ವಿಜ್ಞಾನದ ಮೇಲ್ಪದರವನ್ನು ಮಾತ್ರ ಕೆರೆಯಲಾಗಿದೆಯೆಂಬ ವಿಷಯ ಪ್ರಶ್ನಾತೀತವಾದುದು ; ಮತ್ತು ನಮ್ಮ ವೈಜ್ಞಾನಿಕ-ತಂತ್ರಜ್ಞಾನ ಸಂಬಂಧವಾದ ಅನುಪೂರ್ವಿಯ ಸರಿಯಾದ ಗುಣಗ್ರಹಣಕ್ಕೆ ಮಾಡಬೇಕಾದದ್ದು ಬಹಳಷ್ಟಿದೆ.

o-O-o

ಪ್ರಾಚೀನ ಭಾರತದ ಅಣು ವಿಜ್ಞಾನದ ತಂತ್ರಸೂತ್ರಗಳು ವಿಶ್ವದ ಭೌತಿಕ ರಚನೆಯ ಯಶಸ್ವಿ ಊಹಾತ್ಮಕ ಸ್ಪಷ್ಟೀಕರಣಗಳಾಗಿವೆ ; ಅವು ಆಧುನಿಕ ಭೌತಶಾಸ್ತ್ರದ ನಿರೂಪಣೆಗಳನ್ನು ಹೋಲುವುದು ಕೇವಲ ಆಕಸ್ಮಿಕವಾಗಿರಬಹುದಾದರೂ, ಪ್ರಾಚೀನ ಭಾರತೀಯರ ಉಜ್ವಲ ಬೌದ್ಧಿಕತೆ ಮತ್ತು ಕಲ್ಪನಾ ಸಾಮರ್ಥ್ಯಗಳ ಉತ್ತಮ ನಿದರ್ಶನಗಳಾಗಿವೆ.

ಗಣಿತ ಶಾಸ್ತ್ರದಲ್ಲಿ ಪ್ರಾಚೀನ ಭಾರತೀಯರು ಶೂನ್ಯದ ("0") ಬಳಕೆಯನ್ನೂ, ದಶಮಾಂಶ ಗಣನಾ ಪದ್ಧತಿಯನ್ನೂ ಕ್ರಿ. ಶ. 5–8ನೇ ಶತಕಗಳಲ್ಲಿ ಬಳಕೆ ತಂದಿದ್ದರು. ಆರ್ಯಭಟ (5ನೇ ಶತಕ), ಬ್ರಹ್ಮಗುಪ್ತ (7ನೇ ಶತಕ), ಮಹಾವೀರ (9ನೇ ಶತಕ) ಮತ್ತು ಭಾಸ್ಕರ (12ನೇ ಶತಕ) ಇವರು ಯೂರೋಪಿನಲ್ಲಿ ಬೌದ್ಧಿಕ ಕ್ರಾಂತಿಯುಗದ ವರೆಗೂ ಅಲ್ಲಿನ ಗಣಿತ ಶಾಸ್ತ್ರಜ್ಞರಿಗೆ ತಿಳಿಯದಿದ್ದ ಅನೇಕ ಸಂಶೋಧನೆಗಳನ್ನು ಮಾಡಿದ್ದರು.

ಎ.ಎಲ್. ಬಷಾಮ್ (ದಿ ವಂಡರ್ ದಟ್ ವಾಸ್ ಇಂಡಿಯಾ 1954)

ಡಿ. ವೆಂಕಟರಾವ್

ಕೃಷಿ ಕಾರ್ಮಿಕರ ಸ್ಥಿತಿಗತಿ

ಪೀಠಿಕೆ

ಕೃಷಿ ಭಾರತದ ಅರ್ಥವ್ಯವಸ್ಥೆಯ ಬೆನ್ನೆಲುಬು. ಇತರ ಕ್ಷೇತ್ರಗಳ ಬೆಳವಣಿಗೆಯ ವೇಗ ಕೃಷಿ ಕ್ಷೇತ್ರದ ಬೆಳವಣಿಗೆಯನ್ನು ಅವಲಂಬಿಸಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಫಲವಾಗಿ ಇಂದು ಭಾರತ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆ ಸಾಧಿಸಿದೆ. ಇವೆಲ್ಲಕ್ಕೂ ಕೃಷಿ ಕಾರ್ಮಿಕರ ಕೊಡುಗೆ ವೈಶಿಷ್ಟ್ಯಪೂರ್ಣ. ಆದರೆ ಕೃಷಿ ಕಾರ್ಮಿಕರು ಎಂತಹ ದುರ್ಭರ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ಅರಿತಾಗ ಯಾರಿಗಾದರೂ ಕರುಣೆ ಮೂಡದಿರದು. ಸ್ವಾತಂತ್ರ್ಯಾನಂತರ ಕೃಷಿ ಕಾರ್ಮಿಕರ ಪರಿಸ್ಥಿತಿಯಲ್ಲಿ ಸ್ವಲ್ಪಮಟ್ಟಿನ ಸುಧಾರಣೆ ಕಂಡು ಬಂದಿದ್ದರೂ ಹೆಚ್ಚಿನ ಮಾರ್ಪಾಡೇನೂ ಆಗಿಲ್ಲ ಎನ್ನಬಹುದು. ಭಾರತದ ಜನಾಂಗದಲ್ಲೇ ಕೃಷಿ ಕಾರ್ಮಿಕರು ಉಪೇಕ್ಷಿಸಲ್ಪಟ್ಟವರಾಗಿದ್ದಾರೆ ಎಂದರೆ ತಪ್ಪಲ್ಲ. ಬಡತನ, ಕೆಳಮಟ್ಟದ ಜೀವನ ಸ್ಥಿತಿ, ಅರೆ ಆರೋಗ್ಯ, ಶಿಕ್ಷಣದ ಕೊರತೆ, ನಿಕೃಷ್ಟ ಜೀವನ ಸೌಲಭ್ಯಗಳು ಭಾರತದ ಕೃಷಿ ಕಾರ್ಮಿಕರ ಸಾಮಾನ್ಯ ಲಕ್ಷಣಗಳು. ಉಡಲು ಬಟ್ಟೆ ಇಲ್ಲ. ಮಕ್ಕಳಿಗೆ ಸರಿಯಾದ ಪೋಷಣೆ ಇಲ್ಲ. ನೈರ್ಮಲ್ಯವಿಲ್ಲ. ಅಂಬಲಿ ಊಟ, ಕಂಬಳಿ ಹೊದಿಕೆ ಇದೇ ಅವರ ಬಾಳು. ನಿಜವಾದ ಸ್ವಾತಂತ್ರ್ಯದ ಅರಿವು, ಮಾನಸಿಕ ನೆಮ್ಮದಿ ಇವರಿಗಿಲ್ಲ. ಡಾಕ್ಟರ್ ಪಟ್ಟಾಭಿಯವರ ಮಾತುಗಳಲ್ಲಿ ಹೇಳಬೇಕೆಂದರೆ "ಕೃಷಿ ಕಾರ್ಮಿಕ ಹಸಿದ ಹೊಟ್ಟೆಯಿಂದ ಕೆಸರಿನಲ್ಲಿ, ಮಣ್ಣಿನಲ್ಲಿ ತನ್ನ ದಿನವನ್ನು ಕಳೆಯುತ್ತಾನೆ. ಮಳೆ, ಗಾಳಿ, ಚಳಿ, ಬಿಸಿಲಿನ ಬೇಗೆಯೆನ್ನದೆ ಕಷ್ಟ ಸಹಿಸಿ ದುಡಿದು ರಾಶಿಗಟ್ಟಲೆ ಭತ್ತ ಬೆಳೆಯುತ್ತಾನೆ : ಆದರೆ ಸ್ವತಃ ಉಪವಾಸದಿಂದ ನರಳುತ್ತಾನೆ, ಹಸುಗಳಿಗೆ ಮೇವು ಪೂರೈಸಿ ಜನರಿಗೆ ಹಾಲು ಒದಗಿಸುತ್ತಾನೆ : ಆದರೆ ಸ್ವತಃ ಗಂಜಿ ನೀರನ್ನು ಕುಡಿಯುತ್ತಾನೆ. ತೋಳಬಲದಿಂದ ಬೆವರು ಹರಿಸಿ ಬಾವಿಗಳನ್ನು ತೋಡುತ್ತಾನೆ. ಆದರೆ ಅವು ನೀರಿನಿಂದ ತುಂಬಿದಾಗ ಯಾರಿಗೂ ಬೇಡದ ನಿರ್ಲಕ್ಷ್ಯ ಪ್ರಾಣಿಯಾಗಿ ಪರಿಣಮಿಸುತ್ತಾನೆ. ನಿಜಕ್ಕೂ ಕೃಷಿ ಕಾರ್ಮಿಕನ ಸ್ಥಿತಿ ಎದೆ ಬಿರಿಯುವಂತಹದು." ಈ ಮಾತುಗಳಲ್ಲಿ ಸತ್ಯವಿಲ್ಲದಿಲ್ಲ. ಒಟ್ಟಿನಲ್ಲಿ ಮಾನವೀಯ ಅಧಃಪತನವೇ ಕೃಷಿ ಕಾರ್ಮಿಕರ ಹೀನಸ್ಥಿತಿಗೆ ಮೂಲವಾಗಿದೆ.

ಗ್ರಾಮೀಣ ಭಾರತದ ಅತ್ಯಂತ ಕಳವಳಕರ ಲಕ್ಷಣವೆಂದರೆ ಇತ್ತೀಚೆಗೆ ಕೃಷಿ ಕಾರ್ಮಿಕರ ಸಂಖ್ಯೆಯಲ್ಲಿ ತೀವ್ರಗತಿಯ ಹೆಚ್ಚಳ ಕಂಡು ಬರುತ್ತಿರುವುದು. ಹಳ್ಳಿಗಳ ಬೆನ್ನೆಲುಬಾಗಿರುವ ನಮ್ಮ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಹಳ್ಳಿಗಳಲ್ಲೇ ಹುಟ್ಟುವ ಲಕ್ಷಾಂತರ ಮಂದಿಗೆ ಕೃಷಿಯನ್ನು ಬಿಟ್ಟರೆ ಬೇರೆ ಮಾರ್ಗವೇ ಇರುವುದಿಲ್ಲ. ಈ ಶತಮಾನದ ಆದಿಯಲ್ಲಿ ಶೇಕಡ 60 ಜನ ಕೃಷಿಯನ್ನು ಅವಲಂಬಿಸಿದ್ದರು. 1962ರ ವೇಳೆಗೆ ಇದು ಶೇಕಡ 70 ರಷ್ಟು ಇತ್ತು. ಈಗ ಶೇ. 68 ಜನ ಕೃಷಿಯನ್ನು ಅವಲಂಬಿಸಿರುವುದಾಗಿ ತಿಳಿದುಬಂದಿದೆ. ಅಂದರೆ ಜನರು ಕೃಷಿಯ ಮೇಲೆ ಹೆಚ್ಚಾಗಿ ಅವಲಂಬಿಸಿರುವುದನ್ನು ಇದು ತೋರಿಸಿಕೊಡುತ್ತದೆ. ಈಚೆಗೆ ಕೃಷಿ ಕಾರ್ಮಿಕರ ಹಿತರಕ್ಷಣೆಯತ್ತ ಭಾರತ ಸರಕಾರದ ಗಮನ ಹರಿದಿದೆಯಾದರೂ ದೇಶದ ಒಟ್ಟು ಕಾರ್ಮಿಕ ಬಲದಲ್ಲಿ ಕೃಷಿ ಕಾರ್ಮಿಕರ ಶೇಕಡಾವಾರು ಹೆಚ್ಚಾಗುತ್ತಲೇ ಬಂದಿರುವುದು ಅವರ ಬಾಳಿನಲ್ಲಿ ಸುಸ್ಥಿತಿಯನ್ನು ತರಲಾರದಾಗಿದೆ. ತತ್ಫಲವಾಗಿ ಭಾರತ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಲ್ಲಿ ಕೃಷಿ ಕಾರ್ಮಿಕರ ಸಮಸ್ಯೆಯೂ ಒಂದಾಗಿ ಸೇರಿ ದಿನೇ ದಿನೇ ಜಟಿಲ ರೂಪವನ್ನು ತಾಳುತ್ತಿದೆ. ಕೃಷಿಯ ವಿಶಿಷ್ಟ ಸಮಸ್ಯೆಗಳ ಪೈಕಿ ಕೃಷಿ ಕಾರ್ಮಿಕರ ಸಮಸ್ಯೆ ಪ್ರಧಾನವಾದದ್ದು ಮತ್ತು ಗಂಭೀರವಾದದ್ದು. ಅಲ್ಲದೆ ಇದು ಇತರ ಉದ್ಯೋಗಗಳಲ್ಲಿಯ ಕಾರ್ಮಿಕ ಸಮಸ್ಯೆಗಿಂತ ಭಿನ್ನವಾದದ್ದು. ಈ ಸಮಸ್ಯೆಯ ಪರಿಹಾರಕ್ಕೆ ಭಾರತ ಸರಕಾರ ವಿಶೇಷ ಗಮನ ನೀಡಿದೆಯಾದರೂ ಕೃಷಿ ಕಾರ್ಮಿಕರ ಬದುಕಿನ ಸುಧಾರಣೆಯಲ್ಲಿ ಹೆಚ್ಚಿನ ಮಹತ್ಕಾರ್ಯವನ್ನೇನೂ ಕೈಗೊಂಡಿಲ್ಲ.

ಕೃಷಿ ಕಾರ್ಮಿಕರೆಂದರೆ ಯಾರು ?

ಸಾಮಾನ್ಯವಾಗಿ ಕೃಷಿ ಕಾರ್ಮಿಕರೆಂದರೆ ಕೃಷಿ ಕಾರ್ಯಗಳಲ್ಲಿ ನಿರತರಾಗಿರುವವರು ಎಂದರ್ಥ. ಕೃಷಿ ಕ್ಷೇತ್ರದಲ್ಲಿ ದುಡಿಯುವವರಲ್ಲಿ ಸಾಮಾನ್ಯವಾಗಿ ಮೂರು ಬಗೆಯ ಜನರನ್ನು ಗುರುತಿಸಬಹುದು.

1 ಭೂ ಹಿಡುವಳಿಯ ಮಾಲೀಕರಾಗಿದ್ದು ತಮ್ಮ ಸ್ವಂತ ಶ್ರಮದಿಂದ ಹಾಗೂ ಕುಟುಂಬದ ಸದಸ್ಯರ ನೆರವಿನಿಂದ ಕೃಷಿ ಮಾಡುವವರು.

2 ಇತರರ ಭೂ ಹಿಡುವಳಿಗಳನ್ನು ಗುತ್ತಿಗೆಯ ಅಥವಾ ಗೇಣಿಯ ಆಧಾರದ ಮೇಲೆ ಕೃಷಿ ಮಾಡುವ ಭೂ ರಹಿತ ಕಾರ್ಮಿಕರು.

3 ಗೊತ್ತಾದ ಕೂಲಿಗಾಗಿ ಇತರರ ಜಮೀನುಗಳಲ್ಲಿ ದುಡಿಯುವವರು. ಮೂರನೇ ವರ್ಗದ ಜನ ಕೃಷಿ ಕಾರ್ಮಿಕರೆನಿಸುತ್ತಾರೆ.

ಸಾಧಾರಣವಾಗಿ ಕೂಲಿಗೆ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಇತರ ಉದ್ಯಮಗಳಲ್ಲಿಯ ಕಾರ್ಮಿಕರಷ್ಟು ಅನುಕೂಲವಾದ ಜೀವನ ಸ್ಥಿತಿಯಾಗಲಿ, ಕೆಲಸದ ಸನ್ನಿವೇಶವಾಗಲಿ, ಕೂಲಿಯ ದರವಾಗಲಿ ಇಲ್ಲ. ಇದಕ್ಕೆ ಕಾರಣ ಕೃಷಿ ಕಾರ್ಮಿಕರ ಉತ್ಪಾದನಾ ಶಕ್ತಿ ಕಡಿಮೆ ಇರುವುದರಿಂದ ಅವರಿಗೆ ಭೂ ಮಾಲೀಕರು ಹೆಚ್ಚಿನ ವೇತನವನ್ನಾಗಲಿ

ಜೀವನದ ಉತ್ತಮ ಸನ್ನಿವೇಶವನ್ನಾಗಲಿ ಒದಗಿಸುವ ಸಂಭವ ಕಡಿಮೆ. ನಮ್ಮ ದೇಶದಲ್ಲಿ ಕೃಷಿಗೆ ಕೊಡಬೇಕಾದಷ್ಟು ಮಹತ್ವವನ್ನು ಕೊಟ್ಟಿಲ್ಲದಿರುವುದರಿಂದಲೂ, ವಿಜ್ಞಾನದ ಪ್ರಭಾವ ಸಾಕಷ್ಟು ಪರಿಣಾಮಕಾರಿಯಾಗಿಲ್ಲದಿರುವುದರಿಂದಲೂ ಎಷ್ಟೋ ಸಂದರ್ಭಗಳಲ್ಲಿ ಹಿಡುವಳಿದಾರನ ಪರಿಸ್ಥಿತಿಯೇ ಬಿಗಡಾಯಿಸಿರುತ್ತದೆ. ಈ ಸ್ಥಿತಿಯಲ್ಲಿ ಅವನನ್ನು ನಂಬಿರುವ ಕಾರ್ಮಿಕರ–ನಂತರವೂ ಕಾರ್ಮಿಕರ ಅವಶ್ಯಕತೆ ಇದ್ದಲ್ಲಿ ಮಾತ್ರ–ಅವರಿಗೆ ಕೆಲಸಕ್ಕೆ ಕರೆ. ಅವೂ ಸಾಧ್ಯವಾದಷ್ಟೂ ಕಡಿಮೆ ಸಮಯಕ್ಕೆ ಮತ್ತು ಕಡಿಮೆ ಕೂಲಿಗೆ ನೇಮಿಸಿಕೊಳ್ಳುತ್ತಾರೆ. ಇದು ಕೃಷಿ ಕಾರ್ಮಿಕರಿಗೆ ಜೀವನೋಪಾಯದ ಕಟ್ಟಕಡೆಯ ದಾರಿಯಾಗಿರುವುದರಿಂದ ಅದನ್ನೇ ಒಪ್ಪಿಕೊಳ್ಳಬೇಕಾಗುತ್ತದೆ. ಇವರ ಕೂಲಿಯಲ್ಲಿ ಏಕರೂಪತೆ ಇರುವುದಿಲ್ಲ. ಪಾವತಿಯ ವಿಧಾನದಲ್ಲಿಯೂ ವ್ಯತ್ಯಾಸ ಬಹಳ. ಕೂಲಿ ದರದ ಪ್ರಾದೇಶಿಕ ಅಸಮಾನತೆಯೂ ಅಗಾಧ. ಕೃಷಿ ಕ್ಷೇತ್ರದಲ್ಲಿ ಮಾರುಕಟ್ಟೆಯ ವೈಪರೀತ್ಯಗಳಿಂದ ಕೂಲಿಯಲ್ಲಿ ಹೆಚ್ಚಳ ಬಹುಕಷ್ಟ. ಅಲ್ಲದೆ ಈ ಬಗ್ಗೆ ಯಾವುದೇ ಲಿಖಿತ ಒಪ್ಪಂದಗಳನ್ನು ಕಾನೂನಿನ ರೂಪದಲ್ಲಿ ಜಾರಿಗೆ ತರುವುದು ಕಷ್ಟ. ಇದರಿಂದಾಗಿ ಕೃಷಿ ಕಾರ್ಮಿಕರ ದುರ್ಬಲ ಸ್ಥಿತಿಯಲ್ಲಿ ಮಾರ್ಪಾಡು ಕಾಣದಾಗಿದೆ.

ಕೃಷಿ ಕಾರ್ಮಿಕರು ಹಣದ ರೂಪದಲ್ಲಿ ಪಡೆಯುವ ಕೂಲಿಯ ಜೊತೆಗೆ ಸರಕುಗಳ ಅಥವಾ ಇತರ ಸೌಲಭ್ಯಗಳ ರೂಪದಲ್ಲಿ ಪಡೆಯುವ ಕೂಲಿಯೂ ಮುಖ್ಯವಾದುದು. ಹಿಂದುಳಿದ ರಾಷ್ಟ್ರಗಳಲ್ಲಂತೂ ಅವರ ಕೂಲಿಯ ಹೆಚ್ಚಿನ ಅಂಶ ಸರಕುಗಳ ರೂಪದಲ್ಲೇ ಇರುತ್ತವೆ. ಅವರಿಗೆ ದೊರೆಯುವ ಉಚಿತ ವಸತಿ ಸೌಕರ್ಯ, ಆಹಾರ ಸಾಮಗ್ರಿ ಮತ್ತು ಬಟ್ಟೆಬರೆಯ ಪೂರೈಕೆ ಇವೆಲ್ಲವೂ ಕೂಲಿಯ ಅಂಶಗಳಾಗಿವೆ. ಆದರೆ ಈ ಬಗೆಯ ವಸ್ತು ಸೇವೆಗಳ ರೂಪದ ಕೂಲಿಯನ್ನು ಪರಿಗಣಿಸಿದರೂ ಕೃಷಿ ಕಾರ್ಮಿಕರ ಒಟ್ಟು ಕೂಲಿ ಇತರ ಉದ್ಯಮಗಳ ಕೂಲಿಯ ಮಟ್ಟಕ್ಕಿಂತ ಕಡಿಮೆಯಾಗಿಯೇ ಇರುತ್ತದೆ. ಕನಿಷ್ಠ ಕೂಲಿಯ ಜೊತೆಗೆ ಕೃಷಿ ಕಾರ್ಮಿಕರ ಉದ್ಯೋಗವೂ ಕಾನೂನುಬದ್ಧವಾಗಿರುವುದಿಲ್ಲ. ಸಾಮಾಜಿಕ ಭದ್ರತೆಗಳ ಸೌಲಭ್ಯದಿಂದ ಅವರು ವಂಚಿಸಲ್ಪಟ್ಟಿದ್ದಾರೆ. ಅನೇಕಬಾರಿ ಅಧಿಕ ವೇಳೆಯ ದುಡಿಮೆಯೊಂದಿಗೆ ಬಲಾತ್ಕಾರವಾಗಿ ಮಾಲಿಕರಿಗೆ ಸೇವೆ ಸಲ್ಲಿಸಬೇಕಾಗುತ್ತದೆ. ಆರ್ಥಿಕವಾಗಿ ಅತಿ ದುರ್ಬಲವಾಗಿರುವ ಇವರು ಕೆಲವು ಸಂದರ್ಭಗಳಲ್ಲಿ ಭೂ ಮಾಲಿಕರಿಗೆ ಹಣ, ಕುರಿ, ಕೋಳಿ ಇತ್ಯಾದಿಗಳನ್ನು ಕಾಣಿಕೆಯಾಗಿ ಕೊಡಬೇಕಾಗುತ್ತದೆ.

ಭಾರತದಲ್ಲಿ ಕೃಷಿ ವಿಚಿತ್ರ ಪರಿಸ್ಥಿತಿಯೊಂದಿಗೆ ಹೆಣೆದುಕೊಂಡಿದೆ. ಈ ವರ್ಗದ ಜನರಿಗೆ ನಿರುದ್ಯೋಗ ಅತಿ ಸಾಮಾನ್ಯ. ಕೃಷಿ ಋತುಮಾನದ ಉದ್ದಿಮೆಯಾಗಿದ್ದು ಅದರ ಕಾರ್ಯಗಳು ಋತುಗಳಿಗನುಸಾರವಾಗಿ ನಡೆಯಬೇಕಾಗಿರುತ್ತದೆ. ಅದ್ದರಿಂದ ಎಲ್ಲಾ ಘಟ್ಟಗಳಲ್ಲೂ ಕೃಷಿ ಕಾರ್ಮಿಕರ ಸೇವೆಯ ಅವಶ್ಯಕತೆ ಸತತವಾಗಿ ಇರುವುದಿಲ್ಲ. ಕೃಷಿ ಕಾರ್ಮಿಕರ ವಿಚಾರಣಾ ಸಮಿತಿಯು ಕೃಷಿ ಕಾರ್ಮಿಕರನ್ನು ನಿಯತಕಾಲಿಕ ಹಾಗೂ ಅನಿಯತಕಾಲಿಕ ಕಾರ್ಮಿಕರೆಂದು ವಿಂಗಡಿಸಿದೆ. ನಿಯತಕಾಲಿಕ ಕಾರ್ಮಿಕರೆಂದರೆ

ಒಂದು ನಿರ್ದಿಷ್ಟ ಅವಧಿಗಾಗಿ ನೇಮಕಗೊಂಡವರು. ಇವರು ತಮ್ಮ ಮಾಲಿಕರಿಗೆ ಸೇರಿದ ಭೂಮಿಯಲ್ಲಿ ಮಾತ್ರ ದುಡಿಯಬೇಕು. ಸಾಮಾನ್ಯವಾಗಿ ಬೇರೆ ಕಡೆ ಇವರು ಕೆಲಸ ಹುಡುಕುವಂತಿಲ್ಲ. ಇವರು ಭೂ ಮಾಲಿಕರೊಂದಿಗೆ ಒಂದು ಒಗೆಯ ಕರಾರು ಮಾಡಿಕೊಂಡಿದ್ದು, ಇವರಿಗೆ ಕೊಡುವ ಪಾವತಿಯನ್ನು ಕೆಲವು ಪದ್ಧತಿಗಳ ಮೂಲಕ ನಿರ್ಧರಿಸಲಾಗುತ್ತದೆ. ಕೆಲವು ಕಾಲದ ಮಟ್ಟಿಗೆ ಮಾತ್ರ ನೇಮಕ ಮಾಡಿಕೊಳ್ಳುವವರನ್ನು ಅನಿಯತಕಾಲದ ಕೃಷಿ ಕಾರ್ಮಿಕರೆನ್ನುತ್ತಾರೆ. ಒಂದು ಕೆಲಸದಿಂದ ಮತ್ತೊಂದು ಕೆಲಸಕ್ಕೆ ಹೋಗುವ ಸ್ವಾತಂತ್ರ್ಯ ಇವರಿಗುಂಟು. ಮಾರುಕಟ್ಟೆಯ ದರದಲ್ಲಿ ಇವರಿಗೆ ಆಯಾ ದಿನದ ಕೂಲಿಯನ್ನು ಆಯಾ ದಿನವೇ ವಿತರಣೆ ಮಾಡಲಾಗುತ್ತದೆ. ತಮಿಳುನಾಡಿನಲ್ಲಿ ಈ ಒಗೆಯ ಕಾರ್ಮಿಕರನ್ನು ವರ್ಷಪೂರ್ತಿ ಅಥವಾ ಹೆಚ್ಚು ಕೆಲಸಗಳಿರುವ ಋತುಗಳಲ್ಲಿ ಮೂರು ತಿಂಗಳಿಂದ ಆರು ತಿಂಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗಿರುತ್ತದೆ. ನಿಯತಕಾಲಿಕ ಕೃಷಿ ಕಾರ್ಮಿಕರಿಗೆ ನಿಶ್ಚಿತವಾಗಿ ಒಂದು ಅವಧಿಯವರೆಗೆ ಕೆಲಸ ಇರುತ್ತದೆ. ಆದರೆ ದಿನಗೂಲಿಯ ಮೇರೆಗೆ ಕೆಲಸ ಮಾಡುವ ಅನಿಯತಕಾಲಿಕ ಕೃಷಿ ಕಾರ್ಮಿಕರ ಕಷ್ಟ ಹೇಳತೀರದು. ಅವರ ಕೆಲಸವೂ ನಿಶ್ಚಿತವಲ್ಲ. ಕೃಷಿ ಕೆಲಸದ ಒತ್ತಡ, ಕೆಲಸಕ್ಕೆ ನೇಮಿಸಿಕೊಳ್ಳುವವರ ಮನೋಭಾವ ಮುಂತಾದ ಅಂಶಗಳನ್ನು ಅದು ಅವಲಂಬಿಸಿರುತ್ತದೆ. ಇವರಿಗೆ ಬದಲಿ ಉದ್ಯೋಗವಾಗಲಿ, ಪೂರಕ ಉದ್ಯೋಗಾವಕಾಶವಾಗಲಿ ಇಲ್ಲದಿರುವುದು ಇವರ ಶೋಚನೀಯ ಬದುಕಿಗೆ ಮತ್ತಷ್ಟು ಕಾರಣ. ಹೀಗೆ ಕೃಷಿ ಕಾರ್ಮಿಕರಿಗೆ ದುಡಿಯುವ ಮನಸ್ಸು, ಉತ್ಸಾಹಗಳಿದ್ದರೂ ಹಲವಾರು ಕಾರಣಗಳಿಂದಾಗಿ ಇಡೀ ವರ್ಷ ಕೆಲಸ ಸಿಗುವುದಿಲ್ಲ. ಕೃಷಿ ಕಾರ್ಮಿಕರ ಕೆಲಸದ ವೇಳೆಯಲ್ಲೂ ನಿಗದಿ ಇಲ್ಲ. ಸೂರ್ಯ ಹುಟ್ಟಿದಾಗಿನಿಂದ ಮುಳುಗುವವರೆಗೂ ಅವರು ಬೆವರು ಹರಿಸಿ ದುಡಿಯಬೇಕು. ಸುಗ್ಗಿಯ ಸಮಯದಲ್ಲಿ ರಾತ್ರಿಯ ವೇಳೆಯೂ ಕೆಲಸ ಮಾಡಬೇಕು. ಕೃಷಿಯ ಸ್ವರೂಪಕ್ಕೆ ತಕ್ಕಂತೆ ಕೃಷಿರಂಗದಲ್ಲಿ ಕೆಲಸದ ವೇಳೆಯನ್ನು ನಿಗದಿಪಡಿಸುವುದೂ ಅಸಾಧ್ಯ. ಹೀಗಾಗಿ ಕೃಷಿ ಕಾರ್ಮಿಕರ ಅವ್ಯಾಹತ ಶೋಷಣೆಗೆ ಸುಗಮ ಮಾರ್ಗ ಕಲ್ಪಿಸಿಕೊಟ್ಟಂತಾಗಿದೆ. ಕೃಷಿ ಕಾರ್ಮಿಕರಲ್ಲಿ ಮತ್ತೊಂದು ವಿಶೇಷವೆಂದರೆ, ಅವರಲ್ಲಿ ಸ್ತ್ರೀಯರು ಮತ್ತು ಮಕ್ಕಳ ಸಂಖ್ಯೆ ಅಧಿಕ. ಉಳುವುದು, ಬಿತ್ತುವುದು, ಅಗೆಯುವುದು, ಕುಂಟೆ ಹೊಡೆಯುವುದು ಇತ್ಯಾದಿ ಕೆಲಸಗಳನ್ನು ಪುರುಷರು ಮಾಡಿದರೆ ಕಾಳು ತೂರುವುದು, ಕಳೆ ಕೀಳುವುದು ಮುಂತಾದವುಗಳನ್ನು ಸ್ತ್ರೀಯರು ಮತ್ತು ಮಕ್ಕಳು ಮಾಡುತ್ತಾರೆ. ಪುರುಷರಿಗೆ ದೊರೆಯುವಷ್ಟು ಕೂಲಿ ಸ್ತ್ರೀಯರಿಗೆ, ಮಕ್ಕಳಿಗೆ ಇಲ್ಲ. ಹೀಗಾಗಿ ಇಲ್ಲಿ ಶೋಷಣೆಗೆ ಹೆಚ್ಚಿನ ಅವಕಾಶ. 1950-51ರಲ್ಲಿ ಕೃಷಿ ಕಾರ್ಮಿಕರ ಸರಾಸರಿ ಉದ್ಯೋಗ ದಿನಗಳು ವರ್ಷದಲ್ಲಿ 218 ದಿನಗಳಿದ್ದುವು. ಇದರಲ್ಲಿ ಕೃಷಿ ಕಾರ್ಮಿಕ 189 ದಿನಗಳು ಕೃಷಿ ಕಾರ್ಯಗಳಲ್ಲೂ, 29 ದಿನಗಳು ಕೃಷಿಯೇತರ ಕಾರ್ಯಗಳಲ್ಲೂ ನಿರತನಾಗಿರುತ್ತಿದ್ದ. ಇದಲ್ಲದೆ 50 ದಿನಗಳು ಸ್ವ-ಉದ್ಯೋಗಿಯಾಗಿರುತ್ತಿದ್ದ. 1956-57ರಲ್ಲಿ ಭಾರತ ಸರಕಾರ ಕೃಷಿ ಕಾರ್ಮಿಕರ ಬಗ್ಗೆ ರಚಿಸಿದ್ದ 2ನೆಯ ತನಿಖಾ ಆಯೋಗದ

ಪ್ರಕಾರ ಇದು 197 ದಿನಗಳಿಗೆ ಕುಸಿಯಿತು. ಅಂದರೆ ವರ್ಷದಲ್ಲಿ ಕೃಷಿ ಕಾರ್ಮಿಕರು $\frac{1}{3}$ ರಿಂದ $\frac{1}{2}$ ರಷ್ಟು ದಿನಗಳು ನಿರುದ್ಯೋಗಿಗಳಾಗಿರುತ್ತಾರೆ ಎನ್ನುವುದು ತಿಳಿಯುತ್ತದೆ. ಶೇ. 15 ರಷ್ಟು ಕೃಷಿ ಕಾರ್ಮಿಕರು ಭೂ ಮಾಲಿಕರ ಅಧೀನದಲ್ಲಿದ್ದಾರೆಂದೂ, ವರ್ಷದಲ್ಲಿ ಶೇ. 16 ರಷ್ಟು ಕಾರ್ಮಿಕರು ಉದ್ಯೋಗರಹಿತರಾಗಿದ್ದಾರೆಂದೂ ತಿಳಿದು ಬಂದಿದೆ. 1956–57ರ ವಿಚಾರಣಾ ಸಮಿತಿಯ ಪ್ರಕಾರ ಭಾರತದ ಕೃಷಿ ಕಾರ್ಮಿಕರಲ್ಲಿ ಶೇ. 57 ರಷ್ಟು ಜನ ಭೂ ಹೀನರು. ತಮ್ಮದೇ ಆದ ಒಂದು ತುಂಡು ನೆಲವೂ ಇಲ್ಲದ ನಿರಾಶ್ರಿತರು. ಭೂ ರಹಿತ ಕೃಷಿ ಕಾರ್ಮಿಕ ಕುಟುಂಬಗಳ ಬದುಕಿನ ಬವಣೆಯಂತೂ ತೀರಾ ಶೋಚನೀಯ. ಇವರು ದಾರಿದ್ರ್ಯರೇಖೆಗಿಂತಲೂ ತೀರ ಕೆಳಮಟ್ಟದಲ್ಲಿರುವ ಜನ. ಇಡೀ ಕುಟುಂಬ ದುಡಿದರೂ ಎರಡು ಹೊತ್ತಿನ ಊಟಕ್ಕೂ ಗತಿಯಿಲ್ಲದ ಪರಿಸ್ಥಿತಿ ಇವರದು.

ದ್ವಿತೀಯ ಕೃಷಿ ಕಾರ್ಮಿಕರ ವಿಚಾರಣಾ ಸಮಿತಿಯ ಪ್ರಕಾರ ಕೃಷಿ ಕಾರ್ಮಿಕರೆಂದರೆ ಬೆಳೆಯ ಉತ್ಪಾದನೆ ಹಾಗೂ ಇತರೇ ಕೃಷಿ ಕಾರ್ಯಗಳಾದ ಹೈನುಗಾರಿಕೆ, ತೋಟಗಾರಿಕೆ, ಜೇನು ಸಾಕಣೆ ಇತ್ಯಾದಿಗಳಲ್ಲಿ ನಿರತರಾಗಿರುವವರು. 1961ರ ಜನಗಣತಿಯ ರೀತ್ಯ "ಒಬ್ಬನೇ ವ್ಯಕ್ತಿಯು ಕಾರ್ಮಿಕನಾಗಿ, ಕುಟುಂಬದ ಮೇಲ್ವಿಚಾರಕನಾಗಿ, ಭೂಮಿಯನ್ನು ಉಳುವ ನಿರ್ದೇಶಕನಾಗಿ ನೇಮಕಗೊಳ್ಳುವವನು ಕೃಷಿ ಕಾರ್ಮಿಕ. ಆದರೆ ಈ ವಿವರಣೆಯಲ್ಲಿ ಹುರುಳಿಲ್ಲ. ಏಕೆಂದರೆ ಬೇರೊಬ್ಬರ ಭೂಮಿಯಲ್ಲಿ ಕೆಲಸ ಮಾಡುವ ಹಾಗೂ ಉತ್ಪತ್ತಿಯನ್ನು ಹಣದ ಹಾಗೂ ಧಾನ್ಯದ ರೂಪದಲ್ಲಿ ಹಂಚಿಕೊಳ್ಳುವ ಕೃಷಿ ಕಾರ್ಮಿಕನಿಗೆ ತಾನು ಉಳುವ ಭೂಮಿಯ ಮೇಲೆ ಯಾವ ಬಗೆಯ ಹಕ್ಕೂ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅವನು ಕೃಷಿ ಕಾರ್ಯಗಳನ್ನು ನಿರ್ದೇಶಿಸುವುದಂತೂ ದೂರದ ಮಾತು.

ವಿಧಗಳು

ಭಾರತದ ಕೃಷಿ ಕಾರ್ಮಿಕರಲ್ಲಿ ಮೂರು ವಿಧಗಳುಂಟು.

1 ಕ್ಷೇತ್ರ ಕಾರ್ಮಿಕರು

ಉಳುವುದು, ಬೀಜ ಬಿತ್ತುವುದು, ಕಳೆ ತೆಗೆಯುವುದು, ಪೈರು ನಾಟಿ ಮಾಡುವುದು ಇತ್ಯಾದಿ ಕೆಲಸಗಳಲ್ಲಿ ಪ್ರತ್ಯಕ್ಷವಾಗಿ ನಿರತರಾಗಿರುವವರು.

2 ಅಕುಶಲ ಕಾರ್ಮಿಕರು

ಬಾವಿ ತೋಡುವುದು, ಬೇಲಿ ಕಟ್ಟುವುದು, ಹೂಳು ತೆಗೆಯುವುದು, ಭೂಮಿ ಅಗೆಯುವುದು ಇತ್ಯಾದಿ ಕೆಲಸ ಮಾಡುವವರು.

3 ಕುಶಲ ಕಾರ್ಮಿಕರು

ಬಡಗಿಗಳು, ಲೋಹದ ಕೆಲಸ ಮಾಡುವವರು, ಕುಂಬಾರರು ಹಾಗೂ ಇತರರು ಈ ಗುಂಪಿಗೆ ಸೇರುತ್ತಾರೆ. ಇವರಲ್ಲದೆ ಅಲ್ಪ ಸ್ವಲ್ಪ ಜಮೀನು ಹೊಂದಿದ್ದು ಆಗಾಗ್ಗೆ ಇತರರ ಭೂಮಿಗಳಲ್ಲಿ ಕೆಲಸ ಮಾಡುವವರೂ ಸೇರುತ್ತಾರೆ.

ಕೃಷಿ ಕಾರ್ಮಿಕರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು—

1) 5 ಎಕರೆ ಭೂಮಿಗಿಂತ ಕಡಿಮೆ ಭೂಮಿಯನ್ನು ಹೊಂದಿರುವ ಹಾಗೂ ಇತರರಿಗಾಗಿ ಶ್ರಮಿಸುತ್ತಿರುವ ರೈತರು.

2) ಯಾವ ಜಮೀನನ್ನೂ ಹೊಂದದೆ ಭೂ ಮಾಲಿಕರ ಅಧೀನದಲ್ಲಿ ದುಡಿಯುವವರು.

3) ಸ್ವಲ್ಪ ಜಮೀನು ಹೊಂದಿದ್ದು, ಅದರಿಂದ ಬರುವ ಆದಾಯ ಜೀವನೋಪಾಯಕ್ಕೆ ಸಾಲದೆ ಬೇರೆ ಜಮೀನಿನಲ್ಲಿ ಕೂಲಿಗಾಗಿ ಕೆಲಸ ಮಾಡುವವರು.

4) ಸ್ವತಂತ್ರವಾಗಿ ಭೂ ಸ್ವಾಮ್ಯವನ್ನು ಹೊಂದಿದ್ದು ಇತರರಿಗಾಗಿ ಶ್ರಮಿಸುವ ಸೀಮಾಂತ ರೈತರು.

ಕೃಷಿ ಕಾರ್ಮಿಕರು ಏಕೆ ಹಿಂದುಳಿದಿದ್ದಾರೆ ?

ಕೃಷಿ ಕಾರ್ಮಿಕರ ಅಸ್ತಿತ್ವ ಇಂದು ನಿನ್ನೆಯದಲ್ಲ. ಹಿಂದಿನಿಂದಲೂ ವಿಶ್ವದಲ್ಲಿ ಅವರ ಇರುವಿಕೆ ಕಂಡು ಬಂದಿದೆ. ನಾಗರಿಕತೆಯ ದೀರ್ಘ ಇತಿಹಾಸದಲ್ಲಿ ಕೃಷಿ ಕಾರ್ಮಿಕರ ಸ್ಥಾನಮಾನಗಳಲ್ಲಿ ಆಗಿರುವ ಬದಲಾವಣೆ ಮಹತ್ವದ್ದು. ಭಾರತದಲ್ಲೇ ಅಲ್ಲ, ವಿಶ್ವದ ಎಲ್ಲ ದೇಶಗಳಲ್ಲೂ ಕೃಷಿ ಕಾರ್ಮಿಕರು ಅನನುಕೂಲ ಪರಿಸ್ಥಿತಿಯಲ್ಲಿ ದುಡಿಯುತ್ತಾರೆ. ಮುಂದುವರೆದ ಅಮೆರಿಕ ಮತ್ತು ಐರೋಪ್ಯ ದೇಶಗಳಲ್ಲೂ ಅವರ ವೇತನ ಮಟ್ಟ ಕೈಗಾರಿಕಾ ಕಾರ್ಮಿಕರ ವೇತನ ಮಟ್ಟಕ್ಕಿಂತ ಕಡಿಮೆ ಇರುತ್ತದೆ. ಏಷ್ಯಾದ ದೇಶಗಳಲ್ಲಂತೂ ಕೃಷಿ ಕಾರ್ಮಿಕರ ಸ್ಥಿತಿ ತೀರಾ ಶೋಚನೀಯವಾಗಿದೆ. ಈ ದೇಶಗಳಲ್ಲಿ ಸಣ್ಣ ಪುಟ್ಟ ಭೂಮಿಯ ಒಡೆಯರು ಕೂಡ ಆದಾಯದ ಕೊರತೆಯನ್ನು ತುಂಬಿಸಲು ಇತರರ ಭೂಮಿಯಲ್ಲಿ ತಾತ್ಕಾಲಿಕವಾಗಿ ದುಡಿಯುತ್ತಾರೆ.

ಗ್ರಾಮ ಸಮಾಜದಲ್ಲಿ ಅತ್ಯಂತ ಉಪೇಕ್ಷೆಗೆ ಒಳಪಟ್ಟಿರುವ ಭಾರತದ ಕೃಷಿ ಕಾರ್ಮಿಕರು ದಾರಿದ್ರ್ಯ, ದೈನ್ಯತೆ, ಶೋಷಣೆಗಳ ಪ್ರತೀಕವಾಗಿದ್ದಾರೆ. ಅವರ ಸ್ಥಿತಿ ಅನನುಕೂಲವಾಗಿರುವುದಕ್ಕೆ ಮುಖ್ಯ ಕಾರಣಗಳು —

1 ಹಿಂದುಳಿದ ಜನಾಂಗಕ್ಕೆ ಸೇರಿರುವುದು.

ಕೃಷಿ ಕಾರ್ಮಿಕರಾಗಿ ದುಡಿಯುವವರು ಸಾಮಾನ್ಯವಾಗಿ ಭೂ ರಹಿತ ಕಾರ್ಮಿಕರು, ಇವರಲ್ಲಿ ಬಹುಪಾಲು ಜನ ಹಿಂದುಳಿದ ದುರ್ಬಲ ವರ್ಗದ ಜನಾಂಗಕ್ಕೆ ಸೇರಿದವರಾದ್ದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ಉಪೇಕ್ಷಿಸಲ್ಪಟ್ಟಿದ್ದಾರೆ.

2 ಸಂಘಟನೆಯ ಕೊರತೆ

ಕೃಷಿ ಕಾರ್ಮಿಕರು ಸುಸಂಘಟಿತರಲ್ಲ. ಒಂದೇ ಕಡೆ ಕೇಂದ್ರಿಕೃತವಾಗಿರದೆ ಗ್ರಾಮಾಂತರ ಪ್ರದೇಶಗಳಲ್ಲಿ ಚದುರಿ ಹೋಗಿರುವುದರಿಂದ ಒಂದು ಸಂಘದ ಮೂಲಕ ವ್ಯವಸ್ಥಿತ ಸಂಘಟನೆ ಕೃಷಿ ಕಾರ್ಮಿಕರಿಗೆ ಅಸಾಧ್ಯ. ಸಂಘಟನೆ ಇಲ್ಲದೆ ಉದ್ಯೋಗದ ಸ್ಥಿತಿಗತಿಗಳು ಉತ್ತಮಗೊಳ್ಳುವುದು ಕಷ್ಟ. ಸುಸಂಘಟಿತರಲ್ಲವಾದ್ದರಿಂದ ಕೃಷಿ ಕಾರ್ಮಿಕರು ಸಾಮೂಹಿಕ ಚೌಕಾಸಿ ಮಾಡುವ ಸಾಧ್ಯತೆಯೂ ಕಡಿಮೆ. ಇದರ ಫಲವಾಗಿ ನ್ಯಾಯಯುತ ವೇತನದ ಗಳಿಕೆಯು ಕೃಷಿ ಕಾರ್ಮಿಕರಿಗೆ ಮರೀಚಿಕೆಯಾಗಿ ಪರಿಣಮಿಸಿದೆ.

3 ವಿದ್ಯಾಭ್ಯಾಸದ ಕೊರತೆ

ಕೃಷಿ ಕಾರ್ಮಿಕರಲ್ಲಿ ಅನೇಕರು ಅವಿದ್ಯಾವಂತರು ಮತ್ತು ಅಜ್ಞರು. ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿಗಳನ್ನು ಮುಂದುವರಿಸಿಕೊಂಡು ಹೋಗಬೇಕೆನ್ನುವುದರಲ್ಲಿ ಅಚಲ ನಂಬಿಕೆ ಉಳ್ಳವರು. ಮೂಢನಂಬಿಕೆಗಳ ದಾಸರು. ಅಮಾಯಕರಾದ ಇವರು ಅತಿ ಸುಲಭವಾಗಿ ಚಾಣಾಕ್ಷ ಶ್ರೀಮಂತರ ಹಿಡಿತದಲ್ಲಿ ಸಿಕ್ಕಿ ಬೀಳುತ್ತಾರೆ.

4 ಉದ್ಯೋಗದ ಅಭಾವ

ಕೃಷಿ ಋತುಮಾನದ ಕೈಗೊಂಬೆಯಾಗಿರುವುದರಿಂದ ಕಾರ್ಮಿಕರಿಗೆ ಇಡೀ ವರ್ಷ ಉದ್ಯೋಗವಿರುವುದಿಲ್ಲ. ಅರೆ ಉದ್ಯೋಗ ಹಾಗೂ ನಿರುದ್ಯೋಗಗಳು ಅವರ ಕಡಿಮೆ ಆದಾಯಕ್ಕೆ ದಾರಿಯಾಗಿವೆ.

5 ಕೃಷಿಯೇತರ ಉದ್ಯೋಗಗಳ ಅಭಾವ

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಉದ್ಯೋಗಗಳು ಲಭ್ಯವಾಗದಿರುವುದು ಕೃಷಿ ಕಾರ್ಮಿಕರ ಆರ್ಥಿಕ ಹಿಂದುಳಿಯುವಿಕೆಗೆ ಮತ್ತೊಂದು ಕಾರಣ. ಇದರೊಂದಿಗೆ ಕೃಷಿ ಕಾರ್ಮಿಕರು ಕುಶಲ ಕರ್ಮಿಗಳಲ್ಲವಾದ್ದರಿಂದ ಅವರಿಗೆ ದಕ್ಕುವ ವೇತನ ಕಡಿಮೆ. ಕೇವಲ ಕೃಷಿಯ ಕರುಣೆಯ ಮೇಲೆಯೇ ಅವರ ಬದುಕು ನೆಲೆಗೊಂಡಿದೆ. ಕೃಷಿ ಕರುಣಿಸಿದರೆ ಅವರ ಬಾಳಿಗೊಂದು ಅರ್ಥ ; ಇಲ್ಲವಾದರೆ ಎಲ್ಲವೂ ವ್ಯರ್ಥ.

ಗ್ರಾಮೀಣ ಋಣ

ಕೃಷಿ ಕಾರ್ಮಿಕರು ತಮಗೆ ಬರುವ ಅಲ್ಪ ಆದಾಯದಲ್ಲಿ ಶೇಕಡ 70 ರಿಂದ 80 ರಷ್ಟನ್ನು ಜೀವನಾವಶ್ಯಕ ವಸ್ತುಗಳ ಪೂರೈಕೆಗಾಗಿಯೇ ಖರ್ಚು ಮಾಡಬೇಕಾಗುತ್ತದೆ.

ಬರುವ ಆದಾಯವೆಲ್ಲವೂ ಜೀವನಕ್ಕೆ ವೆಚ್ಚವಾಗುವುದರಿಂದ ಅನಿವಾರ್ಯ ಪ್ರಸಂಗಗಳಲ್ಲಿ ಅವರು ಹಳ್ಳಿಯ ಲೇವಾದೇವಿಗಾರರಲ್ಲಿ ಸಾಲ ಮಾಡುತ್ತಾರೆ. ಹೀಗೆ ಋಣಭಾರ ಬೆಳೆಯುತ್ತದೆ. ಋಣವನ್ನು ತೀರಿಸಲಾರದ ನತದೃಷ್ಟ ಕಾರ್ಮಿಕರು ಭೂ ಮಾಲಿಕರ ಜಮೀನಿನಲ್ಲಿ ವಂಶಪಾರಂಪರ್ಯವಾಗಿ ದುಡಿಯಲು ತೊಡಗುತ್ತಾರೆ. ಇದೇ ಜೀತಪದ್ಧತಿ. ಇವಕ್ಕೆ ಮೂಲ ಕೃಷಿ ಕಾರ್ಮಿಕರ ದಾರಿದ್ರ್ಯ. ಹೀಗೆ ಕೃಷಿ ಕಾರ್ಮಿಕರ ಆದಾಯಕ್ಕೂ, ಋಣಭಾರಕ್ಕೂ, ಜೀತಪದ್ಧತಿಗೂ ಅತ್ಯಂತ ನಿಕಟ ಸಂಬಂಧವಿದೆ.

ಈ ಎಲ್ಲಾ ಕಾರಣಗಳಿಂದಾಗಿ ಕೃಷಿ ಕಾರ್ಮಿಕರಲ್ಲಿ ದೀರ್ಘವಾದ ಕೆಲಸದ ಅವಧಿ, ಹಿತಕರವಲ್ಲದ ಜೀವನದ ಸನ್ನಿವೇಶ, ಕಡಿಮೆ ಮಟ್ಟದ ಕೂಲಿ, ಸಾಂಸ್ಕೃತಿಕ ಮತ್ತು ಮನೋರಂಜನೆಯ ಚಟುವಟಿಕೆಗಳ ಅಭಾವ—ಮುಂತಾದ ಅನೇಕ ಕೊರತೆಗಳಿವೆ. ಭಾರತದಲ್ಲಿ ಭೂ ರಹಿತ ಕೂಲಿಗಾರರ ಸಂಖ್ಯೆ ಹೆಚ್ಚುತ್ತಿದೆ. ಇದರ ಪರಿಣಾಮವಾಗಿ ಕೂಲಿಯ ಮಟ್ಟ ಇಳಿದಿರುವುದಲ್ಲದೆ ವರ್ಷದಲ್ಲಿ ಕೆಲಸ ಇಲ್ಲದಿರುವ ದಿನಗಳ ಸಂಖ್ಯೆ ಹೆಚ್ಚುತ್ತಿವೆ. ದೆಹಲಿ, ಅಜ್ಮೀರ್, ಸೌರಾಷ್ಟ್ರ ಮುಂತಾದ ಕೆಲವು ಪ್ರದೇಶಗಳಲ್ಲಿ ಮಾತ್ರ ಕೃಷಿ ಕಾರ್ಮಿಕರ ಪ್ರಮಾಣ ಇತರ ಉದ್ಯಮಗಳ ಕಾರ್ಮಿಕರ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಉಳಿದೆಡೆಗಳಲ್ಲೆಲ್ಲಾ ಕೈಗಾರಿಕೆಯಲ್ಲಿ ಬಹಳ ಮುಂದುವರಿದಿರುವ ಮಹಾರಾಷ್ಟ್ರ ಮತ್ತು ಬಂಗಾಳ ಪ್ರದೇಶಗಳಲ್ಲಿ ಕೂಡ ಕೃಷಿ ಕಾರ್ಮಿಕರ ಪ್ರಮಾಣ ಹೆಚ್ಚು. ಹಿಮಾಚಲ ಪ್ರದೇಶಗಳಲ್ಲಂತೂ ಶೇ. 90 ರಷ್ಟು ಮಂದಿ ಕೃಷಿ ಕಾರ್ಮಿಕರಿದ್ದಾರೆ. ಗ್ರಾಮೀಣ ಕೃಷಿ ಕಾರ್ಮಿಕರ ಸಂಖ್ಯೆ, ಆದಾಯ, ಜೀವನಮಟ್ಟಗಳ ಬಗ್ಗೆ ನಿರ್ದಿಷ್ಟ ಅಂಕಿ ಅಂಶಗಳು ದೊರೆಯುವುದಿಲ್ಲವಾದರೂ ವರದಿಗಳ ರೂಪದಲ್ಲಿ ಕೆಲವು ಅಂಕಿ ಅಂಶಗಳು ಲಭ್ಯವಾಗಿವೆ. 1881ರ ಜನಗಣತಿಯ ವರದಿಯ ಪ್ರಕಾರ ಭಾರತದಲ್ಲಿ 7.5 ದಶಲಕ್ಷ ಭೂ ರಹಿತ ಕೃಷಿ ಕಾರ್ಮಿಕರಿದ್ದರು. 1891ರ ವೇಳೆಗೆ ಇವರ ಸಂಖ್ಯೆ 18.7 ದಶಲಕ್ಷಗಳಿಗೂ, 1921ರ ವೇಳೆಗೆ 21.6 ದಶಲಕ್ಷಗಳಿಗೂ ಏರಿತು.

ಪಂಚವಾರ್ಷಿಕ ಯೋಜನೆಗಳು ಮತ್ತು ಕೃಷಿ ಕಾರ್ಮಿಕರು

ಈಚೆಗೆ ಭಾರತದ ರಾಷ್ಟ್ರೀಯ ಸರಕಾರ ಕೃಷಿ ಕಾರ್ಮಿಕರ ಸ್ಥಿತಿಯನ್ನು ಉತ್ತಮಪಡಿಸಲು ಹಲವಾರು ಪ್ರಯತ್ನಗಳನ್ನು ಕೈಗೊಳ್ಳುತ್ತಿದೆ. ಕೃಷಿ ಕಾರ್ಮಿಕರಿಗೆ ಸರಿಯಾದ ಉದ್ಯೋಗಾವಕಾಶ ದೊರೆತು ಅವರ ಸ್ಥಿತಿ ಸುಧಾರಿಸಿದ ಹೊರತು ದೇಶದಲ್ಲಿ ಯೋಜನಾನುಗುಣವಾದ ಪ್ರಗತಿ ಸಾಧ್ಯವಿಲ್ಲವೆಂದು ಭಾರತದ ಯೋಜನಾ ಆಯೋಗ ಸೂಚಿಸಿದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಗಳು ಆರಂಭವಾದ ಮೇಲೆ ಕೃಷಿ ಕಾರ್ಮಿಕರ ಸಮಸ್ಯೆ ಮತ್ತು ದೇಶದ ಅರ್ಥವ್ಯವಸ್ಥೆಯಲ್ಲಿ ಅವರ ಸ್ಥಾನದ ಕಡೆಗೆ ವಿಶೇಷ ಗಮನ ಕೊಡಲಾಗುತ್ತಿದೆ. 1950-51ರಲ್ಲಿ ಭಾರತ ಸರಕಾರ ಕೃಷಿ ಕಾರ್ಮಿಕರ ಸ್ಥಿತಿಗತಿಗಳನ್ನು ಕುರಿತ ವಿಚಾರಣಾ ಆಯೋಗವನ್ನು ನೇಮಿಸಿ ಅವರ ಉದ್ಯೋಗ, ನಿರುದ್ಯೋಗ, ಕೂಲಿ, ಖರ್ಚು, ಸಾಲ, ಜೀವನಮಟ್ಟ ಇತ್ಯಾದಿಗಳನ್ನು ಕುರಿತು ಮಾಹಿತಿ ಸಂಗ್ರಹಿ

ಸಿತು. ಪುನಃ 1956–57ರಲ್ಲಿ ದ್ವಿತೀಯ ಬಾರಿಗೆ ವಿಚಾರಣೆ ನಡೆಸಲಾಯಿತು. ಇದರ ಪ್ರಕಾರ ದೇಶದಲ್ಲಿರುವ ಹಳ್ಳಿಗಳ ಕುಟುಂಬಗಳಲ್ಲಿ ಶೇ. 30ರಷ್ಟು ಕೃಷಿ ಕಾರ್ಮಿಕರ ಕುಟುಂಬಗಳೆಂದು ತಿಳಿದು ಬಂದಿತು. ಇವರಲ್ಲಿ ಅರ್ಧಾಂಶ ಜನರಿಗೆ ಭೂಮಿ ಇರುವುದಿಲ್ಲ, ಉಳಿದವರ ಸ್ವಾಧೀನದಲ್ಲಿ ಸ್ವಲ್ಪ ಭೂಮಿ ಇರುತ್ತದೆ. ಈ ವರದಿಗಳ ಪ್ರಕಾರ ದೇಶದಲ್ಲಿ 163 ಲಕ್ಷ ಜೀತಗಾರ ಕುಟುಂಬಗಳಿವೆಯೆಂದು ತಿಳಿದು ಬಂದಿತು. ಅವರಲ್ಲಿ ಶೇ. 83ರಷ್ಟು ಜನ ದಿನಗೂಲಿಗೆ ಹಂಗಾಮಿಯಾಗಿಯೂ, ಉಳಿದವರು ಒಂದು ಗೊತ್ತಾದ ಅವಧಿಯವರೆಗೆ ಕರಾರಿನ ಮೇರೆಗೂ ಕೆಲಸಕ್ಕೆ ನೇಮಕವಾಗಿರುವವರು. 1956–57 ರಲ್ಲಿ ಭಾರತದಲ್ಲಿ ಸುಮಾರು 330 ಲಕ್ಷ ಕೃಷಿ ಕಾರ್ಮಿಕರಿದ್ದರು. 1964–65ರಲ್ಲಿ ಗ್ರಾಮೀಣ ಕಾರ್ಮಿಕ ವಿಚಾರಣಾ ಸಮಿತಿಯೂ ಈ ಬಗ್ಗೆ ವಿಚಾರಣೆ ನಡೆಸಿತು. ಈ ಆಯೋಗದ ವಿವರಣೆಯ ಅಭಿಪ್ರಾಯದಂತೆ ಕೃಷಿ ಕಾರ್ಮಿಕರ ಕುಟುಂಬ ಎಂದರೆ ಕೃಷಿ ಯಿಂದ ಬರುವ ಕೂಲಿಯೇ ಪ್ರಮುಖ ಆದಾಯವಾಗಿರುವ ಕುಟುಂಬ. ಇದರ ಪ್ರಕಾರ ದೇಶದಲ್ಲಿ ಇದ್ದ ಒಟ್ಟು ಕೃಷಿ ಕಾರ್ಮಿಕರ ಸಂಖ್ಯೆ 3.3 ಕೋಟಿ. ಇವರಲ್ಲಿ 1.8 ಕೋಟಿ ಪುರುಷರು, 1.2 ಕೋಟಿ ಸ್ತ್ರೀಯರು ಹಾಗೂ 30 ಲಕ್ಷ ಮಕ್ಕಳು. 1971ರ ಜನಗಣತಿಯ ಪ್ರಕಾರ ಕೃಷಿ ಕಾರ್ಮಿಕರ ಸಂಖ್ಯೆ ಸುಮಾರು 4.73 ಲಕ್ಷ ಇತ್ತು. ರಾಷ್ಟ್ರದ ಒಟ್ಟು ದುಡಿಯುವವರಲ್ಲಿ ಇವರ ಶೇಕಡಾವಾರು 25.8 ಆಗಿತ್ತು. 1956ರಲ್ಲಿ ಕೃಷಿ ಕಾರ್ಮಿಕರ ದಿನಗೂಲಿ ಸರಾಸರಿ 96 ಪೈಸೆಯಾಗಿತ್ತು. ಈ ಕೂಲಿಯಲ್ಲಿ ಶೇ. 40 ರಷ್ಟು ಸರಕುಗಳ ರೂಪದಲ್ಲಿ ಸಂದಾಯವಾಗುತ್ತಿತ್ತು. 1950–56ರ ಅವಧಿಯಲ್ಲಿ ಕೂಲಿಯಮಟ್ಟ ಇಳಿದಿದ್ದು ಸರಕಿನ ರೂಪದ ಕೂಲಿಗೇ ಹೆಚ್ಚಿನ ಪ್ರಾಧಾನ್ಯತೆ ದೊರೆ ಯಿತು. 1950–51ರಲ್ಲಿ ಕಾರ್ಮಿಕರ ಕುಟುಂಬದ ವಾರ್ಷಿಕ ಆದಾಯ 447ರೂ. ಇತ್ತು. 1956–57ರಲ್ಲಿ ಇದು ರೂ. 437ಕ್ಕೆ ಇಳಿಯಿತು. ಹಾಗೆಯೇ ತಲಾ ವರಮಾನ 140 ರೂ. ನಿಂದ 99.4 ರೂ. ಗಳಿಗೆ ಇಳಿಯಿತು.

ಕೃಷಿ ಕಾರ್ಮಿಕರ ವಿಚಾರಣಾ ಆಯೋಗದ ಸಲಹೆಗಳನ್ನು ಅನುಷ್ಠಾನಕ್ಕೆ ತರಲು ಭಾರತದ ಪ್ರಥಮ, ದ್ವಿತೀಯ ಹಾಗೂ ತೃತೀಯ ಯೋಜನೆಗಳ ಅವಧಿಯಲ್ಲಿ ಹಲವು ಪ್ರಯತ್ನಗಳನ್ನು ಕೈಗೊಳ್ಳಲಾಯಿತು. ಪ್ರಥಮ ಯೋಜನೆಯಲ್ಲಿ 1.5 ಕೋಟಿ ರೂ. ಗಳನ್ನು ಭೂ ರಹಿತ ಕಾರ್ಮಿಕರಿಗೆ ಭೂಮಿಯನ್ನು ಒದಗಿಸಲು ವಿನಿಯೋಗಿಸಲಾಯಿತು. 32 ಕೋಟಿ ರೂ. ಗಳನ್ನು ಹಿಂದುಳಿದ ವರ್ಗದ ಕೃಷಿ ಕಾರ್ಮಿಕರ ಕ್ಷೇಮಾಭ್ಯುದಯ ಕ್ಕಾಗಿ ಉಪಯೋಗಿಸಲಾಯಿತು. ದ್ವಿತೀಯ ಯೋಜನೆಯಲ್ಲಿ ಕೃಷಿ ಕಾರ್ಮಿಕರಿಗೆ ಪೂರ್ಣ ಉದ್ಯೋಗ ಮತ್ತು ಸಾಮಾಜಿಕ ನ್ಯಾಯ ಒದಗಿಸಲು ಶ್ರಮಿಸಲಾಯಿತು. 20,000 ಭೂ ರಹಿತ ಕಾರ್ಮಿಕರನ್ನು 1 ಲಕ್ಷ ಎಕರೆ ಭೂಮಿಯಲ್ಲಿ ದುಡಿಯುವಂತೆ ಮಾಡಲು ಸುಮಾರು 5 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಯಿತು. ಇದಲ್ಲದೆ 90 ಕೋಟಿ ರೂ.ಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ವೆಚ್ಚ ಮಾಡಲಾಯಿತು. ಕನಿಷ್ಟ ವೇತನವನ್ನು, ನಿಗದಿ ಮಾಡದಿದ್ದ ರಾಜ್ಯಗಳಲ್ಲಿ, ಈ ಯೋಜನೆಯಲ್ಲಿ ನಿಗದಿ

ಮಾಡಲಾಯಿತು. ತೃತೀಯ ಯೋಜನೆಯಲ್ಲಿ ಗ್ರಾಮಗಳ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಅಧಿಕ ಮೊತ್ತದ ಬಂಡವಾಳವನ್ನು ವೆಚ್ಚ ಮಾಡುವುದರ ಮೂಲಕ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಆದ್ಯತೆ ಕೊಡಲಾಯಿತು. ಇದಕ್ಕಾಗಿ 1718 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಯಿತು. ಇದರ ಫಲವಾಗಿ ಕೃಷಿ ಕಾರ್ಮಿಕರ ಸ್ಥಿತಿಯಲ್ಲೂ ತಕ್ಕಮಟ್ಟಿನ ಸುಧಾರಣೆ ಕಂಡು ಬಂದಿತು. ಭೂ ರಹಿತ ಕೃಷಿ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ನಾಲ್ಕನೇ ಯೋಜನೆಯು ಕೆಲವು ಸಲಹೆಗಳನ್ನು ಮಾಡಿತು. ಅವುಗಳಲ್ಲಿ ಮುಖ್ಯವಾದವು—

1) ಕೆಲಸದ ವೇಳೆಯ ನಿಯಂತ್ರಣ.
2) ಕೆಲಸದ ಸ್ಥಿತಿಯಲ್ಲಿ ಸುಧಾರಣೆ.
3) ಮಕ್ಕಳು ಹಾಗೂ ಸ್ತ್ರೀಯರಿಗೆ ರಕ್ಷಣೆ.
4) ವಿದ್ಯಾಭ್ಯಾಸದ ಸೌಲಭ್ಯಗಳು.
5) ಸಾಮಾಜಿಕ ಭದ್ರತೆಯ ಲಾಭಗಳು.
6) ಯೋಜನೆಯ ಅನುಷ್ಠಾನಕ್ಕೆ ಅನುಕೂಲವಾಗುವಂತೆ ಸೂಕ್ತ ಪ್ರದೇಶಗಳ ಆಯ್ಕೆ. ಇತ್ಯಾದಿ.

ಕೃಷಿ ಕಾರ್ಮಿಕರಿಗೆ ಇತರ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಈ ಯೋಜನೆಯಲ್ಲಿ ಕೃಷಿಗೆ ಹೊಂದಿಕೊಂಡಂತೆಯೇ ಅನೇಕ ಉದ್ಯೋಗಗಳನ್ನು ಬೆಳೆಸಲು ದೇಶದ ವಿವಿಧ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಭೂ ಸುಧಾರಣೆ ಮತ್ತು ಉದ್ಯೋಗ ಪ್ರಧಾನ ಕಾರ್ಯಕ್ರಮಗಳಿಗೆ ಈ ಯೋಜನೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಲಾಯಿತು. ಐದನೇ ಯೋಜನೆಯಲ್ಲೂ ಕೃಷಿ ಕಾರ್ಮಿಕರಿಗೆ ವಿಶಿಷ್ಟ ಸ್ಥಾನ ಕಲ್ಪಿಸಲಾಯಿತು. ಸಂಘಟಿತ ಅಭಿವೃದ್ಧಿ ಕಾರ್ಯಕ್ರಮಕ್ಕೆ ಮಾರ್ಗದರ್ಶನ ನೀಡುವುದು ಈ ಯೋಜನೆಯ ಉದ್ದೇಶಗಳಲ್ಲೊಂದಾಗಿತ್ತು. ಕೃಷಿ ಕಾರ್ಮಿಕರ ಉದ್ಯೋಗ ಪೂರೈಕೆ, ಆರೋಗ್ಯ ಸೌಲಭ್ಯ, ಕುಡಿಯುವ ನೀರಿನ ಪೂರೈಕೆ ಇತ್ಯಾದಿಗಳ ಬಗ್ಗೆ ಈ ಯೋಜನೆಯಲ್ಲಿ ಆಸ್ಥೆ ವಹಿಸಲಾಯಿತು. 1951ರಲ್ಲಿ ಆಚಾರ್ಯ ವಿನೋಬಾ ಭಾವೆಯವರು ಆರಂಭಿಸಿದ ಭೂದಾನ ಚಳುವಳಿಯೂ ಭೂ ರಹಿತ ಕೃಷಿ ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಲು ಸ್ವಲ್ಪಮಟ್ಟಿಗೆ ಸಹಕಾರಿಯಾಗಿದೆ. 1967ರ ಮಾರ್ಚ್ ವರೆಗೆ 42.7 ಲಕ್ಷ ಎಕರೆಗಳನ್ನು ಸಂಗ್ರಹಿಸಿ, 12 ಲಕ್ಷ ಎಕರೆಗಳನ್ನು ಭೂ ರಹಿತರಲ್ಲಿ ಹಂಚಲಾಗಿದೆ. ಗ್ರಾಮದಾನ ಇದರ ವಿಸ್ತೃತ ರೂಪ. ಭೂ ಸುಧಾರಣೆಯಿಂದ ಲಭ್ಯವಾದ ಹೆಚ್ಚುವರಿ ಭೂಮಿಯನ್ನು ಕೃಷಿ ಕಾರ್ಮಿಕರಿಗೆ ಹಂಚುವ ಧೋರಣೆ ಸರಕಾರದ್ದಾಗಿದೆ. ಕೇರಳ, ಪಂಜಾಬ್, ಒರಿಸ್ಸ, ರಾಜಸ್ಥಾನ, ಅಜ್ಮೀರ್, ದೆಹಲಿ, ತ್ರಿಪುರ, ಕಚ್ ಮತ್ತು ಕೊಡಗು ಪ್ರದೇಶಗಳಲ್ಲಿಯೂ, ಅಸ್ಸಾಂ, ಆಂಧ್ರಪ್ರದೇಶ, ಬಿಹಾರ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಉತ್ತರ ಪ್ರದೇಶ, ಕರ್ನಾಟಕ ಮತ್ತು ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿ ಕನಿಷ್ಠ ಮಟ್ಟದ ವೇತನವನ್ನು ಜಾರಿಗೆ

ತರಲಾಗಿದೆ. ಭಾರತದಲ್ಲಿ ಕೃಷಿ ಕಾರ್ಮಿಕರನ್ನು ಯಾವುದೇ ಬಗೆಯ ಜೀತ ಪದ್ಧತಿಗೆ ಗುರಿ ಮಾಡುವುದು ಕಾನೂನು ಬಾಹಿರ ಹಾಗೂ ಶಿಕ್ಷಾರ್ಹವಾಗಿದೆ.

ಭಾರತದ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಕೃಷಿ ಕಾರ್ಮಿಕರ ಕುಂದು ಕೊರತೆಗಳನ್ನು ನಿವಾರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾದವು—

1) ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಪಶುಸಂಗೋಪನೆಯ ಯೋಜನೆಗಳು.

2) ಗ್ರಾಮ ಕೈಗಾರಿಕೆ, ಗೃಹ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಉದ್ಯೋಗಗಳನ್ನು ಕಲ್ಪಿಸುವುದು.

3) ಭೂಮಿಯ ಹಂಚುವಿಕೆ, ಶಿಕ್ಷಣಾವಕಾಶ ಇವುಗಳ ಮೂಲಕ ಕೃಷಿ ಕಾರ್ಮಿಕರ ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಿ ಅವರಲ್ಲಿ ಆತ್ಮವಿಕಾಸ, ಕಾರ್ಯಶಕ್ತಿ ಹಾಗೂ ದಕ್ಷತೆಗಳನ್ನು ಮೂಡಿಸುವುದು.

4) ಗ್ರಾಮ ಪುನರುಜ್ಜೀವನ ಕಾರ್ಯಗಳಿಗಾಗಿ ಮೀಸಲಾಗಿರುವ ಹಣದಲ್ಲಿ ಅಧಿಕಾಂಶವನ್ನು ಕೃಷಿ ಕಾರ್ಮಿಕರ ಜೀವನ ಪರಿಸ್ಥಿತಿಯ ಸುಧಾರಣೆಗೆ ಬಳಸುವುದು ಇತ್ಯಾದಿ.

ಮಹಿಳಾ ಕೃಷಿ ಕಾರ್ಮಿಕರು

ಭಾರತದ ಕೃಷಿಯಲ್ಲಿ ಮಹಿಳೆಗಿರುವ ಸ್ಥಾನ ಅಪೂರ್ವವಾದುದು. ಗ್ರಾಮೀಣ ಅರ್ಥಿಕತೆಗೆ ಮತ್ತು ಕೃಷಿಯ ಅಭಿವೃದ್ಧಿಗೆ ಅವಳ ಕೊಡುಗೆ ಅಪಾರ. ಕೃಷಿಯನ್ನು ಆರಂಭ ಮಾಡಿದವಳೇ ಮಹಿಳೆ ಎನ್ನಲಾಗಿದೆ. ಕೃಷಿ ಕಲೆಯನ್ನು ಮೊದಲು ಕರಗತ ಮಾಡಿಕೊಂಡವಳೇ ಮಹಿಳೆ ಎಂದು ಕೃಷಿಯ ಇತಿಹಾಸ ಹೇಳುತ್ತದೆ. ಅಂದರೆ ಕೃಷಿಯನ್ನು ಮಹಿಳೆ ತಾನು ಕಲಿತ ನಂತರ ಪುರುಷನಿಗೆ ಕಲಿಸಿದಳು ಎನ್ನಬಹುದು. ಹಿಂದೆ ಉದರ ಪೋಷಣೆಗಾಗಿ ಕಾಡು ಪ್ರಾಣಿಗಳ ಬೇಟೆಯಾಡುತ್ತಿದ್ದಾಗಲೇ ಸೂಕ್ಷ್ಮಮತಿಯ ಮಹಿಳೆ ನೈಸರ್ಗಿಕ ಬೆಳೆಯ ಮೇಲೆ ಕಣ್ಣಿಟ್ಟಳು. ಗೆಡ್ಡೆ, ಗೆಣಸು, ಹಣ್ಣುಗಳ ರುಚಿ ಕಂಡ ಅವಳು ತನ್ನ ಜಾಣ್ಮೆಯನ್ನು ಉಪಯೋಗಿಸಿ ಬೀಜ ಚೆಲ್ಲಿದಳು. ವಿವಿಧ ಬಗೆಯ ಬೆಳೆಗಳನ್ನು ಬೆಳೆದಳು. ಕೃಷಿ ಪ್ರಕೃತಿಯ ಕೈಗೊಂಬೆ ಎನ್ನುವುದನ್ನು ಅರಿತಳು. ತನ್ನ ಅನುಭವದಿಂದ ಒರಟು ಕೃಷಿಗೆ ನಾಜೂಕಿನ ರೂಪ ಕೊಟ್ಟಳು. ಅನಾಗರಿಕ ಜೀವನದಲ್ಲಿ ನಾಗರಿಕತೆಯನ್ನು ತುಂಬಿದಳು. ಅಲೆದಾಟದ ಬದುಕಿಗೆ ಹೊಸ ತಿರುವನ್ನು, ಹೊಸ ಅರ್ಥವನ್ನು ಕೊಟ್ಟಳು. ಹೀಗೆ ಅಂದು ಮಹಿಳೆಯಿಂದ ಆರಂಭವಾದ ಕೃಷಿ ಇಂದು ಸಂಶೋಧನೆ, ವಿಜ್ಞಾನಗಳನ್ನು ಮೈಗೂಡಿಸಿಕೊಂಡು ಶಾಸ್ತ್ರೀಯ ಕೃಷಿ ಉದ್ಯಮವಾಗಿ ಪರಿಣಮಿಸಿದೆ.

ಕೃಷಿಯಲ್ಲಿ ಮಹಿಳೆ ಭಾಗವಹಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಬಹು ಪೂರ್ವದಿಂದಲೂ ನಮ್ಮ ಮಹಿಳೆಯರು ಪುರುಷರ ಹಾಗೆ ಕೃಷಿಯಲ್ಲಿ ಕಾರ್ಯನಿರತರಾಗಿದ್ದುದು ಕಂಡು ಬರುತ್ತದೆ. ಭಾರತದಲ್ಲಿ ಮಹಿಳೆ ಕೃಷಿಗೆ ಅಂಟಿಕೊಂಡೇ ಬೆಳೆದು ಬಂದಿದ್ದಾಳೆ. ಮಹಿಳೆಗೂ ಮಣ್ಣಿಗೂ ಬಿಗಿಯಾದ ನಂಟಿರುವುದು ರಾಮಾಯಣ, ಮಹಾಭಾರತಗಳಲ್ಲೂ ಕಾಣಬಹುದು. ಜನಕ ಮಹಾರಾಜ ತನ್ನ ಪತ್ನಿಯೊಂದಿಗೆ ಚಿನ್ನದ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದನೆಂದು ರಾಮಾಯಣದಲ್ಲಿ ತಿಳಿಸಲಾಗಿದೆ. ಅಧಿಕ ಬೆಳೆಯನ್ನು ಉತ್ಪಾದಿಸಲು "ಸೀತಾಯಜ್ಞ" ಮಾಡಬೇಕೆಂದು ಮಹಾನ್ ಸಂಸ್ಕೃತ ವಿದ್ವಾಂಸರು ಹೇಳಿದ್ದಾರೆ. ರಾಮಾಯಣದಲ್ಲಿ 'ಸೀತೆ' ಎಂದರೆ ಉತ್ತ ಭೂಮಿಯಿಂದ ಉದ್ಭವವಾದವಳು ಎಂದರ್ಥ. ಪ್ರಾಚೀನ ಗ್ರಂಥಗಳಲ್ಲಿ ಮಹಿಳೆ ಪುರುಷನೊಂದಿಗೆ ಸರಿಸಮನಾಗಿ ದುಡಿಯುತ್ತಿದ್ದಳು ಎಂದು ಉಲ್ಲೇಖಿಸಲಾಗಿದೆ. ಕೇವಲ ಹಳ್ಳಿಯ ಮಹಿಳೆ ಮಾತ್ರವಲ್ಲ, ಪಟ್ಟಣದ ಮಹಿಳೆಯೂ ಕೃಷಿಯ ಬಗ್ಗೆ ಅಷ್ಟೇ ಆಸಕ್ತಿ ವಹಿಸುತ್ತಿದ್ದಳು ಎಂದು ಹೇಳಲಾಗಿದೆ. ಆಗ ಪ್ರತಿ ಗೃಹಿಣಿಯೂ ತರಕಾರಿಗಳ ಹಾಗೂ ಅವುಗಳನ್ನು ಯಾವ ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕೆಂಬ ಬಗ್ಗೆ ತಿಳಿದಿದ್ದಳು. ಭಾರತದಲ್ಲಿ ಮಹಿಳೆ ಕೃಷಿಯಲ್ಲಿ ಪುರುಷನೊಂದಿಗೆ ಬಹುವಾಗಿ ಸಹಕರಿಸುತ್ತಿದ್ದಳು ಎಂಬ ಬಗ್ಗೆ ಪುರಾತನ ಕೃತಿಗಳಲ್ಲಿ ಅನೇಕ ನಿದರ್ಶನಗಳನ್ನು ಕಾಣಬಹುದು. ಇಂದಿಗೂ ಗ್ರಾಮೀಣ ಮಹಿಳೆಯೇ ಕೃಷಿ ಕಾರ್ಯಗಳ ಸೂತ್ರಧಾರಿಣಿ. ಅವಳಿಲ್ಲದೆ ಯಾವ ಕೃಷಿ ಕಾರ್ಯವೂ ನಡೆಯುವಂತಿಲ್ಲ. ಕೃಷಿಯ ಬಗ್ಗೆ ಗ್ರಾಮೀಣ ಮಹಿಳೆ ಹೊಂದಿರುವ ಜ್ಞಾನಭಂಡಾರ ಅಗಾಧವಾದುದು. ಭೂಮಿಯ ಹದ, ಬೀಜದ ಬಿತ್ತನೆ, ನಾಟಿಯ ಕೆಲಸ, ಕಳೆಯ ಕೀಳುವಿಕೆ, ಕಾಳು ಬಿಡಿಸುವಿಕೆ. ಗೊಬ್ಬರ ಹಾಕುವಿಕೆ, ಬೆಳೆಯನ್ನು ಕಾಯುವಿಕೆ, ಹುಲ್ಲು ಆಯುವಿಕೆ, ಬೆಳೆ ಕುಯಿಲು ಹೀಗೆ ಕೃಷಿಯ ಪ್ರತಿಯೊಂದು ಹಂತದಲ್ಲೂ ಅವಳು ಉತ್ಸಾಹದಿಂದ ಮೈಬಗ್ಗಿಸಿ ದುಡಿಯಲು ಸಿದ್ಧ. ಅವಳಿದ್ದಲ್ಲಿ ಕೃಷಿ ಕಾರ್ಯಗಳಲ್ಲೂ ಅಚ್ಚುಕಟ್ಟು, ಒಪ್ಪ ಓರಣ. ಕೆಲಸಗಳು ಭರಭರನೆ ನಡೆದು ಬಿಡುತ್ತವೆ. ಮಣ್ಣೆಂದರೆ ಗ್ರಾಮೀಣ ಮಹಿಳೆಗೆ ಅಪಾರ ಮಮತೆ, ಕೃಷಿಯಲ್ಲಿ ಗ್ರಾಮೀಣ ಗೃಹಿಣಿ ಎಷ್ಟರಮಟ್ಟಿಗೆ ತಲ್ಲೀನಳಾಗಿ ಬಿಡುತ್ತಾಳೆಂದರೆ ಅವಳು ಮಿಕ್ಕ ಎಲ್ಲವನ್ನೂ ಆ ಕ್ಷಣಕ್ಕೆ ಮರೆತುಬಿಡುತ್ತಾಳೆ. ಕೃಷಿ ಕಾರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಸಾಗದಾಗ, ಬೆಳೆ ಹಾಳಾದಾಗ ಅವಳ ಕಳವಳ ಪರದಾಟ ಅಸದಳ. ಕೃಷಿ ಕಾರ್ಯಗಳಲ್ಲಿ ಪತ್ನಿ ಜೊತೆಗಿದ್ದಲ್ಲಿ ಗಂಡನಿಗೆ ಹಿಗ್ಗು. ಆದರೆ ಅದೇ ಪತ್ನಿ ಯಾವುದಾದರೂ ಕಾರಣದಿಂದ ಕೃಷಿಯಲ್ಲಿ ಪಾಲ್ಗೊಳ್ಳದಿದ್ದಾಗ ಅವನ ತಲ್ಲಣ ಹೇಳತೀರದು. ಪರಿಣಾಮ ಕೃಷಿ ಕಾರ್ಯಗಳಲ್ಲಿ ಅಸ್ತವ್ಯಸ್ತತೆ ತಲೆ ಹಾಕುತ್ತದೆ. ಹಳ್ಳಿಗಳಲ್ಲಿ ಮನೆಗೆ ಒಂದು ಹೆಣ್ಣನ್ನು ಸೊಸೆಯಾಗಿ ತರುವುದೆಂದರೆ ಮನೆಮಂದಿಗೆಲ್ಲಾ ಸಂತೋಷ ; ಕಾರಣ ಕೃಷಿಯಲ್ಲಿ ಪಾಲ್ಗೊಳ್ಳಲು ಒಬ್ಬ ಹೆಣ್ಣಾಳು ದೊರೆತಳು ಎಂದು. ಅದೇ ಮನೆಮಗಳು ಮದುವೆಯಾಗಿ ಗಂಡನ ಮನೆಗೆ ಹೊರಟು

ನಿಂತರೆ ಸಂತಸವಲ್ಲೂ ತುಸು ವ್ಯಥೆ, ಕಾರಣ ಒಬ್ಬ ಹೆಣ್ಣಾಳು ಕಡಿಮೆಯಾದದ್ದರಿಂದ ಕೃಷಿಗಾಗುವ ನಷ್ಟ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯವೆಂದರೆ ಟೀ, ಕಾಫಿ, ರಬ್ಬರ್ ತೋಟಗಳಲ್ಲಿ, ಹೊಲ ಗದ್ದೆಗಳಲ್ಲಿ ಹೊತ್ತು ಗೊತ್ತಿಲ್ಲದೆ ಕಾರ್ಯನಿರತರಾಗಿರುವ ಹೆಣ್ಣಾಳುಗಳು. ಇವರು ಎದುರಿಸುವ ಸಂಕಷ್ಟಗಳು ಗಂಡಾಳುಗಳಿಗಿಂತ ಹೆಚ್ಚು. ಇವರಿಗೆ ಸಿಗುವ ಕೂಲಿಯೂ ಗಂಡಾಳುಗಳಿಗಿಂತಲೂ ಕಡಿಮೆ. ಹೊಲ ಗದ್ದೆಗಳಲ್ಲಿ ಬೆವರು ಸುರಿಸಿ ದುಡಿದು ಬರುವ ಇವರು ಮನೆಗೆಲಸಗಳಲ್ಲೂ ತೊಡಗಬೇಕು. ಹೊಲದಿಂದ ಮೇವು ತರುವುದು, ಮೇವು ಕತ್ತರಿಸುವುದು, ತಿಂಡಿ ತಯಾರಿಸಿ ಅದನ್ನೂ, ನೀರನ್ನೂ ಪಸಕ್ಕಿಡುವುದು, ಕೊಟ್ಟಿಗೆಯನ್ನೂ, ದನದ ಮೈಯನ್ನೂ ತೊಳೆಯುವುದು, ಹಾಲು ಕರೆಯುವುದು, ಬೆರಣಿ ಮಾಡುವುದು, ತಿಪ್ಪೆ ಗೊಬ್ಬರ ಮಾಡುವುದು, ಮೊಸರು ಮತ್ತು ತುಪ್ಪ ಮಾಡುವುದು ಇತ್ಯಾದಿ ಕೆಲಸಗಳ ಹೊರೆಯನ್ನೂ ಗ್ರಾಮೀಣ ಮಹಿಳೆಯರೇ ಹೊರಬೇಕು. ವಿನೋದ ವಿಹಾರಗಳು ಇವರಿಗಿಲ್ಲ. ಜೀವಿಸಿರುವಷ್ಟು ದಿನವೂ ದುಡಿತವೊಂದೇ ಇವರ ಪಾಲಿಗೆ. ಇವರ ಗಂಡಂದಿರು ಆಗಾಗ ಏನಾದರೂ ನೆಪದಲ್ಲಿ ಪಟ್ಟಣಕ್ಕೆ ಹೋಗುವುದುಂಟು. ಅಲ್ಲಿ ಹೋಟೆಲು, ಸಿನಿಮಾ ಎಂದು ಮಜ ಮಾಡುವುದುಂಟು. ಆದರೆ ಇವೆಲ್ಲವೂ ಗ್ರಾಮೀಣ ಮಹಿಳೆಯರಿಗೆ ಮಾತ ಸೊನ್ನೆ. ಇವರು ಚಳಿಯೆನ್ನದೆ, ಮಳೆಯೆನ್ನದೆ, ಉರಿಬಿಸಿಲಿನಲ್ಲಿ ಹೊಲ ಗದ್ದೆಗಳಲ್ಲಿ ತಮ್ಮ ಜೀವ ತೇಯಬೇಕು. ಅಂಜದೆ, ಅಳುಕದೆ ಎಂತಹ ಕಷ್ಟ ಕಾರ್ಪಣ್ಯಗಳನ್ನೂ ನಿಭಾಯಿಸಿಕೊಂಡು ಹೋಗಬೇಕು. ಇವರಿಗೆ ಜವಾಬ್ದಾರಿಗಳು ಅನೇಕ. ಮನೆಯನ್ನು ಒಪ್ಪಮಾಡಿ, ಪತಿ ಮತ್ತು ಮಕ್ಕಳ ಯೋಗಕ್ಷೇಮವನ್ನೂ ನೋಡಿಕೊಂಡು ಕೃಷಿ ಕೆಲಸಗಳಲ್ಲೂ ದುಡಿಯುವುದೆಂದರೆ ಸಾಮಾನ್ಯ ವಿಷಯವಲ್ಲ. ಈ ಮಧ್ಯೆ ಅವರ ವೈಯಕ್ತಿಕ ಆರೋಗ್ಯ-ಭಾಗ್ಯಗಳಿಗೆ ತಿಲಾಂಜಲಿ. ಭಾರತದಲ್ಲಿ ಕೃಷಿಯಲ್ಲಿ ನಿರತರಾಗಿರುವರೇ 68 ಮಂದಿಯಲ್ಲಿ ಅರ್ಧದಷ್ಟು ಹೆಂಗಸರೇ ಎಂದು ತಿಳಿದುಬಂದಿದೆ. ಇವರೆಲ್ಲರ ಸ್ಥಿತಿಯೂ ಒಂದೇ. ಕೃಷಿ ಕಾರ್ಯಗಳ ಬಹುಪಾಲು ಭಾರ ಇವರ ತಲೆಯಮೇಲೆ. ಆದರೆ ಹೆಗ್ಗಳಿಕೆ ಮಾತ್ರ ಪುರುಷರಿಗೆ.

ಭಾರತದಲ್ಲಿರುವ ಸುಮಾರು 265 ದಶಲಕ್ಷ ಮಹಿಳೆಯರಲ್ಲಿ 32 ದಶಲಕ್ಷ ಮಹಿಳೆಯರು ಜೀವನದ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ. ಇದರಲ್ಲಿ ಮೂರು ಲಕ್ಷಕ್ಕೂ ಹೆಚ್ಚಿನ ಮಹಿಳೆಯರು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದು ಉಳಿದವರು ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುತ್ತಿದ್ದಾರೆ. ಇವರಲ್ಲಿ ಶೇಕಡ 73 ರಷ್ಟು ಮಹಿಳಾ ಕಾರ್ಮಿಕರು ಪ್ಲಾಂಟೇಷನ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ದುಡಿಯುವ ಮಹಿಳೆಯರು ಸಾಮಾನ್ಯವಾಗಿ ಅಕ್ಷರಸ್ಥರಾಗಿದ್ದು ಕೆಲವು ಅವಶ್ಯಕ ಅನುಕೂಲತೆಗಳನ್ನು ಹೊಂದಿರುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಮಹಿಳೆಯರು ಅನಕ್ಷರಸ್ಥರು. ಇವರ ಪಾಲಿಗೆ ಯಾವ ಅನುಕೂಲಗಳೂ ಇಲ್ಲ. ಆದರಲ್ಲೂ ಕೃಷಿ ಕ್ಷೇತ್ರವಾದ ಪ್ಲಾಂಟೇಷನ್‌ಗಳಲ್ಲಿ ದುಡಿಯುವ ಮಹಿಳೆ

ಯರ ಪಾಡಂತೂ ತೀರಾ ಕಷ್ಟಕರ. ಧೋ ಎಂದು ಸದಾ ಸುರಿಯುತ್ತಿರುವ ಮಳೆ, ಮೈ ಕೊರೆಯುವ ಚಳಿ, ರಕ್ತ ಹೀರುವ ಜಿಗಣೆಗಳು, ಸೊಳ್ಳೆಗಳು ಇವುಗಳ ನಡುವೆ ಇವರು ಬೆಳಗಿನಿಂದ ಸಂಜೆಯವರೆಗೆ ತಮ್ಮ ಹೊಟ್ಟೆಪಾಡಿಗಾಗಿ ಮೂಕ ಪಶುಗಳಂತೆ ದುಡಿಯಬೇಕು. ಯಜಮಾನನ ಮುಂದೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದಿರಲಿ, ಧ್ವನಿ ತೆಗೆದು ಮಾತನಾಡುವಂತೆಯೇ ಇಲ್ಲ. ಇದೊಂದು ವಿಷವರ್ತುಲವಿದ್ದಂತೆ. ಇದರಲ್ಲಿ ಸಿಲುಕಿಕೊಂಡವರು ತಪ್ಪಿಸಿಕೊಂಡು ಹೊರಬರುವಂತೆಯೇ ಇಲ್ಲ. ತೋಟಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಇಡೀ ವರ್ಷ ಕೆಲಸವೂ ಇರುವುದಿಲ್ಲ. ಸುಗ್ಗಿಯ ಕಾಲ ಕಳೆದನಂತರ ನಾಟಿ ಹಾಕುವುದು, ಕಳೆ ಕೀಳುವುದು ಇತ್ಯಾದಿ ಸಣ್ಣಪುಟ್ಟ ಕೆಲಸಗಳು ಮುಗಿದ ಮೇಲೆ ಇವರಿಗೆ ಬೇಡಿಕೆ ಇಲ್ಲ. ಹೊಟ್ಟೆಪಾಡಿಗಾಗಿ ಇವರು ದಿನಗೂಲಿಯ ಮೇಲೆ ಅಲ್ಲಿ-ಇಲ್ಲಿ ದುಡಿಯಬೇಕು. ದಿನಗೂಲಿಯು ದೊರೆಯದಿದ್ದರೆ ಇವರ ಪಾಡು ನಾಯಿಗಿಂತಲೂ ಕಡೆ. ಹಸಿವಿನೊಡನೆ ಸೆಣಸಾಟ ನಡೆಸಲಾಗದ ಈ ಬೃಹತ್ ಕಾರ್ಮಿಕ ವೃಂದ ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ನಗರ, ಪಟ್ಟಣ ಪ್ರದೇಶಗಳಿಗೆ ಕೆಲಸ ಹುಡುಕಿಕೊಂಡು ಬರುತ್ತಾರೆ. ಈ ಮಹಿಳಾ ಕಾರ್ಮಿಕರ ಬದುಕು ದಿನದಿನಕ್ಕೂ ಅಸಹನೀಯವಾಗುತ್ತಿದೆ. ಇವರಿಗೆ ಉದ್ಯೋಗದ ಭದ್ರತೆಯಿಲ್ಲ, ಕೈ ತುಂಬಾ ಕೂಲಿ ಇಲ್ಲ. ಒಳ್ಳೆಯ ವಾತಾವರಣವಿಲ್ಲ. ಆದರೆ ಮೈತುಂಬಾ ದುಡಿತವಿದೆ. ಉಪ್ಪೊತ್ತಿನ ಅನ್ನಕ್ಕಾಗಿ ಇವರು ಸತತವಾಗಿ ಹೋರಾಟ ನಡೆಸಿದ್ದಾರೆ. ಮೈಗೆ, ಮನಸ್ಸಿಗೆ ತಗಲುವ ರೋಗಗಳೊಂದಿಗೆ ನೋಯುತ್ತಿದ್ದಾರೆ. ಇವರ ಬವಣೆಗಳನ್ನು ಹೋಗಲಾಡಿಸಲು ಭಾರತದಲ್ಲಿ ಯಾವ ಪ್ರಯತ್ನವೂ ನಡೆಯದಿರುವುದು ದುರ್ದೈವ. ಇವರ ಕಷ್ಟವನ್ನು ಪರಿಹರಿಸುವ ಹೊಣೆಯನ್ನು ಹೊತ್ತಿರುವ ಸರಕಾರವೂ ಇವರ ಪಾಲಿಗೆ ಕಣ್ಣುಮುಚ್ಚಿ ಕುಳಿತಿದೆ.

ಪುರುಷ ಪ್ರಬಲ, ಹೆಣ್ಣು ಅಬಲೆ ಎಂದು ಹೇಳಲಾಗಿದೆ. ಆದರೆ ಕೃಷಿಯಲ್ಲಿ ಹೆಣ್ಣಿನ ದುಡಿಮೆಯ ಪರಿಯನ್ನು ನೋಡಿದಾಗ ಈ ಮಾತಿಗೆ ಅರ್ಥವಿಲ್ಲ ಎನಿಸುತ್ತದೆ. ಹೆಣ್ಣಿಗೆ ದೇಹದಾರ್ಢ್ಯ ಇಲ್ಲದಿರಬಹುದು. ಆದರೆ ಅವಳಿಗಿರುವ ಮನೋದಾರ್ಢ್ಯ ಈ ಕೊರತೆಯನ್ನು ಮುಚ್ಚಿಬಿಡುತ್ತದೆ. ಈ ಮನೋದಾರ್ಢ್ಯದಿಂದಲೇ ಅವಳು ಪುರುಷನೊಂದಿಗೆ ಸರಿಸಮವಾಗಿ ದುಡಿಯುವುದು ಸಾಧ್ಯವಾಗಿದೆ. ಅವಳಿಗಿರುವ ಕಾರ್ಯದಕ್ಷತೆ ತನ್ಮಯತೆ, ವಿಧೇಯತೆ ಹಾಗೂ ಧೈರ್ಯ ಸ್ಥೈರ್ಯಗಳು ವರ್ಣಿಸಲಸದಳ. ಕೃಷಿಯ ಆಧಾರಸ್ತಂಭದಂತಿರುವ ಗ್ರಾಮೀಣ ಮಹಿಳೆಯರ ಬದುಕು ಒಂದು ಹೋರಾಟ. ಅವರ ಜೀವನ ನಿಜಕ್ಕೂ ದುರ್ಭರ. ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಇವರು ಸಮಾಜದಲ್ಲಿ ಇಡಿಯಾಗಿ ಅಲಕ್ಷಿಸಲ್ಪಟ್ಟಿದ್ದಾರೆ, ಶೋಷಿಸಲ್ಪಟ್ಟಿದ್ದಾರೆ ಎಂದರೆ ತಪ್ಪಾಗದು.

ಇಂದು ವಿಜ್ಞಾನದ ನೆರವಿನಿಂದ ಭಾರತದ ಅರ್ಥ ವ್ಯವಸ್ಥೆಯ ಬೆನ್ನೆಲುಬಾದ ಕೃಷಿ ಬಹಳವಾಗಿ ಮುಂದುವರಿಯುತ್ತಿದೆ. ಜೀವನಾಧಾರ ಕೃಷಿ ವಾಣಿಜ್ಯ ಕೃಷಿಯಾಗಿ ಪರಿವರ್ತನೆಗೊಂಡಿದೆ. ಆಧುನಿಕ ಯಂತ್ರೋಪಕರಣಗಳು, ಸುಧಾರಿತ ಮಿಶ್ರ ತಳಿಗಳು ಕೃಷಿಯನ್ನು ಪ್ರವೇಶಿಸಿ ದೇಶದಲ್ಲಿ ಹಸಿರುಕ್ರಾಂತಿ ಮೂಡಿದೆ. ಅಂತೆಯೇ ಕೃಷಿ ಕಲಿಕೆ

ಯತ್ತ ವಾಲುತ್ತಿರುವ ಮಹಿಳೆಯರ ಸಂಖ್ಯೆಯೂ ಹೆಚ್ಚುತ್ತಿದೆ. ಮಹಿಳೆ ಕೃಷಿ ಕಾಲೇಜಿನಲ್ಲಿ ಕಲಿಯುವುದೆಂದರೆ ಮೂಗಿನ ಮೇಲೆ ಬೆರಳಿಡುವ ಕಾಲವೊಂದಿತ್ತು. ಆದರೆ ಇಂದು ಇದು ಸಾಮಾನ್ಯ ವಿಷಯವಾಗಿದೆ. ಕೃಷಿ ಕಾಲೇಜುಗಳಲ್ಲಿ ಮಹಿಳೆಯರು ಉಳುಮೆ, ನಾಟಿ, ವಿವಿಧ ಬಗೆಯ ಬೆಳೆಗಳನ್ನು ಬೆಳೆಯುವ ವಿಧಾನಗಳು, ಬೆಳೆಗಳಿಗೆ ಬೀಳುವ ಕೀಟಗಳು ಮತ್ತು ರೋಗಗಳು, ಅವುಗಳಿಗೆ ಪರಿಹಾರೋಪಾಯಗಳು, ಮಣ್ಣಿನ ಪರೀಕ್ಷೆ, ಹಳ್ಳಿಗಳಿಗೆ ಹೋಗಿ ಬೆಳೆಗಳ ಬಗ್ಗೆ ವಿಸ್ತರಣಾ ಕೆಲಸ ಹೀಗೆ ಪ್ರತಿಯೊಂದನ್ನೂ ಕಲಿಯುತ್ತಿದ್ದಾರೆ. ಪದವಿ ಪಡೆದ ಮಹಿಳೆಯರು ಕೃಷಿ ಅಧಿಕಾರಿಗಳಾಗಿ, ಕೃಷಿ ವಿಸ್ತರಣಾಧಿಕಾರಿಗಳಾಗಿ, ಸಂಶೋಧಕರಾಗಿ, ತಾಂತ್ರಿಕ ಸಲಹೆಗಾರರಾಗಿ, ಕೃಷಿಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಹಿಳೆಯರು ಕೇವಲ ಮಕ್ಕಳ ಆರೋಗ್ಯ ಪರಿಪಾಲನೆ ಮತ್ತು ಗೃಹಕೃತ್ಯಗಳಿಗಷ್ಟೇ ಸೀಮಿತವಾಗಿರಬೇಕೆಂಬ ಸಂಪ್ರದಾಯಬದ್ಧ ಮನೋಭಾವನೆ ಇಂದು ಕಡಿಮೆಯಾಗುತ್ತಿದೆ. ಮಾನವ ಶಕ್ತಿಯ ಸದುಪಯೋಗದ ನಿಟ್ಟಿನಲ್ಲಿ ಮಹಿಳೆಯರು ಸಾಗುತ್ತಿದ್ದಾರೆ. ಆರ್ಥಿಕ ರಂಗದ ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಿಗೆ ಸರಿಸಾಟಿಯಾಗಿ ದುಡಿಯುತ್ತಿದ್ದು, ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಆದರೆ ಮಹಿಳಾ ವರ್ಗದ ಇನ್ನೊಂದು ಮುಖವಾದ ಮಹಿಳಾ ಕೃಷಿ ಕಾರ್ಮಿಕರು ದಿನದಿನಕ್ಕೂ ನವೆಯುತ್ತಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ವರ್ಷ ಈ ವರ್ಗದ ಮೇಲೆ ಯಾವ ಪ್ರಭಾವವನ್ನೂ ಬೀರಿಲ್ಲ. ಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗೆ ದೊರೆಯುವ ಸೌಲಭ್ಯಗಳಿಂದ ಈ ವರ್ಗದವರು ವಂಚಿತರಾಗಿದ್ದಾರೆ. ಬೌದ್ಧಿಕವಾಗಿಯಂತೂ ಇವರು ಬಹಳ ಹಿಂದುಳಿದಿದ್ದಾರೆ. 'ಅಂಬಲಿ ಊಟ ಕಂಬಳಿ ಹೊದಿಕೆ' ಇದೇ ಇವರ ಬಾಳು. ನಿಜವಾದ ಸ್ವಾತಂತ್ರ್ಯದ ಅರಿವು, ಮಾನಸಿಕ ನೆಮ್ಮದಿ ಇವರಿಗಿಲ್ಲ. ಇಂದು ಎಲ್ಲೆಲ್ಲೂ ಮಹಿಳಾ ಸ್ವಾತಂತ್ರ್ಯದ ಕೂಗು ಕೇಳಿಬರುತ್ತಿದೆ. ನಮ್ಮ ದೇಶದಲ್ಲಿ 300ಕ್ಕೂ ಹೆಚ್ಚು ಮಹಿಳಾ ಕಲ್ಯಾಣ ಸಂಘಗಳಿವೆ. ಆದರೂ ಈ ದುರ್ದೈವಿ ಮಹಿಳಾ ಕೃಷಿ ಕಾರ್ಮಿಕರ ಸ್ಥಿತಿಯಲ್ಲಿರುವ ಮಾರ್ಪಾಡೂ ಕಂಡುಬಂದಿಲ್ಲ. ಸಂಘ ಸಂಸ್ಥೆಗಳ ಮೂಲಕ ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳುವುದೂ ಇವರಿಗೆ ಕಷ್ಟ. ಇದಕ್ಕೆ ಕಾರಣ ಸಾಮೂಹಿಕವಾಗಿ ತಮ್ಮ ಬೇಡಿಕೆಗಳಿಗಾಗಿ ಚೌಕಾಸಿ ಮಾಡುವ ಐಕ್ಯತೆ ಇವರಲ್ಲಿ ಇಲ್ಲದಿರುವುದು. ಹೀಗಾಗಿ ಇವರು ಭಾರತದ ಜನಾಂಗದಲ್ಲೇ ಉಪೇಕ್ಷಿಸಲ್ಪಟ್ಟಿದ್ದಾರೆ. ಸ್ವಾತಂತ್ರ ಬಂದ ಇಷ್ಟು ವರ್ಷಗಳ ನಂತರವೂ ಇವರ ಸ್ಥಿತಿಯಲ್ಲಿ ಹೆಚ್ಚಿನ ಸುಧಾರಣೆ ಕಂಡುಬಂದಿಲ್ಲ ದಾರಿದ್ರ್ಯ, ಅರೆ ಆರೋಗ್ಯ, ನಿಕೃಷ್ಟ ಜೀವನ ಸೌಲಭ್ಯಗಳು, ಕೆಳಮಟ್ಟದ ಜೀವನ ಸ್ಥಿತಿ ಶಿಕ್ಷಣದ ಕೊರತೆ ಇವರನ್ನು ಕಾಡುತ್ತಿವೆ. ಇಂದಿಗೂ ಮಹಿಳಾ ಹಾಗೂ ಪುರುಷ ಕಾರ್ಮಿಕರ ಮಧ್ಯೆ ಕೂಲಿ ನೀಡಿಕೆಯಲ್ಲಿ ಸಾಕಷ್ಟು ತಾರತಮ್ಯ ಕಂಡು ಬರುತ್ತಿದೆ. ಈ ದಿಸೆಯಲ್ಲಿ ಕೂಲಿ ಭಿನ್ನತೆಯ ಬಗ್ಗೆ ಸಂವಿಧಾನದಲ್ಲಿ ನೀಡಿದ ಸಲಹೆಗಳು ಫಲಪ್ರದವಾಗಿಲ್ಲ. ಇಂದು ಭಾರತ ಕೃಷಿ ಕ್ಷೇತ್ರದಲ್ಲಿ ಗಣನೀಯವಾದ ಬೆಳವಣಿಗೆ ಸಾಧಿಸಿದೆ. ಇದರಲ್ಲಿ ಮಹಿಳಾ ಕೃಷಿ ಕಾರ್ಮಿಕರ ಕೊಡುಗೆ ಅಪಾರ ಹಾಗೂ ವೈಶಿಷ್ಟ್ಯಪೂರ್ಣ.

ಕುಟುಂಬಕ್ಕೆ ಹಾಗೂ ದೇಶಕ್ಕೆ ಸಾರ್ವತ್ರಿಕವಾಗಿ ದುಡಿಮ ಸೇವೆ ಸಲ್ಲಿಸುವ ಇವರ ಕಾರ್ಯ ಅಪೇಕ್ಷೆ. ಇವರ ಉದ್ಧಾರವಾಗದ ಹೊರತು ದೇಶದ ಉದ್ಧಾರ ಅಸಾಧ್ಯ. ಇವರ ಸಂಕಷ್ಟಗಳು ಕೊನೆಗೊಂಡು, ದುರಂತಮಯ ಜೀವನ ಪರಿಸ್ಥಿತಿಯಲ್ಲಿ ಸುಧಾರಣೆ ತರಲು ಸರಕಾರ ಇವರತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ. ಊಟ ವಸತಿಗೆ ಬೇಕಾದ ಕನಿಷ್ಠ ಸೌಲಭ್ಯಗಳನ್ನು ಇವರಿಗೆ ಪೂರ್ಣಗೊಳಿಸಬೇಕಾಗಿದೆ. ಮಹಿಳಾ ಕೃಷಿ ಕಾರ್ಮಿಕ ಜನಾಂಗದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಯೋಜನಾ ರೂಪರೇಷೆಗಳನ್ನು ಈ ದಿಕ್ಕಿನಲ್ಲಿ ರೂಪಿಸಬೇಕಾಗಿದೆ.

ಕೃಷಿಕೂಲಿ

ಸಾಮಾನ್ಯವಾಗಿ ಕೂಲಿ ಎಂದರೆ ಆ ದಿನದ ಕೊನೆಯಲ್ಲಿ ಅಥವಾ ವಾರದ ಕೊನೆಯಲ್ಲಿ ಶ್ರಮಿಕನಿಗೆ ಕೊಡುವ ಸಂಭಾವನೆ. ವಸ್ತುಗಳನ್ನು ಉತ್ಪಾದಿಸಲು ಶ್ರಮಕ್ಕೆ ಕೊಡುವ ಪ್ರತಿಫಲವೇ ಕೂಲಿ. ಅಂದರೆ, ಉತ್ಪಾದನೆಯಲ್ಲಿ ಪರಿಶ್ರಮ ಶಕ್ತಿಗಾಗಿ ಕೂಲಿಯನ್ನು ಕೊಡಲಾಗುತ್ತದೆ. ಕಾರ್ಮಿಕರು ತಮ್ಮ ಶಕ್ತಿ, ಸಾಮರ್ಥ್ಯ ಮತ್ತು ಕೌಶಲಗಳನ್ನು ಒಡೆಯನ ಅಥವಾ ಮಾಲಿಕನ ವಶಕ್ಕೆ ಒಪ್ಪಿಸಿ ಅದಕ್ಕೆ ಪ್ರತಿಯಾಗಿ ಸಂಭಾವನೆ ಪಡೆಯುತ್ತಾರೆ. ಕಾರ್ಮಿಕರ ದುಡಿಮೆಯಿಂದ ಲಭ್ಯವಾದ ಉತ್ಪನ್ನದ ಮೊತ್ತಕ್ಕೆ ಅನುಗುಣವಾಗಿ ಅವರಿಗೆ ಕೂಲಿಯನ್ನು ನಿರ್ಧರಿಸಲಾಗುತ್ತದೆ. ಕೂಲಿಯನ್ನು ಜೀತ, ವೇತನ, ಮಜೂರಿ ಎಂದು ಕರೆಯುತ್ತಾರೆ. ಕೃಷಿಕೂಲಿ ಎಂದರೆ ಕೃಷಿ ಕಾರ್ಮಿಕ ತನ್ನ ಶ್ರಮವನ್ನು ಸಲ್ಲಿಸಿದ್ದಕ್ಕಾಗಿ ಪಡೆಯುವ ಸಂಭಾವನೆ.

ಕೃಷಿಕೂಲಿಯನ್ನು ಕಾರ್ಮಿಕರಿಗೆ ಪಾವತಿ ಮಾಡುವಲ್ಲಿ ಎರಡು ಪದ್ಧತಿಗಳು ಜಾರಿಯಲ್ಲಿವೆ.

1) ಕೆಲಸ ಮಾಡುವ ಕಾಲಕ್ಕನುಗುಣವಾಗಿ ಕೊಡುವ ಕೂಲಿ (ದಿನಗೂಲಿ).

2) ಮಾಡಬೇಕಾದ ಕೆಲಸವನ್ನು ಗುತ್ತಿಗೆಗೆ ಕೊಟ್ಟು, ಅದಕ್ಕೆ ತಕ್ಕಂತೆ ಕೂಲಿಯನ್ನು ಪಾವತಿ ಮಾಡುವುದು.

ಕಾಲಾನುಗುಣ ಕೂಲಿಯ ಪದ್ಧತಿಯಲ್ಲಿ ಕೃಷಿ ಕಾರ್ಮಿಕನ ಕೂಲಿಯು ಅವನು ಮಾಡಿದ ಕೆಲಸದ ಪ್ರಮಾಣವನ್ನಾಗಲಿ, ಕೆಲಸದ ಗುಣಮಟ್ಟವನ್ನಾಗಲಿ ಅವಲಂಬಿಸಿರುವುದಿಲ್ಲ. ಇಲ್ಲಿ ಕೃಷಿ ಕೂಲಿಯು ಕಾರ್ಮಿಕ ಕೆಲಸದಲ್ಲಿ ನಿರತನಾಗಿದ್ದ ಕಾಲವನ್ನು ಅವಲಂಬಿಸಿರುತ್ತದೆ. ಈ ಪದ್ಧತಿಯಲ್ಲಿ ಕಾರ್ಮಿಕನ ಮೇಲೆ ಮೇಲುಸ್ತುವಾರಿ ಅಗತ್ಯ. ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಯಗಳನ್ನು ಶಿಷ್ಟೀಕರಣಗೊಳಿಸುವುದು ಸುಲಭ. ಆದರೆ ಕೃಷಿ ಕ್ಷೇತ್ರದಲ್ಲಿ ಇದು ಕಷ್ಟ. ಕೆಲವು ಕಾರ್ಯಗಳಲ್ಲಿ ಮಾತ್ರ ಇದನ್ನು ಸಾಧಿಸಬಹುದು. ಉದಾಹರಣೆಗೆ ಹತ್ತಿ ಬಿಡಿಸುವುದು, ನೆಲಗಡಲೆ, ಆಲೂಗೆಡ್ಡೆ ಇತ್ಯಾದಿಗಳನ್ನು ಅಗೆದು, ಅವನ್ನು ಬಿಡಿಸುವುದು ಇತ್ಯಾದಿ. ಈ ಕಾರ್ಯಗಳಲ್ಲಿ ಗುತ್ತಿಗೆ ಕೂಲಿ ವಾಡಿಕೆಯಲ್ಲಿದೆ. ಇಷ್ಟು ಚೀಲ ಹತ್ತಿ ಬಿಡಿಸಿದರೆ ಇಷ್ಟು ಕೂಲಿ ಎಂದು ನಿಗದಿ ಮಾಡಲಾಗಿರುತ್ತೆ. ಹೆಚ್ಚು

ಹತ್ತಿ ಬಿಡಿಸಿದವನು ಹೆಚ್ಚು ಕೂಲಿ ಪಡೆಯುತ್ತಾನೆ. ಇಲ್ಲಿ ಗುತ್ತಿಗೆ ಕೂಲಿ ಕೊಡುವ ಉದ್ದೇಶ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ತೋರಿಸಲಿ ಎನ್ನುವುದು. ದಿನಗೂಲಿಯ ಮೇಲೆ ನೇಮಕ ಮಾಡಿಕೊಳ್ಳುವ ಕಾರ್ಮಿಕನು ಈ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ತೋರಿಸಲಾರ.

ಕೈಗಾರಿಕಾ ಕಾರ್ಮಿಕರಿಗೆ ಹೋಲಿಸಿದರೆ ಕೃಷಿ ಕಾರ್ಮಿಕರು ಪಡೆಯುವ ಕೂಲಿ ಅತಿ ಕಡಿಮೆ. ಬಂಗಾಳದಲ್ಲಿ ಒಬ್ಬ ಕೈಗಾರಿಕಾ ಕಾರ್ಮಿಕ 268ರೂ. ಗಳಿಸಿದರೆ ಕೃಷಿ ಕಾರ್ಮಿಕ ಕೇವಲ 160ರೂ. ಗಳಿಸುತ್ತಾನೆ. ಈ ಬಗೆಯ ತಾರತಮ್ಯಕ್ಕೆ ಕೆಲವು ಅಂಶಗಳು ಪ್ರಮುಖ ಕಾರಣಗಳಾಗಿ ಪರಿಣಮಿಸಿವೆ.

1) ಕೃಷಿ ಕಾರ್ಮಿಕರು ಸಂಘಟನಾ ಶಕ್ತಿ ಪಡೆದಿರುವುದಿಲ್ಲ. ಇವರಲ್ಲಿ ಮುಂದಾಳುತನವಿಲ್ಲ. ಕಾರ್ಮಿಕ ಸಂಘಗಳನ್ನು ನೇಮಿಸಿಕೊಂಡು ಇವರು ಹಕ್ಕುಗಳ ಈಡೇರಿಕೆಗೆ ಹೊಡೆದಾಡುವುದಿಲ್ಲ.

2) ಉಳಲು ದೊರೆಯುವ ಭೂಮಿಗಿಂತಲೂ ಕೃಷಿಕಾರ್ಮಿಕರ ಪ್ರಮಾಣ ಹೆಚ್ಚು.

3) ಕೃಷಿ ಹಿಡುವಳಿಗಳು ದೊಡ್ಡದಾಗಿಲ್ಲದಿರುವುದು.

4) ಕೃಷಿ ಕಾರ್ಮಿಕರು ಒಂದೆಡೆ ಇರದೆ ಚೆಲ್ಲಾಪಿಲ್ಲಿಯಾಗಿರುವುದು.

5) ಮಕ್ಕಳನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಬಗ್ಗೆ ನಿಯಂತ್ರಣವಿಲ್ಲದಿರುವುದರಿಂದ ಕಾರ್ಮಿಕರ ಪೂರೈಕೆ ಅಧಿಕಗೊಂಡು ಕಡಿಮೆ ಕೂಲಿಗೆ ಎಡೆಮಾಡಿಕೊಟ್ಟಿದೆ.

6) ಸಣ್ಣ ಉಳುಮೆದಾರರು ಎಲ್ಲಾ ಕಾರ್ಯಗಳನ್ನೂ ಕುಟುಂಬದ ಸದಸ್ಯರಿಂದಲೇ ಮಾಡಿ ಮುಗಿಸುತ್ತಾರೆ. ಇದಕ್ಕೆ ಕಾರಣ ಅವರಿಗೆ ಕೂಲಿ ಕೊಡುವ ಸಾಮರ್ಥ್ಯ ಕಡಿಮೆ. ಅಗತ್ಯ ಬಿದ್ದಾಗ ಅವರೇ ಹೆಚ್ಚು ಕಾಲ ದುಡಿಯುತ್ತಾರೆ. ಅಥವಾ ಮುಯ್ಯಾಳು ಪದ್ಧತಿಯನ್ವಯ ಅಕ್ಕಪಕ್ಕದ ರೈತರ ನೆರವನ್ನು ಪಡೆಯುತ್ತಾರೆ. ಇಲ್ಲಿ ಕೆಲಸದ ದಕ್ಷತೆಗಿಂತಲೂ, ಕೆಲಸವನ್ನು ಬೇಗ ಮಾಡಿ ಮುಗಿಸಬೇಕೆನ್ನುವ ಆತುರವೇ ಹೆಚ್ಚು. ಅಸಮರ್ಪಕ ಕೆಲಸದ ಉತ್ಪನ್ನಕ್ಕೆ ದಾರಿಯಾಗುತ್ತದೆ.

7) ಕೃಷಿ ಕಾರ್ಮಿಕರು ಅವಿದ್ಯಾವಂತರಾಗಿದ್ದು, ಭೂ ಮಾಲಿಕರೊಂದಿಗೆ ಹೆಚ್ಚು ಕೂಲಿ ಪಡೆಯಲು ಚೌಕಾಶಿ ಮಾಡುವ ಶಕ್ತಿ ಇವರಿಗಿರುವುದಿಲ್ಲ.

8) ಋಣರೂಪದಲ್ಲಿ ಬಿದ್ದು ಕೊಳೆಯುತ್ತಿರುವ ಕೃಷಿ ಕಾರ್ಮಿಕರು ಭೂ ಮಾಲಿಕರ ಹಂಗಿಗೆ ಒಳಪಟ್ಟಿರುತ್ತಾರೆ. ಇದರಿಂದಾಗಿ ಮಾಲಿಕರೇ ನಿರ್ಧರಿಸಿದ ಕೂಲಿಗೆ ಅನ್ವಯವಾಗಿ ಅವರು ಕೆಲಸ ಮಾಡಲು ಒಪ್ಪಲೇಬೇಕು. ಜೊತೆಗೆ ಭೂ ಮಾಲಿಕರು ಸಮಾಜದ ಮೇಲು ಜಾತಿಗೆ ಸೇರಿದ್ದು, ಕೃಷಿ ಕಾರ್ಮಿಕರು ಕೆಳಜಾತಿಗೆ ಸೇರಿರುವುದರಿಂದ, ಅವರ ಶೋಷಣೆ ಇಲ್ಲಿ ಅತಿ ಸುಲಭ.

ಮೇಲಿನ ಎಲ್ಲಾ ಅಂಶಗಳು ಕೃಷಿ ಕೂಲಿಯ ಕಡಿಮೆ ಮಟ್ಟಕ್ಕೆ ಪೂರಕವಾಗಿವೆ. ಕೃಷಿ ಕೂಲಿಯು ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಗಳನುಸಾರವಾಗಿ ನಿರ್ಧಾರ

ವಾದಲ್ಲಿ ಒಡಕಾರ್ಮಿಕರ ಸ್ಥಿತಿಯಲ್ಲಿ ಸ್ವಲ್ಪಮಟ್ಟಿಗಾದರೂ ಸುಧಾರಣೆ ಕಾಣಲು ಸಾಧ್ಯ. ಆದರೆ ಇದಕ್ಕೆ ಹೊರತಾಗಿ ಕೃಷಿಕೂಲಿ ಸಂಪ್ರದಾಯಗಳಿಗನುಸಾರವಾಗಿಯೇ ನಿರ್ಧಾರವಾಗುವುದು ಕೃಷಿ ಕಾರ್ಮಿಕರ ಹೀನ ಸ್ಥಿತಿಗೆ ಅತಿಮುಖ್ಯ ಕಾರಣ. ಅಲ್ಲದೆ ಕೃಷಿ ಕಾರ್ಮಿಕರಿಗೆ ಬೇಡಿಕೆ ದೊಡ್ಡ ಹಿಡುವಳಿದಾರರಿಂದಲೇ ಬರಬೇಕು. ಆದರೆ ಕೃಷಿ ಯಾಂತ್ರೀಕರಣದಿಂದಾಗಿ ಇತ್ತೀಚೆಗೆ ಈ ಬೇಡಿಕೆಯೂ ದುರ್ಬಲಗೊಳ್ಳುತ್ತಿದೆ. ಜೊತೆಗೆ ಕೃಷಿ ಕಾರ್ಮಿಕರ ಪೂರೈಕೆಯು ಬೇಡಿಕೆಗಿಂತಲೂ ವೃದ್ಧಿಸುತ್ತಿರುವುದು ಕೂಲಿ ದರದ ಕುಸಿತಕ್ಕೆ ಕಾರಣವಾಗಿವೆ.

ಕೃಷಿ ಕೂಲಿಯು ಕೆಲಸ ಮತ್ತು ಋತುಗಳಿಗನುಸಾರವಾಗಿ ಮಾತ್ರವೇ ಅಲ್ಲದೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಹೆಚ್ಚು ಕಡಿಮೆ ಇರುತ್ತದೆ. ರಾಜ್ಯದಿಂದ ರಾಜ್ಯಕ್ಕೆ, ರಾಜ್ಯದಲ್ಲೇ ಜಿಲ್ಲೆಯಿಂದ ಜಿಲ್ಲೆಗೆ, ಜಿಲ್ಲೆಯಲ್ಲೇ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಕೃಷಿ ಕೂಲಿಯಲ್ಲಿ ವ್ಯತ್ಯಾಸ ಕಾಣಬಹುದು. ಭಾರತದಲ್ಲಿ ಕೃಷಿ ವಿಧಾನವು ಎಲ್ಲಾ ಕಡೆಯೂ ಒಂದೇ ಬಗೆಯಾಗಿಲ್ಲದಿರುವುದರಿಂದ ಕೃಷಿ ಕೂಲಿಯಲ್ಲಿ ಏಕರೂಪತೆಯನ್ನು ತರುವುದು ಕಷ್ಟ. ಇದರಲ್ಲಿ ಇನ್ನು ವಿಚಿತ್ರವೆಂದರೆ ಒಂದೇ ಪ್ರದೇಶದಲ್ಲಿ, ಬೇರೆ ಬೇರೆ ಜಾತಿಯವರಿಗೆ ಒಂದೇ ಬಗೆಯ ಕೆಲಸಕ್ಕೆ ಬೇರೆ ಬೇರೆ ಕೂಲಿ ಕೊಡುವ ಪದ್ಧತಿಯೂ ಉಂಟು. ಅಲ್ಲದೆ ಗಂಡಾಳುಗಳಿಗೆ ದೊರೆಯುವಷ್ಟು ಕೂಲಿ ಹೆಣ್ಣಾಳುಗಳಿಗೆ ಹಾಗೂ ಮಕ್ಕಳಿಗೆ ದೊರೆಯುವುದಿಲ್ಲ. ಗಂಡಾಳುಗಳು ಮಾಡುವ ಕೆಲವು ಕಾರ್ಯಗಳನ್ನು ಹೆಣ್ಣಾಳುಗಳು ಮಾಡಿದಾಗಲೂ ಅವರಿಗೆ ಗಂಡಾಳುಗಳು ಪಡೆಯುವಷ್ಟು ಕೂಲಿ ಸಿಗುವುದಿಲ್ಲ. ಮಕ್ಕಳಿಗೆ ಇವರಿಗಿಂತಲೂ ಕೂಲಿ ಕಡಿಮೆ ಇರುತ್ತದೆ. ಆದಾಗ್ಯೂ ಕುಟುಂಬದ ವೆಚ್ಚವನ್ನು ಭರಿಸುವ ಸಲುವಾಗಿ ಸ್ತ್ರೀಯರು ಮತ್ತು ಮಕ್ಕಳು ಅನಿವಾರ್ಯವಾಗಿ ದುಡಿಯುತ್ತಾರೆ. ಯೋಜನೆಗಳ ಪೂರ್ವದ ತನಿಖಾ ಆಯೋಗಗಳ ಪ್ರಕಾರ 1950–51ರಲ್ಲಿ ಸರಾಸರಿ ದಿನನಿತ್ಯದ ಗಂಡಾಳುಗಳಿಗೆ ದಿನಕ್ಕೆ 109 ಪೈಸೆ ಇದ್ದದ್ದು 1956 ರಲ್ಲಿ 96 ಪೈಸೆಗೆ ಇಳಿಯಿತು. ಹೆಣ್ಣಾಳುಗಳಿಗೆ 68 ಪೈಸೆಗಳಿಂದ 59 ಪೈಸೆಗಳಿಗೆ ಇಳಿಯಿತು. ಮಕ್ಕಳಿಗೆ 70 ಪೈಸೆಗಳಿಂದ 53 ಪೈಸೆಗಳಿಗೆ ಇಳಿಯಿತು.

ಭಾರತದ ವಿವಿಧ ರಾಜ್ಯಗಳ ಕನಿಷ್ಠ ಕೂಲಿ ದರಗಳು 1975ರಲ್ಲಿ ಈ ರೀತಿ ಇತ್ತು.

ರಾಜ್ಯ	ಕನಿಷ್ಠ ಕೂಲಿ ಒಂದು ದಿನಕ್ಕೆ
ಆಂಧ್ರಪ್ರದೇಶ	2·47 ರೂಗಳಿಂದ 3·86 ವರೆಗೆ
ಅಸ್ಸಾಂ	5ರೂ
ಬಿಹಾರ	5ರೂ
ಗುಜರಾತ್	5ರೂ
ಹರಿಯಾನ	7ರೂ ಊಟವಿಲ್ಲದೆ
ಕೇರಳ	5·50 ಊಟದ ಜೊತೆಗೆ

ಕೇರಳ	6·50 ಪೈಸೆಗಳಿಂದ 8ರೂ
ಮಧ್ಯಪ್ರದೇಶ	2·20 ರೂ.ಗಳಿಂದ 4.40
ಮಹಾರಾಷ್ಟ್ರ	3ರೂಗಳಿಂದ 4.50ರೂ.
ಕರ್ನಾಟಕ	4 ರೂಗಳಿಂದ 5·20 ರೂ.
ಒರಿಸ್ಸಾ	3ರೂಗಳಿಂದ 4 ರೂ.
ಪಂಜಾಬ್	4ರೂ.
ರಾಜಸ್ಥಾನ್	5 ರಿಂದ 6ರೂ.
ತಮಿಳುನಾಡು	2 ರಿಂದ 3 ರೂ.
ಉತ್ತರಪ್ರದೇಶ	5 ರಿಂದ 6ರೂ.
ಪಶ್ಚಿಮಬಂಗಾಳ	6 ರೂ

ಮೂಲ : Agricultural problems of India, Dr. C. B. Memoria. VIII Edition, ಪುಟ 393.

ಕೂಲಿ ಪಾವತಿಯ ವಿಧಾನವೂ ವಿಚಿತ್ರವಾಗಿದೆ. ಕೂಲಿ ಪಾವತಿಯನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಪದ್ಧತಿಗಳನ್ನು ಅನುಸರಿಸಲಾಗುತ್ತದೆ. ಸಾಮಾನ್ಯವಾಗಿ ಕೃಷಿ ಕೂಲಿಯನ್ನು ಹಣದ ರೂಪದಲ್ಲಾಗಲಿ, ಧಾನ್ಯದ ರೂಪದಲ್ಲಾಗಲಿ ಕೊಡುವುದು ರೂಢಿ. ಕೆಲವು ಕಡೆ ಕೃಷಿ ಕೂಲಿಯನ್ನು ಈ ಎರಡು ರೂಪದಲ್ಲೂ ಕೊಡುವ ವಾಡಿಕೆ ಇದೆ. ಸಾಮಾನ್ಯ ಬೆಲೆಗಳು ಏರುತ್ತಿದ್ದು ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳು ದೊರೆಯದಿದ್ದಾಗ ಕೃಷಿ ಕಾರ್ಮಿಕರು ತಮ್ಮ ಕೂಲಿಯನ್ನು ಧಾನ್ಯದ ರೂಪದಲ್ಲಿ ಪಡೆಯಲಿಚ್ಛಿಸುತ್ತಾರೆ, ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆಗಳು ಇಳಿಮುಖ ವಾಗಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿದ್ದರೆ. ಅವರು ಕೃಷಿ ಕೂಲಿಯನ್ನು ಹಣದ ರೂಪದಲ್ಲಿ ಪಡೆಯಬಯಸುತ್ತಾರೆ. ಈ ರೀತಿ ಕೂಲಿಯನ್ನು ಕೇವಲ ಹಣದ ರೂಪದಲ್ಲಿ ಪಡೆಯಬಯಸುತ್ತಾರೆ. ಈ ರೀತಿ ಕೂಲಿಯನ್ನು ಕೇವಲ ಹಣದ ಮೂಲಕವೇ ನೀಡುವುದು ದಿಲ್ಲವಾದ್ದರಿಂದ ಕಾನೂನಿನ ಮೂಲಕ ಕನಿಷ್ಠ ಕೂಲಿಯನ್ನು ಜಾರಿಗೆ ತರುವುದು ಕಷ್ಟ ವಾಗಿದೆ. ನಿಯತಕಾಲದ ಕೃಷಿ ಕಾರ್ಮಿಕರು ವಾರ್ಷಿಕ ಕೂಲಿಯ ಜೊತೆಗೆ ನಿತ್ಯದ ಊಟ, ಬಟ್ಟೆಬರೆ, ಬೀಡಿ ಇತ್ಯಾದಿಯನ್ನು ಪಡೆಯುತ್ತಾರೆ. ಅನಿಯತ ಕಾಲದ ದಿನ ಗೂಲಿ ಕಾರ್ಮಿಕರು ಕೆಲವೊಮ್ಮೆ ಕೂಲಿಯ ಹಣ ಅಥವಾ ಧಾನ್ಯದ ಜೊತೆಗೆ ಊಟ ವನ್ನೂ ಪಡೆಯುತ್ತಾರೆ. ಬತ್ತದ ಕೊಯ್ಲಿನ ಕಾಲದಲ್ಲಿ ಕೂಲಿಯ ಜೊತೆಗೆ ಅಲ್ಪ ಪ್ರಮಾಣದ ಬತ್ತದ ಲಾಭವೂ ಉಂಟು, ಈ ವ್ಯವಸ್ಥೆಯು ಕೆಲವು ವೇಳೆ ತೊಡಕೆನಿಸಿ ದರೂ, ಇದರಿಂದ ಕೃಷಿ ಕಾರ್ಮಿಕರಿಗೆ ಕೆಲಸದಲ್ಲಿ ಆಸಕ್ತಿ ಅಧಿಕಗೊಳ್ಳುತ್ತದೆ ಎನ್ನು ವುದೂ ಸತ್ಯ.

ಭಾರತದಲ್ಲಿ ಕೃಷಿ ಕಾರ್ಮಿಕರ ಪರಿಸ್ಥಿತಿ ಅತಿದಾರುಣವಾಗಿದೆ. ಗುಜರಾತ್, ಮಹಾರಾಷ್ಟ್ರ, ಕೇರಳ, ಮಲಬಾರ್, ಮಧ್ಯಪ್ರದೇಶಗಳಲ್ಲಿ ಅವರ ಪರಿಸ್ಥಿತಿ ಹೆಚ್ಚು

ಕಡಿಮೆ, ಗುಲಾಮರಂತಿವೆ. ಮಾಲೀಕರು ಸ್ವಪ್ರಯೋಜನಕ್ಕಾಗಿ ಅವರನ್ನು ದುಡಿತದ ಕತ್ತೆಯಂತೆ ಬಳಸಿಕೊಳ್ಳುತ್ತಿದ್ದಾರೆ. ಕೂಲಿಗೆ ಕೆಲಸ ಮಾಡುವ ಕಾರ್ಮಿಕರ ಪಾಡಂತೂ ತೀರಾ ದುರ್ಭರ. ಇವರಿಗೆ ಇತರ ಉದ್ಯಮಗಳಲ್ಲಿಯ ಕೆಲಸಗಾರರಷ್ಟು ಅನುಕೂಲವಾದ ಜೀವನದ ಸ್ಥಿತಿಯಾಗಲಿ, ಕೆಲಸದ ಪರಿಸರವಾಗಲಿ, ಕೂಲಿಯ ದರವಾಗಲಿ ಇಲ್ಲ. ಅವರ ಉತ್ಪಾದನಾ ಶಕ್ತಿಯೂ ಕಡಿಮೆ. ಪೌಷ್ಟಿಕಾಂಶಗಳುಳ್ಳ ಆಹಾರ ಸೇವಿಸದಿರುವುದು, ಅನಾರೋಗ್ಯಕರ ವಾತಾವರಣದಲ್ಲಿ ಗಾಳಿ, ಬೆಳಕಿಲ್ಲದ ಗುಡಿಸಲುಗಳಲ್ಲಿ ವಾಸಿಸುವುದು, ಚಳಿಗೆ ಬಟ್ಟೆಗಳನ್ನು ಧರಿಸದಿರುವುದು ಇತ್ಯಾದಿ ಕಾರಣಗಳಿಂದ ಕೃಷಿ ಕಾರ್ಮಿಕರು ಬಹುಬೇಗ ನಾನಾ ಬಗೆಯ ರೋಗಗಳಿಗೆ ತುತ್ತಾಗುತ್ತಾರೆ. ಕೈಗಾರಿಕಾ ಕಾರ್ಮಿಕರಿಗೆ ಹೋಲಿಸಿದರೆ ಕೃಷಿ ಕಾರ್ಮಿಕರ ಆದಾಯ ಮತ್ತು ಉಪಭೋಗದ ಮಟ್ಟ ಅತಿ ಕಡಿಮೆ. ಕೃಷಿ ಕಾರ್ಮಿಕರ ಕಡಿಮೆ ಆದಾಯ ಬಡತನಕ್ಕೆ ಎಡೆಮಾಡಿಕೊಟ್ಟರೆ, ಬಡತನವು ಕಡಿಮೆ ಜೀವನಮಟ್ಟಕ್ಕೆ ದಾರಿಮಾಡಿಕೊಡುತ್ತದೆ. ದೊರೆತ ಕೂಲಿಯು ಜೀವನಾವಶ್ಯಕ ಖರ್ಚುಗಳನ್ನೇ ಪೂರೈಸಲು ಶಕ್ತವಾಗದಿರುವುದರಿಂದ ಸಾಲ ಅನಿವಾರ್ಯವಾಗುತ್ತದೆ. ಭಾರತದಲ್ಲಿನ ಕೂಲಿ ಪಾವತಿಯ ವಿಧಾನವೇ ಕಾರ್ಮಿಕರ ಶೋಷಣೆಯ ಮೂಲ ಎನ್ನಬಹುದು. ಕೂಲಿ ದರ ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಯ ಅಳತೆಗೋಲು. ಆದರೆ ದುರ್ದೈವದಿಂದ ಭಾರತದಲ್ಲಿ ಕೂಲಿದರ ಹಿಂದಿನಿಂದ ಸಾಂಪ್ರದಾಯಿಕವಾಗಿ ಬಂದಿರುವ ಪದ್ಧತಿಗಳನ್ನು ಮುಂದುವರಿಸಿಕೊಂಡು ಹೋಗುವ ಒಂದು ಯಾಂತ್ರಿಕ ಕ್ರಿಯೆಯಾಗಿದೆಯೇ ಹೊರತು ಜೀವನಮಟ್ಟ ಹಾಗೂ ಉತ್ಪಾದನೆಗೆ ತಕ್ಕಂತೆ ಕೂಲಿ ದರವನ್ನು ನಿಷ್ಕರ್ಷೆ ಮಾಡುವ ಕ್ರಮ ಬೆಳೆದು ಬಂದಿಲ್ಲ. ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಗಳ ನಿಬಂಧನೆಗಳಿಗನುಸಾರವಾಗಿ ಕೂಲಿದರ ತೀರ್ಮಾನವಾಗುವುದಿಲ್ಲ. ಕೃಷಿ ಕಾರ್ಮಿಕ ಆರ್ಥಿಕ ಮಟ್ಟವನ್ನು ಸುಧಾರಿಸಲು ಭಾರತ ಸರ್ಕಾರ ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತಂದಿದೆ. ಆದರೆ ಈ ಕಾಯಿದೆಯಿಂದ ಕೃಷಿ ಕಾರ್ಮಿಕರಿಗೆ ಹೆಚ್ಚಿನ ಪ್ರಯೋಜನವೇನೂ ಆಗಿಲ್ಲ. ಈ ಕಾಯಿದೆಯ ಸಮರ್ಪಕ ಅನುಷ್ಠಾನಕ್ಕೆ ಯಾರೂ ಗಮನವಿತ್ತಿಲ್ಲ. ಕೃಷಿ ಕಾರ್ಮಿಕರು ಸ್ವತಂತ್ರರಾಗಿ ಸ್ವಲ್ಪಮಟ್ಟಿಗಾದರೂ ಆರ್ಥಿಕವಾಗಿ ಸಬಲರಾಗಿ ಹೊಸ ಉತ್ಸಾಹ-ಹುಮ್ಮಸ್ಸುಗಳಿಂದ ಮುಂದುವರಿಯಬೇಕಾದರೆ ಉತ್ಪನ್ನದ ಏರಿಕೆಗೆ ಅನುಗುಣವಾಗಿ ಕೂಲಿದರವೂ ಹೆಚ್ಚಬೇಕು. ಒಳ್ಳೆಯ ಗೊಬ್ಬರ, ಉತ್ತಮ ಬೀಜಗಳನ್ನು ಬಳಸಿ, ನೀರಾವರಿ ವ್ಯವಸ್ಥೆಯನ್ನು ವಿಸ್ತರಿಸಿದಲ್ಲಿ ಉತ್ಪನ್ನ ಹೆಚ್ಚಿದಂತೆ ಕೃಷಿ ಕಾರ್ಮಿಕರ ಕೂಲಿಯೂ ಹೆಚ್ಚುವ ಪ್ರವೃತ್ತಿಯನ್ನು ತೋರುತ್ತದೆ. ಈ ದಿಸೆಯಲ್ಲಿ ಪದಾರ್ಥಗಳ ಬೆಲೆ ಮಟ್ಟಗಳಿಗೆ ಅನುಗುಣವಾಗಿ ಕನಿಷ್ಠ ಕೂಲಿಯನ್ನು ಕಾಲಕಾಲಕ್ಕೆ ಪರಿಷ್ಕರಿಸಬೇಕು. ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟ ಅಂಕಿ-ಅಂಶಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ಅವರ ಉದ್ಧಾರವನ್ನು ಪರಿಶೀಲಿಸಬೇಕು. ಆಸಕ್ತಿ-ಶ್ರದ್ಧೆಗಳಿಂದ ಈ ಕಾರ್ಯಗಳು ನಡೆಯಬೇಕು. ಸ್ವಲ್ಪ ಅಲಕ್ಷ್ಯ ತೋರಿದರೂ ಕೃಷಿ ಕಾರ್ಮಿಕರು ಶೋಷಿತರಾಗಿಯೇ ಬಡತನದ

ಸಾಕಾರ ರೂಪಗಳಾಗಿಯೇ ಮುಂದುವರಿದಾರು. ಆದ್ದರಿಂದ ಸರ್ಕಾರ ತಾನು ಮಾಡುವ ಕಾಯಿದೆಯ ಫಲವು ನೇರವಾಗಿ ಕೃಷಿ ಕಾರ್ಮಿಕರಿಗೆ ತಲಪುವಂತೆ ಮಾಡುವುದು ಒಳಿತು. ದೊಡ್ಡ ಹಿಡುವಳಿದಾರರು, ಕೃಷಿ ಕಾರ್ಮಿಕರನ್ನು ಕಡಿಮೆ ಕೂಲಿಗೆ ದಿನವಿಡೀ ದುಡಿಸಿ ಅಧಿಕ ಲಾಭ ಸಂಪಾದಿಸುತ್ತಿರುವಾಗಿ ಅವರನ್ನು ಸರ್ಕಾರ ಶ್ರದ್ಧೆಯಿಂದ ಕಾಪಾಡಿ, ಅವರ ಜೀವನವನ್ನು ಉತ್ತಮಪಡಿಸಬೇಕು.

o—O—o

ವಿದ್ಯೆಯಿಲ್ಲದ ದುಡಿಮೆ ಬೇಸರದ ಪರಿಶ್ರಮ ಮಾತ್ರ.
ದುಡಿಮೆಯಿಲ್ಲದ ವಿದ್ಯೆ ಹಿಂಸೆ, ದಾಸ್ಯ ಮತ್ತು ಶೋಷಣೆಯಲ್ಲದೆ ಬೇರೆಯಲ್ಲ.

ಗಾಂಧಿಜಿ

ಜ್ಞಾನವೊಂದೆ ಉತ್ಪಾದನೆಯ ಇಳಿಮುಖ ಪ್ರತಿಫಲ ನಿಯಮಕ್ಕೆ ಹೊರತಾಗಿ ನಿಂತಿರುವುದು.

ಜೆ. ಎಮ್. ಕ್ಲಾರ್ಕ್

ಯಾವುದೇ ದೇಶದ ಯೋಗ್ಯ ಧನಧೋರಣೆಯೆಂಬುದು, ಮುಖ್ಯತಃ ಅದರ ಸಾಮಾಜಿಕ-ಆರ್ಥಿಕ ವಿಕಾಸದ ಮಟ್ಟ, ಮತ್ತು ಪ್ರಚಲಿತ ಸಾಮಾಜಿಕ ಉದ್ದೇಶಗಳನ್ನು ಅವಲಂಬಿಸಿರುತ್ತದೆ. ಯೋಜನೆಯು ಪ್ರಮುಖ ಸಾಮಾಜಿಕ ಉಪಕರಣವೆನಿಸಿದಾಗ ಸಾರ್ವಜನಿಕ ಧನಧೋರಣೆಯನ್ನು ವಿಸಂಗತವಾಗದಂತೆ ಪೂರ್ವಭಾವಿಯಾಗಿಯೇ ಸ್ಪಷ್ಟವಾಗಿ ಗುರುತಿಸಿಕೊಳ್ಳಲು ಸಾಧ್ಯ. ಉದಾ: ನೂತನ ಆರನೆಯ ಯೋಜನೆಗೆ ಸಂಪನ್ಮೂಲಗಳನ್ನು ಸಂಗ್ರಹಿಸಲು ಯಾವ ಕರನೀತಿ, ಬೆಲೆ ನಿರ್ಣಯ ವಿಧಾನ ಇಲ್ಲವೆ ಸಾಲಸಂಗ್ರಹತಂತ್ರ ಸಾಧುವೆಂದು ಧೋರಣೆಯ ಮಟ್ಟದಲ್ಲಿ ನಿರ್ಣೀತವಾಗತಕ್ಕದ್ದು ಪೂರ್ವಸಿದ್ಧತೆಗಳಲ್ಲಿ ಒಂದು. ಅನಂತರ ಉಳಿಯುವುದು ಅದರ ಕಾರ್ಯಾಚರಣೆ ಮತ್ತು ಕಟ್ಟುನಿಟ್ಟಾದ ಹಣಕಾಸು ಶಿಸ್ತಿನ ಪಾಲನೆ (ಆದಾಯದ ಆಕರಣೆಯಲ್ಲಿ ಹಾಗೂ ವೆಚ್ಚದ ವೈಖರಿಯಲ್ಲಿ), ಇದ್ದಲ್ಲಿದೆ ಸಾರ್ವಜನಿಕ ಧನ ವ್ಯವಸ್ಥೆಯಲ್ಲಿ ಗೋಚರಕ್ಕೆ ಬರಹುದಾದ ಕೆಲವು ವಿಸಂಗತಿಗಳನ್ನು ನಿವಾರಿಸುವುದು ಇತ್ಯಾದಿ. ಆದಾಗ್ಯೂ ಒಂದನೆಯ ಮತ್ತು ಎರಡನೆಯ ಯೋಜನೆಯ ವರುಷಗಳಲ್ಲಿ ಕಂಡುಬಂದ ಸೃಜನಾತ್ಮಕ ಧನ ನೀತಿ ಕೌಶಲ್ಯ ಮೂರನೆಯ ಯೋಜನೆಯಿಂದ ಮಂಕಾಗತೊಡಗಿದ್ದು 'ಇಂದು ಅಡ್ ಹಾಕಿಸಂ' ಎಂದೆನಿಸಿಕೊಳ್ಳುವ ತತ್ಕಾಲಿ ಪ್ರಧಾನ ನೀತಿಯನ್ನು (ಅಥವಾ ನಿರ್ ನೀತಿಯನ್ನು) ಒಕ್ಕೂಟ ಹಾಗೂ ರಾಜ್ಯ ಸರ್ಕಾರಗಳು ನೆಚ್ಚಿರುವಂತಿವೆ. ಇನ್ನಿತರ ರಾಜಕೀಯ ಸಾಮಾಜಿಕ ವೈಫಲ್ಯದಿಂದಾಗಿ ದೃಢಸಂಕಲ್ಪಯುಕ್ತ ಧನಧೋರಣೆಯನ್ನು ಅನುಸರಿಸುವ ಗತ್ತುಗಾರಿಕೆ ಸರ್ಕಾರಕ್ಕಾಗಲಿ ಇಲ್ಲವೆ ಆಡಳಿತಕ್ಕಾಗಲಿ ಇಲ್ಲದಾಗಿದೆ. ದುರ್ಬಲ ಧನ ಧೋರಣೆಯು ಸಂಪನ್ಮೂಲಗಳ ಸಂಗ್ರಹಕಾರ್ಯದಲ್ಲಿ ಸರ್ಕಾರಕ್ಕೆ ಎಷ್ಟೂ ನೆರವಾಗದು. ಬದಲಾಗಿ ವೆಚ್ಚದ ಮೇಲಿನ ಒತ್ತಡವನ್ನು ತೀವ್ರಗೊಳಿಸುವುದಲ್ಲದೆ ಆದಾಯವನ್ನು ಒತ್ತಿಸುವುದು. ಈ ಆದಾಯ-ವೆಚ್ಚ ವಿಪರ್ಯಾಸದಿಂದಾಗಿ ಪ್ರಜಾ ಸಂಕಷ್ಟಗಳ ಮಾಲೆಯೆ ತೋರಿಬರುವುದು.

ಎನ್. ಆರ್. ರಾವ್

ಎಂ. ಎಸ್. ಚಂದ್ರಶೇಖರಪ್ಪ

ಕ್ಷೇತ್ರಕಾರ್ಯ : ಪರಿಕಲ್ಪನೆ ಹಾಗೂ ಸಮಸ್ಯೆಗಳು

ಆಧುನಿಕ ಸಮಾಜ ಕಾರ್ಯವು ಒಂದು ವ್ಯವಸ್ಥಿತವಾದ ವೃತ್ತಿಯೆಂದು ಸ್ವೀಕೃತವಾಗಿರುವ ಸೇವಾಕಾರ್ಯ. ಸಮಾಜ ಕಾರ್ಯವನ್ನು ಕುರಿತು ಚಿಂತಿಸುವಾಗ, ಪ್ರೊಫೆಸರ್ ಎಚ್.ಎಂ. ಮರುಳಸಿದ್ಧಯ್ಯನವರು ಹೀಗೆ ಅರ್ಥೈಸುತ್ತಾರೆ ; "ಆಧುನಿಕ ಸಮಾಜಕಾರ್ಯವು ಪರಂಪರಾಗತವಾದ ಹಳೆಯ ಸರಳ ಸಮಾಜದಲ್ಲಿ ಹವ್ಯಾಸವೆಂದು ಕೈಗೊಂಡು ಹೇಗೆಂದರೆ ಹಾಗೆ ಬಿಡುವಿನ ವೇಳೆಯಲ್ಲಿ ನಡೆಸುವ ಕಾರ್ಯವಲ್ಲ. ಇದು ಆಧುನಿಕವೂ, ಜಟಿಲವೂ ಸಮಸ್ಯಾಭೂಯಿಷ್ಠವೂ ಆಗಿರುವ ಸಮಾಜದಲ್ಲಿ ವೈಜ್ಞಾನಿಕವಾಗಿ ವ್ಯವಸ್ಥೆಗೊಂಡ ಕಲ್ಯಾಣ ಕೇಂದ್ರಗಳ ಮೂಲಕ ವೃತ್ತಿಶಿಕ್ಷಣ ಪಡೆದು ಪೂರ್ಣಕಾಲದ ಸಮಾಜ ಕಾರ್ಯವನ್ನು ಕೈಕೊಂಡು ನಡೆಸುವ ಒಂದು ವೃತ್ತಿಯಾಗಿದೆ. ಇದಕ್ಕೆ ಸೂಕ್ತವಾದ ಸಿದ್ಧಾಂತಗಳೂ, ತಂತ್ರ-ಕೌಶಲ್ಯಗಳೂ ಬೆಳೆಯುತ್ತಲಿವೆ. ಇದರ ಬೆಳೆವಣಿಗೆಯಿಂದ ಸಮಾಜದಲ್ಲಿ ಆಗುವ ದುಷ್ಪರಿಣಾಮಗಳ ಸಂಖ್ಯೆಯಲ್ಲಿಯೂ ತೀಕ್ಷ್ಣತೆಯಲ್ಲಿಯೂ ಕಡಿತವಾಗುವುದೆಂಬ ಭರವಸೆಯಿದೆ."[1] ಇಂತಹ ಕಾರ್ಯಕ್ಕೆ ಬೇಕಾದ ವೃತ್ತಿ ಶಿಕ್ಷಣ ಪಡೆದ ಸಮಾಜ ಕಾರ್ಯಕರ್ತರನ್ನು ಹೆಸರಿಸುವ ಜವಾಬ್ದಾರಿಯನ್ನು ಭಾರತದಲ್ಲಿ ಸುಮಾರು ಐವತ್ತಕ್ಕಿಂತ ಹೆಚ್ಚು ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳು ಹೊತ್ತಿವೆ. ಸಮಾಜಕಾರ್ಯ ಶಿಕ್ಷಣವು ಉಪನ್ಯಾಸ, ಶೈಕ್ಷಣಿಕ ಪ್ರವಾಸ, ಸಾಮಾಜಿಕ ಸೇವಾ-ಶಿಬಿರ ಹಾಗೂ ಕ್ಷೇತ್ರಕಾರ್ಯವನ್ನು ಒಳಗೊಂಡಿರುತ್ತವೆ.

ಈ ವೃತ್ತಿಗತ ಸಮಾಜಕಾರ್ಯ ಶಿಕ್ಷಣದಲ್ಲಿ ಕ್ಷೇತ್ರಕಾರ್ಯಕ್ಕೆ ಹೆಚ್ಚಿನ ಸ್ಥಾನ ದೊರೆತಿದೆ. ಏಕೆಂದರೆ, ಕ್ಷೇತ್ರಕಾರ್ಯವು ಸಮಾಜಕಾರ್ಯ ಶಿಕ್ಷಣದ ಒಂದು ಅವಿಭಾಜ್ಯ ಅಂಗ. ಸಮಾಜಕಾರ್ಯ ವಿದ್ಯಾರ್ಥಿಯು ಆತನ ಶಿಕ್ಷಣ ಮುಗಿದ ಮೇಲೆ ಒಬ್ಬ ಪರಿಣಾಮಕಾರಿಯಾದ ಸಮಾಜಕಾರ್ಯಕರ್ತನಾಗಬೇಕಾದರೆ, ತರಗತಿಗಳ ಮತ್ತು ಸಾಹಿತ್ಯ ಭಂಡಾರಗಳ ಮೂಲಕ ಸಮಾಜಕಾರ್ಯದ ಬಗ್ಗೆ ಜ್ಞಾನವನ್ನು ಸಂಪಾದಿಸಿದರಷ್ಟೇ ಸಾಲದು ; ಜೊತೆಗೆ ಹಾಗೆ ಗಳಿಸಿದ ಜ್ಞಾನವನ್ನು ಉಪಯೋಗಿಸಿಕೊಂಡು ಹೇಗೆ ವಿವಿಧ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು ಎಂಬುದರ ಬಗ್ಗೆ ಅನುಭವವನ್ನು ಪಡೆಯುವುದು ಆತ್ಯವಶ್ಯಕ. ಇದು ಕ್ಷೇತ್ರಕಾರ್ಯದಿಂದ ಮಾತ್ರ ಸಾಧ್ಯ.

'ಕ್ಷೇತ್ರಕಾರ್ಯ'ವನ್ನು ಅನೇಕರು ಅನೇಕ ವಿಧವಾಗಿ ವಿವರಿಸಿದ್ದಾರೆ. ಆದರೆ ಪ್ರೊಫೆಸರ್ ಎಂ.ವಿ. ಮೂರ್ತಿ ಮತ್ತು ನಾರಾಯಣರಾವ್ ನೀಡಿರುವ ವಿವರಣೆ ಬಹು ಉಪಯುಕ್ತವಾದುದು. ಅವರ ಪ್ರಕಾರ ಕ್ಷೇತ್ರಕಾರ್ಯವೆಂದರೆ, "ಸಮಾಜಕಾರ್ಯ ವಿದ್ಯಾರ್ಥಿಗೆ ಶಿಕ್ಷಣ ಸಂಸ್ಥೆಯು ವಹಿಸಿಕೊಟ್ಟ ಕೆಲಸವನ್ನು ಸಮಾಜಕಾರ್ಯದ ಯಾವುದಾದರೊಂದು ಕ್ಷೇತ್ರದಲ್ಲಿ ಪೂರ್ತಿಗೊಳಿಸಿ ಪ್ರಾಯೋಗಿಕ ಅನುಭವ ಪಡೆಯುವುದು"[2] ಎಂಬುದಾಗಿದೆ. ಅಂದರೆ, ಸಮಾಜಕಾರ್ಯ ವಿದ್ಯಾರ್ಥಿ ತರಗತಿಯ ಮತ್ತು ಸಾಹಿತ್ಯದ ಮೂಲಕ ಪಡೆದುಕೊಂಡ ಜ್ಞಾನವನ್ನು ನಿಗದಿಪಡಿಸಿದ ಸೇವಾಕೇಂದ್ರಕ್ಕೆ ಹೋಗಿ ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವ ವ್ಯವಸ್ಥೆಗೆ ಕ್ಷೇತ್ರಕಾರ್ಯ ಎಂದು ಕರೆಯಬಹುದು. ಕ್ಷೇತ್ರಕಾರ್ಯವು ಸಮಾಜಕಾರ್ಯ ಶಿಕ್ಷಣದ ಒಂದು ಅಂಗವಾಗಿರುವುದರಿಂದ ವಿದ್ಯಾರ್ಥಿ ಇತರರ ಸಹಾಯವಿಲ್ಲದೆ ಕೈಕೊಳ್ಳುವುದು ಸಾಧ್ಯವಿಲ್ಲ. ಅಂದಹಾಗೆ, ಸಮಾಜಕಾರ್ಯ ಶಿಕ್ಷಕನು ವಿದ್ಯಾರ್ಥಿಗಳಿಗೆ ಕ್ಷೇತ್ರಕಾರ್ಯಗಳಲ್ಲಿ ತೊಡಗಲು ಬೇಕಾದ ಎಲ್ಲ ತರಹದ ಅನುಕೂಲಗಳನ್ನು ಕಂಡುಕೊಳ್ಳಲು ಸಹಾಯಕನಾಗುತ್ತಾನೆ. ಈ ದಿಸೆಯಲ್ಲಿ ಶಿಕ್ಷಕ–ಮೇಲ್ವಿಚಾರಕ (Faculty–Supervisor) ಮತ್ತು ವಿದ್ಯಾರ್ಥಿಯ ನಡುವೆ ಅನುಕೂಲಕರವಾದ 'ವೃತ್ತಿ ಸಂಬಂಧ' ಇರಬೇಕು. ಕಾರಣ ಈ ಈರ್ವರು ಅನೇಕ ಬಾರಿ ಕಲೆತು ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಚರ್ಚಿಸಿ, ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕ್ಷೇತ್ರಕಾರ್ಯ ಪರಿಕಲ್ಪನೆಯ ಬಗ್ಗೆ ಸಮರ್ಪಕವಾದ ವ್ಯಾಖ್ಯಾನವನ್ನು ಕೊಡುವುದು ಕಷ್ಟ, ಏಕೆಂದರೆ ಇದರ ರೂಪುರೇಷೆಗಳು ಕಾಲಕಾಲಕ್ಕೆ ಬದಲಾಗುತ್ತ ಹೋಗುತ್ತವೆ. ಈ ದೃಷ್ಟಿಯಲ್ಲಿ ಕ್ಷೇತ್ರಕಾರ್ಯದ ಹಲವು ಮುಖ್ಯ ಉದ್ದೇಶಗಳನ್ನು ವಿವರಿಸಿದರೆ ಹೆಚ್ಚಿನ ರೀತಿಯಲ್ಲಿ ಈ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಕ್ಷೇತ್ರಕಾರ್ಯವು ಹಲವಾರು ಉದ್ದೇಶಗಳನ್ನೊಳಗೊಂಡಿವೆ. ಅವುಗಳಲ್ಲಿ ಬಹು ಮುಖ್ಯವಾದುವುಗಳು ಇವು :

೧) ವೃತ್ತಿ-ಕೌಶಲ್ಯಗಳನ್ನು ಪ್ರಯೋಗಕ್ಕೆ ಅನುಕೂಲವಾಗುವಂತೆ ವೃದ್ಧಿಗೊಳಿಸುವುದು ;

೨) ವ್ಯಾಪಕ ಸ್ತರ (Macro-leves) ಮತ್ತು ಸೂಕ್ಷ್ಮ ಸ್ತರ (Micro-level) ಮಾರ್ಗೋಪಾಯಗಳ (strategies) ಆಧಾರದ ಮೇಲೆ ಪ್ರಚಲಿತ ಸಮಸ್ಯೆಗಳಿಗೆ ಬೇಕಾದ ಕೌಶಲ್ಯವನ್ನು ವೃದ್ಧಿಗೊಳಿಸುವುದು ;

೩) ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಮೂಲಕ ಸಂಪಾದಿಸಿದ ಜ್ಞಾನವನ್ನು ಕ್ಷೇತ್ರಕಾರ್ಯಕ್ಕೆ ಹೇಗೆ ಸಮೀಕರಣಗೊಳಿಸುವುದು (integration) ಎಂಬುದನ್ನು ಕಲಿಸುವುದು ;

೪) ವೃತ್ತಿಗತ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.

೫) ವೃತ್ತಿಗತ ಮೌಲ್ಯಗಳನ್ನು ವೃದ್ಧಿಗೊಳಿಸುವುದು.

೬) ವೃತ್ತಿಸತ್ವವನ್ನು ಬೆಳೆಸುವುದು ; ಹಾಗೂ

೭) ವೃತ್ತಿಗತ ಆದರ್ಶಗಳನ್ನು ವ್ಯಕ್ತಿಗೊಳಿಸುವುದು.[3]

ಮೇಲೆ ಕಾಣಿಸಿದ ಉದ್ದೇಶಗಳನ್ನು ಗಮನಿಸಿದಾಗ ನಮಗೆ ತಿಳಿದು ಬರುವ ಅಂಶವೆಂದರೆ, ಕ್ಷೇತ್ರಕಾರ್ಯವು ವಿದ್ಯಾರ್ಥಿಯಿಂದ ಯಾವುದೇ ಕಾರ್ಯಕ್ಷೇತ್ರದಲ್ಲಿನ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ನಿರೀಕ್ಷಿಸುವುದಿಲ್ಲ. ಆದರೆ ಆತನಿಗೆ ದೊರೆತಿರುವ ಕಾಲಾವಕಾಶದಲ್ಲಿ ಅಂತಹ ಸಮಸ್ಯೆಗಳ ರೂಪುರೇಷೆಗಳು, ಅವುಗಳ ವಿಶ್ಲೇಷಣೆ, ಪರಿಣಾಮ ಹಾಗೂ ಸಾಧ್ಯವಾದರೆ ಹಲವು ಪರಿಹಾರ ಕ್ರಮಗಳನ್ನು ಸೂಚಿಸಬಹುದಾಗಿದೆ. ವಿದ್ಯಾರ್ಥಿ, ಸಮಾಜಕಾರ್ಯ ಶಿಕ್ಷಣ ಸಂಸ್ಥೆಯ (Institution for social work Education) ಮುಖ್ಯಸ್ಥ, ಕ್ಷೇತ್ರಕಾರ್ಯ ಸಂಯೋಜಕ (Field work co-ordinator), ಶಿಕ್ಷಕ-ಮೇಲ್ವಿಚಾರಕ (ಇನ್ನು ಮುಂದೆ ಮೇಲ್ವಿಚಾರಕ ಎಂದಷ್ಟೇ ಉಪಯೋಗಿಸಲಾಗಿದೆ), ಸೇವಾಕೇಂದ್ರದ - ಮೇಲ್ವಿಚಾರಕ (Agency-Supervisor), ಹಾಗೂ ಅರ್ಥಿಗಳು (clients) ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟವರಾಗಿರುತ್ತಾರೆ.

ಸಮಾಜ ಕಾರ್ಯದಲ್ಲಿ ವೃತ್ತಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಒಂದು ವಾರಕ್ಕೆ ಕನಿಷ್ಟ ಹದಿನೈದು ತಾಸುಗಳಾದರೂ ಕ್ಷೇತ್ರ ಕಾರ್ಯದಲ್ಲಿ ತೊಡಗಿರಬೇಕೆಂಬುದು ನಿಯಮ. ಸಾಮಾನ್ಯವಾಗಿ ವಾರದ ಎರಡು ದಿನಗಳಲ್ಲಿ ವಿದ್ಯಾರ್ಥಿಗಳು ಕ್ಷೇತ್ರ ಕಾರ್ಯಕ್ಕೆ ಹೋಗುವರು. ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ವಾರಕ್ಕೆ ಮೂರು ದಿನಗಳು ಕ್ಷೇತ್ರಕಾರ್ಯಕ್ಕಾಗಿ ವಿದ್ಯಾರ್ಥಿಗಳನ್ನು ಕಳಿಸುತ್ತಾರೆ. ವಿದ್ಯಾರ್ಥಿಗಳು ಮನಸ್ಸಿಗೆ ಬಂದಂತೆ ಕ್ಷೇತ್ರಕಾರ್ಯಕ್ಕೆ ಹೋಗುವ ಹಾಗಿಲ್ಲ. ಅವರು ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿದ ದಿವಸಗಳಲ್ಲಿ ಹೋಗಬೇಕಾಗುತ್ತದೆ. ಒಂದು ವೇಳೆ ಕಾರಣಾಂತರದಿಂದ ವಿದ್ಯಾರ್ಥಿಗಳು ಕ್ಷೇತ್ರ ಕಾರ್ಯಕ್ಕೆ ಹೋಗಲಾಗದಿದ್ದರೆ, ಮುಂಚಿತವಾಗಿಯೇ ಸಂಬಂಧಪಟ್ಟವರಿಗೆ ತಿಳಿಸಿ, ಅವರು ಹೇಳಿದ ರೀತಿಯಲ್ಲಿ ನಡೆದುಕೊಳ್ಳಬೇಕು.

ಪ್ರತಿ ಸಮಾಜ ಕಾರ್ಯ ಶಿಕ್ಷಣ ಸಂಸ್ಥೆಯಲ್ಲಿ, ಅಲ್ಲಿರುವನೇ ಆದ ಒಬ್ಬ ಅಧ್ಯಾಪಕ 'ಕ್ಷೇತ್ರಕಾರ್ಯ-ಸಂಯೋಜಕ'ನಾಗಿ, ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ದಿನನಿತ್ಯದ ಕಾರ್ಯಭಾರ ಹೊರೆಯನ್ನು ಹೊತ್ತಿರುತ್ತಾನೆ. ಇದರ ಅವಧಿ ಸಾಮಾನ್ಯವಾಗಿ ಒಂದು ಶೈಕ್ಷಣಿಕ ವರ್ಷವಿರುತ್ತದೆ. ಕ್ಷೇತ್ರಕಾರ್ಯ ಸಂಯೋಜಕನಾದವನು ಅನೇಕ ಜವಾಬ್ದಾರಿಗಳನ್ನು ಹೊಂದಿರುವನು. ಅವುಗಳಲ್ಲಿ ಮುಖ್ಯವಾದುವು ಯಾವುವೆಂದರೆ ; ೧) ಕ್ಷೇತ್ರಕಾರ್ಯಕ್ಕೆ ಬೇಕಾದ ಸೇವಾಕೇಂದ್ರಗಳನ್ನು ಬಹು ಜಾಗರೂಕತೆಯಿಂದ ಆಯ್ಕೆ ಮಾಡುವುದು ; (೨) ವಿದ್ಯಾರ್ಥಿಗಳನ್ನು ವಿವಿಧ ಸೇವಾಕೇಂದ್ರಗಳಿಗೆ ಕ್ಷೇತ್ರ ಕಾರ್ಯಕ್ಕಾಗಿ ವಿಂಗಡಿಸುವುದು ; (೩) ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆಯ ಇತರ ಅಧ್ಯಾಪಕರಿಗೆ ಮೇಲ್ವಿಚಾರಣೆಗಾಗಿ ಹಂಚುವುದು ; (೪) ವಿದ್ಯಾರ್ಥಿಗಳನ್ನು ವಿವಿಧ ಸೇವಾಕೇಂದ್ರಗಳ ಮೇಲ್ವಿಚಾರಕರಿಗೆ ಪರಿಚಯ ಮಾಡಲು ವ್ಯವಸ್ಥೆ ಮಾಡುವುದು ;

(೫) ವಿದ್ಯಾರ್ಥಿ–ಅಧ್ಯಾಪಕ ಹಾಗೂ ವಿದ್ಯಾರ್ಥಿ–ಸೇವಾಕೇಂದ್ರ ಮೇಲ್ವಿಚಾರಕರ ನಡುವೆ ಮಧ್ಯಸ್ಥಿಕೆ (Liaision) ವಹಿಸುವುದು, ಮತ್ತು (೬) ವಿದ್ಯಾರ್ಥಿಗಳು ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಮಂಡಿಸುವ ಹಾಗೆ ವ್ಯವಸ್ಥೆ ಮಾಡುವುದು, ಇವೇ ಮೊದಲಾದವುಗಳು. ಮೇಲೆ ಹೇಳಿದ ಜವಾಬ್ದಾರಿಗಳ ಜೊತೆಗೆ ವಿಚಾರಗೋಷ್ಠಿ, ಸಮ್ಮೇಳನ, ಕಾರ್ಯಾಗಾರ ಮತ್ತು ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ಸಂಶೋಧನೆ ನಡೆಸುವುದೂ ಆಗಿವೆ.

ಒಬ್ಬ ಕ್ಷೇತ್ರಕಾರ್ಯ ಮೇಲ್ವಿಚಾರಕ ಎಷ್ಟು ವಿದ್ಯಾರ್ಥಿಗಳನ್ನು ತನ್ನ ಮೇಲ್ವಿಚಾರಣೆಗೆ ತೆಗೆದುಕೊಳ್ಳಬೇಕು ಎಂಬುದು ಶಿಕ್ಷಣ ಸಂಸ್ಥೆಯ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ. ಸಾಮಾನ್ಯವಾಗಿ ಒಬ್ಬ ಮೇಲ್ವಿಚಾರಕ ಆರರಿಂದ ಹನ್ನೆರಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾನೆ. ವಿದ್ಯಾರ್ಥಿಗಳು ಕ್ಷೇತ್ರ ಕಾರ್ಯದಲ್ಲಿ ತೊಡಗಿದಾಗ ಅನೇಕ ಸಮಸ್ಯೆಗಳು ಉದ್ಭವಿಸಬಹುದು. ಅಂತಹ ಸಂದರ್ಭದಲ್ಲಿ ಸಂಯೋಜಕನು ತನ್ನಲ್ಲಿ ಜ್ಞಾನ, ತಂತ್ರ ಹಾಗೂ ಕೌಶಲ್ಯವನ್ನು ಉಪಯೋಗಿಸಿ ಸಮಸ್ಯೆಗಳನ್ನು ನಿವಾರಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ನಡೆಸಬೇಕಾದುದು ಆತನ ಪ್ರಮುಖ ಕರ್ತವ್ಯಗಳಲ್ಲೊಂದು.

ಸೇವಾಕೇಂದ್ರದ ಆಯ್ಕೆ ಮತ್ತು ಸ್ಥಾನೀಕರಣ [Selection of Agencies and Placement]

ಕ್ಷೇತ್ರ ಕಾರ್ಯಕ್ಕೆ ಬೇಕಾಗುವಂತಹ ಸೇವಾಕೇಂದ್ರಗಳ ಆಯ್ಕೆಯ ಕ್ರಮ ಅನೇಕ ಅಂಶಗಳನ್ನೊಳಗೊಂಡಿದೆ. ಶಿಕ್ಷಣ ಸಂಸ್ಥೆಯು ವಿವಿಧ ದೃಷ್ಟಿಕೋನಗಳನ್ನು ಇಟ್ಟುಕೊಂಡು ಸೇವಾಕೇಂದ್ರಗಳನ್ನು ಆಯ್ಕೆ ಮಾಡಲಾಗುವುದು. ಸಮಾಜಕಾರ್ಯ ವಿಧಾನಗಳನ್ನೋ ಅಥವಾ ಐಚ್ಛಿಕ ವಿಷಯಗಳನ್ನೋ ಗಮನದಲ್ಲಿಟ್ಟುಕೊಂಡು ಸೇವಾಕೇಂದ್ರಗಳನ್ನು ಆಯ್ಕೆ ಮಾಡುವ ಪದ್ಧತಿ ಇದೆ. ಇದಲ್ಲದೆ ಇತರ ಅಂಶಗಳೆಂದರೆ: ೧) ಶಿಕ್ಷಣ ಸಂಸ್ಥೆಯಿಂದ ಸೇವಾಕೇಂದ್ರಗಳಿಗಿರುವ ದೂರ, (೨) ಸೇವಾಕೇಂದ್ರಗಳಲ್ಲಿ ದೊರಕುವ ಪರಿಣತಿ ಪಡೆದ ಸಿಬ್ಬಂದಿವರ್ಗ, (೩) ಕ್ಷೇತ್ರಕಾರ್ಯಕ್ಕೆ ಬೇಕಾದ ದಾಖಲೆಗಳು ಹಾಗೂ ಇತರ ಅನುಕೂಲಗಳನ್ನು ಒದಗಿಸಿ ವಿದ್ಯಾರ್ಥಿಗಳಿಗೆ ಸಾಕಷ್ಟು ಕೆಲಸ ಮಾಡಲು ಅವಕಾಶ, ಇತ್ಯಾದಿಗಳೇ ಆಗಿರುತ್ತವೆ. ಹಲವು ಶಿಕ್ಷಣ ಸಂಸ್ಥೆಗಳು 'ಮಾದರಿ ಸೇವಾಕೇಂದ್ರ'ಗಳನ್ನು ಆರಂಭಿಸಿ ಕ್ಷೇತ್ರ ಕಾರ್ಯಕ್ಕಾಗಿ ಬಳಸಿಕೊಳ್ಳುತ್ತಿವೆ. ಇಂತಹ ಕೇಂದ್ರಗಳನ್ನು ನಡೆಸುವುದು ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹೆಚ್ಚು ಜ್ಞಾನದ ಲಾಭ ಸಿಗಲಿ ಎಂಬ ಉದ್ದೇಶವೇ ಆಗಿದೆ. ಈ ಕೇಂದ್ರಗಳ ಮೂಲಕ ಶಿಕ್ಷಣ ಸಂಸ್ಥೆಗಳು ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುತ್ತಿವೆ. ಇಂತಹ ಕೇಂದ್ರಗಳು ಹೆಚ್ಚಿನದಾಗಿ ಗ್ರಾಮೀಣ ಮತ್ತು ನಗರ ಸಮುದಾಯ ಅಭಿವೃದ್ಧಿಗೆ ಸಂಬಂಧಪಟ್ಟವುಗಳಾಗಿವೆ. ಇನ್ನು ಹಲವು ಶಿಕ್ಷಣ ಸಂಸ್ಥೆಗಳು ಹೊಸ ಹೊಸ ಪ್ರಯೋಗಗಳನ್ನು

ನಡೆಸಲು ಪ್ರಸ್ತುತವರ ಹೆಚ್ಚೆ ಇರುತ್ತವೆ. ಉದಾ : ಬೆಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗವು 'ಮನೋ–ಸಾಮಾಜಿಕ ಚಿಕಿತ್ಸಾ'ಕೇಂದ್ರವನ್ನು (Bureau of Psycho-Social Therapy) ನಡೆಸುತ್ತಿದೆ. ಇಲ್ಲಿ ಸಮಾಲೋಚನೆ (Counselling)ಗೆ ಹೆಚ್ಚಿನ ಗಮನ ಕೊಡಲಾಗುತ್ತಿದೆ. ಒಂದು ರೀತಿಯಲ್ಲಿ ಇಂತಹ ಕೇಂದ್ರಗಳನ್ನು ಶಿಕ್ಷಣ ಸಂಸ್ಥೆಯವರು ಪ್ರಾರಂಭಿಸುವುದು ಒಳ್ಳೆಯದೇ; ಆದರೆ, ವಿದ್ಯಾರ್ಥಿಗಳಿಗೆ ಇತರ ಸರ್ಕಾರಿ ಹಾಗೂ ಖಾಸಗಿ ಆಡಳಿತದಲ್ಲಿರುವ ಸೇವಾಕೇಂದ್ರಗಳ ಕಾರ್ಯವೈಖರಿ, ವಿವಿಧ ಕಾರ್ಯಕ್ರಮಗಳು ಹಾಗೂ ಕುಂದು–ಕೊರತೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು. ಯಾಕೆಂದರೆ, ಅವರ ಶಿಕ್ಷಣ ಮುಗಿದಮೇಲೆ ಎಲ್ಲ ರೀತಿಯ ಸೇವಾಕೇಂದ್ರಗಳಲ್ಲಿಯೂ ಕಾರ್ಯೋನ್ಮುಖರಾಗುವ ಸಾಧ್ಯತೆಗಳಿವೆ.

ಒಮ್ಮೆ ಕ್ಷೇತ್ರಕಾರ್ಯಕ್ಕಾಗಿ ಕೇಂದ್ರಗಳನ್ನು ಆಯ್ಕೆ ಮಾಡಿದ ನಂತರ ಸಂಯೋಜಕನು ಯಾವ ವಿದ್ಯಾರ್ಥಿಯನ್ನು ಯಾವ ಕೇಂದ್ರಕ್ಕೆ ಕ್ಷೇತ್ರಕಾರ್ಯಕ್ಕಾಗಿ ಕಳಿಸಬೇಕೆಂದು ನಿರ್ಧರಿಸಬೇಕಾಗುವುದು. ಈ ಕೆಲಸವನ್ನು ಮಾಡುವಾಗ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಹಾಗೂ ಇತರ ಮೇಲ್ವಿಚಾರಕರ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳ ಆಕಾಂಕ್ಷೆ, ಆರ್ಥಿಕ ಪರಿಸ್ಥಿತಿ, ಚಾಕಚಕ್ಯತೆ ಇವುಗಳ ಮೇಲೂ ಗಮನಹರಿಸಬೇಕಾಗುತ್ತದೆ. ಕೆಲವೊಮ್ಮೆ ಅನಿವಾರ್ಯವಾಗಿ ದೂರದಲ್ಲಿರುವ ಕೇಂದ್ರಗಳಿಗೆ ಕ್ಷೇತ್ರಕಾರ್ಯಕ್ಕಾಗಿ ಕಳುಹಿಸಬೇಕಾಗುವುದು. ಕಾರಣ ಸಮೀಪದಲ್ಲಿ ಅವಶ್ಯಕತೆಗೆ ಬೇಕಾದ ಕೇಂದ್ರಗಳು ಇಲ್ಲದಿರುವುದೇ ಆಗಿದೆ.

ಪರಿವಿಡಿ ಮತ್ತು ದಾಖಲೆ [Contents and Records] :

ಸಮಾಜಕಾರ್ಯ ಶಿಕ್ಷಣ ಸಂಸ್ಥೆಗಳು ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ರೂಪುರೇಷೆಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಕ್ಷೇತ್ರಕಾರ್ಯ ಪ್ರಾರಂಭಿಸುವ ಮೊದಲೇ ಅವುಗಳನ್ನು ಒದಗಿಸಲಾಗಿರುತ್ತದೆ. ಈ ರೂಪುರೇಷೆಗಳ ಪ್ರಕಾರ ವಿದ್ಯಾರ್ಥಿಗಳು ಕ್ಷೇತ್ರಕಾರ್ಯವನ್ನು ಸಂಬಂಧಪಟ್ಟ ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಮುಂದುವರಿಸುವರು. ಈ ರೂಪುರೇಷೆಗಳೇ ಕ್ಷೇತ್ರಕಾರ್ಯದ ಪರಿವಿಡಿ ಎನ್ನಬಹುದು. ಇನ್ನು ದಾಖಲೆಗಳ ಬಗ್ಗೆ ಹೇಳಬೇಕಾದರೆ, ಸಮಾಜಕಾರ್ಯ ಶಿಕ್ಷಣ ಎರಡು ನಮೂನೆಯ ದಾಖಲೆಗಳನ್ನು ವಿದ್ಯಾರ್ಥಿಗಳಿಂದ ನಿರೀಕ್ಷಿಸುತ್ತದೆ. ಅವು ಯಾವುವೆಂದರೆ : ೧) ಸಂಕ್ಷಿಪ್ತ ದಾಖಲೆ, ಮತ್ತು (೨) ವಿವರಣಾತ್ಮಕ ದಾಖಲೆ. ಸಂಕ್ಷಿಪ್ತ ದಾಖಲೆಯಲ್ಲಿ ವಿದ್ಯಾರ್ಥಿಯು ಒಂದು ದಿನದ ಕ್ಷೇತ್ರಕಾರ್ಯದಲ್ಲಿ ಏನು ಮಾಡಿದನು ಎಂಬುದರ ಬಗ್ಗೆ ಟಿಪ್ಪಣಿ ಇರುತ್ತದೆ. ವಿವರಣಾತ್ಮಕ ದಾಖಲೆಯಲ್ಲಿ ವಿದ್ಯಾರ್ಥಿಯು ಒಂದು ವಾರದ ಕ್ಷೇತ್ರಕಾರ್ಯದಲ್ಲಿ ಏನು ಮಾಡಿದನು ಎಂಬುದರ ಬಗ್ಗೆ ವಿವರವಾಗಿ ಬರೆದು ಅವನಿಗೆ ಸಂಬಂಧಪಟ್ಟ ಮೇಲ್ವಿಚಾರಕನಿಗೆ ಒಪ್ಪಿಸುವನು. ಇವುಗಳಲ್ಲದೆ ವ್ಯಕ್ತಿಗತ ಹಾಗೂ

ವ್ಯಂವತ ಸನ್ನಿವೇಶನಗಳ ಬಗ್ಗೆಯೂ ವರದಿ ಒಪ್ಪಿಸಬೇಕು. ದಾಖಲೆಗಳು ಬಹು ಮುಖ್ಯವಾದವು. ಕಾರಣ ಕ್ಷೇತ್ರಕಾರ್ಯದ ಅಂತಿಮ ಮೌಲ್ಯಮಾಪನ ಮಾಡುವಾಗ ಈ ದಾಖಲೆಗಳು ಮಹತ್ವದ ಪಾತ್ರ ವಹಿಸುತ್ತವೆ. ಸಮಾಜಕಾರ್ಯ ಶಿಕ್ಷಣದಲ್ಲಿ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬರೆಯುವುದು ವಿದ್ಯಾರ್ಥಿಯ ಜವಾಬ್ದಾರಿಗಳಲ್ಲಿ ಒಂದು. ಇಂತಹ ದಾಖಲೆಗಳು ಮೇಲ್ವಿಚಾರಕನಿಗೆ ತನ್ನ ವಿದ್ಯಾರ್ಥಿಯು ಕ್ಷೇತ್ರಕಾರ್ಯದಲ್ಲಿ ಏನು ಮಾಡುತ್ತಿದ್ದಾನೆ ಎಂಬುದರ ಬಗ್ಗೆ ಪರಿಪೂರ್ಣವಾದ ಮಾಹಿತಿಗಳನ್ನು ಒದಗಿಸುತ್ತವೆ. ದಾಖಲೆಗಳನ್ನು ಬರೆಯುವುದು ಅಷ್ಟು ಸುಲಭವಲ್ಲ ; ಅದಕ್ಕಾಗಿ ಹೆಚ್ಚು ಕಾಲವನ್ನು ವ್ಯಯ ಮಾಡಬೇಕಾಗುತ್ತದೆ. ದಾಖಲೆಗಳನ್ನು ಬರೆಯುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಆದಕಾರಣ ವಿದ್ಯಾರ್ಥಿಗೆ ತಾನು ಏನು ಮಾಡುತ್ತಿದ್ದೇನೆ ಎಂಬುದರ ಸ್ಪಷ್ಟ ಕಲ್ಪನೆ ಇರಬೇಕು. ದಾಖಲೆಗಳನ್ನು ಚಿಂತನಾತ್ಮಕ ಹಾಗೂ ವಿವರಣಾತ್ಮಕವಾಗಿ ಬರೆಯುವುದನ್ನು ಕಲಿಯಬೇಕು. ವಿದ್ಯಾರ್ಥಿಗಳಿಗೆ ತಾವು ಬರೆದ ದಾಖಲೆಗಳನ್ನು ಪದೇ ಪದೇ ಅಧ್ಯಯನ ಮಾಡಲು ಸಂಬಂಧಪಟ್ಟ ಮೇಲ್ವಿಚಾರಕರು ಸಲಹೆ ಕೊಡಬೇಕು. ಇದರಿಂದ ಅವರಿಗೆ ವಿಶ್ಲೇಷಣಾತ್ಮಕ ಮತ್ತು ಸಂಪೂರ್ಣ ಮಾಹಿತಿಯನ್ನೊಳಗೊಂಡ ದಾಖಲೆಯನ್ನು ಸಿದ್ಧಪಡಿಸಲು ಬಹಳ ಅನುಕೂಲವಾಗುವುದು.

ಮೇಲ್ವಿಚಾರಣೆ [Supervision]

ಕ್ಷೇತ್ರಕಾರ್ಯದಲ್ಲಿ ಮೇಲ್ವಿಚಾರಣೆಯನ್ನು ಒಂದು 'ಶೈಕ್ಷಣಿಕ-ಪ್ರಕ್ರಿಯೆ' (Educational Process) ಎಂದು ಕರೆಯಲಾಗಿದೆ. ಕೆಲವರು ಇದನ್ನು 'ಸಹಾಯಕ-ಪ್ರಕ್ರಿಯೆ' (Helping Process) ಎಂದೂ ಕರೆಯುವುದುಂಟು. ವಿದ್ಯಾರ್ಥಿಯು ತನ್ನ ಕ್ಷೇತ್ರಕಾರ್ಯದಲ್ಲಿ ಯಶಸ್ವಿಯಾಗಬೇಕಾದರೆ ಅದು ಹೆಚ್ಚಿನದಾಗಿ ಮೇಲ್ವಿಚಾರಕನ ಮಾರ್ಗದರ್ಶನದ ಮೇಲೆ ನಿಂತಿರುವುದು. ಒಟ್ಟಿನಲ್ಲಿ ಹೇಳಬೇಕಾದರೆ ಮೇಲ್ವಿಚಾರಣೆಯು ಪ್ರಮುಖವಾಗಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ, ಮೇಲ್ವಿಚಾರಕ, ಸಂಯೋಜಕ ಹಾಗೂ ಕೇಂದ್ರ-ಮೇಲ್ವಿಚಾರಕರಿಂದ ರೂಪುಗೊಂಡಿರುತ್ತದೆ. ಮೇಲ್ವಿಚಾರಕನು ಎಲ್ಲ ಹಂತಗಳಲ್ಲಿಯೂ ತನ್ನ ಅಧೀನದಲ್ಲಿ ಬರುವ ವಿದ್ಯಾರ್ಥಿಗಳನ್ನು ಕ್ರಮಬದ್ಧ ರೀತಿಯಲ್ಲಿ ಮೇಲ್ವಿಚಾರಣೆಗೆ ಗುರಿಪಡಿಸಿ ಸರಿಯಾದ ಮಾರ್ಗದಲ್ಲಿ ಹೋಗಲು ಅವರಿಗೆ ಅನುಕೂಲ ಮಾಡಿಕೊಡುತ್ತಾನೆ. ಅವನು ವಿದ್ಯಾರ್ಥಿಗಳ ಜೊತೆ ಯಾವ ವಿಷಯವನ್ನು ಹೇಗೆ ಅಧ್ಯಯನ ಮಾಡಬೇಕೆಂಬುದನ್ನು ವಿವರವಾಗಿ ಚರ್ಚಿಸಬೇಕು. ವಿದ್ಯಾರ್ಥಿಗಳು ಕ್ಷೇತ್ರಕಾರ್ಯದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆಯೆ ಎಂಬುದನ್ನು ತಿಳಿದುಕೊಳ್ಳುತ್ತಿರಬೇಕು. ಮೇಲ್ವಿಚಾರಕನು ಕೇಂದ್ರಕ್ಕೆ ಸಂಬಂಧಪಟ್ಟ ಸಿಬ್ಬಂದಿಯೊಂದಿಗೆ ಆಗಾಗ್ಗೆ ಸಮಾಲೋಚನೆಯನ್ನು ನಡೆಸುತ್ತಿರಬೇಕು. ಇದರಿಂದ ವಿದ್ಯಾರ್ಥಿಯು ಚಟುವಟಿಕೆಗಳ ಮಾಹಿತಿ ಮಾಡಿಕೊಳ್ಳಬಹುದು.

ವಿದ್ಯಾರ್ಥಿಗಳು ಮಂಡಿಸಿದ ದಾಖಲೆಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ಸಮುಚಿತವಾದ ವಿಮರ್ಶೆಯೊಂದಿಗೆ ಮಾರ್ಗದರ್ಶನ ಮಾಡುವುದು ಮೇಲ್ವಿಚಾರಕನ ಕರ್ತವ್ಯವಾಗಿದೆ. ಮೇಲ್ವಿಚಾರಕನು ನಿಗದಿಪಡಿಸಿದ ದಿನಾಂಕಗಳಲ್ಲಿ ವಿದ್ಯಾರ್ಥಿಗಳು ತಪ್ಪದೆ ವ್ಯಕ್ತಿಗತ ಮತ್ತು ವೃಂದಗತ ಸಮ್ಮೇಳನಗಳಲ್ಲಿ ಭಾಗವಹಿಸಬೇಕು. ಸಾಮಾನ್ಯವಾಗಿ ವ್ಯಕ್ತಿಗತ ಸಮ್ಮೇಳನವನ್ನು ವಾರಕ್ಕೊಮ್ಮೆಯೂ ವೃಂದಗತ ಸಮ್ಮೇಳನವನ್ನು ಹದಿನೈದು ದಿನಗಳಿಗೊಮ್ಮೆಯೂ ನಡೆಸಲಾಗುವುದು. ಇಂತಹ ಸಮ್ಮೇಳನಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಕ್ಷೇತ್ರಕಾರ್ಯದಲ್ಲಿ ಕಾಣಿಸಿಕೊಂಡ ಸಮಸ್ಯೆಗಳ ಬಗ್ಗೆ ಕೂಲಂಕುಶವಾಗಿ ಅಧ್ಯಯನ ಮಾಡುವ ಅವಕಾಶವನ್ನು ಕಲ್ಪಿಸಿಕೊಡಲಾಗುವುದು. ಹೀಗೆ ಮಾಡುವುದರಿಂದ ಅನೇಕ ಸಮಸ್ಯೆಗಳನ್ನು ಮೊದಲ ಹಂತದಲ್ಲೇ ನಿವಾರಿಸಬಹುದು. ಇಲ್ಲಿ ಒಂದು ಮುಖ್ಯ ಅಂಶವನ್ನು ತಿಳಿದಿರಲೇಬೇಕು. ಅದು ಯಾವುದೆಂದರೆ ಕೇಂದ್ರದ ಮೇಲ್ವಿಚಾರಕನ ಬಗ್ಗೆ. ಕ್ಷೇತ್ರಕಾರ್ಯದಲ್ಲಿ ಆತನ ಸ್ಥಾನ ಬಹಳ ಪ್ರಮುಖವಾದುದು. ವಿದ್ಯಾರ್ಥಿಗಳು ಕ್ಷೇತ್ರಕಾರ್ಯದಲ್ಲಿ ತೊಡಗಿರುವಾಗ ಹೆಚ್ಚು ಸಮಯವನ್ನು ಕೇಂದ್ರ ಮೇಲ್ವಿಚಾರಕನ ಜೊತೆ ವ್ಯಯ ಮಾಡುತ್ತಾರೆ. ಆದ್ದರಿಂದ ಈತನ ಮಾರ್ಗದರ್ಶನ ಬಹಳ ಉಪಯುಕ್ತವಾದುವಾಗಿದೆ. ವಿದ್ಯಾರ್ಥಿ ಮತ್ತು ಕೇಂದ್ರ-ಮೇಲ್ವಿಚಾರಕನ ನಡುವೆ ಪರಿಣಾಮಕಾರಿಯಾದ ವೃತ್ತಿ ಸಂಬಂಧವನ್ನು ಮೇಲ್ವಿಚಾರಕನು ಬೆಳಸಿ ಅದನ್ನು ಪೋಷಿಸಲು ಪ್ರಯತ್ನಪಡಬೇಕು. ವಿದ್ಯಾರ್ಥಿಗಳಲ್ಲಿರುವ ಸುಪ್ತ ಶಕ್ತಿಯನ್ನು ಸದುಪಯೋಗಪಡಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿಕೊಡುವುದು ಮೇಲ್ವಿಚಾರಕನ ಜವಾಬ್ದಾರಿ. ಇದಲ್ಲದೆ ವಿದ್ಯಾರ್ಥಿಗಳು ಯಾವ ಕಾರ್ಯವನ್ನು ತೆಗೆದುಕೊಂಡರೂ ಶಾಸ್ತ್ರೀಯವಾಗಿ, ವ್ಯವಸ್ಥಿತವಾಗಿ ಮಾಡುವ ಆಗತ್ಯವನ್ನು ಕಂಡುಕೊಳ್ಳುವಂತೆ ಮಾಡಬೇಕು.

ಮೌಲ್ಯಮಾಪನ [Evaluation]

ಕ್ಷೇತ್ರಕಾರ್ಯದಲ್ಲಿ ಮೌಲ್ಯಮಾಪನ ಒಂದು ಪ್ರಕ್ರಿಯೆ. ಇದನ್ನು ಪ್ರತಿಯೊಬ್ಬ ಮೇಲ್ವಿಚಾರಕ ಹಾಗೂ ಇತರೆ ಸಂಬಂಧಪಟ್ಟವರು ಗಮನದಲ್ಲಿ ಇಟ್ಟುಕೊಂಡಿರಬೇಕಾದ ಅಂಶ. ವಿದ್ಯಾರ್ಥಿಯ ಕ್ಷೇತ್ರಕಾರ್ಯದ ಮೌಲ್ಯಮಾಪನ ಮಾಡುವುದು ಮೇಲ್ವಿಚಾರಕನ ಕರ್ತವ್ಯಗಳಲ್ಲೊಂದಾಗಿದೆ. ವಿದ್ಯಾರ್ಥಿಯು ಮಂಡಿಸಿದ ದಾಖಲೆ, ಅವನ ನಡವಳಿಕೆ ಹಾಗೂ ಆತ ಕೊಟ್ಟ ಸ್ವ-ಮೌಲ್ಯಮಾಪನ (Self-Evaluation) ವರದಿ, ಇವುಗಳ ಆಧಾರದ ಮೇಲೆ ಮೌಲ್ಯಮಾಪನ ನಿಂತಿರುತ್ತವೆ. ಮೌಲ್ಯಮಾಪನವನ್ನೇ ಗಮನದಲ್ಲಿಟ್ಟುಕೊಂಡು ತಯಾರಿಸಿದ ಪ್ರಶ್ನಾವಳಿಯನ್ನು ಸಂಯೋಜಕನು ವಿದ್ಯಾರ್ಥಿಗಳಿಗೆ ಒದಗಿಸುವನು, ಇಂತಹ ಪ್ರಶ್ನಾವಳಿಯಲ್ಲಿ ವಿದ್ಯಾರ್ಥಿಯ ಕಾರ್ಯದಕ್ಷತೆ, ಕೇಂದ್ರದೊಳಗಿನ ಹೊಂದಾಣಿಕೆ, ಹಾಜರಾತಿ, ವಿಷಯ ಗ್ರಹಣ ಶಕ್ತಿ, ಇತ್ಯಾದಿಗಳ ಬಗ್ಗೆ ಪ್ರಶ್ನೆಗಳು ಇರುತ್ತವೆ. ವಿದ್ಯಾರ್ಥಿಗಳು ಪ್ರಶ್ನಾವಳಿಗೆ ಸರಿಯಾದ ಉತ್ತರ ಬರೆದು ಸಂಬಂಧಪಟ್ಟ ಮೇಲ್ವಿಚಾರಕರಿಗೆ ಕೊಡಬೇಕು.

ಅಧಿಕೃತ ಸಮಿತಿ (Committee) ಅಂತಿಮ ಮೌಲ್ಯಮಾಪನ ಮಾಡುವುದು. ಈ ಸಮಿತಿಯಲ್ಲಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ, ಮೇಲ್ವಿಚಾರಕ, ಸಂಯೋಜಕ ಹಾಗೂ ಒಬ್ಬ ಬಾಹ್ಯ ಪರೀಕ್ಷಕ (ಎಲ್ಲರೂ ಸಮಾಜಕಾರ್ಯದಲ್ಲಿ ಶಿಕ್ಷಣ ಪಡೆದವರು)ರನ್ನೊಳಗೊಂಡಿರುತ್ತದೆ. ಈ ಸಮಿತಿಯು ಮೇಲ್ವಿಚಾರಕನ ಸಹಾಯದಿಂದ ವಿದ್ಯಾರ್ಥಿಯ ದಾಖಲೆ, ಕಾರ್ಯದಕ್ಷತೆ, ನಡವಳಿಕೆ (Behaviour) ಹಾಜರಾತಿ ಇಂತಹ ಎಲ್ಲಾ ಅಂಶಗಳನ್ನು ಗಮನಿಸಿ ಅವನನ್ನು ಮೌಖಿಕ (viva-voce) ಪರೀಕ್ಷೆಗೆ ಒಳಪಡಿಸಿದ ನಂತರ ಅವನಿಗೆ ದೊರಕಬೇಕಾದ ಅಂಕಗಳನ್ನು ನಿಗದಿಪಡಿಸುತ್ತದೆ. ಈ ಕಾರ್ಯವು ಸಂಬಂಧಪಟ್ಟ ಮೇಲ್ವಿಚಾರಕನಿಲ್ಲದೆ ನಡೆಸಲು ಸಾಧ್ಯವಿಲ್ಲ. ಯಾಕೆಂದರೆ ಮೌಲ್ಯಮಾಪನ ಬರೀ ದಾಖಲೆಗಳ ಮೇಲೆ ನಿಂತಿಲ್ಲ. ಇನ್ನೊಂದು ಅಂಶವೆಂದರೆ ವಿದ್ಯಾರ್ಥಿ ಬಗ್ಗೆ ಕೇಂದ್ರದ ಮೇಲ್ವಿಚಾರಕನ ಅನಿಸಿಕೆಯನ್ನೂ ಸಹ ಮೌಲ್ಯಮಾಪನ ಮಾಡುವಾಗ ಗಮನದಲ್ಲಿಟ್ಟುಕೊಳ್ಳಬೇಕು. ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಬಾಹ್ಯ ಪರೀಕ್ಷಕನಿಲ್ಲದೆ, ಆಂತರಿಕ-ಪರೀಕ್ಷಕರಿಂದ ವಿದ್ಯಾರ್ಥಿಗಳ ಕ್ಷೇತ್ರಕಾರ್ಯದ ಮೌಲ್ಯಮಾಪನ ಮಾಡುವುದುಂಟು. ಆದರೆ ಬಾಹ್ಯ-ಪರೀಕ್ಷಕನನ್ನೊಳಗೊಂಡ ಸಮಿತಿಯು ಹೆಚ್ಚು ಸೂಕ್ತ ಎಂದು ಹೇಳಬಹುದು.

ಕ್ಷೇತ್ರ ಸ್ಥಾನೀಕರಣ : [Block Placement]

ವಿದ್ಯಾರ್ಥಿಗಳು ಎರಡು ವರ್ಷ ನಿಗದಿಪಡಿಸಿದ ಪ್ರಚಲಿತ (concurrent) ಕ್ಷೇತ್ರಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ, ಅಂತಿಮ ಪರೀಕ್ಷೆಯನ್ನು ತೆಗೆದುಕೊಂಡ ನಂತರ ಅವರನ್ನು ಕ್ಷೇತ್ರ ಸ್ಥಾನೀಕರಣಕ್ಕಾಗಿ ಕಳುಹಿಸಲಾಗುವುದು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ವಿದ್ಯಾರ್ಥಿಗಳು ಯಾವುದಾದರೊಂದು ಸಮಾಜಕಾರ್ಯ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆಯುವುದೇ ಆಗಿದೆ. ಸಾಮಾನ್ಯವಾಗಿ ಕ್ಷೇತ್ರ ಸ್ಥಾನೀಕರಣಕ್ಕೆ ಬೇಕಾಗಿರುವ ಸೇವಾಕೇಂದ್ರಗಳನ್ನು ಶಿಕ್ಷಣ ಸಂಸ್ಥೆಯವರೇ ಗೊತ್ತು ಮಾಡುವುದು. ಆದರೆ ವಿವಿಧ ಕೇಂದ್ರಗಳಿಗೆ ವಿದ್ಯಾರ್ಥಿಗಳನ್ನು ಹಂಚುವಾಗ ಅವರ ಅನುಕೂಲಗಳನ್ನು ಗಮನದಲ್ಲಿಟ್ಟುಕೊಂಡಿರುತ್ತಾರೆ. ಪ್ರಚಲಿತ ಕ್ಷೇತ್ರ ಕಾರ್ಯದಂತೆ ಇದಕ್ಕೂ ಒಬ್ಬ 'ಸಂಯೋಜಕ'ನಿರುತ್ತಾನೆ. ಹೆಚ್ಚು ಕಡಿಮೆ ಈ ಹಿಂದೆಯೇ ವಿವರಿಸಿರುವ ಜವಾಬ್ದಾರಿಗಳನ್ನು ಈ ಸಂಯೋಜಕನೂ ಕೂಡ ಹೊಂದಿರುತ್ತಾನೆ. ಕೆಲವು ಶಿಕ್ಷಣ ಸಂಸ್ಥೆಗಳು ಕ್ಷೇತ್ರ ಸ್ಥಾನೀಕರಣದ ಕಾರ್ಯಕ್ರಮವನ್ನು ಜಾರಿಗೆ ತಂದಿಲ್ಲ; ಮತ್ತೆ ಹಲವು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಇನ್ನು ಕಡ್ಡಾಯಗೊಳಿಸಿಲ್ಲ. ಇತ್ತೀಚೆಗೆ ಇದರ ಮಹತ್ವವನ್ನರಿತು ಎಲ್ಲ ಶಿಕ್ಷಣ ಸಂಸ್ಥೆಗಳು ಈ ಕಾರ್ಯಕ್ರಮವನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿವೆ. ವಿದ್ಯಾರ್ಥಿಯು ಆರುವಾರ ಅಥವಾ ಹನ್ನೆರಡು ವಾರಗಳ ವರೆಗೆ ಈ ಕಾರ್ಯಕ್ರಮದಲ್ಲಿ ತೊಡಗಿರುತ್ತಾನೆ. ಕ್ಷೇತ್ರ ಸ್ಥಾನೀಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹದಿನೈದು ದಿನಗಳಿಗೊಮ್ಮೆ ಕೊಡುವುದರ ಜೊತೆಗೆ, ಕೊನೆ

ಗೊಮ್ಮೆ ತುಲನಾತ್ಮಕ ಹಾಗೂ ವಿವರವಾದ ಅಂತಿಮ ದಾಖಲೆಯನ್ನು ಮಂಡಿಸಬೇಕು.

ಕ್ಷೇತ್ರ ಸ್ಥಾನೀಕರಣದ ಮೌಲ್ಯಮಾಪನವನ್ನೂ ಕೂಡ ಅಧಿಕೃತ ಸಮಿತಿಯು ಕೈಗೊಳ್ಳುತ್ತದೆ. ಮೌಲ್ಯಮಾಪನಕ್ಕೋಸ್ಕರ ಇಲ್ಲಿಯೂ ಸಹ ಬಾಹ್ಯ-ಪರೀಕ್ಷಕರನ್ನು ಆಹ್ವಾನಿಸಲಾಗುವುದು. ವಿದ್ಯಾರ್ಥಿಯನ್ನು ಮೌಖಿಕ-ಪರೀಕ್ಷೆಗೆ ಒಳಪಡಿಸಿದನಂತರ ಅಂಕಗಳನ್ನು ನಿಗದಿಪಡಿಸಲಾಗುವುದು, ಇಂತಹ ಮೌಲ್ಯಮಾಪನ ಪದ್ಧತಿಯು ಯಾವ ವಿದ್ಯಾರ್ಥಿಗಳಿಗೆ ಕ್ಷೇತ್ರ ಸ್ಥಾನೀಕರಣ ಕಡ್ಡಾಯವೋ ಅವರಿಗೆ ಮಾತ್ರ ಅನ್ವಯಿಸುತ್ತದೆ.

ಸಮಸ್ಯೆಗಳು : (Problems)

೧) ವಿಶ್ವವಿದ್ಯಾನಿಲಯಗಳು ಸಮಾಜಕಾರ್ಯ ಶಿಕ್ಷಣದಲ್ಲಿ ಕ್ಷೇತ್ರಕಾರ್ಯದ ಮಹತ್ವವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅರಿಯಬೇಕಾಗಿದೆ. ಯಾಕೆಂದರೆ, ಈ ವಿದ್ಯಾಸಂಸ್ಥೆಗಳ ದೃಷ್ಟಿಯಲ್ಲಿ ಸಮಾಜಕಾರ್ಯ ಶಿಕ್ಷಕರಿಗೂ ಮತ್ತೂ ಇತರ ಸಮಾಜ ವಿಜ್ಞಾನ ಶಿಕ್ಷಕರಿಗೂ ಏನೂ ವ್ಯತ್ಯಾಸವಿಲ್ಲ. ಅಂತೆಯೇ ವಾರಕ್ಕೆ ಇಂತಿಷ್ಟು ಉಪನ್ಯಾಸ ಗಳನ್ನು ಮಾಡಬೇಕೆನ್ನುವಲ್ಲಿಯೂ ಭಿನ್ನವಿಲ್ಲ. ಇದರಿಂದಾಗಿ, ಸಮಾಜಕಾರ್ಯ ಶಿಕ್ಷಕ ಕಾಲಾವಕಾಶದ ಮಿತಿಯಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾರ್ಗದರ್ಶನ ಮಾಡಲು ಆಗ್ಗು ವುದಿಲ್ಲ.

೨) ಸೇವಾಕೇಂದ್ರದ ಮೇಲ್ವಿಚಾರಕರು ಕೆಲವೊಮ್ಮೆ ವಿದ್ಯಾರ್ಥಿಗಳನ್ನು 'ಒಪ್ಪೊತ್ತಿನ-ಗುಮಾಸ್ತ'ರಂತೆ ಗುರುತಿಸಿ ಕ್ಷೇತ್ರಕಾರ್ಯದ ದೃಷ್ಟಿಯಿಂದ ಅಷ್ಟು ಸಂಬಂಧವಿಲ್ಲದ ಕೆಲಸಗಳನ್ನು ಮಾಡಲು ಹೇಳುತ್ತಾರೆ. ಇದರಿಂದ ವಿದ್ಯಾರ್ಥಿಗಳು ಬೇಜಾರುಪಟ್ಟುಕೊಂಡಲ್ಲಿ ಅವರು ಕ್ಷೇತ್ರಕಾರ್ಯದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳು ತ್ತಾರೆ.

೩) ವಿದ್ಯಾರ್ಥಿಗಳ ವೈಯುಕ್ತಿಕ ಕಾರಣಗಳಿಂದ ಕ್ಷೇತ್ರಕಾರ್ಯದಲ್ಲಿ ಆಸಕ್ತಿ ಹೊಂದಿರುವುದಿಲ್ಲ.

೪) ಅನೇಕ ವೇಳೆ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಬೇಕಾದ ದಾಖಲಾತಿಗಳು ಹಾಗೂ ಇತರ ಅನುಕೂಲಗಳು ಇರುವುದಿಲ್ಲ.

೫) ಕೆಲವೊಮ್ಮೆ ಕೇಂದ್ರದಲ್ಲಿ ಕ್ಷೇತ್ರಕಾರ್ಯಕ್ಕೆ ಬೇಕಾದ ಅನುಕೂಲಗಳು ಇದ್ದರೂ ಸಹ ಅಲ್ಲಿಯ ಸಿಬ್ಬಂದಿವರ್ಗದ ಆಲಸ್ಯದಿಂದ ವಿದ್ಯಾರ್ಥಿಗಳಿಗೆ ಒದಗಿಸಲಾಗು ವುದಿಲ್ಲ.

೬) ಇನ್ನೊಂದು ಸಮಸ್ಯೆ ಎಂದರೆ, ತರಗತಿಯ ಮೂಲಕ ಪಡೆದ ಜ್ಞಾನ ಹಾಗೂ ಕ್ಷೇತ್ರದಲ್ಲಿ ಇರುವ ಸತ್ಯಾಂಶಗಳ ನಡುವೆ ಇರುವ ವ್ಯತ್ಯಾಸ.

೭) ಪರಿಣತ ಮೇಲ್ವಿಚಾರಕರು ಶಿಕ್ಷಣ ಸಂಸ್ಥೆಯಲ್ಲಿ ದೊರಕದಿರುವುದು.

೮) ಶಿಕ್ಷಣ ಸಂಸ್ಥೆಯಲ್ಲಿನ ಮತ್ತು ಕೇಂದ್ರದಲ್ಲಿನ ಆಂತರಿಕ ಮನಸ್ತಾಪ (ಇದ್ದರೆ).

೯) ಮೇಲ್ವಿಚಾರಕರು ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಮಾಡದಿರುವುದು.

೧೦) ವಿದ್ಯಾರ್ಥಿ – ಮೇಲ್ವಿಚಾರಕ, ವಿದ್ಯಾರ್ಥಿ – ಸಂಯೋಜಕ, ವಿದ್ಯಾರ್ಥಿ – ಸೇವಾಕೇಂದ್ರದ ಮೇಲ್ವಿಚಾರಕ ಇವರ ನಡುವಣ ವೃತ್ತಿ ಸಂಬಂಧವೇನಾದರೂ ಮಧುರವಾಗಿರದಿದ್ದರೆ, ವ್ಯವಸ್ಥಿತವಾದ ಕ್ಷೇತ್ರ ಕಾರ್ಯವನ್ನು ಮಾಡಲು ಆಗುವುದಿಲ್ಲ.

೧೧) ವಿದ್ಯಾರ್ಥಿಗಳಿಗೆ ಮತ್ತು ಮೇಲ್ವಿಚಾರಕರಿಗೆ ಶಿಕ್ಷಣ ಸಂಸ್ಥೆಯಿಂದ ಸೇವಾ ಕೇಂದ್ರಗಳಿಗೆ ಸರಿಯಾದ ವಾಹನ ಸೌಕರ್ಯವಿಲ್ಲದಿರುವುದು.

ಈ ಮೇಲ್ಕಂಡ ಹಲವು ಮುಖ್ಯ ಸಮಸ್ಯೆಗಳನ್ನು ತಕ್ಕಮಟ್ಟಿಗಾದರೂ ನಾವು ನಿವಾರಿಸದಿದ್ದರೆ, ಕ್ಷೇತ್ರಕಾರ್ಯಕ್ಕೆ ಸಮಾಜಕಾರ್ಯ ಶಿಕ್ಷಣದಲ್ಲಿ ಕೊಡುತ್ತಾ ಬಂದಿರುವ ಸ್ಥಾನ ಅರ್ಥಹೀನವಾಗುವುದು.

ಟಿಪ್ಪಣಿಗಳು

1. ಡಾ. ಮರುಳಸಿದ್ದಯ್ಯ, ಎಚ್. ಎಂ., ಕಪ್ಪುಮೋಡದಲ್ಲೊಂದು ಬೆಳ್ಳಿರೇಖೆ, ವಿಶ್ವನಾಥ ಪ್ರಕಾಶನ, ಮೈಸೂರು, ೧೯೭೪. ಪು. ೧೦.
2. Moorthy M.V. and Narayana Rao S., *Field work in Social work*, Waltair, Dept. of Sociology and Social work, Andhra University, 1970. P–5
3. U. G. C. *Review of Social Work Education in India : Retrospect and Prospect*, UGC, Delhi, 19.0. PP. 52-53.

ಆಧಾರ ಕೃತಿಗಳು

1. Moorthy, M. V. and Narayana Rao, S., *Field work in Social work* ; Waltair, Dept. of Sociology and Social work, Andhra University, 1970.
2. University Grants Commission ; *Review of Social Work Education in India: Retrospect and Prospect*, Delhi, UGC, 1980.
3. Working Papers of the National Work–shop on 'Field Work' held at Delhi School of Social work, Delhi, 1931
4. ಡಾ. ಮರುಳಸಿದ್ದಯ್ಯ, ಎಚ್. ಎಂ., ಕಪ್ಪುಮೋಡದಲ್ಲೊಂದು ಬೆಳ್ಳಿರೇಖೆ, (ಸಮಾಜಕಾರ್ಯವನ್ನು ಕುರಿತ ಪ್ರಬಂಧಗಳು), ವಿಶ್ವನಾಥ ಪ್ರಕಾಶನ, ಮೈಸೂರು, ೧೯೭೩.
5. ಸಮಾಜಕಾರ್ಯ, ಅಭ್ಯುದಯ ಪ್ರಕಾಶನ, ಬೆಂಗಳೂರು, ೧೯೮೪.

ಕೆ. ಎಸ್. ರಾಮಕೃಷ್ಣರಾವ್

ಡೇವಿಡ್ ಹ್ಯೂಮ್

ಪಾಶ್ಚಾತ್ಯ ತತ್ವಶಾಸ್ತ್ರದ ಕ್ಷೇತ್ರದಲ್ಲಿ ಡೇವಿಡ್ ಹ್ಯೂಮ್‌ನಿಗೆ ಒಂದು ಅತ್ಯಂತ ಪ್ರಾಮುಖ್ಯ ಸ್ಥಾನವಿದೆ. ಲಾಕ್ ಪ್ರತಿಪಾದಿಸಿದ ಮತ್ತು ಬಾರ್ಕ್ಲೆ ಮುಂದುವರಿಸಿದ ಅನುಭವವಾದದ ತಾತ್ವಿಕ ಪರಿಣಾಮವೇನೆಂದು ಪ್ರತಿಪಾದಿಸಲು ಹ್ಯೂಮನು ಮಾಡಿದ ಪ್ರಯತ್ನವೇ ಆತನ ಪ್ರಸಿದ್ಧಿಗೆ ಕಾರಣ. ಅನುಭವವಾದವನ್ನು ಅದರ ಅತಿರೇಕಕ್ಕೆ ಕೊಂಡೊಯ್ದು ಯಾವುದೇ ರೀತಿಯ ಸ್ಪಷ್ಟ ಅಥವಾ ನಿರ್ದಿಷ್ಟ ಜ್ಞಾನವು ಸಾಧ್ಯವಿಲ್ಲವೆಂಬ "ಸಂದೇಹವಾದ"ವನ್ನು ಹ್ಯೂಮ್ ಪ್ರತಿಪಾದಿಸುತ್ತಾನೆ.

ಶುದ್ಧ ಮತ್ತು ಸ್ವತಂತ್ರ ವಿಚಾರಗಳಿಂದ ಕೂಡಿದ ಹ್ಯೂಮನ ಮನಸ್ಸು ಯಾವ ಪೂರ್ವಗ್ರಹ ಪೀಡನೆಗೂ ಒಳಗಾಗದೆ ನೇರ ತಾರ್ಕಿಕ ಪ್ರವೃತ್ತಿಯನ್ನು ಹೊಂದಿತ್ತು. ಇದರಿಂದಾಗಿ ಆತನು ಲಾಕ್‌ನ ವಾಸ್ತವವಾದವು ಯಾವ ರೀತಿಯ ತಾರ್ಕಿಕ ಪರಿಣಾಮವನ್ನು ಪಡೆಯಬಲ್ಲದೆಂದು ಯಾವ ಅಂಜಿಕೆಯೂ ಇಲ್ಲದೆ ಪ್ರಕಟಿಸಿದನು. ವಾಸ್ತವವಾದದ ಪ್ರತಿಪಾದಕನಾದ ಲಾಕ್ ಸಾಮಾನ್ಯ ಜ್ಞಾನ ಮತ್ತು ಧಾರ್ಮಿಕ ಭಾವನೆಗಳಿಂದ ಪ್ರಭಾವಿತನಾಗಿದ್ದನು. ಆದುದರಿಂದಲೇ ಆತನ ತತ್ವನಿರೂಪಣೆ ಯಾವುದೇ ನಿರ್ಧರಿತ ತೀರ್ಮಾನವನ್ನು ಪಡೆಯದೆ ಟೀಕೆಗೆ ಒಳಗಾಯಿತು. ಅನಂತರ ಬಂದ ಬಾರ್ಕ್ಲೆ ಅನುಭವವಾದದ ತತ್ವಗಳ ಮೂಲಕ ಭೌತವಸ್ತುಗಳ ಇರುವಿಕೆಯನ್ನು ತಿರಸ್ಕರಿಸಿದನು. ಆದರೆ ಆತನ ಧಾರ್ಮಿಕ ಪೂರ್ವಾನುರಾಗವು ಆತನು ಮನಸ್ಸು ಮತ್ತು ದೇವರ ಇರುವಿಕೆಯನ್ನು ನಿರಾಕರಿಸಲು ಅಶಕ್ತನಾಗುವಂತೆ ಮಾಡಿತು. ಧರ್ಮದ ಸಲುವಾಗಿ ದೇವರ ಇರುವಿಕೆಯನ್ನು ಒಪ್ಪಿದರೂ ಕೂಡ ತಾನು ಅನುಸರಿಸಿದ ಅನುಭವವಾದದ ಮೂಲಕ ದೇವರ ಇರುವಿಕೆಯನ್ನು ನಿರೂಪಿಸಲು ಅಸಮರ್ಥನಾದನು. ಇದರಿಂದ ಸಂಪೂರ್ಣ ಭಿನ್ನನಾದ ಹ್ಯೂಮನಲ್ಲಿ ಯಾವುದೇ ರೀತಿಯ ಪೂರ್ವಾನುರಾಗ ಇಲ್ಲದುದರಿಂದ ಆತನು ಅನುಭವವಾದದ ತತ್ವಗಳನ್ನು ಅದರ ಅತಿರೇಕಕ್ಕೆ ಕೊಂಡೊಯ್ಯುತ್ತಾನೆ. ಆತನ ಈ ಪ್ರವೃತ್ತಿಯು ತತ್ವಶಾಸ್ತ್ರವು ಮತ್ತೆ ಮುಂದುವರಿಯಲಾಗದಂತಹ ಒಂದು ಕೊನೆಯನ್ನು ಮುಟ್ಟುತ್ತದೆ. ಅನುಭವವಾದದ ತತ್ವಗಳನ್ನು ಅನುಸರಿಸಿದ್ದೇ ಆದರೆ ಭೌತವಸ್ತುಗಳು, ಮನಸ್ಸು, ದೇವರು, ಕಾರ್ಯಕಾರಣ, ನಿಯಮ ಮತ್ತು ವಿಜ್ಞಾನ

ಅಥವಾ ಯಾವುದೇ ಜ್ಞಾನದ ಬಗ್ಗೆ ನ್ಯಾಯ ಸಮ್ಮತ ತೀರ್ಮಾನ ಅಸಾಧ್ಯವೆಂದು ತೋರಿಸಿದನು.

ಹ್ಯೂಮನು ಭೌತವಸ್ತು ಮತ್ತು ಮನಸ್ಸುಗಳೇ ಅಲ್ಲದೇ ಧರ್ಮದ ಆಧಾರವಾದ ದೇವರನ್ನು ಮತ್ತು ನಮ್ಮ ಜ್ಞಾನದ ಆಧಾರವಾದ ವೈಜ್ಞಾನಿಕ ನಿಯಮಗಳನ್ನು ಸಂಪೂರ್ಣವಾಗಿ ನಿರಾಕರಿಸುವುದರಿಂದ ಆಗಿನ ಜನರು ಅವನನ್ನು "ಕುಪ್ರಸಿದ್ಧ ಸಂದೇಹವಾದಿ" ಎಂದು ಜರಿದರು. ಅಂದಿನಿಂದ ಸುಮಾರು ಎರಡು ಶತಮಾನಗಳವರೆಗೆ ಹಲವಾರು ತತ್ವಜ್ಞಾನಿಗಳು ಹ್ಯೂಮನ ತತ್ವ ನಿರೂಪಣೆಯನ್ನು ನಿರಾಕರಿಸುವಲ್ಲಿ ನಿಷ್ಫಲ ಪ್ರಯತ್ನವನ್ನು ನಡೆಸಿದರು. ಆತನ ನಿರೂಪಣೆ ಎರಡು ಶತಮಾನಗಳ ನಂತರ ಭೌತಶಾಸ್ತ್ರ ಮತ್ತು ಖಗೋಳಶಾಸ್ತ್ರದಲ್ಲಿ ನಡೆದ ಸಂಶೋಧನೆಗಳ ಮೂಲಕ ವಿಚಾರವಂತರು ಆತನ ವಾದವನ್ನು ಅರ್ಥಮಾಡಿಕೊಳ್ಳಲು ಸಮರ್ಥರಾದರು. ಈಗ ಹ್ಯೂಮ್ ಕುಪ್ರಸಿದ್ಧ ಸಂದೇಹವಾದಿಯಾಗಿರದೇ ತಾತ್ವಿಕರು ಮೆಚ್ಚಿಕೊಳ್ಳಬಹುದಾದಂತಹ ಸುಪ್ರಸಿದ್ಧ ಸಂದೇಹವಾದಿ ಎಂದು ಹೆಸರುವಾಸಿಯಾದನು. ಆತನ ತತ್ವವಿಚಾರಗಳು ಆಧುನಿಕ ತತ್ವಶಾಸ್ತ್ರದಲ್ಲಿ "ತಾರ್ಕಿಕ ಸಾಧ್ಯವಾದ" ಎಂಬ ಒಂದು ಹೊಸ ಸಿದ್ಧಾಂತವೇ ರೂಪುಗೊಳ್ಳಲು ಕಾರಣವಾದವು.

ಇಂದ್ರಿಯಾನುಭವ ಮತ್ತು ಕಲ್ಪನೆ :

ಅನುಭವವಾದದ ಕಲ್ಪನೆಗಳನ್ನು ಅನುಸರಿಸಿದ ಹ್ಯೂಮ್ ಅವುಗಳಲ್ಲಿ ಒಂದು ಸುಧಾರಿತ ಮಾರ್ಪಾಟನ್ನು ಮಾಡುತ್ತಾನೆ. ಇಂದ್ರಿಯಾನುಭವದ ತತ್ವಗಳನ್ನು ವರ್ಗೀಕರಿಸಿ ಇಂದ್ರಿಯಾನುಭವಗಳು ಮತ್ತು ಕಲ್ಪನೆಗಳೆಂದು ವಿಂಗಡಿಸುತ್ತಾನೆ. ಇವುಗಳು ನಮ್ಮ ಮನಸ್ಸಿನ ಮೇಲೆ ಬೀರುವ ಪ್ರಭಾವದ ತೀವ್ರತೆಯ ಆಧಾರದಿಂದ ವರ್ಗೀಕರಿಸಲ್ಪಟ್ಟಿವೆ. ಯಾವ ಅಂಶಗಳು ಅತ್ಯಂತ ಪ್ರಬಲವಾಗಿ ನಮ್ಮ ಮನಸ್ಸನ್ನು ನಾಟುವವೋ ಅವುಗಳನ್ನು "ಇಂದ್ರಿಯಾನುಭವಗಳು" ಎಂದು, ಯಾವ ಅಂಶಗಳು ದುರ್ಬಲವಾದ ಪ್ರತಿಬಿಂಬ (ಇಂದ್ರಿಯಾನುಭವಗಳ ಪರಿಣಾಮವಾದ ಪ್ರತಿರೂಪಗಳು) ಗಳೋ ಅವುಗಳನ್ನು "ಕಲ್ಪನೆ"ಗಳೆಂದು ಕರೆಯುತ್ತಾನೆ. ಇಂದ್ರಿಯಾನುಭವಗಳು ಮನಸ್ಸನ್ನು ನೇರವಾಗಿ ಪ್ರವೇಶಿಸಿದರೆ ಕಲ್ಪನೆಗಳು ಈ ಇಂದ್ರಿಯಾನುಭವಗಳ ಸಹಾಯದಿಂದ ಉಂಟಾದ ಪ್ರತಿರೂಪಗಳಾಗಿವೆ.

ಈ ವರ್ಗೀಕರಣವು "ಇಂದ್ರಿಯಾನುಭವಗಳಿಲ್ಲದಿದ್ದರೆ ಕಲ್ಪನೆಗಳ ಸೃಷ್ಟಿಯೇ ಸಾಧ್ಯವಿಲ್ಲ" ಎಂಬುವನ್ನು ಸೂಚಿಸುತ್ತವೆ. ಅಂದರೆ ಕಲ್ಪನೆಗಳ ಸತ್ಯಾಸತ್ಯತೆಯನ್ನು ತಿಳಿಯಬೇಕಾದರೆ ಅವುಗಳಿಗೆ ಆಧಾರಭೂತವಾದ ಇಂದ್ರಿಯಾನುಭವಗಳನ್ನು ತಿಳಿಯಬೇಕಾಗಿವೆ. ಈ ವರ್ಗೀಕರಣದ ಸಹಾಯದಿಂದ ಹ್ಯೂಮ್ ಬಹಳ ಸರಳವಾಗಿ ಭೌತವಸ್ತುಗಳನ್ನು, ಮನಸ್ಸನ್ನು, ದೇವರನ್ನು ಹಾಗೂ ಸರ್ವಜ್ಞಾನವನ್ನೂ ನಿರಾಕರಿಸುತ್ತಾನೆ.

ಭೌತವಸ್ತುಗಳ ನಿರಾಕರಣೆ :

ಅನುಭವವಾದದ ತತ್ವಗಳನ್ನು ಪ್ರತಿಪಾದಿಸಿದ ಲಾಕ್ ಜನಸಾಮಾನ್ಯರ ಅಭಿಪ್ರಾಯಕ್ಕೆ ಸರಿಹೊಂದುವಂತೆ ವಸ್ತುಗಳಲ್ಲಿರುವ ಗುಣಗಳ ಹಿಂದೆ ಶಾಶ್ವತವಾದ ಮೂಲದ್ರವ್ಯ ಒಂದಿರಲೇಬೇಕು ಎಂದು ಅಭಿಪ್ರಾಯಪಟ್ಟಿದ್ದನು. ಆದರೆ ಮುಂದೆ ಬಾರ್ಕ್ಲೆಯು ಅಂತಹ ಮೂಲ ದ್ರವ್ಯಗಳನ್ನು ಸಂಪೂರ್ಣವಾಗಿ ನಿರಾಕರಿಸಿ ಅವುಗಳಿರಲು ಸಾಧ್ಯವೇ ಇಲ್ಲ, ಇದ್ದರೂ ಅವುಗಳನ್ನು ತಿಳಿಯಲಾರೆವು ಎಂದು ವಾದಿಸಿದನು. ಬಾರ್ಕ್ಲೆಯ ವಾದವನ್ನು ಅನುಸರಿಸಿ ಹ್ಯೂಮ್ ಕೂಡ ಅಂತಹ ಮೂಲದ್ರವ್ಯಗಳ ಇರವನ್ನು ನಿರಾಕರಿಸುತ್ತಾನೆ.

ಗುಣಗಳಿಗೆ ಆಧಾರವಾದ ಮೂಲವಸ್ತು ಒಂದು ಇದ್ದರೆ ಅಥವಾ ಅಂತಹ ಒಂದು ವಸ್ತುವಿನ ಕಲ್ಪನೆ ನಮ್ಮಲ್ಲಿದ್ದರೆ ಆ ಕಲ್ಪನೆಯು ಅದಕ್ಕೆ ಅನುಗುಣವಾದ ಇಂದ್ರಿಯಾನುಭವದಿಂದಲೇ ಉಂಟಾಗಿರಬೇಕು. ಆ ಕಲ್ಪನೆಯು ಅನುಭವವು ಕಣ್ಣುಗಳ ಮುಖಾಂತರ ಬಂದಿದ್ದರೆ ಅದು ಬಣ್ಣದ ಅನುಭವವಾಗಿರಬೇಕು, ಕಿವಿಗಳ ಮುಖಾಂತರ ಬಂದಿದ್ದರೆ ಅದು ಶಬ್ದದ ಅನುಭವವಾಗಿರಬೇಕು ಅಥವಾ ಬೇರಾವುದೇ ಜ್ಞಾನೇಂದ್ರಿಯದ ಮೂಲಕ ಬಂದಿದ್ದರೆ ಅದಕ್ಕನುಗುಣವಾದ ಅನುಭವವಾಗಿರಬೇಕು. ಈ ದೃಷ್ಟಿಯಿಂದ ನೋಡಿದರೆ ಯಾವ ಜ್ಞಾನೇಂದ್ರಿಯವು ಲಾಕ್ ನಿರೂಪಿಸಿದಂಥ ಮೂಲ ದ್ರವ್ಯದ ಬಗ್ಗೆ ಇಂದ್ರಿಯಾನುಭವವನ್ನು ಕೊಡಲಾರದು. ಇಂದ್ರಿಯಾನುಭವವೇ ಇಲ್ಲದ ಒಳಿಕ ಅಂಥ ವಸ್ತು ಒಂದಿರಲು ಸಾಧ್ಯವೇ ಇಲ್ಲ. ಹೊರ ಪ್ರಪಂಚದಲ್ಲಿ ಏನಿದ್ದರೂ, ಅವು ವಿವಿಧ ಗುಣಗಳ ಸಂಘಟನೆ ಮಾತ್ರವಲ್ಲದೆ ವಸ್ತುಗಳಾಗಿರಲು ಸಾಧ್ಯವಿಲ್ಲ.

ಮನಸ್ಸಿನ ನಿರಾಕರಣೆ :

ಲಾಕ್ ಮತ್ತು ಬಾರ್ಕ್ಲೆ ಧಾರ್ಮಿಕ ಪೂರ್ವಾನುರಾಗಕ್ಕೆ ಒಳಗಾಗಿದ್ದುದರಿಂದ ಮನಸ್ಸಿನ ಇರುವಿಕೆಯನ್ನು ನಿರಾಕರಿಸಲು ಹಿಂಜರಿದರು. ಮನಸ್ಸನ್ನು ಅವರು ಅಮರ್ತ್ಯವಾದ ಒಂದು ಸಾತ್ವಿಕ ದ್ರವ್ಯವೆಂದರು. ಆದರೆ ಹ್ಯೂಮ್ ಇಂಥ ದ್ರವ್ಯವನ್ನು ನಿರಾಕರಿಸುತ್ತಾನೆ. ಆತನಲ್ಲಿ ಯಾವುದೇ ರೀತಿಯ ಪೂರ್ವಗ್ರಹ ಪೀಡಿತ ಭಾವನೆಗಳಿಲ್ಲದ್ದರಿಂದ ಯಾವ ಭಯವೂ ಇಲ್ಲದೇ ಧರ್ಮದ ಆಧಾರ ಸ್ತಂಭವಾದ ಮನಸ್ಸು ಅಥವಾ ಆತ್ಮದ ಇರುವಿಕೆಯನ್ನು ನಿರಾತಂಕವಾಗಿ ನಿರಾಕರಿಸುತ್ತಾನೆ. ಇಲ್ಲಿಯೂ ಹ್ಯೂಮ್ ತನ್ನ ಸಂದೇಹವಾದವನ್ನು ಅನುಸರಿಸುತ್ತಾನೆ. ಮನಸ್ಸು ಎಂಬ ದ್ರವ್ಯ ಒಂದಿದ್ದರೆ ಅಥವಾ ಅದರ ಕಲ್ಪನೆ ನಮ್ಮಲ್ಲಿರಬೇಕಾದರೆ ಅದು ಯಾವುದಾದರೂ ಇಂದ್ರಿಯಾನುಭವದ ಪ್ರತಿರೂಪವಾಗಿರಲೇಬೇಕು. ಆದರೆ ಯಾವ ಜ್ಞಾನೇಂದ್ರಿಯವೂ ಈ ಸಾತ್ವಿಕ ದ್ರವ್ಯದ ಅನುಭವವನ್ನು ನೀಡುವುದಿಲ್ಲ. ಆದುದರಿಂದ ಆತ್ಮ ಅಥವಾ ಮನಸ್ಸು ಎಂಬ ದ್ರವ್ಯದ ಇರುವಿಕೆ ನ್ಯಾಯಸಮ್ಮತವಲ್ಲ. ಮನಸ್ಸೆಂದು ಭಾವಿಸಿರುವ "ನಾನು" ಎನ್ನುವುದನ್ನು ತಿಳಿಯಲು ಪ್ರಯತ್ನಿಸಿದಾಗ ಅಲ್ಲಿ ಕಂಡುಬಂದದ್ದು ಕೇವಲ

ಕೆಲವು ಇಂದ್ರಿಯಾನುಭವಗಳು ಮಾತ್ರ. ಈ ಇಂದ್ರಿಯಾನುಭವವು ಶಾಖ ಅಥವಾ ಶೀತವಿರಬಹುದು, ಬೆಳಕು ಅಥವಾ ಕತ್ತಲೆ ಇರಬಹುದು, ಪ್ರೀತಿ ಅಥವಾ ದ್ವೇಷ ಇರಬಹುದು. "ನಾನು" ಎನ್ನುವುದನ್ನು ಮಾತ್ರ ಒಂದಾಗಿ ತಿಳಿಸಲು ಸಾಧ್ಯವೇ ಇಲ್ಲ. ಆದುದರಿಂದ ನಾವು ಮನಸ್ಸು ಎಂದು ಕರೆಯುವ ವಸ್ತು ಹಲವಾರು ಇಂದ್ರಿಯಾನುಭವಗಳ ಹೊರತಾಗಿ ಯಾವ ಸಂಕೀರ್ಣ ದ್ರವ್ಯವೂ ಅಲ್ಲ. ಮನಸ್ಸು ಎನ್ನುವುದು ನಮ್ಮ ಅನುಭವಗಳಾದ ಆಸೆ ಆಕಾಂಕ್ಷೆಗಳ ಅಥವಾ ಇಷ್ಟ ಮತ್ತು ನಿರಾಕರಣೆಗಳ ಒಂದು ಗುಂಪು ಎನ್ನುವುದನ್ನು ಸುಲಭವಾಗಿ ತೋರಿಸಬಹುದು. ಉದಾ :- ಸುಷುಪ್ತಿ ಅಥವಾ ಗಾಢನಿದ್ರೆಯಲ್ಲಿ ಯಾವ ಅನುಭವವೂ ಇಲ್ಲದೇ ಇದ್ದು ಮನಸ್ಸು ಕೂಡ ಇರುವುದಿಲ್ಲ. ಅದೇ ರೀತಿ ಸಾವಿನಲ್ಲಿ ನಮ್ಮ ಇಂದ್ರಿಯಾನುಭವಗಳು ಮತ್ತು ಇತರ ಆಂತರಿಕ ಅನುಭವಗಳು ಕಾಣೆಯಾದಾಗ ಮನಸ್ಸು ಕೂಡ ಇಲ್ಲವಾಗುತ್ತದೆ. ಆದುದರಿಂದ ಕೇವಲ ನಮ್ಮ ಬಾಹ್ಯ ಮತ್ತು ಆಂತರಿಕ ಅನುಭವಗಳ ಸಮೂಹವನ್ನೇ ನಾವು ಮನಸ್ಸು ಎಂದು ಹೆಸರಿಸಿದ್ದು ಅದೊಂದು ನಿರ್ದಿಷ್ಟ ದ್ರವ್ಯವಾಗಿರಲು ಸಾಧ್ಯವೇ ಇಲ್ಲ. ಲಾಕನು ನಿರೂಪಿಸಿದ ಮನಸ್ಸಿನ ದ್ರವ್ಯ ಸಿದ್ಧಾಂತಕ್ಕೆ ವಿರುದ್ಧವಾಗಿ ನೀಡುವ ಹ್ಯೂಮನ ವಾದವನ್ನು ಮನಸ್ಸಿನ ಸಮೂಹ ಸಿದ್ಧಾಂತ ಎನ್ನುತ್ತಾರೆ.

ಹಾಗಾದರೆ ನಮ್ಮೊಳಗೆ ಹುದುಗಿರುವ ಆಧ್ಯಾತ್ಮಿಕ ದ್ರವ್ಯವಾದ ಆತ್ಮ ಅಥವಾ ಮನಸ್ಸಿನ ಕಲ್ಪನೆಯು ಹೇಗೆ ಉಂಟಾಗುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹ್ಯೂಮನ ಪ್ರಕಾರ ಮನಸ್ಸೆಂಬ ದ್ರವ್ಯವಿಲ್ಲದಿದ್ದರೂ ನಮ್ಮಲ್ಲಿ ಆ ದ್ರವ್ಯದ ಬಗ್ಗೆ ಕಲ್ಪನೆ ಹೇಗೆ ಉಂಟಾಯಿತೆನ್ನುವುದೇ ಇಲ್ಲಿನ ಸಮಸ್ಯೆ. ಈ ಪ್ರಶ್ನೆಯನ್ನು ಹ್ಯೂಮ್ ಈ ರೀತಿ ಉತ್ತರಿಸುತ್ತಾನೆ—ನಾವು ಮನಸ್ಸು ಎಂದು ಭಾವಿಸಿರುವ ಅಂಶವು ಕೇವಲ ನಮ್ಮ ಅನುಭವಗಳ, ವಿವಿಧ ಭಾವನೆಗಳ ಮತ್ತು ಇಚ್ಛೆಗಳ ಒಂದು ಸಮುದಾಯವಾಗಿದೆ. ಈ ಅನುಭವಗಳು ಮತ್ತು ಭಾವನೆಗಳು ಒಂದರ ಹಿಂದೆ ಮತ್ತೊಂದರಂತೆ ನಮ್ಮಿಂದ ತಿಳಿಯಲಾರದಷ್ಟು ವೇಗವಾಗಿ ಚಲಿಸುತ್ತಿರುತ್ತವೆ. ನಮ್ಮ ಮನಸ್ಸು ಚಿತ್ರಮಂದಿರ ಒಂದರ ಪರದೆಯಂತಿದ್ದು ಅದರಲ್ಲಿ ನಮ್ಮ ಅನುಭವಗಳು ಒಂದರ ನಂತರ ಮತ್ತೊಂದು ವೇಗವಾಗಿ ದಾಟಿ ಹೋಗುತ್ತವೆ ಅಥವಾ ಒಂದನ್ನೊಂದು ಸೇರಿಕೊಂಡು ಹಲವಾರು ರೀತಿಯ ಸ್ಥಿತಿಗತಿಗಳನ್ನುಂಟುಮಾಡುತ್ತವೆ. ಈ ವಿವಿಧ ಅನುಭವಗಳಲ್ಲಿ ಪ್ರತಿಯೊಂದು ಅನುಭವವು ಬೇರೆಯಿದ್ದು ಮತ್ತೊಂದರೊಡನೆ ಸೇರಿರದೆ ಅವುಗಳ ನಡುವೆ ಅಂತರವಿದ್ದರೂ ಅವು ವೇಗವಾಗಿ ಚಲಿಸುವುದರಿಂದ ಒಂದನ್ನೊಂದು ಸೇರಿಕೊಂಡಂತೆ ಭಾಸವಾಗುತ್ತದೆ. ಈ ಕೃತಕ ಸಂಯೋಜನೆಯ ಫಲವಾಗಿ ನಮ್ಮಲ್ಲಿ ಒಂದು ಸಂಕೀರ್ಣ ವಸ್ತುವಿನ ಅಥವಾ ಒಂದು ಶಾಶ್ವತ ದ್ರವ್ಯದ ಕಲ್ಪನೆಯುಂಟಾಗುತ್ತದೆ. ಜೇನುನೊಣಗಳ ಗುಂಪೊಂದು ಹಾರುತ್ತಿರುವಾಗ ಎರಡು ನೊಣಗಳ ನಡುವೆ ಸ್ಥಳಾವಕಾಶವಿದ್ದರೂ ಅವು ಒಂದನ್ನೊಂದು ಅನುಸರಿಸುತ್ತಾ ವೇಗವಾಗಿ ಚಲಿಸುವುದರಿಂದ ನಮ್ಮಲ್ಲಿ ಅವುಗಳ ಸರಣಿಯ ಸರಳ ರೇಖೆಯ ಕಲ್ಪನೆಯೊಂದು ಉಂಟಾಗುತ್ತದೆ. ಈ ಸರಣಿಯನ್ನು ಸರಳರೇಖೆಯೆಂದು

ಭಾವಿಸಿದರೆ ಎಷ್ಟು ತಪ್ಪಾಗಬಹುದೋ ಅದೇ ರೀತಿ ವಿವಿಧ ಅನುಭವ ಮತ್ತು ಭಾವನೆಗಳ ಸರಣಿಯನ್ನು ಮನಸ್ಸೆಂಬ ದ್ರವ್ಯವೆಂದರೆ ಅಷ್ಟೇ ಅಸಮಂಜಸವಾಗುತ್ತದೆ. ಇಂತಹ ಕಲ್ಪನೆಗೆ ಮತ್ತೊಂದು ಉತ್ತಮ ನಿದರ್ಶನ ಚಲನಚಿತ್ರ. ಇಲ್ಲಿಯ ನಿರಂತತೆ ಮತ್ತು ಶಾಶ್ವತತೆಗಳು ಕೇವಲ ಭ್ರಾಂತಿಯಾಗಿವೆ. ಇಂದ್ರಿಯಾನುಭವ ಮತ್ತು ಭಾವನೆಗಳ ಗುಂಪನ್ನು ಒಂದು ಶಾಶ್ವತವಾದ ಆಧ್ಯಾತ್ಮಿಕ ದ್ರವ್ಯವೆಂದು ಕರೆಯುವುದು ಭ್ರಾಂತಿಯೇ ಆಗಿದೆ.

ಕಾರ್ಯಕಾರಣ ನಿಯಮ ಹಾಗೂ ವಿಜ್ಞಾನದ ನಿರಾಕರಣೆ :

ಪ್ರಪಂಚದ ವಿಶಿಷ್ಟ ವಸ್ತುಗಳಿಗೆ ಅನ್ವಯಿಸುವ ಮತ್ತು ಅವುಗಳ ವರ್ತನೆಗಳಿಗೆ ಆಧಾರವಾಗಿರುವ ನಿಯಮಗಳನ್ನು ಶೋಧಿಸುವುದೇ ವಿಜ್ಞಾನದ ಗುರಿ. ಸಾಮಾನ್ಯವಾಗಿ ವಿಜ್ಞಾನವು ಸಂಶೋಧಿಸುವ ನಿಯಮವು ಒಂದು ಪೂರ್ಣವ್ಯಾಪಕ ಭಾವಾತ್ಮಕ ತಾರ್ಕಿಕ ವಾಕ್ಯವಾಗಿರುತ್ತದೆ. ಉದಾ : ಎಲ್ಲಾ ಭೌತವಸ್ತುಗಳು ಗುರುತ್ವಾಕರ್ಷಣ ಶಕ್ತಿಯನ್ನೊಳಗೊಂಡಿವೆ. ಇದೊಂದು ಸಾರ್ವತ್ರಿಕ ನಿಯಮ. ಇಂತಹ ನಿಯಮಗಳನ್ನು ಕಂಡು ಹಿಡಿಯುವಲ್ಲಿ ವಿಜ್ಞಾನವು ಪ್ರಾರಂಭಿಕವಾಗಿ ವಿಶಿಷ್ಟ ವಸ್ತುಗಳ ಅಥವಾ ಘಟನೆಗಳ ಕಾರಣವನ್ನು ತಿಳಿಯಲು ಪ್ರಯತ್ನಿಸುತ್ತದೆ. ಒಮ್ಮೆ M ಎಂಬ ಅಂಶವು P ಎಂಬ ಘಟನೆಯ ಕಾರಣ ಎಂದು ಪರಿಗಣಿಸಲ್ಪಟ್ಟಿದ್ದರೆ P ಘಟನೆಯು ಯಾವತ್ತೂ M ಅಂಶದಿಂದಲೇ ಬರಬೇಕು. ಇದು ಕಾರ್ಯಕಾರಣ ನಿಯಮ. ಆದರೆ ಈ ನಿಯಮ ಸರಿ ಎಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆಯು ಉದ್ಭವಿಸಬಹುದು. ಇದಕ್ಕೆ ಉತ್ತರವಾಗಿ ವಿಜ್ಞಾನವು ಈ ಪ್ರಪಂಚವನ್ನು ಒಂದು ವ್ಯವಸ್ಥಿತ ಸಂಘಟನೆ ಎಂದು ಪರಿಗಣಿಸುತ್ತದೆ. ಅವ್ಯವಸ್ಥೆಯಿಂದ ಕೂಡಿರುವ ಯಾವುದೋ ರಾಶಿಯಿಂದ ಕೆಲವೊಂದು ಭಾಗವನ್ನು ತೆಗೆದುಹಾಕಿದರೆ ಅಥವಾ ಮತ್ತಾವುದೋ ಅಂಶವನ್ನು ಸೇರಿಸಿದರೆ ಅದರ ಮೇಲೆ ಹೆಚ್ಚಿನ ಪರಿಣಾಮವೇನೂ ಆಗದು. ಇಲ್ಲಿ ವ್ಯವಸ್ಥೆ ಇದ್ದು ಭಾಗಗಳ ನಡುವೆ ಅನಿವಾರ್ಯ ಸಂಬಂಧವಿರುವುದರಿಂದ ಭಾಗಗಳಲ್ಲಿ ಏನೇ ವ್ಯತ್ಯಾಸವಾದರೂ ಅದು ಸಂಪೂರ್ಣದ ಮೇಲೆ ಗಮನಾರ್ಹ ಪರಿಣಾಮವನ್ನುಂಟುಮಾಡುತ್ತವೆ. ಇಲ್ಲಿ ಪ್ರತಿಯೊಂದು ಭಾಗದ ಲಕ್ಷಣವನ್ನು ಮತ್ತೊಂದು ಭಾಗದ ಲಕ್ಷಣವು ನಿರ್ಧರಿಸುತ್ತದೆ. ಆದುದರಿಂದ ಇಲ್ಲಿಯ ಭಾಗಗಳು ಪರಸ್ಪರ ಅವಲಂಬಿಗಳಾಗಿರುತ್ತವೆ. ಉದಾ : ಒಂದು ಗಡಿಯಾರದಲ್ಲಿ ಚಕ್ರಗಳು, ಸುರುಳಿಗಳು ಮುಂತಾದ ಭಾಗಗಳಿದ್ದು ಅವುಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿರುತ್ತದೆ. ಈ ಭಾಗಗಳಲ್ಲಿ ಯಾವುದೇ ರೀತಿಯ ಬದಲಾವಣೆಯಾದರೂ ಅದು ಸಂಪೂರ್ಣದ ಮೇಲೆ ಪರಿಣಾಮ ಉಂಟುಮಾಡುತ್ತದೆ. ಇಲ್ಲಿ ಪ್ರತಿಯೊಂದು ಭಾಗದ ಲಕ್ಷಣವನ್ನು ಇನ್ನೊಂದು ಭಾಗದ ಲಕ್ಷಣವು ನಿರ್ಧರಿಸುವುದರಿಂದ ಆ ಭಾಗಗಳು ಪರಸ್ಪರ ಅವಲಂಬಿಗಳಾಗಿರುತ್ತದೆ.

ಇದೇ ರೀತಿ ವಿಶ್ವವೂ ಕೂಡ ಪರಸ್ಪರ ಅವಲಂಬಿಗಳಾದ ಭಾಗಗಳಿಂದ ಕೂಡಿದ ಒಂದು ವ್ಯವಸ್ಥೆ ಎಂದು ವಿಜ್ಞಾನದ ನಂಬಿಕೆ. ಈ ಪರಸ್ಪರ ಅವಲಂಬನೆಯನ್ನು ಹಲವಾರು ರೀತಿಯ ಸಂಬಂಧಗಳಲ್ಲಿ ಕಾಣಬಹುದು. ಈ ಸಂಬಂಧಗಳಲ್ಲೆಲ್ಲಾ ಅತ್ಯಂತ ಮುಖ್ಯವಾದುದು ಕಾರ್ಯಕಾರಣ ಸಂಬಂಧ. ಇದು ಪ್ರತಿಯೊಂದು ಘಟನೆಗೂ ಅಥವಾ ವಸ್ತುವಿಗೂ ಒಂದು ಕಾರಣವಿರಬೇಕು ಎಂದು ತಿಳಿಸುತ್ತದೆ. ಈ ನಿಯಮದ ಆಧಾರದಿಂದ ವಿಜ್ಞಾನಿಯು ಅಪರಿಚಿತ ಘಟನೆಗಳ ಅಥವಾ ವಸ್ತುಗಳ ಕಾರಣವನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಾನೆ. ಈ ನಿಯಮದಂತೆ ಕಾರಣ ಮತ್ತು ಕಾರ್ಯಗಳೆಂದು ಭಾವಿಸಿರುವ ಎರಡು ಅಂಶಗಳ ನಡುವೆ ಒಂದರನಂತರ ಮತ್ತೊಂದು ಅನಿವಾರ್ಯವಾಗಿ ಬರುವುದಲ್ಲದೆ ಒಂದು ಮತ್ತೊಂದರ ಕಾರಣವಾಗಲಿ ಅಥವಾ ಪರಿಣಾಮವಾಗಲಿ ಉಂಟಾಗುವ ಸಂಬಂಧವಿರಬೇಕು. A ಮತ್ತು B ಗಳೆಂಬ ಅಂಶಗಳು ಕ್ರಮವಾಗಿ ಕಾರಣ ಮತ್ತು ಕಾರ್ಯಗಳೆಂದು ಪರಿಗಣಿಸಲ್ಪಟ್ಟರೆ A ಇದ್ದಾಗಲೆಲ್ಲಾ B ಬರಬೇಕು ಅಥವಾ B ಇದ್ದಾಗಲೆಲ್ಲಾ ಅದು A ನಿಂದಲೇ ಬಂದಿರಬೇಕು ಎನ್ನುವುದು ಈ ನಿಯಮದ ಭಾವ.

ಆದರೆ ಹ್ಯೂಮನ ಪ್ರಕಾರ ನಾವು ನೋಡುವ ವಸ್ತುಗಳು ನಮ್ಮ ಅನುಭವಗಳ ಒಂದು ಸರಣಿಯಾಗಿದ್ದು ಒಂದು ಅನುಭವದ ನಂತರ ಮತ್ತೊಂದು, ಅದರ ನಂತರ ಇನ್ನೊಂದು, ಹೀಗೆ ಅವುಗಳ ಚಲನೆ ಅವಿಶ್ರಾಂತವಾಗಿ ನಡೆಯುತ್ತಲೇ ಇರುತ್ತದೆ. ಇಷ್ಟು ಮಾತ್ರವಲ್ಲದೇ ನಮಗೆ ಯಾವುದೇ ರೀತಿಯ ಅನಿವಾರ್ಯ ಸಂಬಂಧವು ಈ ಅನುಭವಗಳ ನಡುವೆ ಕಂಡುಬರುವುದಿಲ್ಲ. ಅನುಭವವಾದದ ತತ್ವಗಳನ್ನು ಒಪ್ಪುವುದಾದರೆ ನಾವು ಅನುಭವಿಸುವುದು ಕೇವಲ ಸರಳ ಇಂದ್ರಿಯಾನುಭವಗಳು ಮಾತ್ರ. ಉದಾ : ಒಂದು ಬಣ್ಣ, ಒಂದು ವಾಸನೆ, ಒಂದು ರುಚಿ ಮುಂತಾದ ಅನುಭವಗಳು ಮಾತ್ರ. ಅಂದರೆ ನಮ್ಮ ಜ್ಞಾನೇಂದ್ರಿಯಗಳು ಕಾರ್ಯಕಾರಣ ಸಂಬಂಧವು ಸೇರಿದಂತೆ ಯಾವ ಅನಿವಾರ್ಯ ಸಂಬಂಧವನ್ನು ನಮಗೆ ತಿಳಿಸಲಾರವು. ವಿಜ್ಞಾನದ ಗೃಹೀತ ತತ್ವಗಳಾದ ಕಾರ್ಯಕಾರಣ ನಿಯಮ ಮತ್ತು ಪ್ರಕೃತಿಯ ಏಕತಾ ನಿಯಮಗಳ ಸಾಧ್ಯತೆ ಇಲ್ಲವಾದರೆ ವಿಜ್ಞಾನದ ಅಡಿಪಾಯವೇ ಕಳಚಿ ಬಿದ್ದಂತಾಗುತ್ತದೆ. ಆದುದರಿಂದ ಹ್ಯೂಮನ ಪ್ರಕಾರ ಇಂದ್ರಿಯಾನುಭವದ ತತ್ವಗಳನ್ನು ಒಪ್ಪಿದ್ದೇ ಆದರೆ ವಿಜ್ಞಾನದ ಇರುವಿಕೆಯನ್ನು ನಿರಾಕರಿಸಲೇಬೇಕಾಗುತ್ತದೆ.

ಹ್ಯೂಮ್ ಹೇಳುವುದು ನಿಜವಾದರೆ ಒಂದು ಘಟನೆ ಇಂತಹುದೇ ಕಾರಣದಿಂದ ಉಂಟಾಯಿತೆಂದು ನಮಗೆ ಹೇಗೆ ತಿಳಿಯುತ್ತದೆ ಎಂಬ ಪ್ರಶ್ನೆ ಹುಟ್ಟುತ್ತದೆ. ಉದಾ : ಹೊಗೆ ಇದ್ದಲ್ಲಿ ಬೆಂಕಿ ಇದೆ, ಅಥವಾ ಬೆಂಕಿ ಇದ್ದಲ್ಲಿ ಶಾಖವಿದೆ ಎಂಬ ವಿಚಾರ ನಮಗೆ ಹೇಗೆ ತಿಳಿಯುತ್ತದೆ ? ಹ್ಯೂಮನ ಪ್ರಕಾರ ನಮ್ಮ ಇಂತಹ ತಿಳುವಳಿಕೆಗೆ ನಮ್ಮ ಅಭ್ಯಾಸ ಮತ್ತು ರೂಢಿಗಳೇ ಕಾರಣ. ಹಿಂದೆ ನಮ್ಮ ಅನುಭವದ ಉದ್ದಕ್ಕೂ ನಾವು ಹೊಗೆ ಇದ್ದಲ್ಲಿ ಬೆಂಕಿ ಇರುವಂತೆಯೂ ಅಥವಾ ಶಾಖವು ಬೆಂಕಿಯನ್ನು ಅನುಸರಿಸುವಂತೆ

ನೋಡಿರುವುದರಿಂದ ಅದು ಯಾವಾಗಲೂ ಅದೇ ರೀತಿ ನಡೆಯಬೇಕೆಂದು ಅಪೇಕ್ಷಿಸುತ್ತೇವೆ. ಈ ಅಪೇಕ್ಷೆ ನಿಜವಾದಾಗ ಅವುಗಳ ನಡುವೆ ಅನಿವಾರ್ಯ ಸಂಬಂಧ ಅಥವಾ ಕಾರ್ಯಕಾರಣ ಸಂಬಂಧವಿದೆ ಎಂದು ಭಾವಿಸುತ್ತೇವೆ. ಈ ದೃಷ್ಟಿಯಿಂದ ಕಾರ್ಯಕಾರಣ ನಿಯಮವು ಒಂದು ಬಾಹ್ಯ ಸತ್ಯವಾಗಿರದೇ ಆಂತರಿಕವಾದ ನಮ್ಮ ಮನಸ್ಸಿನ ಒಂದು ಭಾವನೆಯೇ ಆಗಿದೆ. ಪ್ರಕೃತಿಯ ಈ ಏಕತಾನಿಯಮವು ಈ ಹೇಳಿಕೆಗೆ ಅಪವಾದವಲ್ಲ. ಈ ಗೃಹೀತ ನಿಯಮಗಳ ನಿರಾಕರಣೆಯು ಅನುಭವವಾದದ ತತ್ವಗಳನ್ನು ಸಂಪೂರ್ಣವಾಗಿ ಅನುಸರಿಸಿದರೆ ವಿಜ್ಞಾನದ ಸಾಧ್ಯತೆಯಿಲ್ಲ ಎಂಬುದಾಗಿ ಸೂಚಿತವಾಗುತ್ತದೆ.

ಹ್ಯೂಮ್ ಈ ರೀತಿ ಪ್ರಪಂಚದ ಸರ್ವ ವಸ್ತುಗಳನ್ನು ಮತ್ತು ಅವುಗಳ ಜ್ಞಾನದ ಸಾಧ್ಯತೆಯನ್ನು ನಿರಾಕರಿಸಿದರೂ ಈ ನಿರಾಕರಣೆ ಆತನ ಅಭಿಲಾಷೆಯಾಗಿರಲಿಲ್ಲ. ಅನುಭವವಾದದ ಮಿತಿ ಹಾಗೂ ಆ ವಾದವನ್ನು ಅನುಸರಿಸುವುದರ ಪರಿಣಾಮವನ್ನು ತೋರಿಸುವುದೇ ಆತನ ತತ್ವ ನಿರೂಪಣೆಯ ಮುಖ್ಯ ಧ್ಯೇಯವಾಗಿದ್ದಿತು. ಅನುಭವವಾದದ ತತ್ವಗಳನ್ನು ಅನುಸರಿಸಿದರೆ ನಮ್ಮ ವಿಚಾರವು ಸಂದೇಹವಾದದಲ್ಲಿಯೇ ಕೊನೆಗೊಳ್ಳುವುದೆಂದು ಆತನು ನಿರೂಪಿಸಿದನು.

o—O—o

"ಪ್ರಾಥಮಿಕ ಪ್ರಜ್ಞೆಯಿಂದ ತಾರ್ಕಿಕ ಪ್ರಜ್ಞೆಯವರೆಗೆ ಸಾಕ್ಷರತೆ ಕೈಗೊಳ್ಳುವ ಪ್ರವಾಸವೇ ಶಿಕ್ಷಣ"

ಫಯಲೋ

ಪಾಶ್ಚಾತ್ಯ ಭಾಷೆಗಳಲ್ಲಿ ಮುಖ್ಯವಾಗಿ ಇಂಗ್ಲಿಷ್ ಭಾಷೆಯಲ್ಲಿ 19ನೇ ಶತಮಾನದ ಮಧ್ಯಭಾಗದವರೆಗೆ, ಅಂದರೆ ಆಧುನಿಕ ವಿಜ್ಞಾನಕ್ಕೆ ಇಂದಿನ ರೂಪ ಕೊಟ್ಟವರಲ್ಲಿ ಮೊದಲಿಗರೆನ್ನಬಹುದಾದ ಗೆಲಿಲಿಯೊ, ನ್ಯೂಟನ್ ಮುಂತಾದವರ ಸಂಶೋಧನೆಗಳ ಫಲವಾಗಿ ವಿಜ್ಞಾನ ಮನುಷ್ಯನ ಜ್ಞಾನಾನ್ವೇಷಣೆಯ ಒಂದು ವಿಶೇಷ ಶಾಖೆಯಾಗಿ ಬೆಳೆಯಲು ಪ್ರಾರಂಭಿಸಿದ ನೂರಿನ್ನೂರು ವರ್ಷಗಳವರೆಗೆ ಜನಪ್ರಿಯ ವಿಜ್ಞಾನ ಎಂದು ಕರೆಯಬಹುದಾದ ಸಾಹಿತ್ಯ ಪ್ರಕಾರ ಜನ್ಮ ತಾಳಲಿಲ್ಲ. ಡಾರ್ವಿನ್ನನ ಅನುಯಾಯಿಗಳಲ್ಲಿ ಪ್ರಮುಖನಾದ ಥಾಮಸ್ ಹಕ್ಸ್ಲೆಯನ್ನು ಜನಪ್ರಿಯ ವಿಜ್ಞಾನದ ಆದ್ಯಪ್ರವರ್ತಕ ಎನ್ನಬಹುದು. ಡಾರ್ವಿನ್ನನ ವಿಕಾಸವಾದದ ಪರಿಣಾಮವಾಗಿ ಯೂರೋಪ್ ದೇಶಗಳಲ್ಲಿ ವಿಕಸನ ವಾದವನ್ನು ಕುರಿತು ದೊಡ್ಡ ವಿವಾದವೆದ್ದಿತು. ಆಗ ವಿಜ್ಞಾನದ ಒಳವ್ಯವಹಾರಗಳು ಹೊರಗಿನವರ ಗಮನ ಸೆಳೆದವು. ವಿಜ್ಞಾನದ ಬಗ್ಗೆ ಸಾಮಾನ್ಯ ಜನತೆಗೆ ತಿಳುವಳಿಕೆ ಕೊಡಬೇಕಾದ ಅಗತ್ಯ ವಿಜ್ಞಾನಿಗಳಿಗೆ ಮನವರಿಕೆಯಾಯಿತು. ಆ ಕೆಲಸವನ್ನು ಹಕ್ಸ್ಲೆ ಅತ್ಯಂತ ಸಮರ್ಥವಾಗಿ ನೆರವೇರಿಸಿದ. ವಿಜ್ಞಾನದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ವಿಜ್ಞಾನದ ಬಗ್ಗೆ ನಿರ್ಲಕ್ಷ್ಯ ಭಾವನೆ ತಾಳಿದ್ದ ಸಾಮಾನ್ಯ ಜನತೆಯನ್ನು ಹೊಡೆದೆಬ್ಬಿಸಿದ ಇಂಥ ಹಲವಾರು ನಿದರ್ಶನಗಳನ್ನು ಕಾಣಬಹುದು.

ಕರ್ನಾಟಕ ವಿಷಯ ವಿಶ್ವಕೋಶ, ಪು. ೧೮೭

ಕೆ. ಕೇಶವಮೂರ್ತಿ

ಸೂರ್ಯೋಪಾಸನೆಯ ಇತಿಹಾಸ

'ಉಪಾಸನೆ' ಎಂಬ ಪದವು
"ಉಪಸ್ಯ ಯೋ ಆಸನಂ ಉಪಾಸನಂ"
ಎಂಬುದರಿಂದ ಆಗಿದೆ. ಅಂದರೆ ಸೂರ್ಯನನ್ನು ನಾವು ಸಮೀಪಿಸುವುದು ಎಂದರ್ಥ. ಒಂದು ವೇದಮಂತ್ರದ ಪ್ರಕಾರ ಸೂರ್ಯನೇ ಪ್ರತ್ಯಕ್ಷ ದೈವ. ಕಣ್ಣಿಗೆ ಕಾಣದ ದೈವ ವನ್ನು ಆರಾಧಿಸುವುದಕ್ಕಿಂತ ಕಣ್ಣಿಗೆ ಕಾಣುವ ದೇವರನ್ನು ಪೂಜಿಸುವುದು ಸಾಧುವಲ್ಲವೇ? ಈ ದಿಶೆಯಲ್ಲಿ ಸೂರ್ಯೋಪಾಸನೆಗೆ ಒಂದು ವಿಶಿಷ್ಟ ಹಾಗೂ ಮಹತ್ವದ ಸ್ಥಾನವಿದೆ.

ಅ) ವಿದೇಶಗಳಲ್ಲಿ ಸೂರ್ಯಪೂಜೆ :—

ವಿಶ್ವದ ಇತಿಹಾಸವನ್ನು ಅವಲೋಕಿಸಿದಾಗ ಬಹು ಪೂರ್ವದಲ್ಲಿಯೇ ಪ್ರಪಂಚದ ಎಲ್ಲ ದೇಶಗಳಲ್ಲಿಯೂ, ಎಲ್ಲ ಧರ್ಮದವರಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಸೂರ್ಯೋಪಾಸನೆಯು ವ್ಯಾಪಕವಾಗಿ ಪ್ರಚಲಿತವಾಗಿದ್ದಿತೆಂಬ ಅಂಶ ತಿಳಿದು ಬರುತ್ತದೆ. ಇದಕ್ಕೆ ಕಾರಣ ಜನತೆಗೆ ಸೂರ್ಯನಲ್ಲಿದ್ದ ಧಾರ್ಮಿಕ ಭಾವನೆ, ಹಾಗೂ ಉಪಕಾರ ಸ್ಮರಣೆ. ಸೂರ್ಯನಿಲ್ಲದೆ ಮಳೆಯಿಲ್ಲ ; ಮಳೆಯಿಲ್ಲವೆ ಬೆಳೆಯಿಲ್ಲ ; ಬೆಳೆಯಿಲ್ಲದೆ ಆಹಾರ ವಿಲ್ಲ ; ಆಹಾರವಿಲ್ಲದೆ ಜೀವ ಪೋಷಣೆಯಿಲ್ಲ. ಹೀಗೆ ಸೂರ್ಯ ಜೀವಕಾರಕನಾದ. ಋತುಭೇದಗಳುಂಟಾಗುವುದು, ಹಗಲು ರಾತ್ರಿಗಳಾಗುವುದು, ಜೀವಿ ಬೆಳೆಯುವುದು, ಹಣ್ಣು ಮಾಗುವುದು, ಹೂ ಅರಳುವುದು, ಹಕ್ಕಿ ಹಾರುವುದು – ಎಲ್ಲಕ್ಕೂ ಸೂರ್ಯನೇ ಕಾರಣನಾದ. ಪ್ರತಿನಿತ್ಯವೂ ತಪ್ಪದೆ ಉದಯಿಸಿ ಜಗತ್ತಿನ ಅಂಧಕಾರವನ್ನು ಹೋಗ ಲಾಡಿಸಿ, ಶಾಖ ಮತ್ತು ಬೆಳಕನ್ನು ಕೊಡುತ್ತಿದ್ದ ಸೂರ್ಯನು ಅವರ ಪಾಲಿಗೆ ಸೂರ್ಯ ದೇವನಾಗಿ ಪರಿಣಮಿಸಿ ಪೂಜಾರ್ಹನಾದುದರಲ್ಲಿ ಆಶ್ಚರ್ಯವೇನಿಲ್ಲ.

ಈಜಿಪ್ಟ್ :—

ಈಜಿಪ್ಟ್ ದೇಶದವರು ಸೂರ್ಯನನ್ನು ರೇ (Re) ಎಂಬ ಹೆಸರಿನಿಂದ ಕರೆದು ಆತನನ್ನು ಎಲ್ಲರಿಗಿಂತ ಪ್ರಮುಖನಾದ ದೇವತೆಯೆಂದು ಪರಿಗಣಿಸಿ ಪೂಜಿಸುತ್ತಿದ್ದರು.

ಸೂರ್ಯನ ಬಲಗಣ್ಣು ಅಪ್ಲಿಯು ತತ್ವಜಿಜ್ಞಾಸುಗಳ ಚಿಂತನೆಯ ವಿಷಯವಾಗಿದ್ದಿತು. ಸೂರ್ಯನುಂಡಲವನ್ನು 'ಅಟನ್' ಎಂದು ಕರೆದು ಅದಕ್ಕೆ ಪರಮ ಪ್ರಾಮುಖ್ಯತೆಯನ್ನು ಕೊಟ್ಟಿದ್ದರು.

ಸುಮೇರಿಯನ್ ಮತ್ತು ಸೆಮಿಟಿಕ್ :—

ಈ ಜನಾಂಗದವರು ಸೂರ್ಯನನ್ನು ನ್ಯಾಯದೇವತೆಯೆಂದು ಪರಿಗಣಿಸಿದ್ದರು. ಅಲ್ಲದೆ ಸೂರ್ಯನು ಅವರ ಪಾಲಿಗೆ ಪಾಪಿಗಳನ್ನು ಶಿಕ್ಷಿಸುವ ಮತ್ತು ಭವಿತವ್ಯವನ್ನು ತಿಳಿಸುವವನೂ ಆಗಿದ್ದನು.

ಪೆರು ಮತ್ತು ಮೆಕ್ಸಿಕೋ :—

ಪೆರು ಮತ್ತು ಮೆಕ್ಸಿಕೋ ದೇಶದವರೂ ಮತ್ತು ಅಜ್‌ಟೆಕ್ ಜನಾಂಗದವರೂ ಈಗ್ಗೆ ೪೦೦ ವರ್ಷಗಳ ಹಿಂದಿನವರೆಗೆ ಒಗೆಜಗೆಯೂವ ಸೂರ್ಯನೃತ್ಯ (Sun dance) ಗಳಿಂದಲೂ ಮತ್ತು ಮಾನವ ಬಲಿಯಿಂದಲೂ ಸೂರ್ಯನನ್ನು ಪೂಜಿಸುತ್ತಿದ್ದರೆಂಬುದಕ್ಕೆ ದಾಖಲೆಗಳಿವೆ.

ಜಪಾನ್ :—

ಜಪಾನ್ ದೇಶದವರು ಸೂರ್ಯನನ್ನು 'ಇಸ್ನಗಿ' (Iznagi) ಎಂಬ ಹೆಸರಿನಿಂದ ಪರಾದೇವತೆಯೆಂದು ಭಾವಿಸಿ ವಿಶೇಷ ಭಕ್ತಿಭಾವದಿಂದ ಪೂಜಿಸುತ್ತಿದ್ದರು.

ಗ್ರೀಕ್ ಮತ್ತು ರೋಮನ್ :—

ಗ್ರೀಕ್ ಮತ್ತು ರೋಮನ್ ಜನಾಂಗದವರು ಸೂರ್ಯನ ವಾರವಾದ ಭಾನುವಾರವನ್ನು ಪವಿತ್ರ ದಿನವೆಂದು ಭಾವಿಸಿದ್ದರು, ಥಿಯೋಡೋಸಿಯಸ್ ಎಂಬ ರಾಜನು ಭಾನುವಾರದ ದಿನ ನೃತ್ಯ, ಗಾನ ಮೊದಲಾದ ಮನೋರಂಜನೆಗಳನ್ನೂ ಮತ್ತು ನ್ಯಾಯಾಲಯದ ಕಾರ್ಯಕ್ರಮಗಳನ್ನೂ ನಿಷೇಧಿಸಿದ್ದ.

ಇಸ್ಲಾಂ :—

ಇಸ್ಲಾಂ ಮತದಲ್ಲಿ ಸೂರ್ಯನನ್ನು "ಇಲ್ಮ್ ಅಹಕಾಂ ಅನ್ ನಜೂಂ"ನ ಕೇಂದ್ರ ಎಂದು ಭಾವಿಸಲಾಗಿದೆ. ಮ್ಲೇಚ್ಛ ವಿದ್ವಾಂಸರು ಸೂರ್ಯನನ್ನು ಆದಿಚೇತನನೆಂದು ಭಾವಿಸುತ್ತಾರೆ. ಇವರು ಸೂರ್ಯನನ್ನು 'ಹ್ಲಿಯಾಸ್' (Hlios) ಎಂದು ಕರೆಯುತ್ತಿದ್ದರು.

ಚೀಣಾ :—

ಚೀಣಾ ದೇಶದವರು ಸೂರ್ಯನನ್ನು 'ಯಾಂಗ್' (Yang) ಎಂದು ಕರೆಯುತ್ತಾರೆ. ಇವರು ಸೂರ್ಯನನ್ನು ಆಧಾರವಾಗಿಟ್ಟುಕೊಂಡು ಖಗೋಳ ಶಾಸ್ತ್ರವನ್ನು ರಚಿಸಿ ಅದನ್ನು 'ಜ್ಯೋತಿರ್ವಿದ್ಯಾ' ಎಂದು ಪ್ರಚಾರಕ್ಕೆ ತಂದರು. ಲೀಕಿ (Leeki) ಎಂಬ ಚೀಣಾ ವಿದ್ವಾಂಸ ಬರೆದಿರುವ "ಕಿ ಅಹೊ ತೇ ಹಾ ಸೇಂಗ" ಎಂಬ ಪುಸ್ತಕದಲ್ಲಿ ಸೂರ್ಯನನ್ನು 'ಸ್ವರ್ಗ ಪುತ್ರ' ಎಂದು ಕರೆದಿದ್ದಾನೆ.

ಉತ್ತರ ಅಮೇರಿಕ :—

ಉತ್ತರ ಅಮೇರಿಕದಲ್ಲಿ ಸೂರ್ಯನನ್ನು ಅಟ್ನ (Atna) ಎಂದೂ, ಆಫ್ರಿಕಾದವರು ವೈಟ್ (White) ಎಂದೂ ಪರ್ಶಿಯನ್ ಚರ್ಚ್‌ಗಳಲ್ಲಿ 'ಮಿತ್ರ'ನೆಂದೂ ಪೂಜಿಸುತ್ತಿದ್ದರು.

ಕ್ರಿಶ್ಚಿಯನ್ ಜನಾಂಗ :—

ಕ್ರಿಶ್ಚಿಯನ್ನರ ಪವಿತ್ರ ಗ್ರಂಥವಾದ 'ನ್ಯೂ ಟೆಸ್ಟಮೆಂಟ್'ನಲ್ಲಿ ಸೂರ್ಯನ ಧಾರ್ಮಿಕ ಮಹತ್ವದ ವರ್ಣನೆ ಆಡಿಗಡಿಗೂ ಬಂದಿದೆ. ಸಂತ ಪಾಲ್ ಎಂಬುವನು ಭಾನುವಾರ ದಾನಾದಿ ಸತ್ಕಾರ್ಯಗಳಿಗೆ ಪವಿತ್ರ ದಿನವೆಂದು ಭಾವಿಸಿದ್ದನು. ಇಂದಿಗೂ ಕ್ರಿಶ್ಚಿಯನ್ನರು ಭಾನುವಾರವನ್ನು 'ಸನ್‌ಡೇ' (Sunday) ಎಂದು ಕರೆದು ಅಂದು ಸಾರ್ವತ್ರಿಕ ರಜಾ ದಿನವನ್ನಾಗಿ ಘೋಷಿಸಿ ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಸೂರ್ಯಪೂಜೆಯ ಅವನತಿ :—

ಈ ಮೇಲೆ ಹೇಳಿದ ವಿಷಯವೆಲ್ಲವೂ ಗತಕಾಲದ ವೈಭವವೆಂದು ಬೇರೆ ಹೇಳಬೇಕಾಗಿಲ್ಲ. ಕೆಲವು ಅವೈದಿಕ ಮತಗಳು ಆ ದೇಶಗಳಲ್ಲಿ ಸೂರ್ಯ ಪೂಜೆಯನ್ನು ಮೂಲೋತ್ಪಾಟನ ಮಾಡಿವೆ. ಸೂರ್ಯನ ಬಗ್ಗೆ ಹಿಂದೆ ಇದ್ದ ಆ ಧಾರ್ಮಿಕ ಭಾವನೆ ಈಗ ಅಲ್ಲೆಲ್ಲಿಯೂ ಉಳಿದಿರುವಂತೆ ಕಾಣುವುದಿಲ್ಲ.

ಆ) ಭಾರತದಲ್ಲಿ ಸೂರ್ಯೋಪಾಸನೆ :—

ಭಾರತದಲ್ಲಿ ಸೂರ್ಯೋಪಾಸನೆಯು ಕ್ರಿ. ಪೂ. ೬೦೦೦ ವರ್ಷಗಳ ಹಿಂದೆಯೇ ಪ್ರಚಲಿತವಾಗಿದ್ದಿತೆಂದು ಇತಿಹಾಸ ಪುಟಗಳಿಂದ ತಿಳಿದು ಬರುತ್ತದೆ. ಪ್ರಾಚೀನ ಭಾರತದಲ್ಲಿ 'ಸೂರ್ಯವಂಶ'ವೆಂಬ ಪ್ರಸಿದ್ಧವಾದ ಒಂದು ವಂಶವೇ ಇದ್ದಿತು. ಈ ವಂಶದ ಆದಿಪುರುಷ ಸೂರ್ಯನೇ ಆದುದರಿಂದ ಇದಕ್ಕೆ 'ಸೂರ್ಯವಂಶ'ವೆಂದು ಹೆಸರಾಯಿತು. ರಾಮಾಯಣದಲ್ಲಿ ಬರುವ ಶ್ರೀ ರಾಮಚಂದ್ರನು ಈ ವಂಶಕ್ಕೆ ಸೇರಿದವನು.

ಇಂದಿಗೂ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು ಗಾವಡಗೆರೆ ಗ್ರಾಮದಲ್ಲಿ ತಮ್ಮ ಹೆಸರಿನ ಮುಂದೆ 'ಸೂರ್ಯವಂಶಿ' ಎಂಬ ಅಡ್ಡ ಹೆಸರನ್ನು ಇಟ್ಟುಕೊಳ್ಳುವ ಮರಾಠೀ ಜನಾಂಗವೊಂದಿದೆ. ಈ ಅಡ್ಡ ಹೆಸರು ಇವರಿಗೆ ಹೇಗೆ ಬಂದಿತು ಎಂಬ ಮೂಲ ತಿಳಿಯದಾಗಿದೆ.

ಎರಡನೇ ಜೀವಿತ ಗುಪ್ತನ ಕಾಲದ್ದೆಂದು ಹೇಳಲಾಗುವ ಶಿಲಾ ಶಾಸನವೊಂದು ಕಲ್ಕತ್ತೆಯ ಸರ್ವಸಂಗ್ರಹಾಲಯದಲ್ಲಿದೆ. ಈ ಶಾಸನದಲ್ಲಿ ಶ್ರೀಕೃಷ್ಣನ ಮಗನಾದ ಸಾಂಬನು ತನ್ನ ತಂದೆಯ ಅನುಮತಿಯನ್ನು ಪಡೆದು ಶಾಖದ್ವೀಪ (Iran) ದಿಂದ 'ಮಗ' ಎಂಬ ಸೂರ್ಯೋಪಾಸಕ ಬ್ರಾಹ್ಮಣನನ್ನು ಭಾರತಕ್ಕೆ ಕರೆತಂದಿದ್ದ ಎಂಬ ಉಲ್ಲೇಖವಿದೆ. ಇಂದಿಗೂ ರಾಜಪುಟಾಣದಲ್ಲಿ 'ಮಗ್' ಬ್ರಾಹ್ಮಣವಂಶದವರು ಇದ್ದಾರೆಂದು ಹೇಳಲಾಗಿದೆ.

ರಾಜ ಹರ್ಷವರ್ಧನ ಮತ್ತು ಆತನ ಪೂರ್ವಿಕರು ಸೂರ್ಯೋಪಾಸಕರಾಗಿದ್ದರು.

'ಅಯಿನೇ ಅಕ್ಬರಿ' ಎಂಬ ಪರ್ಶಿಯಾ ಭಾಷೆಯ ಗ್ರಂಥವೊಂದನ್ನು ಬ್ಲಾಕ್ ಮೈನ್ (Block Main) ಎಂಬುವನು 1965 ರಲ್ಲಿ ಇಂಗ್ಲಿಷ್ ಭಾಷೆಗೆ ಭಾಷಾಂತರ ಮಾಡಿದ್ದಾನೆ. ಇದರಲ್ಲಿ ಅಕ್ಬರನು ಸೂರ್ಯೋಪಾಸಕನಾಗಿದ್ದನೆಂಬುದಕ್ಕೆ ವಿವರಗಳಿವೆ. ಅವನ ಮಗ ಜಹಾಂಗೀರ್ ಕೂಡ ತನ್ನ ರಾಜ್ಯದಲ್ಲಿ ಕಾಲಗಣನೆಗೆ ಸೌರಮಾನ ಪದ್ಧತಿಯನ್ನು ಜಾರಿಗೆ ತಂದಿದ್ದನಂತೆ. 'ಸೌರಮಾನ ಪದ್ಧತಿ' ಎಂದರೆ ಸೂರ್ಯನ ಚಲನೆಯ ರೀತ್ಯಾ ಕಾಲಮಾನವನ್ನು ಅಳೆಯುವುದು.

ದ್ರಾವಿಡರು ಸೂರ್ಯನನ್ನು ಪರಮೇಶ್ವರನೆಂದು ತಿಳಿದು ಪೂಜಿಸುತ್ತಿದ್ದರು.

ಸಂಧ್ಯೋಪಾಸನೆ :

ಇಂದಿಗೂ ಸಹ ವೈದಿಕ ಧರ್ಮದವರು ಸೂರ್ಯನನ್ನು ದಿನಕ್ಕೆ ಮೂರುಬಾರಿ ಉಪಾಸಿಸುತ್ತಾರೆ. ಇದನ್ನು ಸಂಧ್ಯೋಪಾಸನೆ' ಎಂದು ಕರೆಯುತ್ತಾರೆ. ಈ ಉಪಾಸನೆಯು ಸೂರ್ಯನ ಗತಿಯನ್ನು ಅವಲಂಬಿಸಿದೆ. ಸೂರ್ಯನು ಉದಯಿಸುವ ವೇಳೆ, ಮಧ್ಯಾಹ್ನ ಮತ್ತು ಅಸ್ತಮಯವಾಗುವ ವೇಳೆಗಳನ್ನು 'ಸಂಧ್ಯಾಕಾಲ' ಎಂದು ಕರೆಯುತ್ತಾರೆ. "ಸಂಧೌಭಾವಾ ಸಂಧ್ಯಾ" ಎಂಬ ವ್ಯುತ್ಪತ್ತಿಯ ಪ್ರಕಾರ ಸಂಧಿಕಾಲದಲ್ಲಿ ಉತ್ಪನ್ನವಾಗುವ ಪರಮೇಶ್ವರೀ ಶಕ್ತಿಗೆ 'ಸಂಧ್ಯಾ' ಎಂದು ಹೆಸರು. ಉದಯಸಂಧ್ಯೆಯನ್ನು 'ಪ್ರಾತಃಸಂಧ್ಯಾ' ಎಂದೂ, ನಡುಸಂಧ್ಯೆಯನ್ನು 'ಮಧ್ಯಾಹ್ನ ಸಂಧ್ಯಾ' ಎಂದೂ ಅಸ್ತಮಾನದ ಸಂಧ್ಯೆಯನ್ನು 'ಸಾಯಂ ಸಂಧ್ಯಾ' ಎಂದೂ ಹೇಳುತ್ತಾರೆ. ಈ ಸಂಧ್ಯೆಗೆ ವಂದಿಸುವುದನ್ನೇ 'ಸಂಧ್ಯಾ ವಂದನೆ' ಎನ್ನುತ್ತಾರೆ.

ವ್ಯಾಸಸ್ಮೃತಿಯ ರೀತ್ಯಾ 'ಸಂಧ್ಯೆ' ಎಂದರೆ ಸೂರ್ಯನೆಂದೇ ಅರ್ಥ. ಆದುದರಿಂದ ಸಂಧ್ಯಾವಂಥನೆ ಎಂದರೆ ಸೂರ್ಯವಂದನೆಯೇ.

"ಯಃ ಸಂಧ್ಯಾಮುಪಾಸತೇ ಬ್ರಹ್ಮೈವ ತದುಪಾಸತೇ"

ಎಂಬ ಶ್ರುತಿವಾಕ್ಯದಂತೆ ಸಂಧ್ಯೋಪಾಸನೆ ಎಂದರೆ ಬ್ರಹ್ಮನ ಉಪಾಸನೆಯೇ ಆಗುತ್ತದೆ.

"ಸಂಧ್ಯೇತಿ ಸೂರ್ಯಗ್ಂ ಬ್ರಹ್ಮ"

ಎಂಬ ವ್ಯಾಸಸ್ಮೃತಿಯ ರೀತ್ಯಾ ಆ ಬ್ರಹ್ಮನೇ ಸೂರ್ಯ

"ಯಾ ಸಂಧ್ಯಾ ಸ್ಸೈವ ಗಾಯತ್ರೀ ಸಚ್ಚಿದಾನಂದ ರೂಪಿಣೀ"

ಅಂದರೆ ಯಾವಳು ಸಂಧ್ಯೆಯೋ ಅವಳೇ ಗಾಯತ್ರಿಯು. ಸಂಧ್ಯೆಯು ಸೂರ್ಯನಾದ ಮೇಲೆ ಗಾಯತ್ರಿಯೂ ಸಹ ಸೂರ್ಯನೇ. ಒಟ್ಟಿನಲ್ಲಿ ವಿಶ್ವಾತ್ಮನ ಉಪಾಸನೆಯೇ ಸಂಧ್ಯೋಪಾಸನೆ. ಪ್ರಕೃತಿಯ ಕಾಲಭೇದಗಳಿಗೆ ಸೂರ್ಯನೇ ಕಾರಣನಾದುದರಿಂದ ಸೂರ್ಯನನ್ನು 'ಸವಿತೃ' ಎಂದೂ ಸಂಬೋಧಿಸುತ್ತಾರೆ.

ಅರ್ಘ್ಯ ಪ್ರದಾನ :

ಸಂಧ್ಯಾವಂದನೆಯಲ್ಲಿ 'ಅರ್ಘ್ಯಪ್ರದಾನವೆಂಬ ಒಂದು ಕರ್ಮವಿದೆ. ಸೂರ್ಯ ದೇವನಿಗೆ ಎರಡೂ ಬೊಗಸೆಗಳಲ್ಲಿ ಜಲವನ್ನು ಮಂತ್ರ ಪುರಸ್ಸರವಾಗಿ ನೀಡುವುದೇ 'ಅರ್ಘ್ಯ ಪ್ರದಾನ.' ಆಗ ಹೇಳುವ ಈ ಮಂತ್ರ ಸೂರ್ಯಪರವಾದುದು.

ಓಂ ಭೂರ್ಭುವಸ್ಸುವಃ ।
ತತ್ಸವಿತುರ್ವರೇಣ್ಯಂ । ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ॥

"ವಿಶ್ವಕರ್ತನೂ, ಜಗದ್ವಂದ್ಯನೂ, ಪಾಪ ಹಾಗೂ ಅಜ್ಞಾನ ಪರಿಹಾರಕನೂ ಆದ ಆ ಸವಿತೃದೇವನನ್ನೂ ಆತನ ಜ್ಞಾನತೇಜಸ್ಸನ್ನೂ ಧ್ಯಾನ ಮಾಡುತ್ತೇನೆ. ಆತನು ನಮ್ಮ ಬುದ್ಧಿಶಕ್ತಿಯನ್ನು ಪ್ರಚೋದಿಸಲಿ" ಈ ಮಂತ್ರವನ್ನೇ ಗಾಯತ್ರಿಮಂತ್ರವೆಂದು ಕರೆಯುತ್ತಾರೆ.

"ನ ಗಾಯತ್ರ್ಯಾಃ ಪರಂ ಮಂತ್ರಂ"

ಎಂದು ಹೇಳಿ ಗಾಯತ್ರಿ ಮಂತ್ರಕ್ಕೆ ಸರಿಸಮನಾದ ಮಂತ್ರ ಬೇರೊಂದಿಲ್ಲವೆಂದಿದ್ದಾರೆ.

ಸೂರ್ಯೋಪಸ್ಥಾನ :

ಸಂಧ್ಯಾವಂದನೆಯ ಕಾಲದಲ್ಲಿ ಸೂರ್ಯನಿಗೆದುರಾಗಿ ನಿಂತು ಹೇಳುವ ಮಂತ್ರವೇ 'ಸೂರ್ಯೋಪಸ್ಥಾನ'. ಇದು ತ್ರಿಕಾಲಗಳಲ್ಲಿಯೂ ಬೇರೆಬೇರೆಯಾಗಿದೆ. 'ಉಪಸ್ಥಾನ' ಎಂದರೆ 'ಸಮೀಪದಲ್ಲಿ ಇರುವಿಕೆ' ಎಂದರ್ಥ. 'ಸೂರ್ಯೋಪಸ್ಥಾನ' ವೆಂದರೆ ನಾವು ಸೂರ್ಯನನ್ನು ಸಮೀಪಿಸುವುದು ಅಂದರೆ ಆತನಿಗೆ ಪ್ರಿಯರಾಗುವುದು ಎಂದರ್ಥ.

ಪೂರ್ವದಿಕ್ಕಿನಲ್ಲಿ ಸೂರ್ಯತಾರಾದಿ ದಿವ್ಯ ಜ್ಯೋತಿಗಳು ಉದಯಿಸಿ ಅಂತರಿಕ್ಷದಲ್ಲಿ ಪ್ರಕಾಶಿಸುತ್ತಾ ಮೇಲೇರಿ ಬರುತ್ತವೆ. ಅದರಂತೆ ಮಾನವನೂ ಸಹ ತನ್ನ ಐಹಿಕಾಮುಷ್ಮಿಕ ಜೀವನದಲ್ಲಿ ಪ್ರಗತಿ ಹೊಂದಬೇಕು ಎಂಬ ಉದ್ದೇಶವೇ ಸೂರ್ಯೋಪಾಸನದ ಉದ್ದೇಶ.

ನೈಮಿತ್ತಿಕ ಉಪಾಸನೆ :—

ಸಂಧ್ಯೋಪಾಸನೆಯು ನಿತ್ಯೋಪಾಸನೆಯಾದರೆ ಕಲ್ಪೋಕ್ತ ಹಾಗೂ ವೇದೋಕ್ತ ಪ್ರಕಾರವಾದ ಸೂರ್ಯೋಪಾಸನೆಯು ನೈಮಿತ್ತಿಕ ಉಪಾಸನೆ. ಇದರಲ್ಲಿ 'ತ್ರಿಚಕಲ್ಪ' ಮತ್ತು 'ಅರುಣಪ್ರಶ್ನಕ' ಎಂಬ ಎರಡು ವಿಧಾನಗಳಿವೆ. ಇದಲ್ಲದೆ ಪ್ರತಿ ಭಾನುವಾರ ಆಚರಿಸಬಹುದಾದ 'ನಿರಸನಾರ್ಕ ವ್ರತ'ವೆಂಬುದೊಂದು ಸ್ಕಾಂದ ಪುರಾಣದಲ್ಲಿ ಉಕ್ತವಾಗಿದೆ.

ಸೌರಮತ :—

ಸೂರ್ಯನನ್ನೇ ಪ್ರಧಾನ ದೇವತೆಯಾಗಿ ಹೊಂದಿದ್ದ ಮತವೊಂದು ನಮ್ಮ ದೇಶದಲ್ಲಿ ಇದ್ದಿತೆಂಬುದಕ್ಕೆ ಆಧಾರಗಳಿವೆ. ಆ ಮತವೇ 'ಸೌರಮತ'. ಇವರು ಚಂದನದಿಂದ ಹಣೆಯ ಮೇಲೆ ಸೂರ್ಯನ ಚಿಹ್ನೆಯನ್ನು ಧರಿಸುತ್ತಿದ್ದರು. ಸೂರ್ಯನಿಗೆ ಪ್ರಿಯವಾದ ಕೆಂಪು ಹೂಗಳ ಮಾಲೆಯನ್ನು ಧರಿಸುತ್ತಿದ್ದರು.

"ಸೂರ್ಯ ಆತ್ಮಾ ಜಗತಃ ತಸ್ಥುಷಶ್ಚ"

ಎಂಬ ವೇದಮಂತ್ರವೇ ಇವರ ಮೂಲಮಂತ್ರವಾಗಿದ್ದಿತು. ಈ ಸೌರಮತದಲ್ಲೇ ಭಿನ್ನ ಸಂಪ್ರದಾಯಗಳಿದ್ದವು.

ಇವರಲ್ಲಿ ಕೆಲವರು ಉದಯ ಕಾಲದ ಸೂರ್ಯನನ್ನು ಬ್ರಹ್ಮನೆಂದೂ, ಮಧ್ಯಾಹ್ನ ಕಾಲದ ಸೂರ್ಯನನ್ನು ಮಹೇಶ್ವರನೆಂದೂ, ಅಸ್ತಮಾನ ಕಾಲದ ಸೂರ್ಯನನ್ನು ವಿಷ್ಣುವೆಂದೂ ಭಾವಿಸಿ ಪೂಜಿಸುತ್ತಿದ್ದರು.

ಉದಯೇ ಬ್ರಹ್ಮರೂಪಾಯ ಮಧ್ಯಾಹ್ನೇ ತು ಮಹೇಶ್ವರಃ |
ಅಸ್ತಮಾನೇ ಸ್ವಯಂ ವಿಷ್ಣುಃ ತ್ರಯೀ ಮೂರ್ತಿರ್ದಿವಾಕರಃ ||

"ಓಂ ಘೃಣಿಃ ಸೂರ್ಯ ಆದಿತ್ಯಃ" ಎಂಬ ಮಂತ್ರವು ಅವರ ಜಪದ ವಿಷಯವಾಗಿದ್ದಿತು

ಮತ್ತೆ ಕೆಲವರು ಉದಯ ಕಾಲದ ಸೂರ್ಯಮಂಡಲವನ್ನು ದರ್ಶನ ಮಾಡುವ ನಿಯಮವೊಂದನ್ನು ಆಚರಿಸುತ್ತಿದ್ದರು. ಇದಕ್ಕೆ ಕಾರಣ ಛಾಂದೋಗ್ಯೋಪನಿಷತ್ತಿನ ಪ್ರಕಾರ ಉಗುರು ಮತ್ತು ಕೂದಲುಗಳೇ ಆದಿಯಾಗಿ ಎಲ್ಲವೂ ಸುವರ್ಣಮಯವಾದ "ಹಿರಣ್ಯಶ್ಮಶ್ರು" ಅಥವಾ 'ಹಿರಣ್ಯಕೇಶಿ' ಎಂಬ ಹಿರಣ್ಮಯ ಪುರುಷನು ಈ ಸೂರ್ಯಮಂಡಲದಲ್ಲಿರುತ್ತಾನೆ. ಆದ್ದರಿಂದಲೇ ಉಪನಿಷತ್ತಿನಲ್ಲಿ

"ಯ ಏಷೋಂತರಾದಿತ್ಯೇ ಹಿರಣ್ಮಯಃ ಪುರುಷಃ"

ಎಂದು ಹೇಳಿದೆ.

"ಹಿರಣ್ಯಗರ್ಭ" ಎಂಬುದು ಸೂರ್ಯನ ದ್ವಾದಶ ನಾಮಗಳಲ್ಲಿ ಒಂದು. ಹಿರಣ್ಯಕೇಶಿಯನ್ನು ಗರ್ಭದಲ್ಲಿ ಧರಿಸಿರುವವನು ಎಂಬುದು ಇದರ ಅರ್ಥ. ಈ ಹಿರಣ್ಮಯ

ಪುರುಷನು ಅವರ ಪೂಜಾ ವಿಷಯವಾಗಿದ್ದನು. ಆದ್ದರಿಂದ ಅವರು ಸೂರ್ಯಮಂಡಲದ ದರ್ಶನವಾಗದೆ ಆಹಾರ ಸೇವಿಸುತ್ತಿರಲಿಲ್ಲ.

ಮತ್ತೊಂದು ಸಂಪ್ರದಾಯದವರು ಉದಯ ಕಾಲದಲ್ಲಿ ಸೂರ್ಯನನ್ನು ಷೋಡಶೋಪಚಾರಗಳಿಂದ ಅರ್ಚಿಸಿ ತಾವು ಮಾಡಿದ ಸಮಸ್ತ ಕರ್ಮಗಳನ್ನೂ ಆತನಿಗೆ ನಿವೇದನ ಮಾಡುತ್ತಿದ್ದರು. ಇವರೂ ಸಹ ಸೂರ್ಯದರ್ಶನವಾಗದೆ ಭೋಜನ ಮಾಡುತ್ತಿರಲಿಲ್ಲ.

ಮತ್ತೆ ಕೆಲವರು ತಪ್ತಲೋಹದಿಂದ ಸೂರ್ಯನ ಅಂಕಿತವನ್ನು ತಮ್ಮ ಹಣೆ, ಭುಜ ಮತ್ತು ಎದೆಯ ಮೇಲೆ ಅಚ್ಚೊತ್ತಿಕೊಳ್ಳುತ್ತಿದ್ದರು. ಇವರೂ ಸಹ ಸೂರ್ಯಾಷ್ಟಾಕ್ಷರೀ ಮಂತ್ರವನ್ನು ಜಪಿಸುತ್ತಿದ್ದರು. ವೇದದ ಕೆಲವು ಭಾಗಗಳಿಗೆ ಸೂರ್ಯಪರವಾದ ಅರ್ಥವನ್ನು ಕಲ್ಪಿಸುತ್ತಿದ್ದರು. ಸೂರ್ಯನು ಅವರಿಗೆ ಮೋಕ್ಷದಾತನಾಗಿದ್ದನು. ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವಾದ 'ಸಂಕ್ರಮಣ'ವನ್ನು ಅವರು ಒಂದು ಪುಣ್ಯ ದಿನವೆಂದು ತಿಳಿದು ಉತ್ಸವ ಆಚರಿಸುತ್ತಿದ್ದರು.

ಆದರೆ ಈ ಮತದ ಅನುಯಾಯಿಗಳು ಇಂದು ಇದ್ದಾರೋ ಅಥವಾ ಇಲ್ಲವೋ ತಿಳಿಯದು. ಶ್ರೀ ಶ್ರೀ ಶಂಕರ ಭಗವತ್ಪಾದರು ಈ ಮತವನ್ನು ಖಂಡಿಸಿದ್ದೇ ಇದರ ಅವನತಿಗೆ ಕಾರಣವಾಗಿರಬಹುದು. ಆದರೆ ಗಾಂಧೀಜಿಯವರು ತಮ್ಮ ಆತ್ಮಕಥೆಯಲ್ಲಿ ತಮ್ಮ ಪೂರ್ವಿಕರು ಸೂರ್ಯಮಂಡಲವನ್ನು ದರ್ಶನ ಮಾಡದೆ ಊಟ ಮಾಡುತ್ತಿರಲಿಲ್ಲವೆಂದು ಬರೆದಿರುತ್ತಾರೆ. ಇದರಿಂದ ಬಹುಶಃ ಗಾಂಧೀಜಿಯವರ ಪೂರ್ವಿಕರು ಈ ಮತದ ಅನುಯಾಯಿಗಳಾಗಿದ್ದಿರಬಹುದೆಂಬ ಅಂಶ ವ್ಯಕ್ತವಾಗುತ್ತದೆ. ಸೌರಮತೀಯರು ಇಂದು ಕಾಣಸಿಗುವುದಿಲ್ಲವಾದರೂ ಆ ಮತದ ಕೆಲವು ಆಚರಣೆಗಳು ಒಂದಲ್ಲ ಒಂದು ರೀತಿಯಲ್ಲಿ ಇಂದಿಗೂ ಸಹ ಉಳಿದುಕೊಂಡು ಬಂದಿದೆ.

ಇ) ವೇದೋಪನಿಷತ್ತುಗಳಲ್ಲಿ ಸೂರ್ಯ :

ಭಾರತದಲ್ಲಿ ಸೂರ್ಯೋಪಾಸನೆಯ ಇತಿಹಾಸವನ್ನು ಅವಲೋಕಿಸಬೇಕಾದರೆ ವೇದೋಪನಿಷತ್ತುಗಳೇ ಆಕರ. ವೇದೋಪನಿಷತ್ತುಗಳು ಸೂರ್ಯನನ್ನು ಹಾಡಿ ಹೊಗಳಿ ಆತನ ಮಹಿಮೆಯನ್ನು ಎತ್ತಿ ಹಿಡಿದಿವೆ. ನಮ್ಮ ಸಂಸ್ಕೃತಿ ಸ್ರೋತವಾದ ಋಗ್ವೇದದಲ್ಲಂತೂ ಸೂರ್ಯಪರವಾದ ಋಕ್ಕುಗಳು ಅಗಣಿತವಾಗಿವೆ. ಉದಾಹರಣಾರ್ಥವಾಗಿ ಕೆಲವು ಮಂತ್ರಗಳನ್ನು ಇಲ್ಲಿ ನೋಡಬಹುದು.

(೧) ಉತ್ ಪುರಸ್ತಾತ್ ಸೂರ್ಯ ಏತಿ ವಿಶ್ವದೃಷ್ಟೋ ಅದೃಷ್ಟ ಹಾ ।
ಅದೃಷ್ಟಾನ್ ಸರ್ವಾನ್ ಜಂಭಯನ್ ಸರ್ವಾಶ್ಚಯಾತು ಧಾನ್ಯಃ ॥

ಅಂದರೆ ದುಷ್ಟಶಕ್ತಿ ಸಂಪನ್ನರಾದ ಸಮಸ್ತ ರಾಕ್ಷಸರನ್ನೂ ಸೂರ್ಯನು ನಾಶ ಮಾಡುತ್ತಾನೆ.

(೨) ಸಪ್ತ ಯುಂಜಂತಿ ರಥಮೇಕ ಚಕ್ರಮೇಕೋ ಅಶ್ವೋವಹತಿ ಸಪ್ತನಾಮಾ|
ತ್ರಿನಾಭಿಚಕ್ರಮಜರಮನರ್ವ ಯತ್ರೇಮಾ ವಿಶ್ವಾ ಭುವನಾನಿತಸ್ಥುಃ ; ||

ಒಂದು ಚಕ್ರದ ರಥವು ಏಳು ಹೆಸರುಗಳನ್ನು ಪಡೆದ ಕುದುರೆಯು ರಥವನ್ನು ಓಡಿಸುತ್ತದೆ. ದೃಢವಾದ ಈ ಚಕ್ರ ಎಂದೂ ನಾಶವಾಗತಕ್ಕದ್ದಲ್ಲ. ಇದನ್ನು ಆಧರಿಸಿ ಸಮಸ್ತ ಪ್ರಪಂಚವೂ ನಿಂತಿದೆ.

(೩) ಪೂರ್ವಾಪರಂಚರತೋ ಮಾಯುಯೈತೌ ಶಿಶೂ
ಕ್ರೀಡಂತೌ ಪರಿಯಾತೋ ಅಧ್ವರಂ|

ಪರಬ್ರಹ್ಮ ತೇಜಸ್ಸಿನಿಂದ ಸೂರ್ಯನು ಸ್ವಯಂ ಪ್ರಕಾಶಿತನಾಗಿ ಜಲಮಯವಾದ ಚಂದ್ರ ಬಿಂಬಕ್ಕೆ ಪ್ರಕಾಶವನ್ನು ಕೊಡುತ್ತಾನೆ.

(೪) ಯಾಭಿರಾದಿತ್ಯಸ್ತಪತಿ ರಶ್ಮಿಭಿರಸ್ತಾಭಿಃ ಪರ್ಜನ್ಯೋ ಭವತಿ|

ಸೂರ್ಯನೇ ಮಳೆಗೆ ಕಾರಣ. ಇದೇ ವಿಚಾರವು ಸ್ಮೃತಿಯಲ್ಲಿಯೂ ಸಹ ಇದೆ.

"ಆದಿತ್ಯಾಜ್ಜಾಯತೇ ವೃಷ್ಟೇರನ್ನಂ ತತಃ ಪ್ರಜಾಃ |

ಅಂದರೆ ಸೂರ್ಯನಿಂದ ಮಳೆ, ಮಳೆಯಿಂದ ಅನ್ನ, ಅನ್ನದಿಂದ ಮನುಷ್ಯ ಜೀವನ.

೫) ಅಷ್ಟಪುತ್ರಾಸು ಅದಿತೇರ್ಯೇಜಾತಾಸ್ತನ್ವಸ್ಪರಿ |
ದೇವಾಂ ಉಪಪ್ರೈತ್ ಸಪ್ತಭಿಃ ಪರಾ ಮಾರ್ತಾಂಡಮಾಸ್ಯಾತ್ ||
ಸಪ್ತಭಿಃ ಪುತ್ರೈರದಿತಿರೂಪಪ್ರೈತ್ ಪೂರ್ವ್ಯಂಯುಗಂ |
ಪ್ರಜಾಯೈ ಮೃತ್ಯವೇತ್ವತ್ ಪುನರ್ಮಾರ್ತಾಂಡಮಾಭರತ್ ||

ಪ್ರಾಣಿಗಳ ಜನನ ಮರಣಕ್ಕೂ, ಸೂರ್ಯೋದಯ ಸೂರ್ಯಾಸ್ತಗಳಿಗೂ ಪರಸ್ಪರ ಸಂಬಂಧವಿದೆ.

ಯಜುರ್ವೇದ ಮಂತ್ರಗಳು :

ಋಗ್ವೇದದಲ್ಲಿರುವಂತೆಯೇ ಯಜುರ್ವೇದದಲ್ಲಿಯೂ ಸಹ ಸೂರ್ಯಪರವಾದ ಮಂತ್ರಗಳು ಅಗಣಿತವಾಗಿವೆ. ಕೆಲವನ್ನು ಮಾತ್ರ ನೋಡೋಣ.

೧) ಸೂರ್ಯಶ್ಚ ಮಾಮನ್ಯುಶ್ಚಮನ್ಯುಪತಯಶ್ಚ ಮನ್ಯುಕೃತೇಭ್ಯಃ |
ಪಾಪೇಭ್ಯೋ ರಕ್ಷಂತಾಮ್ |

ಎಂದರೆ "ಸೂರ್ಯನು ಹಗಲನ್ನುಂಟು ಮಾಡುವ ದೇವನು. ಕೋಪಾಭಿಮಾನಿ ದೇವತೆಯು. ಯಾವ ಕೋಪಸ್ವಾಮಿಗಳಾದ ದೇವರುಗಳುಂಟೋ ಆ ಸಮಸ್ತರೂ ನನ್ನ ಕೋಪದಿಂದ ಉಂಟಾಗುವ ಪಾಪಗಳನ್ನು ನಾಶ ಮಾಡಿ ಪಾಪಿಯಾದ ನನ್ನನ್ನು ರಕ್ಷಿಸಲಿ" ಎಂಬುವೇ ಮೇಲಿನ ಮಂತ್ರದ ಅರ್ಥ.

(೨) ಅದ್ಯಾನೋ ದೇವ ಸವಿತಃ | ಪ್ರಜಾವತ್ಸಾವೀಸ್ಸೌಭಗಂ |
ಪರಾದುಷ್ವಪ್ನಿಯಗ್‌ಂ ಸುವ | ವಿಶ್ವಾನಿ ದೇವಸವಿತಃ |
ದುರಿತಾನಿ ಪರಾಸುವ | ಯದ್ಭದ್ರಂ ತನ್ನ ಆಸುವ |

"ಎಲೈ ಸವಿತೃ ದೇವನೇ, ನಮ್ಮ ಸಮಸ್ತ ಪಾಪಗಳನ್ನೂ ನಾಶಮಾಡು. ಕಲ್ಯಾಣವನ್ನು ನಮಗೆ ಎಲ್ಲಾ ಕಡೆಗಳಲ್ಲೂ ಅನುಗ್ರಹಿಸು.

ಉಪನಿಷತ್ತು :

ಅನೇಕ ಉಪನಿಷತ್ತುಗಳಲ್ಲಿಯೂ ಸಹ ಸೂರ್ಯನ ಪ್ರಸಕ್ತಿ ಬಹಳವಾಗಿ ಬಂದಿರುತ್ತದೆ. ಸೂರ್ಯನನ್ನೇ ಕುರಿತ ಉಪನಿಷತ್ತೊಂದಿದೆ. ಅದಕ್ಕೆ 'ಸೂರ್ಯೋಪನಿಷತ್ತೆ'ಂದೇ ಹೆಸರು.

ಸೂರ್ಯಾದ್ಭವಂತಿ ಭೂತಾನಿ ಸೂರ್ಯೇಣ ಪಾಲಿತಾನಿತು ।
ಸೂರ್ಯೋಲಯಂ ಪ್ರಾಪ್ನಂತಿ ಯಸ್ಸೂರ್ಯಸೋಽಹಮೇ ಏಚ ।

ವಿಶ್ವದ ಎಲ್ಲ ಆಗು ಹೋಗುಗಳಿಗೂ ಸೂರ್ಯನೇ ಕಾರಣ ಎಂಬುದೇ ಇದರ ಅರ್ಥ.

ತೈತ್ತಿರೀಯ :

ಸಯಶ್ಚಾಯಂ ಪುರುಷೇ ಯಶ್ಚಾಯಮಾದಿತ್ಯೇ ಸ ಏಕಃ ।

ಅಂದರೆ ಸೂರ್ಯನೇ ಅದ್ವಿತೀಯ ಬ್ರಹ್ಮ.

ಮುಂಡಕ :

ನ ತತ್ರ ಸೂರ್ಯೋಭಾತಿ ನ ಚಂದ್ರತಾರಕಂ
ನೇಮಾ ವಿದ್ಯುತೋಭಾಂತಿ ಕುತೋಽಯಮಗ್ನಿಃ ।
ತಮೇವ ಭಾರತ ಮನುಭಾತಿ ಸರ್ವಂ ತಸ್ಯಭಾಸಾ ಸರ್ವಮಿದಂ ವಿಭಾತಿ ।

"ಸೂರ್ಯಮಂಡಲಾಂತರವರ್ತಿಯಾದ ತೇಜಸ್ಸು ಇತರ ತೇಜಸ್ಸುಗಳಿಂದ ಪ್ರಕಾಶಿಸುವುದಿಲ್ಲ. ಅದರ ತೇಜಸ್ಸಿನಿಂದಲೇ ಜಗತ್ತೆಲ್ಲವೂ ಪ್ರಕಾಶಿಸಲ್ಪಡುವುದು,

ಪ್ರಶ್ನೋಪನಿಷತ್ :

ಪ್ರಾಣಃ ಪ್ರಜಾನಾಂ ಉದಯತಿ ಸೂರ್ಯಃ ।

ಪ್ರಜೆಗಳ ಪ್ರಾಣನಾದ ಸೂರ್ಯನು ಉದಯಿಸುತ್ತಿದ್ದಾನೆ.

ಹೀಗೆ ಅನೇಕ ಉಪನಿಷತ್ತುಗಳಲ್ಲಿ ಸೂರ್ಯನ ಮಹಿಮೆಯನ್ನು ಕೊಂಡಾಡಿರುವ ಮಂತ್ರಗಳನ್ನು ಕಾಣಬಹುದು. ಉಪನಿಷತ್ತಿನಲ್ಲಿ ಸೂರ್ಯೋಪಾಸನೆಯನ್ನು ಬೇರೆ ಬೇರೆ ರೂಪಗಳಲ್ಲಿ ಹೇಳಿ ಅವುಗಳನ್ನು 'ವಿದ್ಯೆ' ಎಂದು ಕರೆಯುತ್ತಾರೆ.

(೧) ದಹರವಿದ್ಯಾ (೨) ಮಧುವಿದ್ಯಾ (೩) ಉಪಕೋಸಲ ವಿದ್ಯಾ
(೪) ಮಂಥವಿದ್ಯಾ ಮತ್ತು (೫) ಪಂಚಾಗ್ನಿ ವಿದ್ಯಾ

(ಈ) ಆಗಮಗಳಲ್ಲಿ ಸೂರ್ಯ :

ತಂತ್ರ ಸಾರಾಗಮ :

ವೇದೋಕ್ತವಾದ ಆಗಮ ಶಾಸ್ತ್ರದಲ್ಲಿ ಕೂಡ ಸೂರ್ಯನಿಗೆ ವಿಶಿಷ್ಟ ಸ್ಥಾನವಿದೆ. ತಂತ್ರ ಸಾರಾಗಮದಲ್ಲಿ ಇಷ್ಟದೇವತೆಯ ಉಪಾಸನೆಯನ್ನು ಸೂರ್ಯಮಂಡಲದ ರೂಪವಾಗಿ ಮಾಡಬಹುದೆಂದು ಹೇಳಿದೆ.

ಸೂರ್ಯಮಂಡಲ ಮಧ್ಯಸ್ಥಾಂ ದೇವೀಂ ತ್ರಿಪುರ ಸುಂದರೀಂ |
ಪಾಶಾಂಕುಶ ಧನುರ್ಬಾಣ ಹಸ್ತಾಂ ಧ್ಯಾಯೇತ್ಸಾಧಕಃ ||

ದೇವಿಯ ಉಪಾಸಕರು ತಮ್ಮ ಆರಾಧ್ಯ ದೇವತೆಯಾದ ತ್ರಿಪುರ ಸುಂದರಿಯನ್ನು ಸೂರ್ಯ ಮಂಡಲ ಮಧ್ಯವರ್ತಿನಿಯೆಂದು ಭಾವಿಸಿ ಪೂಜಿಸುತ್ತಾರೆ. ಅಂತೆಯೇ ಇತರ ದೇವತೆಗಳನ್ನೂ ಸಹ ಸೂರ್ಯಮಂಡಲ ಮಧ್ಯಸ್ಥವೆಂದು ತಿಳಿದು ಉಪಾಸಿಸುತ್ತಾರೆ.

ನಂದಿಕೇಶ್ವರ ಸಂಹಿತೆ :

'ನಂದಿಕೇಶ್ವರ ಸಂಹಿತೆ' ಎಂಬ ಆಗಮದಲ್ಲಿ, ಸೂರ್ಯನಿಗೆ ಅರ್ಘ್ಯವನ್ನು ಕೊಡದೆ ಇತರ ದೇವತೆಗಳನ್ನು ಪೂಜಿಸಬಾರದೆಂದಿದೆ. ಸೂರ್ಯ ಪಂಚಾಯತರು ಆದಿತ್ಯನಿಂದಲೇ ಪ್ರಾರಂಭ.

ಆದಿತ್ಯಂ ಚ ಗಣೇಶಂ ಚ ದೇವೀಂ ರುದ್ರಂ ಚ ಕೇಶವಂ |
ಪಂಚ ದೈವತಮಿತ್ಯುಕ್ತಂ ಸರ್ವಕರ್ಮಸು ಪೂಜಯೇತ್ ||

ಎಲ್ಲ ಕರ್ಮಗಳಲ್ಲಿಯೂ ಸಹ ಸೂರ್ಯಸಹಿತವಾದ ಈ ಪಂಚಾಯತರನ್ನು ಪೂಜಿಸಬೇಕು.

ಜೈನಾಗಮ :

ಜೈನಾಗಮದಲ್ಲಿ ಸೂರ್ಯನಿಗೆ ವಿಶೇಷಸ್ಥಾನ ಕೊಡಲಾಗಿದೆ. ಅವರು ತಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಸೂರ್ಯನನ್ನು ಸಾಕ್ಷಿಯಾಗಿ ಇಟ್ಟುಕೊಳ್ಳುತ್ತಾರೆ.

ಅದ್ಧಂ ಗಯಂ ಮಿ ಆ ಇಚ್ಛೆ ಪುರತತ್ಥಾಯ ಅಣುಗ್ಗಯೇ |
ಆಹಾರ ಮು ಇಯಂ ಸವ್ವಕ ಮನಸಾ ವಿನ ಪತ್ಥಯೇ ||

ಸೂರ್ಯನು ಅಸ್ತಮಿಸಿ ಉದಯವಾಗುವ ತನಕ ಯಾವ ಆಹಾರವನ್ನೂ ಸೇವಿಸಬಾರದು. ಇಂದಿಗೂ ಸಹ ಜೈನ ಧರ್ಮಾನುಯಾಯಿಗಳು ಸೂರ್ಯಾಸ್ತಮಾನವಾದ ಮೇಲೆ ಊಟ ಮಾಡುವುದಿಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಸೂರ್ಯಕಿರಣದಲ್ಲಿ ಊರ್ಜಶಕ್ತಿಯಿದೆ. ಇದರಿಂದ ಆಹಾರವು ಬೇಗ ಪಚನವಾಗುತ್ತದೆ. ಆದುದರಿಂದ ಅವರು ಹಗಲಿನಲ್ಲೇ ವಿನಃ ರಾತ್ರಿ ಆಹಾರ ಸೇವಿಸುವುದಿಲ್ಲ.

ಉ) ಪುರಾಣಗಳಲ್ಲಿ ಸೂರ್ಯ :

ಪುರಾಣಗಳಲ್ಲಿ ಸೂರ್ಯನಿಗೆ ಸಂಬಂಧಿಸಿದ ವಿಷಯಗಳು ವಿಪುಲವಾಗಿವೆ. ಅವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ನೋಡೋಣ.

ಭವಿಷ್ಯೋತ್ತರ ಪುರಾಣ :

ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದ 'ಆದಿತ್ಯ ಹೃದಯ'ವೊಂದು ಭವಿಷ್ಯೋತ್ತರ ಪುರಾಣದಲ್ಲಿ ಉಕ್ತವಾಗಿದೆ.

"ರುದ್ರಾದಿ ದೇವತೈಸ್ಸರ್ವೈಃ ಪೃಷ್ಟೇನ ಕಥಿತಂ ಮಯಾ |
ವಿಕ್ಷ್ಯೇಹಂ ಸೂರ್ಯ ವಿನ್ಯಾಸಂ ಶೃಣು ಪಾಂಡವ ಯತ್ನತಃ" ||

ಎಂದು ಆರಂಭಿಸಿ ಸೂರ್ಯನ ಸಂಪೂರ್ಣ ಪರಿಚಯವನ್ನು ಕೊಟ್ಟಿದ್ದಾರೆ.

ವಿಷ್ಣು ಪುರಾಣ :

ವಿಷ್ಣು ಪುರಾಣದಲ್ಲಿ ಪರಬ್ರಹ್ಮನ ಒಂದು ತೇಜಸ್ಸೇ ಜಗತ್ಪರಿಪಾಲನೆಗಾಗಿ ಸೂರ್ಯನಾಗಿ ಅವತರಿಸಿತು ಎಂದಿದೆ. ಆದ್ದರಿಂದಲೇ ವ್ಯಾಸ ಸ್ಮೃತಿಯಲ್ಲಿ,

"ಸಂಧ್ಯೇತಿ ಸೂರ್ಯಗ್ಂ ಬ್ರಹ್ಮ"

ಎಂದು ಹೇಳಿದೆ. ಆದಿತ್ಯಮಂಡಲಗತ ಬ್ರಹ್ಮನೇ ಸಂಧ್ಯಾ. ಅಂದರೆ ಸೂರ್ಯನೇ ಬ್ರಹ್ಮ. ಇಲ್ಲಿ ಸಂಧ್ಯಾ ಎಂದರೆ ಸೂರ್ಯ, ಬ್ರಹ್ಮ ಅಥವಾ ಪರಮಾತ್ಮ ಎಂದರ್ಥ. "ಅಸಾವಾದಿತ್ಯೋ ಬ್ರಹ್ಮ" ಎಂಬ ಶ್ರುತಿವಾಕ್ಯವೂ ಸಹ ಸೂರ್ಯನೇ ಪರಬ್ರಹ್ಮ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಸ್ಕಾಂಧ ಪುರಾಣ :

ಸ್ಕಾಂದ ಪುರಾಣದ ಪ್ರಭಾಸಖಂಡದಲ್ಲಿ ಚಿತ್ರ ಚಿತ್ರೆಯರೆಂಬ ಸೋದರಿಯರ ಕಥೆ ಬರುತ್ತದೆ. ಇವರು ಸೂರ್ಯದೇವನನ್ನು ಆರಾಧಿಸಿ ಪರಿಪೂರ್ಣ ಜ್ಞಾನವನ್ನು ಪಡೆದರು.

ಮತ್ಸ್ಯ ಪುರಾಣ :

ರೇಣುಕಾ ದೇವಿಯು ಬಿಸಿಲಿನಲ್ಲಿ ನಡೆಯಲಾರದೆ ತಲ್ಲಣಿಸುತ್ತಿದ್ದಾಗ, ಅದನ್ನು ಕಂಡು ಭೃಗು ಮಹರ್ಷಿಗಳು ಛತ್ರವನ್ನೂ ಪಾದುಕೆಗಳನ್ನೂ ಸೃಷ್ಟಿಸುತ್ತಾರೆ. ಇದರ ಬಗ್ಗೆ ಸೂರ್ಯನಿಗೂ ಜಮದಗ್ನಿ ಮಹರ್ಷಿಗಳಿಗೂ ಆದ ಸಂವಾದವು ಈ ಪುರಾಣದಲ್ಲಿದೆ.

ಬ್ರಹ್ಮ ಪುರಾಣ :

ಸೂರ್ಯವಂಶದ ವರ್ಣನೆಯು ಬ್ರಹ್ಮ ಪುರಾಣದಲ್ಲಿ ಬರುವಾಗ ಅದರ ಮೂಲ ಪುರುಷನಾದ ಸೂರ್ಯನ ಪ್ರಸ್ತಾಪವು ಅಲ್ಲಿ ಬರುತ್ತದೆ.

ಭಾಗವತ :

ದ್ವಾರಕಾ ಪಟ್ಟಣದ ರಾಜನಾದ ಉಗ್ರಸೇನನ ಮಗನಾದ ಸತ್ರಾಜಿತನು ನಿರಶನ ವ್ರತವನ್ನಾಚರಿಸಿ ಸೂರ್ಯನನ್ನೇ ನೆಟ್ಟದೃಷ್ಟಿಯಿಂದ ನೋಡುತ್ತಾ ತಪಸ್ಸು ಮಾಡಿ ಆತನಿಂದ 'ಸ್ಯಮಂತಕ ಮಣಿ'ಯೆಂಬ ಅಮೂಲ್ಯ ರತ್ನವನ್ನು ಪಡೆದನು. ಆ ಮಣಿಯು ದಿನವೊಂದಕ್ಕೆ ಎಂಟು ಮಣ ಬಂಗಾರವನ್ನು ನೀಡುತ್ತಿತ್ತು. ಈ ಕಥೆಗೆ 'ಸ್ಯಮಂತ ಕೋಪಾಖ್ಯಾನ' ಎಂದು ಹೆಸರು.

ಊ) ಕಾವ್ಯೇತಿಹಾಸಗಳಲ್ಲಿ ಸೂರ್ಯ :

ಹೀಗೆ ವೇದೋಪನಿಷತ್ತು ಹಾಗೂ ಪುರಾಣಗಳಲ್ಲಿ ಅನಸ್ಯೂತವಾಗಿ ಸೂರ್ಯನ ವಿಷಯವಾಗಿ ಬೆಳೆದ ಶ್ರದ್ಧಾಭಕ್ತಿಗಳು ಮುಂದೆ ಕಾವ್ಯೇತಿಹಾಸಗಳಲ್ಲಿ ಸುಂದರವಾಗಿ ಅಭಿವ್ಯಕ್ತವಾಯಿತು.

ರಾಮಾಯಣ :

ಮಹಾ ಶೈವಭಕ್ತನೂ, ವೇದಾಧ್ಯಯನ ಸಂಪನ್ನನೂ ಆದ ರಾವಣನನ್ನು ಕೊಲ್ಲಲು ರಾಮನಿಗೆ ಬಹಳ ಪ್ರಯಾಸವಾಗುತ್ತದೆ. ಆಗ ಅಗಸ್ತ್ಯ ಮುನಿಗಳು ಅಲ್ಲಿಗೆ ಆಗಮಿಸಿ ಶ್ರೀರಾಮಚಂದ್ರನಿಗೆ "ಆದಿತ್ಯ ಹೃದಯ"ವೆಂಬ ಸೂರ್ಯಪರವಾದ ಮಂತ್ರವನ್ನು ಉಪದೇಶಿಸುತ್ತಾರೆ. ಆ ಮಂತ್ರ ಜಪದ ಪ್ರಭಾವದಿಂದ ರಾಮನು ನಿರಾಯಾಸವಾಗಿ ರಾವಣನನ್ನು ಸಂಹರಿಸುತ್ತಾನೆ.

ಮಹಾಭಾರತ :

ಪಾಂಡವರು ಅರಣ್ಯವಾಸದಲ್ಲಿದ್ದಾಗ ಧೌಮ್ಯ ಮಹರ್ಷಿಗಳು ಸೂರ್ಯೋಪಾಸನೆಯ ಮಂತ್ರವನ್ನು ಧರ್ಮರಾಯನಿಗೆ ಉಪದೇಶಿಸುತ್ತಾರೆ. ಆ ಮಂತ್ರದ ಮಹಿಮೆಯಿಂದ ಧರ್ಮರಾಯನು ಸೂರ್ಯನಿಂದ ಆಶ್ಚರ್ಯಕರವಾದ 'ಅಕ್ಷಯ ಪಾತ್ರೆ' ಯನ್ನು ಪಡೆಯುತ್ತಾನೆ. ಇದರ ಪ್ರಭಾವದಿಂದ ಧರ್ಮರಾಯನು ತನ್ನಲ್ಲಿಗೆ ಬಂದ ಎಷ್ಟೇ ಜನಕ್ಕಾದರೂ ಅತಿಥಿ ಸತ್ಕಾರವನ್ನು ಮಾಡುತ್ತಿರುತ್ತಾನೆ.

ಜೈಮಿನಿ ಭಾರತ :

ರಾಮನು ರಾವಣನನ್ನು ಸಂಹರಿಸಲು ಸೂರ್ಯನನ್ನು ಉಪಾಸಿಸಿದಂತೆಯೇ ಶ್ರೀರಾಮನ ಪುತ್ರನಾದ ಕುಶನು ತನ್ನ ತಂದೆಯ ಸೈನ್ಯವನ್ನು ಗೆಲ್ಲಲು 'ಮೇಲೆಸೆವ ರವಿಯನಾರಾಧಿಸಿ' "ರಿಪು ಜಾಲಕಸನಳನಾದ ಪೂಷಲಕ್ಷ್ಯಯ ಬಾಣಂಗಳಂ ಪಡೆದನು."

ಮಯೂರನ ಕಾವ್ಯ :

ಕಾವ್ಯದ ಉದ್ದೇಶಗಳಲ್ಲಿ 'ಶಿವೇತರಕ್ಷತಯೇ' ಅಂದರೆ ಕಾವ್ಯರಚನೆಯು ನಮ್ಮನ್ನು ಅಮಂಗಲದಿಂದ ಪಾರು ಮಾಡುತ್ತದೆ ಎಂದು ಕಾವ್ಯ ಮೀಮಾಂಸಕನಾದ ಮಮ್ಮಟನು

'ಕಾವ್ಯ ಪ್ರಕಾಶ'ದಲ್ಲಿ ಹೇಳುತ್ತಾನೆ. ಇದಕ್ಕೊಂದು ನಿದರ್ಶನವೋ ಎಂಬಂತಿದೆ ಈ ಮಯೂರನ ಕಾವ್ಯ, ಕ್ರಿ. ಶ. ೭ನೇ ಶತಮಾನದಲ್ಲಿದ್ದ ಮಯೂರನೆಂಬ ಕವಿಯು ಕುಷ್ಠರೋಗ ಪೀಡಿತನಾಗಿದ್ದನು. ಆತನು ಸೂರ್ಯನ ಮೇಲೆ ಒಂದು ನೂರು ಶ್ಲೋಕಗಳನ್ನು ರಚಿಸಿ ಆ ರೋಗದಿಂದ ವಿಮುಕ್ತಿ ಹೊಂದಿದನಂತೆ.

ರಘುವಂಶ :

ರಘುವಂಶದ ಮೂಲಪುರುಷ ಸೂರ್ಯನೇ. ಕಾಳಿದಾಸ ಮಹಾಕವಿಯು 'ರಘುವಂಶ'ವೆಂಬ ಕಾವ್ಯದಲ್ಲಿ ಲಕ್ಷ್ಮಣನು ಶ್ರೀರಾಮನ ಆಜ್ಞೆಯಂತೆ ಸೀತಾದೇವಿಯನ್ನು ಅರಣ್ಯದಲ್ಲಿ ಬಿಟ್ಟು ಬರುವಾಗ ಸೀತೆಯು ಹೀಗೆ ಹೇಳುತ್ತಾಳೆ.

ಸಾಹಂ ತಪಃ ಸೂರ್ಯನಿವಿಷ್ಟದೃಷ್ಟಿಃ ಊರ್ಧ್ವಂ ಪ್ರಸೂತೇಃ
ಚರಿತಂ ಯತಿಷ್ಯೇ ।
ಭೂಯೋ ಯಥಾಮೇ ಜನನಾಂತರೇಪಿ ತಮೇವ ಭರ್ತಾ ನ
ಚ ವಿಪ್ರಯೋಗಃ ॥

ಅಂದರೆ "ನಾನು ತ್ರಾಟಕ ಯೋಗದಲ್ಲಿ ಸೂರ್ಯನನ್ನು ಉಪಾಸಿಸಿ ಜನ್ಮ ಜನ್ಮಾಂತರಕ್ಕೂ ಶ್ರೀರಾಮನೇ ನನ್ನ ಪತಿಯಾಗಬೇಕೆಂದೂ ಹಾಗೂ ಪರಿತ್ಯಾಗವು ಉಂಟಾಗಬಾರದೆಂದೂ ಪ್ರಾರ್ಥಿಸುತ್ತೇನೆ."

ಮಾಲತಿ ಮಾಧವ :

ಭವಭೂತಿ ಎಂಬ ಕವಿಯು "ಮಾಲತೀ ಮಾಧವ" ಎಂಬ ನಾಟಕವೊಂದನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾನೆ, ಈ ನಾಟಕದ ಮಂಗಳ ಶ್ಲೋಕವು ಸೂರ್ಯ ಪ್ರಾರ್ಥನೆಯಾಗಿರುವುದೊಂದು ವಿಶೇಷ.

ಭೋಜ ಪ್ರಬಂಧ ;

'ಭೋಜ ಪ್ರಬಂಧ'ವೆಂಬ ಸಂಸ್ಕೃತದ ಈ ಕಾವ್ಯದಲ್ಲಿ ಸೂರ್ಯನಿಗೆ ಸಂಬಂಧಿಸಿದ ಶ್ಲೋಕವೊಂದು ಬಹು ಸುಂದರವಾಗಿದೆ. ಧಾರಾ ನಗರದ ಭೋಜರಾಜನು ಒಂದು ದಿನ ತನ್ನ ಆಸ್ಥಾನದಲ್ಲಿ ನೆರೆದಿದ್ದ ವಿದ್ವಾಂಸರ ಸಮ್ಮುಖದಲ್ಲಿ,

"ಕ್ರಿಯಾಸಿದ್ಧಿಃ ಸತ್ವೇ ಭವತಿ ಮಹತಾಂ ನೋಽಪಕರಣೇ ।

ಮಹಿಮಾನ್ವಿತರಿಗೆ ಕ್ರಿಯಾಸಿದ್ಧಿಯು ಅವರ ಸತ್ವದಿಂದಲ್ಲದೇ ಕೇವಲ ಅವರು ಉಪಯೋಗಿಸುವ ಉಪಕರಣಗಳಿಂದಲ್ಲ ; ಎಂಬ ಅರ್ಥವುಳ್ಳ ಶ್ಲೋಕದ ಕಡೆಯ ಪಾದವನ್ನು ಹೇಳಿ ಉಳಿದುದನ್ನು ರಚಿಸುವಂತೆ ವಿದ್ವಾಂಸರಿಗೆ ಸವಾಲು ಹಾಕುತ್ತಾನೆ. ಆಗ ಒಬ್ಬೊಬ್ಬ ವಿದ್ವಾಂಸನೂ ಒಂದೊಂದು ಶ್ಲೋಕವನ್ನು ರಚಿಸುತ್ತಾನೆ. ಅವರಲ್ಲಿ ಒಬ್ಬ ವಿದ್ವಾಂಸನು ಆ ಶ್ಲೋಕವನ್ನು ಈ ಕೆಳಕಂಡಂತೆ ಪೂರ್ತಿ ಮಾಡುತ್ತಾನೆ.

ರಥಸ್ಯೈಕಂ ಚಕ್ರಂ ಭುಜಗಯಮಿತಾಃ ಸಪ್ತತುರಗಾಃ ।
ನಿರಾಲಂಬೋ ಮಾರ್ಗಃ ಚರಣರಹಿತಃ ಸಾರಥಿರಪಿ ।

ರವಿರ್ಗಚ್ಛತ್ಯಂತಂ ಪ್ರತಿದಿನಮಪಾರಸ್ಯ ನಭಸಃ |
ಕ್ರಿಯಾಸಿದ್ಧಿಃ ಸತ್ವೇಭವತಿ ಮಹತಾಂ ನೋಪಕರಣೇ ||

ಸೂರ್ಯನ ರಥಕ್ಕೆ ಒಂದೇ ಚಕ್ರ. ಕುದುರೆಗಳ ಸಂಖ್ಯೆಯು ಬೆಸ ; ಅಂದರೆ ಏಳು. ಅವಕ್ಕೆ ಕಟ್ಟಿರುವ ಲಗಾಮು ಹಾವುಗಳು. ಮಾರ್ಗವೋ ನಿರಾಲಂಭವಾದುದು ; ಅಂದರೆ ಆಕಾಶಪಥ. ಹೇಗೋ ಇವುಗಳೆಲ್ಲವನ್ನೂ ನಿಭಾಯಿಸಿ ರಥ ನಡೆಸುವ ಸಮರ್ಥ ಸಾರಥಿ ಇದ್ದಾನೆಯೋ ಎಂದರೆ ಅವನಿಗೆ ಕಾಲುಗಳೇ ಇಲ್ಲ. ತನ್ನ ಉಪಕರಣದಲ್ಲಿ ಇಷ್ಟೆಲ್ಲಾ ನ್ಯೂನತೆಗಳನ್ನು ಹೊಂದಿದ್ದರೂ ಸಹ ಸೂರ್ಯನು ಒಂದು ಕ್ಷಣ ತಡಮಾಡದೆ ಪ್ರತಿದಿನ ಸಕಾಲಕ್ಕೆ ಉದಯಿಸಿ ವಿಶಾಲವಾದ ಅಂತರಿಕ್ಷದಲ್ಲಿ ಸಂಚರಿಸುತ್ತಾ ಜಗತ್ತಿನ ಜೀವರಾಶಿಗಳಿಗೆ ಆಶ್ರಯದಾತನಾಗಿದ್ದಾನೆ. ಹೀಗೆ ಮಹಿಮಾನ್ವಿತರಿಗೆ ಕ್ರಿಯಾಸಿದ್ಧಿಯು ಅವರ ಸತ್ವದಿಂದಲ್ಲದೆ ಕೇವಲ ಉಪಕರಣಗಳಿಂದ ದೊರೆಯುವುದಿಲ್ಲ. ಈ ಮಾತು ಸೂರ್ಯನಿಗೆ ಸಹಜ ಸುಂದರವಾಗಿ ಹೊಂದುತ್ತದೆ. ಹೀಗೆ ಶ್ಲೋಕವನ್ನು ಪೂರ್ತಿ ಮಾಡಿದ ವಿದ್ವಾಂಸನು ಭೋಜರಾಜನ ಮನ್ನಣೆಗೆ ಪಾತ್ರನಾದುದರಲ್ಲಿ ಸಂದೇಹವೇನಿಲ್ಲವೆನಿಸುತ್ತದೆ.

ಋ) ಜ್ಯೋತಿಷ್ಯ ಶಾಸ್ತ್ರದಲ್ಲಿ ಸೂರ್ಯ :

ವೇದದ ಷಡಂಗಗಳಲ್ಲಿ ಜ್ಯೋತಿಷ್ಯ ಶಾಸ್ತ್ರವೂ ಒಂದು. ಇಲ್ಲಿ ಸೂರ್ಯನಿಗೆ ಮಹತ್ತರವಾದ ಸ್ಥಾನವಿದೆ. ನವಗ್ರಹಗಳಲ್ಲಿ ಈತನು ಮೊದಲನೆಯವನು ಹಾಗೂ ಅವರಿಗೆ ರಾಜ : ಪುರುಷಗ್ರಹ ; ಕ್ಷತ್ರಿಯವರ್ಣ ; ಕ್ರೂರಗ್ರಹ ; ರಕ್ತವಸ್ತ್ರಾನ್ವಿತ; ವಾಹನ ಅಶ್ವ. 'ಸಿಂಹಸ್ಯಾಧಿಪತಿಸ್ಸೂರ್ಯಃ' ಅಂದರೆ ಈತನು ಸಿಂಹರಾಶಿಗೆ ಅಧಿಪತಿ. ಈತನಿಗೆ ಮೇಷ ಉಚ್ಚ ; ತುಲಾ ರಾಶಿ ನೀಚ ; ತನ್ನ ರಾಶಿಯೇ ಮೂಲ ತ್ರಿಕೋಣ.

"ಶತ್ರೂಮಂದಸಿತೌ ಸಮಃಶಶಿಸುತೋ ಮಿತ್ರಾಣಿ ಶೇಷಾರವೇ"

ಈತನಿಗೆ ಶನಿ ಶುಕ್ರರು ಶತ್ರುಗಳು ; ಬುಧನು ಸಮನು ; ಉಳಿದವರು ಮಿತ್ರರು. ಇವನು ಪುಬ್ಬಾ ನಕ್ಷತ್ರಕ್ಕೆ ದೇವತೆ. ಸಪ್ತಮಿ ತಿಥಿಗೆ ಅಧಿಪತಿ. ಆದ್ದರಿಂದಲೇ ರಥಸಪ್ತಮಿಯಂದು ನಡೆಸುವ ರಥೋತ್ಸವಗಳಲ್ಲಿ ಸೂರ್ಯೋದಯಕ್ಕೆ ಸರಿಯಾಗಿ 'ಸೂರ್ಯಮಂಡಲೋತ್ಸವ'ವನ್ನು ಮಾಡುತ್ತಾರೆ. ಇಂತಹ ಉತ್ಸವವು ವಿಷ್ಣು ಹಾಗೂ ಶಿವಾಲಯಗಳೆರಡರಲ್ಲೂ ತಾರತಮ್ಯವಿಲ್ಲದೆ ನಡೆಯುತ್ತದೆ. ಈತನ ಹೆಸರಿನಿಂದಲೇ ಕರೆಯಲ್ಪಡುವ ವಾರ ಭಾನುವಾರ.

"ಮಧ್ಯೇ ವರ್ತುಳಮಾದಿತ್ಯಾಯ" ಎಂದು ಹೇಳಿ ನವಗ್ರಹಗಳಲ್ಲಿ ಈತನಿಗೆ ಕೇಂದ್ರ ಸ್ಥಾನ ಕೊಡಲಾಗಿದೆ. ಇದು ನಮ್ಮ ಆಧುನಿಕ ವಿಜ್ಞಾನಕ್ಕೆ ಅನುಸಾರವಾಗಿಯೇ ಇದೆ.

"ಗೋಧುಮಾಸ್ಸರ್ವಜಂತೂನಾಂ ಬಲಂ ಪುಷ್ಟಿವಿವರ್ಧನಂ"

ಸರ್ವಜಂತುಗಳಿಗೆ ಪುಷ್ಟಿಕರವಾದ ಗೋಧಿಯೇ ಈತನಿಗೆ ಪ್ರಿಯವಾದ ಧಾನ್ಯ. "ಅರ್ಕಸಮಿಧಮಾದಿತ್ಯಾಯ" ಎಂದು ಹೇಳಿ ಈತನಿಗೆ ಎಕ್ಕದ ಕಡ್ಡಿಯನ್ನು ಸಮಿತ್ತಾಗಿ ಹೋಮ

ಮಾಡುತ್ತಾರೆ. ಅಗ್ನಿ ಮತ್ತು ಪಶುಪತಿಗಳು ಈತನ ಅಧಿದೇವತೆ ಮತ್ತು ಪ್ರತ್ಯಧಿ ದೇವತೆಗಳು.

ಈತನ ಕಾಲಗತಿಯನ್ನೇ ಅನುಸರಿಸಿ ಲೆಕ್ಕಾಚಾರ ಹಾಕುವ ಪಂಚಾಂಗವೇ 'ಸೌರಮಾನ ಪಂಚಾಂಗ.' ಈತನು ತಿಂಗಳಿಗೆ ಒಂದು ರಾಶಿಯಂತೆ ವರ್ಷಕ್ಕೆ ಮೇಷಾದಿ ಯಾಗಿ ಹನ್ನೆರಡು ರಾಶಿಗಳನ್ನು ಪ್ರವೇಶಿಸುತ್ತಾನೆ. ಅವೇ ಮೇಷ, ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನಸ್ಸು, ಮಕರ, ಕುಂಭ, ಮೀನ. ಕಾಲಗತಿಯು ಸೂರ್ಯನ ಚಾಲನೆಯ ಮೇಲೆಯೇ ನಿಂತಿವೆ. ಪ್ರಪಂಚದ ಎಲ್ಲ ಕಡೆ ಗಳಲ್ಲಿಯೂ ಕಾಲದ ಮಾನ ಒಂದೇ ಆಗಿರುವುದಕ್ಕೆ ಒಬ್ಬ ಸೂರ್ಯನೇ ಕಾರಣನಾಗಿ ದ್ದಾನೆ.

ಜ್ಯೋತಿಷ್ಯ ಶಾಸ್ತ್ರದಲ್ಲಿ ಬಹುಮುಖ್ಯ ಅಂಶವೆಂದರೆ ಫಲನಿರ್ಣಯ. ಸೂರ್ಯನು ಬಲ, ಧೈರ್ಯ, ದೇಹಪ್ರಭಾವ, ಮೂರ್ತಿ, ವನ, ದುರ್ಗ, ಗಿರಿ, ನದೀವಾಸ, ದೋಷ, ಕಂಟಕ, ರಜ್ಜು, ನೇತ್ರರೋಗಗಳು, ಸ್ನೇಹಗುಣ, ಪರರಾಜಸೇವೆ, ಪ್ರಕಟಪ್ರವರ್ತನೆ, ವ್ಯಸನ, ಸಂಚಾರ, ವ್ಯಾಧಿ, ಕ್ರೋಧ, ಆತ್ಮಸ್ತುತಿ, ಆತ್ಮಪ್ರಭಾವ, ಪಿತ್ತೋಷ್ಣಮೂಲ, ಪಿತೃಯೋಗ ಇವುಗಳಿಗೆ ಕಾರಕನು. ಜಾತಕದಲ್ಲಿ ಸೂರ್ಯನು ಯಾವಸ್ಥಾನದಲ್ಲಿದ್ದಾ ನೆಂದು ನೋಡಿ ಅದಕ್ಕೆ ಅನುಸಾರವಾಗಿ ಫಲಗಳನ್ನು ಹೇಳಬೇಕು. ಉದಾಹರಣಾರ್ಥ ವಾಗಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

ಜಾತಕನ ಲಗ್ನದಲ್ಲಿ ಸೂರ್ಯನಿದ್ದರೆ ಜಾತಕನಿಗೆ ಶಾಂತಿಯೂ ತೇಜಸ್ಸೂ, ಉಷ್ಣ ಪಿತ್ತಾದಿ ದೇಹಗುಣವೂ. ತೆಳ್ಳನೆಯ ಶರೀರವೂ, ಕೋಪ ಹಾಗೂ ರಾಜಸಗುಣಗಳೂ ಇರುತ್ತವೆ. ಲಗ್ನವು ಯಾವುದಾದರೂ ಸರಿಯೆ. ಅಲ್ಲಿ ಸೂರ್ಯನಿದ್ದರೆ ಈ ಫಲವು.

ಲಗ್ನದಿಂದ ದ್ವಿತೀಯ ಅಂದರೆ ಭಾಗ್ಯಸ್ಥಾನದಲ್ಲಿ ರವಿಯ ಜತೆಗೆ ಬುಧನಿದ್ದರೆ ಆತ ತರ್ಕಶಾಸ್ತ್ರದಲ್ಲಿ ಪಂಡಿತನಾಗುತ್ತಾನೆ. ಲಗ್ನಾದಿಯಾಗಿ ನವಮ, ಪಂಚಮ, ದಶಮ ಗಳಲ್ಲಿ ಸೂರ್ಯನ ಜತೆಗೆ ಶನಿ ಮತ್ತು ಕುಜರಿದ್ದರೆ ತಂದೆಗೆ ಮರಣವು. ನಾಲ್ಕರಲ್ಲಿ ರವಿಯಿದ್ದರೆ ಗಣಿಕನೂ ಮತ್ತು ಅವಿವೇಕಿಯೂ ಆಗುತ್ತಾನೆ.

ಫಲವನ್ನು ಹೇಳುವಾಗ ಕೆಲವು ಯೋಗಗಳನ್ನು ಹೇಳುತ್ತಾರೆ. ಸೂರ್ಯನಿಗೆ ಸಂಬಂಧಿಸಿದ ಕೆಲವು ಯೋಗಗಳನ್ನು ನೋಡೋಣ.

ಧನಯೋಗ :— ಸೂರ್ಯನ ದೆಶೆಯಿಂದ ಎರಡನೇ ರಾಶಿಯು ಶುಭಗ್ರಹದಿಂದ ಕೂಡಿದ್ದರೆ ಜಾತಕನು ಧನವುಳ್ಳವನಾಗಿ ಸುಖಿಯಾಗಿರುತ್ತಾನೆ.

ಗಂಗಾಸ್ನಾನಯೋಗ :— ಸೂರ್ಯನು ನವಮದಲ್ಲಿ ಶುಭಗ್ರಹದ ದ್ರೇಕ್ಕಾಣಾಂಶ ಗತನಾಗಿದ್ದರೆ ಜಾತಕನಿಗೆ ಗಂಗಾಸ್ನಾನ ಯೋಗವಿರುತ್ತದೆ.

ಮಕ್ಕಳಾಗದಿರುವ ಯೋಗ :— ಸೂರ್ಯನು ಶನಿಯೊಡನೆ ಸಪ್ತಮದಲ್ಲಿದ್ದರೆ ಸಂತಾನವಿಲ್ಲವೆಂದು ತಿಳಿಯಬೇಕು.

ದಶಾಫಲವು :

'ರವಿದಶೆ' ಆರು ವರ್ಷಗಳು. ದಶೆಗಳು ರವಿದಶೆಯಿಂದಲೇ ಪ್ರಾರಂಭವಾಗುತ್ತವೆ. ರವಿಯು ಜಾತಕದಲ್ಲಿ ಉಚ್ಚರಾಶಿಯಲ್ಲಿದ್ದರೆ ತನ್ನ ದಶೆಯಲ್ಲಿ ಜಾತಕನಿಗೆ ಗಜಾಶ್ವಾದಿ ವಾಹನಗಳನ್ನೂ, ವಸ್ತ್ರಾಭರಣಗಳನ್ನೂ ಕಳತ್ರ ಪುತ್ರಾದಿ ಸುಖವನ್ನೂ, ದೇವಬ್ರಾಹ್ಮಣ ಪೂಜೆಯನ್ನೂ, ಯಾತ್ರಾಫಲಗಳನ್ನೂ ಕೊಡುತ್ತಾನೆ. ಮಿತ್ರಸ್ಥಾನದಲ್ಲಿದ್ದರೆ ತನ್ನ ದಶಾಕಾಲದಲ್ಲಿ ಧನಧಾನ್ಯ, ಗೋ ಹಿರಣ್ಯರತ್ನಾದಿ ಲಾಭಗಳನ್ನೂ, ಸಮಸ್ಥಾನದಲ್ಲಿದ್ದರೆ ಬಂಧುಸುಖವನ್ನೂ, ಶತ್ರುಸ್ಥಾನದಲ್ಲಿದ್ದರೆ ಸ್ವಜನವಿರೋಧ, ಪರದೇಶಗಮನ, ಕಷ್ಟಪ್ರಾಪ್ತಿ, ಧನವ್ಯಯ ಮೊದಲಾದವುಗಳನ್ನೂ, ನೀಚಂಗತನಾಗಿದ್ದರೆ ರೋಗಭಯ, ಸ್ಥಾನಭ್ರಷ್ಟತೆ, ಬಂಧುವಿಯೋಗಾದಿಗಳನ್ನೂ, ಶುಭರೊಡನೆ ಕೂಡಿದ್ದರೆ ಸ್ವಜನಪ್ರೀತಿಯನ್ನೂ, ಕುಟುಂಬದ ಅಭಿವೃದ್ಧಿಯನ್ನೂ, ರಾಜಮೈತ್ರಿಯನ್ನೂ ಉಂಟುಮಾಡುತ್ತಾನೆ. ಸೂರ್ಯನು ಪಾಪಗ್ರಹಗಳಿಂದ ನೋಡಲ್ಪಡುತ್ತಿದ್ದರೆ ತನ್ನ ದಶೆಯಲ್ಲಿ ಬಹಳ ಕಷ್ಟವನ್ನೂ, ರೋಗಬಾಧೆಯನ್ನೂ, ಸ್ವಜನ ನಾಶವನ್ನೂ, ಕ್ಷೇತ್ರನಾಶ, ಪಾದಭ್ರಂಶ ಮುಂತಾದುವನ್ನೂ ಉಂಟು ಮಾಡುತ್ತಾನೆ.

ಗೋಚಾರ ಫಲ :

ತತ್ಕಾಲಿಕ ಫಲವನ್ನು ವ್ಯಕ್ತಿಯನ್ನು ಕುರಿತು ಹೇಳುವುದಕ್ಕೆ 'ಗೋಚಾರ ಫಲ' ವೆಂದು ಹೆಸರು. ಸೂರ್ಯನಿಗೆ ಸಂಬಂಧಿಸಿದಂತೆ ಗೋಚಾರ ಫಲವನ್ನು ನೋಡೋಣ, ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವುದಕ್ಕೆ ಐದು ದಿನ ಮುಂಚಿತವಾಗಿಯೇ ಮುಂದಿನ ರಾಶಿಯ ಮೇಲೆ ಆತನ ದೃಷ್ಟಿ ಬೀಳುತ್ತದೆ. ಅಂದಿನಿಂದಲೇ ಆ ರಾಶಿಯ ಫಲವು ಪ್ರಾಪ್ತವಾಗುತ್ತದೆ. ಸೂರ್ಯನು ಜನ್ಮರಾಶಿ ಮೊದಲ್ಗೊಂಡು ಕ್ರಮವಾಗಿ ಹನ್ನೆರಡು ರಾಶಿಗಳಲ್ಲಿ ಸಂಚರಿಸುವಾಗ ಕೊಡುವ ಫಲವೇ 'ಸೂರ್ಯ ಗೋಚಾರ ಫಲ'. ಈ ಫಲಗಳು ಆಯಾ ತಿಂಗಳುಗಳಿಗೆ ಸೀಮಿತ.

ಸ್ಥಾನಭ್ರಷ್ಟಂ ಭಯಂ ಸೌಖ್ಯಂ | ಮಾನಭಂಗಂ ಮನೋವ್ಯಥಾಂ |
ಶತ್ರುಕ್ಷಯಂ ಗತಿಂ ರೋಗಂ | ದುಃಖಂ ಸಿದ್ಧಿಂ ಧನಂವ್ಯಯಂ |
ಕ್ರಮೇಣ ಜನ್ಮರಾಶ್ಯಾದಿ ಕುರುತೇ ಪದ್ಮಬಾಂಧವಃ ||

ಅಂದರೆ ಜನ್ಮರಾಶಿಯಿಂದ ಅನುಕ್ರಮವಾಗಿ ಸ್ಥಾನನಾಶ, ಭಯ, ಸಂಪತ್ತು, ಮಾನನಷ್ಟ, ವ್ಯಥೆ, ಶತ್ರುನಾಶ, ಪ್ರಯಾಣ, ಪೀಡೆ, ದ್ವೇಷ, ಕಾರ್ಯಸಿದ್ಧಿ, ಧನಲಾಭ, ಧನವ್ಯಯ —ಈ ಫಲಗಳನ್ನು ಕೊಡುತ್ತಾನೆ. ಆದ್ದರಿಂದ ಸೂರ್ಯನು, ೩, ೬, ೧೦ ಮತ್ತು ೧೧ನೇ ಮನೆಗಳಲ್ಲಿ ಶುಭನು.

ಕುಜದೋಷ :

ಜಾತಕದಲ್ಲಿ ಕುಜದೋಷವೆಂಬುದೊಂದುಂಟು. ಸೂರ್ಯನಿರುವ ಮನೆಯಿಂದ

ಕೆಲವು ಕಡೆಗಳಲ್ಲಿ ಕುಜನಿದ್ದರೆ ಅವಕ್ಕೆ ಕುಜದೋಷವೆಂದು ಹೇಳುತ್ತಾರೆ. ವಿವಾಹ ಸಂದರ್ಭದಲ್ಲಿ ವಧೂವರರ ಜಾತಕದಲ್ಲಿ ಇವನ್ನು ನೋಡುತ್ತಾರೆ. ಆದರೆ,

ಅರ್ಕೇಂದು ಕ್ಷೇತ್ರಜಾತಾನಾಂ ಬಾಧಕೋ ನ ಭವೇತ್ ಕುಜಃ ।

ಎಂಬ ಉಕ್ತಿಯಂತೆ ಸೂರ್ಯನ ಸ್ಥಾನವಾದ ಸಿಂಹಲಗ್ನದಲ್ಲಿ ಸಮುದ್ಭವರಾದವರಿಗೆ ಈ ಕುಜದೋಷವು ಇರುವುದಿಲ್ಲ.

ಶುಭಕಾರ್ಯಗಳು :

ಕೆಲವು ಶುಭಕಾರ್ಯಗಳನ್ನು ಮಾಡುವಾಗ ಸೂರ್ಯನ ಸ್ಥಾನವನ್ನು ಜಾತಕದಲ್ಲಿ ಗಮನಿಸುತ್ತಾರೆ.

ಅಕ್ಷರಾಭ್ಯಾಸ :

ಸೂರ್ಯನಿಗೆ ಎರಡು ಅಯನಗಳಿವೆ. ಒಂದು ಉತ್ತರಾಯಣ ಮತ್ತೊಂದು ದಕ್ಷಿಣಾಯಣ. ಸೂರ್ಯನು ಉತ್ತರಾಯಣದಲ್ಲಿರುವಾಗ ಮಗುವಿಗೆ ಅಕ್ಷರಾಭ್ಯಾಸ ಪ್ರಾರಂಭ ಮಾಡಬೇಕೆಂದು ವಿಧಿ.

ವಿವಾಹ, ಚೌಲ, ಉಪನಯನ :

ಆರ್ದ್ರಾದಿಕೇ ಸ್ವಾತಿ ವಿರಾಮ ಕಾಲೇ ನಕ್ಷತ್ರ ಬೃಂದೇದಶಿಕೇತಿಥ್ಯೈವ ।
ವಿವಾಹ ಚೌಲವ್ರತಬಂಧನಾಖ್ಯಂ ಸುರಪ್ರತಿಷ್ಠಾಚ ನ ಕಾರ್ಯಮೇವ ॥

ಎಂಬ ಉಕ್ತಿಯಂತೆ ಸೂರ್ಯನು ಆರಿದ್ರಾನಕ್ಷತ್ರ ಮೊದಲ್ಗೊಂಡು ಸ್ವಾತೀ ನಕ್ಷತ್ರ ದವರೆಗೆ ಹತ್ತು ನಕ್ಷತ್ರಗಳಲ್ಲಿರುವಾಗ, ವಿವಾಹ, ಚೌಲ ಹಾಗೂ ಉಪನಯನ ಕರ್ಮ ಗಳನ್ನು ಮಾಡಕೂಡದು.

ಯತ್ರೈಕಾದಶಸ್ಸೂರ್ಯೋ ದೋಷನಾಶಂ ಯುಯುಸ್ತದಾ ।
ಸ್ಮರಣಾದಿವ ರುದ್ರಸ್ಯ ಪಾಪಂ ಜನ್ಮಶತೋದ್ಭವಂ ॥

ವಿವಾಹ ಲಗ್ನಕ್ಕೆ ೧೧ನೇ ರಾಶಿಯಲ್ಲಿರುವ ಸೂರ್ಯನು, ಶಿವನ ಸ್ಮರಣೆಯು ಬಹುಜನ್ಮ ಕೃತ ಪಾಪವನ್ನು ಪರಿಹರಿಸುವಂತೆ ಸಮಸ್ತ ದೋಷಗಳನ್ನು ಹರಿಸುವನು.

ಅಭಿಜಿನ್ಮುಹೂರ್ತ :

ಮಧ್ಯಂದಿನ ಗತೇ ಭಾನೌ ಮುಹೂರ್ತೋಭಿಜಿದಾಹ್ವಯಃ ।
ಸರ್ವದೋಷಾನ್ನಿಹಂತ್ಯಾಶು ಪೀನಾಕೀ ಪುರಂ ಯಥಾ ॥

ಸೂರ್ಯನು ಆಕಾಶ ಮಧ್ಯದಲ್ಲಿರುವಾಗ ಒಂದು ಮುಹೂರ್ತ ಕಾಲವನ್ನು 'ಅಭಿಜಿನ್ಮು ಹೂರ್ತ' ಎನ್ನುತ್ತಾರೆ. ಈ ಕಾಲವು ಪರಮೇಶ್ವರನು ತ್ರಿಪುರನನ್ನು ದಹಿಸಿದಂತೆ ಸಕಲ ದೋಷಗಳನ್ನೂ ನಾಶ ಮಾಡುತ್ತದೆ.

ನವಗ್ರಹ ಜಪ, ಹೋಮ ಮತ್ತು ದಾನ:

ಗ್ರಹಗಳು ಕ್ರೂರವಾದಾಗ ನವಗ್ರಹ ಜಪ ಅಥವಾ ಹೋಮ ಅಥವಾ ದಾನ ಮಾಡುವ ಪದ್ಧತಿಯು ಬಹು ಹಿಂದಿನಿಂದಲೂ ಬೆಳೆದು ಬಂದಿದೆ. ಅಲ್ಲದೆ ಉಪನಯನ, ವಿವಾಹ ಮುಂತಾದ ಶುಭಕರ್ಮಗಳಲ್ಲಿಯೂ ಮತ್ತು ಕಲ್ಪೋಕ್ತ ಪ್ರಕಾರವಾದ ಕೆಲವು ವ್ರತಗಳಲ್ಲಿಯೂ ನವಗ್ರಹ ಪೂಜೆಯು ಬೆಳೆದು ಬಂದಿದೆ. ಈ ನವಗ್ರಹಗಳಲ್ಲಿ ಸೂರ್ಯನೇ ಮೊದಲನೆಯವನಾದುದರಿಂದ ಈತನ ಜಪ, ಹೋಮ, ಪೂಜೆ ಮತ್ತು ದಾನಗಳು ಮೊದಲು ನಡೆಯುತ್ತದೆ.

೫೦) ಸೂರ್ಯ ಸ್ತೋತ್ರಗಳು :

ಸೂರ್ಯನನ್ನು ವೇದೋಪನಿಷತ್ತು, ಪುರಾಣ, ಕಾವ್ಯೇತಿಹಾಸ, ಆಗಮ, ಜ್ಯೋತಿಷ್ಯ ಶಾಸ್ತ್ರಗಳಲ್ಲೇ ಅಲ್ಲದೆ ಸ್ತೋತ್ರಗಳಲ್ಲಿ ಕೂಡ ಸ್ತುತಿಸಿದ್ದಾರೆ. ಸೂರ್ಯ ಪರವಾದ ಸ್ತೋತ್ರಗಳು ಅಗಣಿತವಾಗಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಸಂಕ್ಷಿಪ್ತ ವಾಗಿ ನೋಡೋಣ.

೧. ಸೂರ್ಯ ಕವಚ :

ಯಶ ಆರೋಗ್ಯಮೋಕ್ಷೇಷು ವಿನಿಯೋಗಃ ಪ್ರಕೀರ್ತಿತಃ ।
ಪ್ರಣವೋ ಮೇ ಶಿರಃ ಪಾತು ಘೃಣಿರ್ಮೇ ಪಾತು ಭಾಲಕಮ್ ॥ ೫ ॥
ಸೂರ್ಯೋಽವ್ಯಾನ್ನಯನ ದ್ವಂದ್ವಮಾದಿತ್ಯಃ ಕರ್ಣಯುಗ್ಮಕಮ್ ।
ಅಷ್ಟಾಕ್ಷರೋ ಮಹಾಮಂತ್ರಃ ಸರ್ವಾಭೀಷ್ಟ ಫಲಪ್ರದಃ ॥ ೬ ॥
ಅಜ್ಞಾತ್ವಾ ಕವಚಂ ದಿವ್ಯಂ ಯೋಜಯೇತ್ ಸೂರ್ಯಮುತ್ತಮಂ ।
ಸಿದ್ಧಿರ್ನಜಾಯತೇ ತಸ್ಯ ಕಲ್ಪಕೋಟಿ ಶತೈರಪಿ ॥ ॥ ೧೮ ॥

೨. ಸೂರ್ಯಕವಚ ಸ್ತೋತ್ರ :

ಶಿರೋಮೇ ಭಾಸ್ಕರಃ ಪಾತು ಲಲಾಟಂ ಮೇಽಮಿತದ್ಯುತಿಃ ।
ನೇತ್ರೇ ದಿನಮಣಿಃ ಪಾತು ಶ್ರವಣೇ ವಾಸರೇಶ್ವರಃ ॥ ॥ ೩ ॥

೩. ಆದಿತ್ಯ ಹೃದಯ :

ಆದಿತ್ಯಂ ಭಾಸ್ಕರಂ ಭಾನುಂ ರವಿಂ ಸೂರ್ಯಂ ದಿವಾಕರಂ ।
ಮಾರ್ತಾಂಡ ತಪನಂ ಚೇತಿ ದಶೈತಾನ್ಸಂಸ್ಮರೇತ್ ಸುಯೋಜಯೇತ್ ॥ ೩ ॥
ಸರ್ವಾತ್ಮಾ ಸರ್ವಕರ್ತಾಚ ಸೃಷ್ಟಿ ಜೀವನ ಪಾಲಕಃ ।
ಹಿತಃ ಸ್ವರ್ಗಾಪವರ್ಗಸ್ತು ಭಾಸ್ಕರೇಶ ನಮೋಸ್ತು ತೇ ॥ ॥ ೬ ॥
ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾಯ ನಮೋನಮಃ ।
ನಮೋತ್ತರಾಯ ಗಿರಯೇ ದಕ್ಷಿಣಾಯ ನಮೋನಮಃ ॥ ॥ ೪೦ ॥

೪. ಆದಿತ್ಯ ಸ್ತೋತ್ರ :

ಏಕಚಕ್ರ ರಥೋಯಸ್ಯ ದಿವಃ ಕನಕ ಭೂಷಿತಃ ।
ಸೋಽಯಂ ಭವತು ನಃ ಪ್ರೀತಃ ಪದ್ಮಹಸ್ತೋ ದಿವಾಕರಃ ॥ ॥ ೪ ॥
ಧರ್ಮಮೂರ್ತಿರ್ದಯಾಮೂರ್ತಿಸ್ತತ್ವಮೂರ್ತಿರ್ನಮೋನಮಃ ।
ಸಕಲೇಶಾಯ ಸೂರ್ಯಾಯ ಕ್ಷಾಂತೇಶಾಯ ನಮೋನಮಃ ॥ ॥ ೬ ॥

೫. ಸೂರ್ಯಾಷ್ಟಕ :

ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ ।
ದಿವಾಕರ ನಮಸ್ತುಭ್ಯಂ ಪ್ರಭಾಕರ ನಮೋಸ್ತುತೇ ॥ ॥ ೧ ॥
ಸಪ್ತಾಶ್ವರಥ ಸಮಾರೂಢಂ ಪ್ರಚಂಡಂ ಕಶ್ಯಪಾತ್ಮಜಮ್ ।
ಶ್ವೇತಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ ॥ ॥ ೨ ॥

೬. ಸೂರ್ಯಗೀತೆ :

ಸಪ್ತರ್ಷಿಗಳಿಗೂ ಸೂರ್ಯನಿಗೂ ನಡೆದಿರುವ ಸಂಭಾಷಣಾ ರೂಪವಾದ ಒಂದು ಗೀತೆಯನ್ನು "ಸೂರ್ಯಗೀತಾ" ಎಂದು ಕರೆಯಲಾಗಿದೆ. ಇದರಲ್ಲಿ ಕರ್ಮರಹಸ್ಯ ಕರ್ಮವಿಭಾಗ ನಿರೂಪಣ, ಸೃಷ್ಟಿಪ್ರಕರಣ ಮೊದಲಾದುವುಗಳನ್ನು ವಿವರಿಸುವ ೭ ಅಧ್ಯಾಯಗಳಿವೆ. ಆರನೇ ಅಧ್ಯಾಯದಲ್ಲಿ ಭಕ್ತಿ ಮತ್ತು ಯೋಗಗಳ ಭೇದ ನಿರೂಪಣೆಯಿದೆ. ಅದರಲ್ಲಿ ಭಕ್ತಿಯ ವಿಷಯವನ್ನು ಹೇಳುತ್ತಾ ಸೂರ್ಯನು, ರಾಗಾತ್ಮಿಕಾ ಭಕ್ತಿ ಮತ್ತು ವೈಧೀ ಭಕ್ತಿಗಳನ್ನು ನಿರ್ವಚಿಸಿದ್ದಾನೆ.

ರಾಗಾತ್ಮಿಕಾ ಭಕ್ತಿ :

ಅನುರಾಗೋ ಬಹುವಿಧೋ ವಿಷಯಾಣಾಂ ವಿಭೇದತಃ ।
ಪುತ್ರಾದಿಷ್ವನುರಾಗಃ ಸಃ ಸ್ನೇಹ ಇತ್ಯಭಿಧೀಯತೇ ॥
ಸ್ತ್ರೀ ಮಿತ್ರಾದಿಷು ಸಃ ಪ್ರೇಮಾ ಶ್ರದ್ಧಾ ಸ ಜನಕಾದಿಷು ।
ಮ್ಯಯೇವ ಸಾಧಕಾನಾಂ ಸ ಭಕ್ತಿರಿತ್ಯಭಿಧೀಯತೇ ॥

ವೈಧೀ ಭಕ್ತಿ :

ಗುರೂಪದೇಶ ಪೀಯೂಷ ವಿಧೌತ ಪೂತ ಮಾನಸಾಃ ।
ಮದೇಕ ಚಿತ್ತಾಭವಿತುಂ ಯತಂತೇ ಸಾಧಕಯದಾ ।
ಯದಾಸ್ವಾನೀಂದ್ರಿಯಾದೀನಿ ಮಧುಪಾಸ್ತಂತು ಸರ್ವಥಾ ।
ನಿಯೋಜಯಿತು ಮೀಹಂತೇ ತದಾ ವೈಧೀ ಪ್ರಕಾಶತೇ ॥

೭. ಮಂಗಳಾಷ್ಟಕ :

ಕಾಳಿದಾಸ ಕೃತವೆಂದು ಹೇಳುವ ಮಂಗಳಾಷ್ಟಕದಲ್ಲಿ ಮೊದಲನೆಯದೇ ಸೂರ್ಯ

ಪರವಾದ ಮಂಗಳ. ಇದನ್ನು ವಿವಾಹ ಸಂದರ್ಭದಲ್ಲಿ ವಧೂವರರಿಗೆ ಪರದೆಯೊಂದನ್ನು ಹಿಡಿದು ಪುರೋಹಿತರು ಪಠಿಸುತ್ತಾರೆ.

ಭಾಸ್ವಾನ್ಕಾಶ್ಯಪಗೋತ್ರ ಜೋಽರುಣ ರುಚಿಃ ಸಿಂಹಾಧಿಪೋಽ
ರ್ಕಸ್ಸಮಿತ್ ।
ಷಟ್ ತ್ರಿಸ್ಥೋದಶ ಶೋಭನೋ ಗುರು ಶಶೀ ಕ್ಷೋಣೀಜ ಮಿತ್ರಸ್ಸದಾ ।
ಶುಕ್ರಾರ್ಕೀಚ ರಿಪುಃ ಕಳಿಂಗ ಜನಪಶ್ಚಾಗ್ನೀಶ್ವರ ದೇವತೇ ।
ಮಧ್ಯೇವರ್ತುಳ ಪೂರ್ವ ದಿಙ್ಮುಖ ಇನಃ ಕುರ್ಯಾತ್ಸದಾ ಮಂಗಳಂ ॥

ಈ ಅಷ್ಟಕದಲ್ಲಿ ಸೂರ್ಯನಿಗೆ ಸಂಬಂಧಿಸಿದ ಎಲ್ಲ ವಿಷಯಗಳೂ ಇವೆ. ಆತನದು ಕಶ್ಯಪ ಗೋತ್ರ. ಈತನು ಕಳಿಂಗ ದೇಶಕ್ಕೆ ಅಧಿಪತಿ. ಈತನು ವರ್ತುಳಾಕಾರ. ಪೂರ್ವದಿಕ್ಕು ಈತನಿರುವ ಸ್ಥಳ. ಉಳಿದ ವಿಷಯಗಳನ್ನು ಹಿಂದೆಯೇ ತಿಳಿಸಿದೆ.

೮. ನವಗ್ರಹ ಸ್ತೋತ್ರ :

ನವಗ್ರಹಗಳಲ್ಲಿ ಮೊದಲನೆಯವನೇ ಈತನಾದುದರಿಂದ ಪ್ರಥಮ ಸ್ತೋತ್ರವೇ ಈತನದು.

ಜಪಾಕುಸುಮ ಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಂ ।
ತಮೋಽರಿಂ ಸರ್ವಪಾಪಘ್ನಂ ಪ್ರಣತೋಽಸ್ಮಿ ದಿವಾಕರಂ ॥

ಕೆಂಪು ದಾಸವಾಳದ ಹೂವಿನ ಬಣ್ಣದವನೂ, ಕಶ್ಯಪನ ಮಗನೂ, ಅತಿ ಪ್ರಕಾಶವುಳ್ಳವನೂ, ಅಂಧಕಾರಕ್ಕೆ ಶತ್ರುವೂ, ಸರ್ವಪಾಪಗಳನ್ನು ನಾಶ ಮಾಡುವವನೂ ಆದ ಸೂರ್ಯದೇವನಿಗೆ ನಮಸ್ಕರಿಸುತ್ತೇನೆ.

ಸೂರ್ಯನು ಪ್ರಾತಸ್ಮರಣೀಯರಲ್ಲಿ ಒಬ್ಬನು. ಬೆಳಿಗ್ಗೆ ಎದ್ದು ಯಾರುಯಾರನ್ನು ನೋಡಬೇಕೆಂಬ ಪಟ್ಟಿಯಲ್ಲಿ ಸೂರ್ಯನೂ ಸೇರಿದ್ದಾನೆ.

ಕಪಿಲಾನ್ ದರ್ಪಣಂ ಭಾನುಂ ಭಾಗ್ಯವಂತಶ್ಚ ಭೂಪತಿಃ ।
ಆಚಾರ್ಯಮನ್ನದಾತಾರಶ್ಚ ಪ್ರಾತಃ ಪಶ್ಯೇತ್ಪತಿವ್ರತಾಂ ॥

ಪ್ರಾತಃಕಾಲ ಹಾಸಿಗೆಯಿಂದ ಎದ್ದಕೂಡಲೇ ಹಸು, ಕನ್ನಡಿ, ಸೂರ್ಯ, ಭಾಗ್ಯವಂತ, ರಾಜ, ಗುರು, ಅನ್ನದಾತ ಮತ್ತು ಪತಿವ್ರತೆ—ಇಷ್ಟು ಜನರನ್ನು ನೋಡಬೇಕು. ಇವರಲ್ಲಿ ಯಾರನ್ನು ನೋಡಲು ಸಾಧ್ಯವಾಗದಿದ್ದರೂ ಸೂರ್ಯನನ್ನು ನೋಡಲು ಕಷ್ಟಪಡಬೇಕಾಗಿಲ್ಲ.

೯. ಅಮರಕೋಶದಲ್ಲಿ ಸೂರ್ಯ :

ಅಮರಕೋಶದಲ್ಲಿ ಕೊಟ್ಟಿರುವ ಸೂರ್ಯನ ಪರ್ಯಾಯ ಪದಗಳು ಸ್ತೋತ್ರ ರೂಪವಾಗಿಯೇ ಇದೆ.

ಸೂರ ಸೂರ್ಯಾರ್ಯಮಾದಿತ್ಯ ದ್ವಾದಶಾತ್ಮಾ ದಿವಾಕರಃ ।
ಭಾಸ್ಕರಾ ಹಸ್ಕರ ಬ್ರಧ್ನ ಪ್ರಭಾಕರ ವಿಭಾಕರಃ । ॥ ೧ ॥

ಭಾಸ್ವದ್ವಿವಸ್ವತ್ ಸಪ್ತಾಶ್ವಹರಿದಶ್ವೋಷ್ಣ ರಶ್ಮಯಃ |
ವಿಕರ್ತನಾರ್ಕ ಮಾರ್ತಾಂಡ ಮಿಹಿರಾರುಣ ಪೂಷಣಃ || || ೨ ||
ದ್ಯುಮಣಿಸ್ತರಣಿರ್ಮಿತ್ರಃ ಚಿತ್ರಭಾನುರ್ವಿರೋಚನಃ |
ವಿಭಾವಸುರ್ಗ್ರಹಪತಿಃ ತ್ವಿಷಾಂಪತಿರಹರ್ಪತಿಃ || || ೩ ||
ಭಾನುರ್ಹಂಸಃ ಸಹಸ್ರಾಂಶು ತಪನಸ್ಸವಿತಾರವಿಃ |
ಕರ್ಮಸಾಕ್ಷೀ ಜಗಚ್ಚಕ್ಷುಃ ಅಂಸುಮಾಲೀ ತ್ರಯಿತನುಃ || || ೪ ||
ಪ್ರದ್ಯೋತನೋ ದಿನಮಣಿಃ ಖದ್ಯೋತೋ ಲೋಕಬಾಂಧವಃ |
ಸುರಸ್ತವೋ ಧಾಮನಿಧಿಃ ಪದ್ಮಿನೀ ವಲ್ಲಭೋ ಹರಿಃ || || ೫ ||

ಪ್ರತಿಯೊಂದು ಪರ್ಯಾಯ ಪದದ ಅರ್ಥ :

೧) ಸೂರ= ಸಂಚರಿಸುವವನು
೨) ಸೂರ್ಯ= ಜನರನ್ನು ಅವರವರ ವ್ಯಾಪಾರದಲ್ಲಿ ತೊಡಗಿಸುವವನು
೩) ಆರ್ಯಮ= ಗಮನ ಕ್ರಿಯೆಯುಳ್ಳವನು
೪) ಆದಿತ್ಯ= ಅದಿತಿಯ ಮಗ
೫) ದ್ವಾದಶಾತ್ಮಾ= ಹನ್ನೆರಡು ಶರೀರವುಳ್ಳವನು
೬) ದಿವಾಕರ= ಹಗಲನ್ನು ಉಂಟುಮಾಡುವವನು
೭) ಭಾಸ್ಕರ= ಕಾಂತಿಯನ್ನುಂಟುಮಾಡುವವನು
೮) ಅಹಸ್ಕರ= ಹಗಲನ್ನು ಉಂಟುಮಾಡುವವನು
೯) ಬ್ರಧ್ನ= ಅಂಧಕಾರವನ್ನು ಹೋಗಲಾಡಿಸುವವನು
೧೦) ಪ್ರಭಾಕರ= ಬೆಳಕನ್ನು ಉಂಟುಮಾಡುವವನು
೧೧) ವಿಭಾಕರ= ವಿಶೇಷವಾದ ಬೆಳಕನ್ನು ಉಂಟುಮಾಡುವವನು
೧೨) ಭಾಸ್ವಾನ್= ಕಾಂತಿಯುಳ್ಳವನು
೧೩) ವಿವಸ್ವಾನ್= ಕಾಂತಿಯಿಂದ ಎಲ್ಲರನ್ನೂ ಮುಚ್ಚತಕ್ಕವನು
೧೪) ಸಪ್ತಾಶ್ವ= ಏಳು ಕುದುರೆಗಳನ್ನು ಹೊಂದಿದವನು
೧೫) ಹರಿದಶ್ವ= ಹಸುರು ಬಣ್ಣದ ಕುದುರೆಗಳನ್ನು ಹೊಂದಿರುವವನು
೧೬) ಉಷ್ಣರಶ್ಮಿ= ಶಾಖ ಕಿರಣವನ್ನು ಹೊಂದಿರುವವನು
೧೭) ವಿಕರ್ತನ= ಕತ್ತಲೆಯನ್ನು ಕತ್ತರಿಸುವವನು
೧೮) ಅರ್ಕ= ಪೂಜಿಸಲ್ಪಡುವವನು
೧೯) ಮಾರ್ತಾಂಡ= ನಾಶವಾದ ಬ್ರಹ್ಮಾಂಡವನ್ನು ಬದುಕಿಸುವವನು
೨೦) ಮಿಹಿರ= ಮೇಘರೂಪವಾಗಿ ಪ್ರಪಂಚವನ್ನು ಒದ್ದೆ ಮಾಡುವವನು
೨೧) ಅರುಣ= ಕೆಂಪು ಬಣ್ಣದವನು
೨೨) ಪೂಷಾ= ಜಗತ್ತನ್ನು ಪೋಷಿಸುವವನು

೨೩) ದ್ಯುಮಣಿ= ಆಕಾಶಕ್ಕೆ ಮಣಿಯಂತೆ ಇರುವವನು
೨೪) ತರಣಿ= ಆಕಾಶವನ್ನು ದಾಟಿ ಹೋಗುವವನು
೨೫) ಮಿತ್ರ= ಸ್ನೇಹಯುಕ್ತನು
೨೬) ಚಿತ್ರಭಾನು= ನಾನಾವರ್ಣದ ಕಿರಣಗಳುಳ್ಳವನು
೨೭) ವಿರೋಚನ= ಹೆಚ್ಚಾಗಿ ಪ್ರಕಾಶಿಸುವವನು
೨೮) ವಿಭಾವಸು= ಕಾಂತಿಯನ್ನೇ ಧನವಾಗಿ ಉಳ್ಳವನು
೨೯) ಗ್ರಹಪತಿ= ಗ್ರಹಗಳಿಗೆ ಒಡೆಯನು
೩೦) ತ್ವಿಷಾಂಪತಿ= ಕಾಂತಿಗಳಿಗೆ ಒಡೆಯನು
೩೧) ಅಹರ್ಪತಿ= ಹಗಲಿಗೆ ಒಡೆಯನು (ಅಹಸ್ಸು= ಹಗಲು)
೩೨) ಭಾನು= ಪ್ರಕಾಶಿಸುವವನು
೩೩) ಹಂಸ= ಕತ್ತಲೆಯನ್ನು ಹೋಗಲಾಡಿಸುವವನು
೩೪) ಸಹಸ್ರಾಂಶು= ಸಾವಿರ ಕಿರಣಗಳನ್ನು ಹೊಂದಿರುವವನು
೩೫) ತಪನ= ತಾಪವನ್ನು ಉಂಟುಮಾಡುವವನು
೩೬) ಸವಿತಾ= ನಿದ್ರೆಯಿಂದ ಎಚ್ಚರಿಸುವವನು
೩೭) ರವಿ= ಸ್ತೋತ್ರ ಮಾಡಲ್ಪಡುವವನು
೩೮) ಕರ್ಮಸಾಕ್ಷೀ= ನಾವು ಮಾಡುವ ಕರ್ಮಗಳಿಗೆ ಸಾಕ್ಷಿಭೂತನು
೩೯) ಜಗಚ್ಚಕ್ಷು= ಜಗತ್ತಿನ ಕಣ್ಣು
೪೦) ಅಂಶುಮಾಲೀ= ಕಿರಣಗಳನ್ನು ಮಾಲೆ ಹಾಕಿಕೊಂಡಿರುವವನು
೪೧) ತ್ರಯಿತನು= ವೇದತ್ರಯಾತ್ಮಕ
೪೨) ಪ್ರದ್ಯೋತ= ಹೆಚ್ಚಾಗಿ ಪ್ರಕಾಶಿಸುವವನು
೪೩) ದಿನಮಣಿ= ದಿನಕ್ಕೆ ಮಣಿಯಂತಿರುವವನು
೪೪) ಖದ್ಯೋತ= ಆಕಾಶದಲ್ಲಿ ಪ್ರಕಾಶಿಸುವವನು
೪೫) ಲೋಕಬಾಂಧವ= ಜಗತ್ತಿಗೆ ಬಂಧುವು
೪೬) ಸುರೋತ್ತಮ= ದೇವತೆಗಳಲ್ಲಿ ಶ್ರೇಷ್ಠನಾದವನು
೪೭) ಧಾಮನಿಧಿ= ಕಾಂತಿಗಳಿಗೆ ನಿಧಿಯು
೪೮) ಪದ್ಮಿನೀವಲ್ಲಭ= ತಾವರೆ ಹೂವಿಗೆ ಒಡೆಯನು
೪೯) ಹರಿ= ಕತ್ತಲೆಯನ್ನು ಹೋಗಲಾಡಿಸುವವನು

೨) ಸೂರ್ಯ ದೇವಾಲಯಗಳು

ಹೀಗೆ ದೇವತಾ ಸ್ವರೂಪನಾದ ಸೂರ್ಯದೇವನಿಗೆ ದೇವಾಲಯಗಳೇಕಿಲ್ಲ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಹಿಂದೆ ನಮ್ಮ ದೇಶದಲ್ಲಿ ಸೂರ್ಯನಿಗೆ ದೊಡ್ಡ ದೊಡ್ಡ ದೇವಾಲಯಗಳಿದ್ದುವು ಎಂಬುದಕ್ಕೆ ಪುರಾವೆಗಳಿವೆ. ಈ ದೇವಾಲಯಗಳು

ಮುಲ್ತಾನ್ ಹಾಗೂ ಗುಜರಾತಿನಲ್ಲಿವೆ. ಈಗಲೂ ಪ್ರವಾಸಿಗರ ಕಣ್ಮನಗಳನ್ನು ಸೆಳೆಯುತ್ತಿರುವ ಒರಿಸ್ಸಾದ ಕೊನಾರ್ಕದಲ್ಲಿರುವ ಸೂರ್ಯ ದೇವಾಲಯವು ಹಿಂದೆ ದೊಡ್ಡ ದೊಡ್ಡ ಸೂರ್ಯ ದೇವಾಲಯಗಳಿದ್ದುವೆಂಬುದನ್ನು ರುಜುವಾತು ಪಡಿಸಲು ಉಳಿದಿರುವ ಒಂದು ಅವಶೇಷ.

ಈಗ ಸೂರ್ಯನಿಗೆ ಪ್ರತ್ಯೇಕವಾದ ದೇವಾಲಯಗಳಿಲ್ಲದಿದ್ದರೂ ನವಗ್ರಹ ದೇವಾಲಯದಲ್ಲಿ ಸೂರ್ಯನಿಗೆ ಕೇಂದ್ರಸ್ಥಾನವಿದೆ. ಇಷ್ಟೇ ಅಲ್ಲದೆ ಶಿವಾಲಯ ಹಾಗೂ ವಿಷ್ಣು ದೇವಾಲಯಗಳಲ್ಲಿ 'ಸೂರ್ಯನಾರಾಯಣ' ಎಂಬ ಹೆಸರಿನಿಂದ ಚಿಕ್ಕ ಮೂರ್ತಿಯೊಂದು ಉಪದೇವತೆಯಾಗಿ ಪ್ರತಿಷ್ಠೆಯಾಗಿರುತ್ತವೆ. ಒಂದಲ್ಲ ಒಂದು ವಿಧದಲ್ಲಿ ಸೂರ್ಯನಿಗೆ ಪೂಜೆಯು ಸಲ್ಲುತ್ತಲೇ ಬಂದಿದೆ.

ತಮಿಳುನಾಡಿನಲ್ಲಿರುವ ದೇವಾಲಯವೊಂದರಲ್ಲಿ ಹನ್ನೆರಡು ಕಂಬಗಳಿರುವ ಒಂದು ಮಂಟಪವಿದೆ. ಅವುಗಳ ಮೇಲೆ ಕ್ರಮವಾಗಿ ಮೇಷಾದಿಯಾಗಿ ಹನ್ನೆರಡು ಮಾಸಗಳ ಹೆಸರುಗಳಿವೆ. ಆಯಾ ಮಾಸಗಳಲ್ಲಿ ಆಯಾ ಕಂಬಗಳ ಮೇಲೆ ಸೂರ್ಯರಶ್ಮಿಯು ಬೀಳುತ್ತದೆ. ಅಂದರೆ ಮೇಷ ಮಾಸದಲ್ಲಿ 'ಮೇಷ' ಎಂಬ ಕಂಬದ ಮೇಲೂ, ವೃಷಭ ಮಾಸದಲ್ಲಿ 'ವೃಷಭ' ಎಂಬ ಕಂಬದ ಮೇಲೂ ಹೀಗೆಯೇ ಹನ್ನೆರಡು ತಿಂಗಳುಗಳಲ್ಲಿ ಕ್ರಮವಾಗಿ ಹನ್ನೆರಡು ಕಂಬಗಳ ಮೇಲೆ ಸೂರ್ಯರಶ್ಮಿ ಬೀಳುತ್ತದೆ. ಈ ವಿಷಯದಲ್ಲಿ ಆ ದೇವಾಲಯವನ್ನು ಕಟ್ಟಿದ ಶಿಲ್ಪಿಯ ಚಾತುರ್ಯವಿದೆ.

ಹೀಗೆಯೇ ಮೈಸೂರು ಜಿಲ್ಲೆಯ ಕೃಷ್ಣರಾಜನಗರದ ಕಾವೇರೀ ತೀರದಲ್ಲಿ ಶ್ರೀ ಅರ್ಕೇಶ್ವರ ಸ್ವಾಮಿಯ ದೇವಾಲಯವಿದೆ. ಇಲ್ಲಿಯ ಒಂದು ಐತಿಹ್ಯವೆಂದರೆ ಶಿವರಾತ್ರಿಯ ಮಾರನೇ ದಿನ ಆ ಲಿಂಗದಮೇಲೆ ಸೂರ್ಯರಶ್ಮಿ ಬೀಳುತ್ತದೆ. ಅದನ್ನು ನೋಡಲು ಅಧಿಕ ಸಂಖ್ಯೆಯಲ್ಲಿ ಜನರು ಸೇರುತ್ತಾರೆ. ಈ ಸ್ಥಳದಲ್ಲಿ ಸೂರ್ಯಯಾಗ ಮಾಡಿದ ನೆಂಬ ಪ್ರತೀತಿಯೂ ಇದೆ. ಶಿವನ ದರ್ಶನಾರ್ಥವಾಗಿ ಅಂದು ಪ್ರಾತಃಕಾಲ ಸೂರ್ಯನು ಅಲ್ಲಿಗೆ ಆಗಮಿಸುವುದಾಗಿ ಆ ಜನರು ಭಾವಿಸುತ್ತಾರೆ.

ಏ) ಉಪಾಸನೆ :

ಸೂರ್ಯನನ್ನು ಉಪಾಸನೆ ಮಾಡುವವರಿಗೆ "ಸೂರ್ಯೋಪಾಸಕರು" ಎಂದು ಹೆಸರು. ಇಂತಹ ಸೂರ್ಯೋಪಾಸಕರು ಪ್ರಾಚೀನ ಭಾರತದಲ್ಲಿದ್ದರು. ದೀನಾನಾಥಜೀ ಶರ್ಮಾ ಶಾಸ್ತ್ರೀಜಿಯವರು "ವೇದೋಂ ಮೆ ಶ್ರೀ ಸೂರ್ಯದೇವಕೀ ಉಪಾಸನಾ" ಎಂಬ ತಮ್ಮ ವಿಸ್ತೃತವಾದ ಲೇಖನವೊಂದರಲ್ಲಿ ಉಪಾಸನೆಯ ಬಗ್ಗೆ ವಿವರಗಳನ್ನು ನೀಡಿದ್ದಾರೆ.

ಸೂರ್ಯಚಕ್ರದ ಉಪಾಸನೆ ಬಹು ಹಿಂದಿನಿಂದಲೂ ನಮ್ಮ ದೇಶದ ಯೋಗಿಗಳಲ್ಲಿ ಪ್ರಚಲಿತವಾಗಿದೆ. ಸೂರ್ಯಚಕ್ರವೆಂದರೆ ಅದೊಂದು ಬಾಹ್ಯ ಉಪಕರಣವಲ್ಲ. ನಮ್ಮ ದೇಹದಲ್ಲೇ ಅಂತರ್ಗತವಾಗಿರುವ ಚಕ್ರಗಳು. ಯೋಗದ ಉನ್ನತ ಹಂತದಲ್ಲಿ ಸೂರ್ಯನ ದ್ವಾದಶ ನಾಮಗಳೇ ಆಧ್ಯಾತ್ಮಿಕ ಶರೀರದ ದ್ವಾದಶ ಚಕ್ರಗಳಿಗೆ ಪರ್ಯಾಯಗಳು.

ಇವುಗಳಲ್ಲಿ ಕೆಳಗಿನ ಆರು ಚಕ್ರಗಳನ್ನು ಷಟ್ಚಕ್ರಗಳೆಂದೂ, ಮೇಲಿನ ಆರು ಚಕ್ರಗಳನ್ನು "ಮಹಾಕರಣ"ಗಳೆಂದೂ ಕರೆಯುತ್ತಾರೆ. ಈ ದ್ವಾದಶ ಚಕ್ರಗಳ ಅಧ್ಯಯನ ಮತ್ತು ಅವುಗಳ ಉದ್ದೀಪನ ಕ್ರಮವನ್ನೇ "ಕುಂಡಲಿನೀ ಯೋಗ"ವೆಂದು ಕರೆಯುತ್ತಾರೆ. ಈ ಯೋಗವನ್ನು ಆತ್ಮಸಾಕ್ಷಾತ್ಕಾರ ಹೊಂದಿದ ಗುರುವಿನ ಮೂಲಕ ಅಭ್ಯಸಿಸಬೇಕು.

ಷಟ್ಚಕ್ರಗಳು ಕ್ರಮವಾಗಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧ ಮತ್ತು ಆಜ್ಞಾ. ಇದರ ಮೇಲೆ ಸಹಸ್ರಾರವಿದೆ. ಇದೇ ಶಕ್ತಿಯ ಆವಾಸ ಸ್ಥಾನ. ಆದುದರಿಂದಲೇ ಲಲಿತಾ ಸಹಸ್ರನಾಮದಲ್ಲಿ

"ಸಹಸ್ರಾರ ಸರೋಜಾತ ವಾಸಿತಾಯೈ ನಮಃ"

ಎಂಬ ನಾಮವಿದೆ.

ಹೀಗೆ ಸೂರ್ಯೋಪಾಸನೆಯ ಇತಿಹಾಸವು ವೇದೋಪನಿಷತ್ತಿನಿಂದ ಹಿಡಿದು ಸ್ತೋತ್ರಗಳವರೆಗೂ ಓತಪ್ರೋತವಾಗಿ ಬೆಳೆದು ಬಂದಿದೆ.

ಓಂ ಶ್ರೀ ಸವಿತೃ ಸೂರ್ಯನಾರಾಯಣಾಯ ನಮಃ

ಯಮುನಾಬಾಯಿ ಆರ್. ರಾವ್

ಪ್ರಪಂಚದ ಸಂಕ್ಷಿಪ್ತ ಇತಿಹಾಸ
(ಮುಂದುವರೆದುದು)

7. ಮೊದಲ ಹಕ್ಕಿಗಳು ಮತ್ತು ಸಸ್ತನಿಗಳು

ಮಧ್ಯ ಜೀವಕಲ್ಪವನ್ನು ಜೀವವರ್ಗದ ಮೊದಲ ವಸಂತವೆನ್ನಬಹುದು. ಏಕೆಂದರೆ ಆಗ ಹಿತಕರವಾದ ಪರಿಸ್ಥಿತಿ ಇದ್ದುದರಿಂದ ಸಸ್ಯವರ್ಗ ಹುಲುಸಾಗಿ ಬೆಳೆಯಿತು, ಸರೀಸೃಪಗಳು ಭೂಮಿಯನ್ನು ತುಂಬಿದವು. ಆ ಯುಗವನ್ನು ಕೆಲವು ವಾಕ್ಯವೃಂದಗಳಲ್ಲಿ ಇಂದಿನ ಅಧ್ಯಾಯದಲ್ಲಿ ಚಿತ್ರಿಸಲಾಯಿತು. ಆಗ ಉಷ್ಣವಲಯದ ಕಾಡುಗಳು ಮತ್ತು ಜೌಗಾದ ಮೈದಾನಗಳಲ್ಲಿ ಡೈನೊಸಾರ್‌ಗಳು ಅಧಿಕಾರ ನಡೆಸುತ್ತಿದ್ದವು. ಹೂಗಳೇ ಇಲ್ಲದಿದ್ದ ಮರಗಿಡಗಳ ನಡುವೆ ಗುಂಯ್‌ಗುಟ್ಟುತ್ತಿದ್ದ ಕೀಟಗಳನ್ನು ಪ್ಟೆರೋಡ್ಯಾಕ್ಟೈಲ್‌ಗಳು ಬಹುಶಃ ತಾವು ಕೂಗುತ್ತಾ ಕಿರಚುತ್ತಾ ರೆಕ್ಕೆ ಬಡಿಯುತ್ತಾ ಹಿಡಿಯಲು ಹೋಗುತ್ತಿದ್ದವು. ಆದರೆ ಅದೇ ಕಾಲದಲ್ಲಿ ಇವುಗಳಷ್ಟು ಗಮನಾರ್ಹವಲ್ಲದಿದ್ದ ಬೇರೆ ಕೆಲವು ಪ್ರಾಣಿಗಳು ಪರಿಸ್ಥಿತಿ ಅಷ್ಟು ಅನುಕೂಲವಲ್ಲದಿದ್ದ ಸ್ಥಳಗಳಲ್ಲಿ ಜೀವನ ನಡೆಸುತ್ತಿದ್ದವು. ಹೀಗೆ ಕಷ್ಟ ಜೀವನ ನಡೆಸುತ್ತಿದ್ದುದರಿಂದ ಮುಂದೆ ಭೂಮಿಯ ಸ್ಥಿತಿ ಹದಗೆಡಲು ಮೊದಲಿಟ್ಟಾಗ ಇವುಗಳಿಗೆ ಅಷ್ಟು ತೊಂದರೆಯಾಗಲಿಲ್ಲ.

ಡೈನೊಸಾರ್ ಜಾತಿಯ ಕೆಲವು ಸಣ್ಣ ಪ್ರಾಣಿಗಳು ತಮ್ಮ ಪ್ರತಿಸ್ಪರ್ಧಿಗಳನ್ನು ಎದುರಿಸಲಾಗದೆ ಸಮುದ್ರದ ಕಡೆಗೋ, ಚಳಿ ಹೆಚ್ಚಾದ ಎತ್ತರ ಪ್ರದೇಶಗಳಿಗೋ ಹೋಗಬೇಕಾಯಿತೆಂದು ತೋರುತ್ತದೆ. ಅಲ್ಲಿ ಇವು ಹೊಸ ಪರಿಸ್ಥಿತಿಗಳನ್ನೆದುರಿಸಬೇಕಾಯಿತು. ಇವುಗಳಲ್ಲಿ ಮೈಮೇಲಿನ ಹುರುಪೆಗಳು ಒಂದು ಹೊಸರೂಪ ತಾಳಿದವು. ಮೊದಲು ಇವು ಹಕ್ಕಿಯ ಗರಿಗಳ ಟೊಳ್ಳಾದ ಕ್ವಿಲ್ ಭಾಗದಂತೆ ಉದ್ದವಾಗಿ ಬೆಳೆದು ಕಡೆಗೆ ಇವುಗಳಲ್ಲಿ ಕವಲುಗಳು ಒಡೆದು "ಗರಿಗಳು" ಎಂದು ಕರೆಯಬಹುದಾದ ರೂಪ ಬಂದಿರಬೇಕು. ಇಂತಹ ಹುರುಪೆಗಳು ಒಂದರಮೇಲೊಂದು ಇರುತ್ತಿದ್ದವು. ಇವುಗಳಿಗೆ ಅಂದಿನ ಸರೀಸೃಪಗತ ಮೈ ಹೊದಿಕೆಗಳೆಲ್ಲದಕ್ಕಿಂತಲೂ ಚೆನ್ನಾಗಿ ಮೈ ಶಾಖವನ್ನು ಕಾಪಾಡುವ ಶಕ್ತಿ ಇತ್ತು. ಚಳಿ ಹೆಚ್ಚಾಗಿದ್ದ, ಬೇರೆ ಪ್ರಾಣಿಗಳು ವಾಸಿಸಲಾಗದ

ಪ್ರದೇಶಗಳಲ್ಲಿ ವಾಸಿಸಲು ಈ ಪ್ರಾಣಿಗಳಿಗೆ ಇದರಿಂದ ಅನುಕೂಲವಾಯಿತು. ಪ್ರಾಯಶಃ ಇದೇ ಸಮಯದಲ್ಲೇ ಈ ಪ್ರಾಣಿಗಳಿಗೆ ತಮ್ಮ ಮೊಟ್ಟೆಗಳ ಬಗೆಗೆ ಹೆಚ್ಚಿನ ಉತ್ಸುಕತೆ ಉಂಟಾಯಿತು. ಅನೇಕ ಸರೀಸೃಪಗಳು ನಮಗೆ ತಿಳಿದಮಟ್ಟಿಗೆ ತಮ್ಮ ಮೊಟ್ಟೆಗಳ ಸಲುವಾಗಿ ಏನೂ ಜವಾಬ್ದಾರಿ ವಹಿಸುವುದಿಲ್ಲ ; ಅವು ಬಿಸಿಲಿನ ಶಾಖಕ್ಕೋ ಅಥವಾ ಋತುಮಾನದಿಂದಲೋ ಒಡೆದು ಮರಿಗಳಾಗುತ್ತವೆ. ಆದರೆ ಈ ಹೊಸ ಜಾತಿಯ ಪ್ರಾಣಿಗಳು ತಮ್ಮ ಮೊಟ್ಟೆಗಳಿಗೆ ಕಾವಲು ಕಾದು, ತಮ್ಮ ಶರೀರಶಾಖದಿಂದ ಅವುಗಳಿಗೆ ಕಾವು ಕೊಡುವ ಅಭ್ಯಾಸವನ್ನು ಮೊದಲು ಮಾಡಿದವು.

ಚಳಿ ಎದುರಿಸಲು ಆದ ಈ ಹೊರಗಣ ಬದಲಾವಣೆಗಳಂತೆಯೇ ಈ ಪ್ರಾಣಿಗಳ ಒಳಗಡೆಯೂ ಬೇರೆ ಮಾರ್ಪಾಡುಗಳಾಗಿರಬೇಕು. ಅಂತೂ ಈ ಮೊದಲ ಪಕ್ಷಿಗಳು ಬಿಸಿರಕ್ತದ, ಬಿಸಿಲು ಕಾಸುವ ಅವಶ್ಯಕತೆಯಿಲ್ಲದ ಪ್ರಾಣಿಗಳಾದುವು. ಇವುಗಳೆಲ್ಲಾ ಮುಂಚೆ ಸಮುದ್ರದಲ್ಲಿ ಮೀನುಗಳನ್ನು ತಿಂದು ಜೀವಿಸುತ್ತಿದ್ದಿರಬೇಕು. ಇವುಗಳಲ್ಲಿ ಮುಂಗಾಲುಗಳೂ ಈಗಿನ ಪೆನ್ಗ್ವಿನ್ ಹಕ್ಕಿಗಳ ಮುಂಗಾಲುಗಳಂತೆ ಈಜು ರೆಕ್ಕೆಗಳಾಗಿದ್ದಿರಬೇಕು. ಇನ್ನೂ ಅವು ರೆಕ್ಕೆಗಳಾಗಿ ಮಾರ್ಪಟ್ಟಿರಲಿಲ್ಲ. ನ್ಯೂಜಿಲೆಂಡಿನಲ್ಲಿ ಈಗ ಸಹ ವಾಸಿಸುತ್ತಿರುವ ವಿಚಿತ್ರವಾದ ಕಿವಿಪಕ್ಷಿ ಹೀಗೆಯೇ ಇದೆ. ಇದರ ಗರಿಗಳ ರಚನೆ ತುಂಬಾ ಸರಳ ; ಇದು ಹಾರಲಾರದು. ಇದರ ಪೂರ್ವಜ ಪ್ರಾಣಿಗಳು ಯಾವುವೂ ಹಾರುತ್ತಿದ್ದಂತೆ ತೋರುವುದಿಲ್ಲ. ಹಕ್ಕಿಗಳಲ್ಲಿ ರೆಕ್ಕೆಗಳು ರೂಪುಗೊಳ್ಳುವುದಕ್ಕೆ ಮುಂಚೆ ಗರಿಗಳು ಹುಟ್ಟಿಕೊಂಡವು. ಈ ಗರಿಗಳ ರಚನೆ ಹೆಚ್ಚು ಹೆಚ್ಚು ಉತ್ತಮಗೊಳ್ಳುತ್ತಾ ಹೋದಂತೆ ಇವುಗಳನ್ನು ಹರಡಿ ರೆಕ್ಕೆಯಂತೆ ಉಪಯೋಗಿಸುವುದಕ್ಕೆ ಅನುಕೂಲವಾಯಿತು. ಇಂತಹ ಮಧ್ಯೆ ಅವಸ್ಥೆಯ ಪಕ್ಷಿಯೊಂದರ ಜೀವ್ಯಾವಶೇಷ ಸಿಕ್ಕಿದೆ. ಇದಕ್ಕೆ ಸರೀಸೃಪಗಳಂತಹವೇ ಹಲ್ಲು ಮತ್ತು ಬಾಲ ಇದ್ದುವು ; ಹಾಗೆಯೇ ಹಕ್ಕಿಗಳ ಹಾಗೆ ರೆಕ್ಕೆಗಳೂ ಇದ್ದುವು. ಈ ಪ್ರಾಣಿ ಹಾರುವ ಶಕ್ತಿಯಲ್ಲಿ ಪ್ಟೆರೋಡ್ಯಾಕ್ಟೈಲ್‌ಗಳಿಗೇನೂ ಕಡಿಮೆ ಇರಲಿಲ್ಲವೆನಿಸುತ್ತದೆ. ಆದರೆ ಈ ಹಕ್ಕಿಗಳ ಸಂಖ್ಯೆ ಆಗ ಬಹು ಕಡಿಮೆಯಾಗಿದ್ದಿರಬೇಕು. ಈಗ ಏನಾದರೂ ನಮಗೆ ಮಧ್ಯಜೀವಕಲ್ಪದ ಭೂಭಾಗವೊಂದಕ್ಕೆ ಭೇಟಿ ಕೊಡಲು ಸಾಧ್ಯವಾದಲ್ಲಿ ನಾವು ದಿನಗಟ್ಟಲೆ ಎಷ್ಟೇ ಹುಡುಕಿದರೂ ಹಕ್ಕಿಯೊಂದೂ ನಮ್ಮ ಕಣ್ಣಿಗೆ ಬೀಳದೆಯೇ ಇರಬಹುದು ; ಅದರ ಕೂಗೂ ಸಹ ಕೇಳಿಸದೆ ಇರಬಹುದು. ಆದರೆ ಬೇಕಾದಷ್ಟು ಪ್ಟೆರೊಡ್ಯಾಕ್ಟೈಲ್‌ಗಳೂ ವಿವಿಧ ರೀತಿಯ ಕೀಟಗಳೂ ಕಾಣಸಿಗುತ್ತಿದ್ದುವು.

ಹಾಗೆಯೇ ನಮಗೆ ಸಸ್ತನಿ ಪ್ರಾಣಿಗಳವೂ ಸುಳಿವು ಕಾಣಬರುವುದಿಲ್ಲ. ಹಕ್ಕಿ ಎನಿಸಿಕೊಳ್ಳುವ ಪ್ರಾಣಿ ಭೂಮಿಯ ಮೇಲೆ ಕಾಣಿಸಿಕೊಳ್ಳುವುದಕ್ಕೆ ಮಿಲಿಯ ವರ್ಷಗಳ ಮೊದಲೇ ಬಹುಶಃ ಸಸ್ತನಿಗಳು ಜನ್ಮವೆತ್ತಿದ್ದರೂ ಅವು ಗಮನಕ್ಕೆ ಬೀಳದಷ್ಟು ಚಿಕ್ಕವೂ ಅನಾಮಧೇಯವೂ ಆಗಿದ್ದುವು.

ಪ್ರಥಮ ಪಕ್ಷಿಗಳಂತೆಯೇ ಈ ಪ್ರಾಚೀನ ಸಸ್ತನಿಗಳೂ ಬೇರೆ ಪ್ರಾಣಿಗಳ ಸ್ಪರ್ಧೆ

ಮತ್ತು ಪ್ರಾಬಲ್ಯವನ್ನು ತಾಳಲಾರದೇ ಅನನುಕೂಲ ಪರಿಸ್ಥಿತಿ ಇದ್ದಲ್ಲಿಗೆ ಓಡಿಬಂದು ಅಲ್ಲಿ ಚಳಿಯನ್ನೆದುರಿಸಬೇಕಾಯಿತು. ಇವುಗಳಲ್ಲಿಯೂ ಹುರುಪೆಗಳು ಬದಲಾವಣೆ ಹೊಂದಿ ಕೊನೆಗೆ ವೈಶಾಖವನ್ನು ಕಾಂಬಲ್ಲ ಹೊದಿಕೆಯ ರೂಪ ಪಡೆದುವು. ಹಾಗೆಯೇ ಇವು ಸಹ ಬಿಸಿರಕ್ತದ ಪ್ರಾಣಿಗಳಾದುವು. ಬಿಸಿಲು ಕಾಯಿಸುವ ಅವಶ್ಯಕತೆ ತಪ್ಪಿ ಹೋಯಿತು. ಆದರೆ ಇವುಗಳಲ್ಲಿ ಹುರುಪೆಗಳು ಗರಿಗಳಾಗಲಿಲ್ಲ ; ಕೂದಲುಗಳಾದವು. ಹಕ್ಕಿಗಳಂತೆ ಮೊಟ್ಟೆಗಳಿಗೆ ಕಾವು ಕೊಟ್ಟು ರಕ್ಷಿಸುವುದರ ಬದಲು ಮೊಟ್ಟೆಗಳು ಪೂರ್ತಿ ಬಲಿಯುವವರೆಗೂ ಅವುಗಳನ್ನು ತಮ್ಮ ಶರೀರದ ಒಳಗೆ ಇವು ಇಟ್ಟುಕೊಳ್ಳಲಾರಂಭಿಸಿದುವು. ಕಡೆಗೆ ಇವುಗಳಲ್ಲಿ ಅನೇಕ ಪ್ರಾಣಿಗಳು ಮೊಟ್ಟೆಯಿಡುವುದನ್ನೇ ಬಿಟ್ಟು ಮರಿ ಹಾಕಲು ಮೊದಲು ಮಾಡಿದುವು. ಈ ಮರಿಗಳನ್ನು ಇವು ತಕ್ಷಣ ಕೈ ಬಿಡುತ್ತಿರಲಿಲ್ಲ. ಅವುಗಳಿಗೆ ರಕ್ಷಣೆ ಮತ್ತು ಆಹಾರ ಒದಗಿಸುವುದಕ್ಕಾಗಿ ಸಂಬಂಧ ಇಟ್ಟುಕೊಳ್ಳುತ್ತಿದ್ದುವು. ಇಂದಿನ ಸಸ್ತನಿಗಳಲ್ಲಿ ಕೆಲವನ್ನು ಬಿಟ್ಟರೆ ಎಲ್ಲಕ್ಕೂ ಸ್ತನಗಳಿದ್ದು ಅವು ಮರಿಗಳಿಗೆ ಹಾಲೂಡುತ್ತವೆ. ಈಗಲೂ ಸಹ ಮೊಟ್ಟೆ ಇಡುವ ಮತ್ತು ನೈಜ ಸ್ತನಗಳಿಲ್ಲದ ಎರಡು ಸಸ್ತನಿ ಜಾತಿ ಪ್ರಾಣಿಗಳಿವೆ : ಬಾತಿನ ಕೊಕ್ಕಿನಂತೆ ಮೂತಿಯಿರುವ ಡಕ್‌ಬಿಲ್ ಅಥವಾ ಪ್ಲಾಟೈಪಸ್ (platypus) ಮತ್ತು ಎಕೀಡ್ನಾ. ನೈಜಸ್ತನಗಳಿಲ್ಲದಿದ್ದರೂ ಇವು ಕೆಳಚರ್ಮದಿಂದ ಸ್ರವಿಸುವ ಒಂದು ಒಗೆಯ ಪುಷ್ಟಿಕರ ದ್ರವವನ್ನು ಕೊಟ್ಟು ತಮ್ಮ ಮರಿಗಳನ್ನು ಸಾಕುತ್ತವೆ. ಎಕೀಡ್ನಾ ಪ್ರಾಣಿಯು ಚರ್ಮದಂತಹ ಹೊರವ್ಮೈಯುಳ್ಳ ಮೊಟ್ಟೆಗಳನ್ನಿಟ್ಟು ಅವುಗಳನ್ನು ತನ್ನ ಹೊಟ್ಟೆಯ ಕೆಳಭಾಗದಲ್ಲಿರುವ ಒಂದು ಚೀಲದಲ್ಲಿ ಇಟ್ಟುಕೊಳ್ಳುತ್ತದೆ. ಮೊಟ್ಟೆಗಳು ಅಲ್ಲಿಯೇ ಸುರಕ್ಷಿತವಾಗಿದ್ದು ಒಡೆದು ಮರಿಯಾಗುತ್ತವೆ.

ಮಧ್ಯಜೀವಕಲ್ಪವನ್ನು ಪ್ರವೇಶಿಸಿದವನಿಗೆ ಹಕ್ಕಿ ಕಾಣಸಿಗುವುದು ಎಷ್ಟು ಕಷ್ಟವಾಗಿತ್ತೋ ಹಾಗೆ ಈ ಯುಗದಲ್ಲಿ ಸಸ್ತನಿಗಳೂ ಕಾಣಸಿಗುತ್ತಿರಲಿಲ್ಲ. ಪಕ್ಷಿಗಳಂತೆಯೇ ಮಧ್ಯಜೀವಕಲ್ಪದಲ್ಲಿ ಸಸ್ತನಿಗಳೂ ಬಹು ಅಪರೂಪವಾಗಿದ್ದವು. ಆಗಿನ ಉಳಿದೆಲ್ಲ ಪ್ರಾಣಿಗಳ ನಡುವೆ ಬಹಳ ವಿಲಕ್ಷಣವಾಗಿಯೂ ತುಚ್ಛವಾಗಿಯೂ ತೋರಿಬರುತ್ತಿದ್ದುವು.

ಅಂತೂ ಸರೀಸೃಪಗಳ ಯುಗ 80,000,000 ವರ್ಷಗಳ ಕಾಲ ನಡೆಯಿತೆಂದು ಊಹಿಸಲಾಗಿದೆ. ಆಗಿನ ವಿದ್ಯಮಾನಗಳನ್ನು ಮಾನವ ಸದೃಶ ಪ್ರಾಣಿಯೇನಾದರೂ ನೋಡುತಿತ್ತೆಂದುಕೊಂಡರೆ ಆ ಸೂರ್ಯಪ್ರಕಾಶ, ಆ ಸಮೃದ್ಧಿ, ಡೈನೋಸಾರ್‌ಗಳ ಮತ್ತು ಹಾರುವ ಹಲ್ಲಿಗಳ ಆ ಉಚ್ಛ್ರಾಯಸ್ಥಿತಿ ಅದೆಷ್ಟು ನಿತ್ಯ ಎನಿಸುತ್ತಿದ್ದಿರಬಹುದು ? ಆದರೆ ರಹಸ್ಯಗರ್ಭಿತವಾದ ಈ ವಿಶ್ವದ ಶಕ್ತಿಗಳು ಕೂಡಿ ಹಾಕಿಕೊಂಡು ನಿತ್ಯನೆಂದೇ ತೋರುತ್ತಿದ್ದ ಈ ಸಮತೂಕವನ್ನು ಏರುಪೇರು ಮಾಡಲಾರಂಭಿಸಿದುವು. ಜೀವ ಪ್ರಪಂಚದ ಶುಕ್ರದೆಶೆಯು ಅಂತ್ಯ ಸನ್ನಿಹಿತವಾಯಿತು. ಯುಗಯುಗಾಂತರಗಳ ಕಾಲ ಕ್ರಮದಲ್ಲಿ ಸಮುದ್ರ ಸಾಗರಗಳ, ಬೆಟ್ಟಗಳ ಹಂಚಿಕೆ ಬದಲಾಗಿ, ಏರಿಳಿತಗಳು ಅತಿಯಾಗಿ ಕೊನೆಗೆ ಮೊದಲಿದ್ದ ಅನುಕೂಲ ಪರಿಸ್ಥಿತಿ ಕಷ್ಟ ವೈಪರೀತ್ಯಗಳಿಗೆಡೆಕೊಟ್ಟಿತು. ಆಗ ವಸ್ತು

ಪರಿಸ್ಥಿತಿ ಒಂದೇಸಮನೆ ಬದಲಾಗುತ್ತಲೇ ಇತ್ತು ಎನ್ನುವುದಕ್ಕೆ ಆ ಕಾಲದ ಬಂಡೆಗಳ ದಾಖಲೆಗಳಲ್ಲಿ ಒಂದು ರುಜುವಾತು ದೊರೆಯುತ್ತದೆ : ಅದೇನೆಂದರೆ ಜೀವಿಗಳ ಸ್ವರೂಪದಲ್ಲಿ ಬದಲಾವಣೆಗಳು ಮತ್ತು ಹೊಸ ಹೊಸ ವಿಚಿತ್ರ ಜೀವಜಾತಿಗಳು. ಈ ಹೊಸ ಹೊಸ ಸ್ವರೂಪಗಳು, ತಮ್ಮ ಕುಲವೇ ನಿರ್ನಾಮವಾಗಬಹುದಾದ ಸಂದರ್ಭ ಒದಗಿದುದರಿಂದ ಜೀವವರ್ಗಗಳು ಹೊಸ ಪರಿಸ್ಥಿತಿಗೆ ಹೊಂದಲು ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನಿಸುತ್ತಿದ್ದುದರ ಫಲ. ಉದಾಹರಣೆಗೆ ಅಮೊನೈಟ್‌ಗಳು ಮಧ್ಯಜೀವಕಲ್ಪದ ಈ ಕೊನೆಯಲ್ಲಿ ಅನೇಕ ಚಿತ್ರ ವಿಚಿತ್ರ ರೂಪಗಳನ್ನು ತೋರಿಸುತ್ತವೆ. ಪರಿಸ್ಥಿತಿ ಸ್ಥಿರವಾಗಿದ್ದರೆ ಹೊಸತನಗಳು ಪ್ರೋತ್ಸಾಹವಿಲ್ಲದೆ ಹಿಂದೆ ಬೀಳುತ್ತವೆ. ಪರಿಸ್ಥಿತಿಗೆ ತಕ್ಕ ಉತ್ತಮ ಮಾದರಿ ಮುಂಚೆಯೇ ಇರುತ್ತದೆ. ಅದೇ, ಪರಿಸ್ಥಿತಿ ಬದಲಾದಾಗ ಸಾಮಾನ್ಯ ಮಾದರಿಗಳು ಕಷ್ಟಕ್ಕೊಳಗಾಗುತ್ತವೆ. ಹೊಸ ಮಾದರಿಗಳು ಒಂದು ವೇಳೆ ಬದುಕಿ ಉಳಿದರೂ ಉಳಿಯಬಹುದು.

ಜೀವವರ್ಗ ಈ ಸ್ಥಿತಿಗೆ ಬಂದ ಮೇಲೆ ಸುಮಾರು ಕೆಲವು ಮಿಲಿಯ ವರ್ಷ ಏನಾಯಿತೆಂಬುದಕ್ಕೆ ಬಂಡೆಗಳ ದಾಖಲೆಗಳಲ್ಲಿ ಯಾವ ಸೂಚನೆಯೂ ಇಲ್ಲ. ಇನ್ನೂ ಸಹ, ಇದಿಷ್ಟು ಕಾಲದ ಜೀವ ಚರಿತ್ರೆ ಸ್ಥೂಲವಾಗಿ ಕೂಡ ತಿಳಿದಿಲ್ಲ. ಕೊನೆಗೆ ಮತ್ತೆ ಈ ತೆರೆ ಮೇಲೇಳುತ್ತದೆ. ಬಂಡೆಗಳಲ್ಲಿ ಪಳೆಯುಳಿಕೆಗಳು ಕಾಣಿಸಿಕೊಳ್ಳುತ್ತವೆ. ಈಗ ಇವುಗಳಲ್ಲಿ ಡೈನೋಸಾರ್, ಪ್ಲೀಸಿಯೋಸಾರ್, ಇಕ್ತಿಯೊಸಾರ್‌ಗಳು, ಪ್ಟೆರೋಡಾಕ್ಟೈಲ್‌ಗಳು, ಅಸಂಖ್ಯಾತ ಬಗೆಯ ಅಮೋನೈಟ್‌ಗಳು ಇವುಗಳ ಸುಳಿವೇ ಇಲ್ಲ. ಇವೆಲ್ಲಾ ಚಳಿ ತಡೆಯಲಾಗದೇ ಸತ್ತು ಹೋಗಿರಬೇಕು ; ವೈಪರೀತ್ಯಗಳಿಗೆ ಹೊಂದಿಕೊಳ್ಳಲು ಅತಿ ವೈಪರೀತ್ಯಗಳ ಯುಗ ಇವುಗಳ ಶಕ್ತಿಗೆ ಮೀರಿದಾಗಿದ್ದು ನಿಧಾನವಾಗಿ ಆದರೆ ಪೂರ್ಣವಾಗಿ ಇವುಗಳ ಹತ್ಯಾಕಾಂಡ ನಡೆದುಹೋಯಿತು. ಇವು ನಡೆಸಿದ ಪ್ರಯತ್ನಗಳೆಲ್ಲಾ ವಿಫಲವಾಗಿರಬೇಕು. ಇವುಗಳ ಸ್ಥಾನದಲ್ಲಿ ಕಷ್ಟಸಹಿಷ್ಣುಗಳಾದ ಹೊಸ ಹೊಸ ಬಗೆಯ ಸಸ್ಯ ಪ್ರಾಣಿಗಳು ಅಭಿವೃದ್ಧಿ ಹೊಂದಲು ಮೊದಲು ಮಾಡಿದುವು. ಭೂಮಿಯ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು.

ಆದರೆ ಆಗಲೂ ದೃಶ್ಯ ಅಷ್ಟೇನೂ ಉಲ್ಲಾಸಕರವಾಗಿರಲಿಲ್ಲ. ಮಧ್ಯ ಜೀವಕಲ್ಪದ ತಾಳವೃಕ್ಷಗಳು, ನಿತ್ಯ ಹಸುರು ಬಣ್ಣದ ಶಂಕು ಫಲಗಳು (tropical conifers) ಇವುಗಳ ಸ್ಥಳದಲ್ಲಿ ಚಳಿಗಾಲದಲ್ಲಿ ಹಿಮಪಾತವನ್ನೆದುರಿಸಲಾರದೆ ಎಲೆ ಉದುರಿಸುವ ಮರಗಳು ಮತ್ತು ಹೂ ಬಿಡುವ ಸಣ್ಣ ಸಣ್ಣ ಗಿಡ ಪೊದೆಗಳು ಕಾಣಬರುತ್ತಿದ್ದುವು. ಅಧಿಕ ಸಂಖ್ಯೆಯಲ್ಲಿದ್ದ ಸರೀಸೃಪಗಳ ಸ್ಥಾನದಲ್ಲಿ ಹೊಸ ಹೊಸ ವಿಧದ ಪಕ್ಷಿಗಳು ಸಸ್ತನಿಗಳು ಬೆಳೆಯುತ್ತಿದ್ದುವು.

ಸಸ್ತನಿಗಳ ಯುಗ :

ಭೂಮಿಯ ಜೀವನದಲ್ಲಿ ಮುಂದಿನ ಪ್ರಮುಖ ಯುಗವಾದ ಕೇನೋಜೋಯಿಕ್

ಯುಗದ ಮೊದಲ ಭಾಗದಲ್ಲಿ ಜ್ವಾಲಾಮುಖಿಗಳ ಚಟುವಟಿಕೆ ವಿಪರೀತವಾಗಿತ್ತು. ಆಗಲೇ ಆಲ್ಪ್ಸ್, ಹಿಮಾಲಯ, ರಾಕೀಸ್ ಮತ್ತು ಆ್ಯಂಡಿಸ್ ಪರ್ವತಗಳು ಮೇಲೆ ತಳ್ಳಲ್ಪಟ್ಟದ್ದು ಮತ್ತು ಭೂಖಂಡಗಳು ಮತ್ತು ಸಾಗರಗಳು ಈಗಿರುವಂತೆ ಸ್ಥೂಲವಾಗಿ ಹಂಚಿಕೆಯಾಗಿದ್ದು ಆಗಲೇ. ಆ ಕಾಲದಿಂದ ಭೂಮಿಯ ಮೇಲ್ಮೈನಕ್ಷೆ ಈ ನಮ್ಮ ಕಾಲದ ನಕ್ಷೆಯನ್ನು ಸ್ವಲ್ಪ ಸ್ವಲ್ಪ ಹೋಲಲಾರಂಭಿಸುತ್ತದೆ. ಈ ಯುಗ ಮೊದಲಾಗಿ ಕಡಿಮೆ ಎಂದರೆ 40 ಮಿಲಿಯ, ಹೆಚ್ಚೆಂದರೆ 80 ಮಿಲಿಯ ವರ್ಷಗಳಾಗಿರಬೇಕೆಂದು ಈಗ ಅಂದಾಜಾಗಿದೆ.

ಮೊದಲು ಮೊದಲು ಈ ಯುಗದಲ್ಲಿ ಹವಾಗುಣ ಕಠಿನವಾಗಿತ್ತು. ಆಮೇಲೆ ಭೂಮಿ ಬೆಚ್ಚಗಾಯಿತು. ಆಗ ತಿರುಗಿ ಒಂದು ಬಾರಿ, ಸರೀಸೃಪಗಳ ಯುಗದಂತೆ ಭೂಮಿಯ ಮೇಲೆ ಜೀವ ಸಮೃದ್ಧಿಯ ಕಾಲವೊಂದು ಆಗಿಹೋಯಿತು. ಇದಾದಮೇಲೆ ತಿರುಗಿ ಪರಿಸ್ಥಿತಿ ಕಠಿಣವಾಗಿ ಮೇಲಿಂದಮೇಲೆ ಭೂಮಿ ಶೀತ ಯುಗಗಳನ್ನು ಕಂಡಿತು. ಚಳಿ ಒಹಳವಾಗಿದ್ದ "ನೀರ್ಗಲ್ಲಿನ ಯುಗ" (glacial ages) ವೊಂದು ನಡೆದು ಈಚಲೀಗ ಭೂಮಿ ಅದರಿಂದ ಹೊರಬರುತ್ತಿದೆ.

ಇನ್ನು ಮುಂದೆ ಹವಾಮಾನ ಏನಾಗುತ್ತದೆ, ಇನ್ನು ಮುಂದಿನ ಯುಗ ಹೇಗಿರುತ್ತದೆ ಎಂದು ಹೇಳಲು ನಮಗಿನ್ನೂ ಆ ವಿಷಯದ ಜ್ಞಾನ ಸಾಲದು. ಭೂಮಿಯ ಮೇಲ್ಮೈ ತಿರುಗಿ ತಣ್ಣಗಾಗುತ್ತಾ ನಡೆದಿದೆಯೋ ಅಥವಾ ಬೆಚ್ಚಗಾಗುತ್ತಿದೆಯೋ, ಅಗ್ನಿ ಪರ್ವತಗಳ ಚಟುವಟಿಕೆ, ಪರ್ವತ ಶ್ರೇಣಿಗಳ ಏರಿಳಿತ ಹೆಚ್ಚುತ್ತಿದೆಯೋ ಕಡಿಮೆಯಾಗುತ್ತಿದೆಯೋ ಎಂದು ಖಚಿತವಾಗಿ ಹೇಳಲು ವಿಜ್ಞಾನ ಇನ್ನೂ ಸಾಕಷ್ಟು ಮುನ್ನಡೆದಿಲ್ಲ.

ಈ ಯುಗದ ಮೊದಲ ಭಾಗದಲ್ಲಿ ಭೂಮಿಯ ಮೇಲೆ ಮೊಟ್ಟ ಮೊದಲನೆಯ ಬಾರಿ ಹುಲ್ಲು ಕಾಣಿಸಿ ಕೊಂಡಿತು. ಮೊದಲ ಬಾರಿಗೆ ಭೂಮಿಯ ಮೇಲೆ ಹುಲ್ಲುಗಾವಲುಗಳು ಉಂಟಾದುವು. ಮಧ್ಯ ಜೀವ ಕಲ್ಪದಲ್ಲಿ ಅಜ್ಞಾತವಾಗಿದ್ದ ಸಸ್ತನಿಗಳು ಇಷ್ಟು ಹೊತ್ತಿಗೆ ಅಭಿವೃದ್ಧಿ ಹೊಂದಿದ್ದುವು. ಇವುಗಳಲ್ಲಿ ಹುಲ್ಲು ಮೇಯುವ ಪ್ರಾಣಿಗಳೂ, ಇವುಗಳನ್ನು ತಿಂದು ಜೀವಿಸುವ ಮಾಂಸಾಹಾರಿಗಳೂ ಈ ಘಟ್ಟದಲ್ಲಿ ಕಂಡು ಬರುತ್ತವೆ.

ಮಧ್ಯ ಜೀವ ಕಲ್ಪದಲ್ಲಿ ಮೆರೆದು ಮಾಯವಾಗಿದ್ದ ಮಾಂಸಾಹಾರಿ, ಸಸ್ಯಾಹಾರಿ ಡೈನೊಸಾರ್‌ಗಳಂತೆಯೇ ಕೇನೊಜೋಯಿಕ್ ಯುಗದ ಈ ಪ್ರಾಣಿಗಳೂ ಎಂದು ಮೊದ ಮೊದಲು ಎನ್ನಿಸಬಹುದು. ಮಧ್ಯ ಜೀವ ಕಲ್ಪದಂತೆಯೇ ಇದ್ದ ಈ ಎರಡನೆಯ ಜೀವ ಸಮೃದ್ಧಿಯ ಕಾಲದಲ್ಲಿ ತಿರುಗಿ ಆಗ ನಡೆದ ವಿದ್ಯಮಾನಗಳೇ ಪುನರಾವೃತ್ತಿಯಾದುವು ಎಂದು ಮೇಲ್ನೋಟಕ್ಕೆ ಕಾಣಬಹುದು. ಮಾಂಸಾಹಾರಿ, ಸಸ್ಯಾಹಾರಿ ಡಿನೋಸಾರ್‌ಗಳ ಸ್ಥಾನದಲ್ಲಿ ಅಂಥವೇ ಸಸ್ತನಿಗಳು, ಪ್ಟೆರೋಡಾಕ್ಟೈಲ್‌ಗಳ ಬದಲು ಹಕ್ಕಿಗಳು ಇದ್ದುವು ಎನಿಸಬಹುದು. ಆದರೆ ಈ ಅಭಿಪ್ರಾಯ ಸರಿಯಲ್ಲ. ಈ ವಿಶ್ವದಲ್ಲಿನ ವೈವಿಧ್ಯ ಅನಂತವಾದುದು. ಸತತವಾಗಿ ಮುನ್ನಡೆಯುತ್ತಲೇ ಇರುವ ಈ ವಿಶ್ವದಲ್ಲಿ ಒಂದು ಬಾರಿ ನಡೆದದ್ದು ಮತ್ತೊಮ್ಮೆ ನಡೆಯುವುದಿಲ್ಲ. ಯಾವುದೇ ಎರಡು ಬೇರೆ

ಬೇರೆ ಸಂಗತಿಗಳು ಎಷ್ಟೇ ಸಮಾನ ಎನಿಸಿದರೂ ಅವುಗಳಲ್ಲಿ ಕಿಂಚಿತ್ತಾದರೂ ವ್ಯತ್ಯಾಸ ಇದ್ದೇ ಇರುತ್ತದೆ. ಮೆಸೊಜೋಯಿಕ್ ಯುಗಕ್ಕೂ ಕೇನೊಜೋಯಿಕ್ ಯುಗಕ್ಕೂ ಇರುವ ಹೋಲಿಕೆಗಳಿಗಿಂತ ವ್ಯತ್ಯಾಸಗಳು ಅಧಿಕವಾದುವು.

ಇವುಗಳಲ್ಲೆಲ್ಲಾ ಬಹುಮುಖ್ಯವಾದದ್ದೆಂದರೆ ಇವೆರಡು ಯುಗಗಳ ಪ್ರಾಣಿಗಳ ಬೌದ್ಧಿಕ ಜೀವನಗಳ ನಡುವಿನ ವ್ಯತ್ಯಾಸ. ಇದಕ್ಕೆ ಮುಖ್ಯ ಕಾರಣ ಈ ಪ್ರಾಣಿಗಳ ಸಂತಾನ ಪೋಷಣೆಯ ಕ್ರಮದಲ್ಲಿದೆ. ಎಲ್ಲೋ ಕೆಲವು ಸರೀಸೃಪಗಳ ಹೊರತು ಉಳಿದುವು ತಮ್ಮ ಮೊಟ್ಟೆಗಳ ಸಲುವಾಗಿ ಯಾವ ಜವಾಬ್ದಾರಿಯನ್ನೂ ವಹಿಸುವುದಿಲ್ಲ. ಸರೀಸೃಪದ ಮರಿಗೆ ತನ್ನ ಮಾತಾಪಿತೃಗಳ ಸಂಪರ್ಕವೇ ಇರುವುದಿಲ್ಲ. ಅದರ ಬೌದ್ಧಿಕ ಜೀವನ ಕೇವಲ ಅದರ ಅನುಭವಗಳ ಮೇಲೆ ನಿಂತಿರುತ್ತದೆ. ಸ್ವಜಾತಿ ಪ್ರಾಣಿಗಳಲ್ಲಿ ಒಂದಕ್ಕೊಂದಕ್ಕೆ ದ್ವೇಷ ಕಾಣಿಸದಿರಬಹುದು ; ಆದರೆ ಅವುಗಳ ನಡುವೆ ಸ್ನೇಹವಾಗಲೀ ಯಾವುದೇ ಬಗೆಯ ವ್ಯವಹಾರವಾಗಲೀ ಇರುವುದಿಲ್ಲ. ಹೀಗಿರುವುದರಿಂದ ಅವುಗಳು ಒಂದರಿಂದ ಮತ್ತೊಂದು ಅನುಕರಣ ಮಾಡಿ ಏನನ್ನೂ ಕಲಿಯುವ ಹಾಗೂ ಇಲ್ಲ ; ಎಲ್ಲಾ ಒಟ್ಟು ಕೂಡಿ ಯಾವ ಕೆಲಸವನ್ನೂ ನಿರ್ವಹಿಸುವುದಕ್ಕೂ ಸಾಧ್ಯವಿಲ್ಲ; ಒಟ್ಟಿನಲ್ಲಿ ಹೇಳುವುದಾದರೆ ಸರೀಸೃಪದ ಬಾಳು ಒಂಟಿ ಬಾಳು. ಸಸ್ತನಿಗಳಲ್ಲಿ ಪಕ್ಷಿಗಳಲ್ಲಿ ಕಂಡು ಬರುವ ಶಿಶು ಸಂರಕ್ಷಣೆ ಜೀವ ಪ್ರಪಂಚವಲ್ಲೇ ಹೊಸದು. ಇದರ ಫಲವಾಗಿಯೇ ಈ ಪ್ರಾಣಿಗಳಲ್ಲಿ ಒಂದನ್ನೊಂದು ಅನುಕರಿಸಿ ಹೊಸ ವಿಷಯಗಳನ್ನು ಕಲಿಯುವುದು, ಒಂದುಗೂಡಿ ಕಾರ್ಯ ನಡೆಸುವುದು, ಕೂಗುವುದರ ಮೂಲಕ ಒಂದಕ್ಕೊಂದಕ್ಕೆ ಎಚ್ಚರಿಕೆ ಕೊಡುವುದು, ಇವೆಲ್ಲಾ ಸಾಧ್ಯವಾಯಿತು. ಹೀಗೆ ಭೂಮಿಯಲ್ಲಿ ಶಿಕ್ಷಣ ಪಡೆಯಬಲ್ಲ ಪ್ರಾಣಿಗಳ ಜನ್ಮವಾಯಿತು.

ಈ ಪ್ರಾಣಿಗಳ ಮಿದುಳು, ಮಧ್ಯಜೀವಕಲ್ಪದ ಅತ್ಯುತ್ತಮ ಪ್ರಾಣಿಗಳ ಮಿದುಳಿಗಿಂತ ಅಷ್ಟೇನೂ ದೊಡ್ಡದಾಗಿರುತ್ತಿರಲಿಲ್ಲ. ಆದರೆ ಬಂಡೆಗಳ ದಾಖಲೆಗಳನ್ನು ಗಮನಿಸಿದರೆ ಪ್ರತಿ ಸಸ್ತನಿ ಪ್ರಾಣಿಯಲ್ಲೂ ಕಾಲ ಮುಂದುವರಿದಂತೆ ಮಿದುಳಿನ ಅಳತೆ ದೊಡ್ಡದಾಗುತ್ತಾ ಹೋಗುವುದನ್ನು ಕಾಣಬಹುದು. ಈ ಕಾಲದ ಮೊದಲ ಭಾಗದಲ್ಲಿ ಟೈಟಾನೊಥೀರಿಯಂ ಎಂಬ ಪ್ರಾಣಿಯಿತ್ತು. ಇದು ಬಹುಮಟ್ಟಿಗೆ ಆಧುನಿಕ ಖಡ್ಗಮೃಗದಂತೆಯೇ ಇದ್ದರೂ ಇದರ ಮಿದುಳು ಖಡ್ಗಮೃಗದ ಮಿದುಳಿನ ಹತ್ತನೆ ಒಂದು ಭಾಗದಷ್ಟೂ ಇರಲಿಲ್ಲ.

ಮೊದ ಮೊದಲು ಈ ಸಸ್ತನಿಗಳಲ್ಲಿ ಹಾಲೂಡುವ ಕಾಲ ಮುಗಿಯುತ್ತಲೂ ತಾಯಿ ಮಕ್ಕಳ ಸಂಬಂಧ ಮುಗಿದು ಹೋಗುತ್ತಿತ್ತೆಂದು ತೋರುತ್ತದೆ. ಆದರೆ ಒಂದನ್ನೊಂದು ಅರ್ಥಮಾಡಿಕೊಳ್ಳುವ ಶಕ್ತಿ ಹೆಚ್ಚಿದಂತೆಯೂ ಸಹವಾಸವನ್ನು ಹೆಚ್ಚು ದಿನ ಬೆಳೆಸುವುದರಲ್ಲಿ ಪ್ರಯೋಜನವುಂಟು. ಹೀಗೆಯೇ ಬಹುಬೇಗನೇ ಅನೇಕ ಸಸ್ತನಿ ಜಾತಿಯ ಪ್ರಾಣಿಗಳು ಸಂಘ ಜೀವನ ನಡೆಸಲು ಮೊದಲು ಮಾಡಿದ್ದು ಕಂಡು ಬರುತ್ತದೆ. ಹಿಂಡುಹಿಂಡಾಗಿ ತಿರುಗುತ್ತಿದ್ದ ಈ ಪ್ರಾಣಿಗಳು ಒಂದನ್ನೊಂದು ಗಮನಿಸಿ

ಅನುಸರಿಸುತ್ತಿದ್ದುವು ; ಪ್ರತಿ ಪ್ರಾಣಿಯೂ ಉಳಿದ ಪ್ರಾಣಿಗಳ ಕೂಗು, ವರ್ತನೆಗಳಿಂದ ಎಚ್ಚರಿಕೆ ಪಡೆಯುತ್ತಿತ್ತು. ಬೆನ್ನೆಲುಬುಳ್ಳ ಪ್ರಾಣಿಗಳಲ್ಲಿ ಇಂತಹ ಸಂಘ ಜೀವನ ನಡೆದಿದ್ದು ಇದೇ ಮೊದಲು. ಮೀನುಗಳು ಸರೀಸೃಪಗಳು ಹಿಂಡು ಹಿಂಡಾಗಿ ಇರುವುದು ಕಂಡು ಬಂದರೂ ಇವು ಹಿಂಡುಕಟ್ಟಿಕೊಳ್ಳಲು ಕಾರಣ ಇಷ್ಟೇ, ಇವು ಒಂದೇ ಕಡೆ ಇಡಲಾಗಿದ್ದ ಮೊಟ್ಟೆಗಳಿಂದ ಹೊರಬಂದು ಮರಿಗಳಾಗುತ್ತವೆ. ಅನಂತರ ಎಲ್ಲವಕ್ಕೂ ಹೊರಗಣ ವಸ್ತು ಪರಿಸ್ಥಿತಿ ಒಂದೇ ಆಗಬೇಕಾದುದರಿಂದ ಒಟ್ಟಿಗೆ ತಮ್ಮ ಜೀವನ ಕಳೆಯುತ್ತವೆ. ಸಸ್ತನಿಗಳು ಗುಂಪು ಕಟ್ಟಿಕೊಳ್ಳುವ ಕಾರಣಗಳೇ ಬೇರೆ. ಇವುಗಳು ಸ್ವಂತ ಇಷ್ಟದಿಂದ ಸ್ವಜಾತಿ ಪ್ರಾಣಿಗಳ ಸಹವಾಸ ಅವುಗಳಿಗೆ ಇಷ್ಟ, ಅವಶ್ಯವಾದುದರಿಂದ ಗುಂಪುಗೂಡುತ್ತವೆ.

ಸರೀಸೃಪಗಳ ಭಾವನಾ ಪ್ರಪಂಚಕ್ಕೂ ನಮ್ಮ ಭಾವನಾ ಪ್ರಪಂಚಕ್ಕೂ ಇಲ್ಲಿಯೇ ದೊಡ್ಡ ವ್ಯತ್ಯಾಸ ಇರುವುದು. ಈ ಅಂತರವನ್ನು ದಾಟುವುದು ನಮಗೆ ಅಸಾಧ್ಯ ಎನಿಸುತ್ತದೆ. ಸರೀಸೃಪದ ಸರಳ ಸಹಜ ಪ್ರವೃತ್ತಿಗಳನ್ನು ಅಂದರೆ ಅವುಗಳ ಆಸೆಗಳು, ಭಯ ದ್ವೇಷಗಳ ಆತುರ ಮತ್ತು ತುರ್ತುಗಳನ್ನು ನಾವು ಅರಿಯಲಾರೆವು. ನಾವು ಮಾಡುವ ಒಂದೊಂದು ಕಾರ್ಯಕ್ಕೂ ನಮ್ಮ ನೂರಾರು ಅನುಭವಗಳ ಫಲದಿಂದ ಬಂದ ಜಟಿಲ ಕಾರಣಗಳಿರುತ್ತವೆ. ಆದೇ ಸರೀಸೃಪ ಯಾವುದಾದರೂ ಸಮಸ್ಯೆ ಎದುರಾದರೆ ತಟಕ್ಕನೆ ಕೆಲಸ ನಡೆಸೇ ಬಿಡುತ್ತದೆ. ಯೋಚಿಸಿ ಹಿಂದಿನ ಅನುಭವಗಳ ಅರಿವನ್ನು ಉಪಯೋಗಿಸಿ ಮುಂದಿನ ಕಾರ್ಯಕ್ರಮ ನಿರ್ಧರಿಸುವುದು ಅದಕ್ಕೆ ಸಾಧ್ಯವಿಲ್ಲ. ಸಸ್ತನಿಗಳು, ಪಕ್ಷಿಗಳು ಈ ವಿಷಯದಲ್ಲಿ ನಮ್ಮನ್ನು ಹೋಲುತ್ತವೆ. ಆತ್ಮ ನಿಗ್ರಹ, ಉಳಿದವರ ಕಡೆ ಗಮನ, ಸಾಮಾಜಿಕ ಅರಿವು ಇವೆಲ್ಲ ನಮ್ಮಷ್ಟಲ್ಲದಿದ್ದರೂ ಸ್ವಲ್ಪವಾದರೂ ಈ ಪ್ರಾಣಿಗಳಲ್ಲಿ ಇರುತ್ತದೆ. ಹೀಗಿರುವುದರಿಂದ ಇವುಗಳಲ್ಲಿ ಬಹುತೇಕ ಎಲ್ಲ ಜಾತಿ ಪ್ರಾಣಿಗಳೊಡನೆ ನಾವು ಸ್ವಲ್ಪವಾದರೂ ಸಂಪರ್ಕ ಬೆಳೆಸಬಹುದು. ನೋವು ದುಃಖ ಉಂಟಾದರೆ ಈ ಪ್ರಾಣಿ ಕೂಗಿಯೋ ಅಥವಾ ಬೇರೆ ವಿಧದಲ್ಲಿಯಾದರೂ ಅದನ್ನು ವ್ಯಕ್ತಪಡಿಸಿ ನಮ್ಮ ಅನುಕಂಪೆಯನ್ನು ಪಡೆಯುತ್ತವೆ. ಹೀಗಿರುವುದರಿಂದಲೇ ಇವುಗಳನ್ನು ಪಳಗಿಸಿ, ಸಾಕಿ ಇವುಗಳಿಗೆ ಶಿಕ್ಷಣ ಕೊಡಲು ನಮಗೆ ಸಾಧ್ಯವಾಗುತ್ತದೆ.

ಈ ರೀತಿಯಾದ ಅಸಾಮಾನ್ಯವಾದ ಮಿದುಳಿನ ಅಭಿವೃದ್ಧಿ ಮತ್ತು ಇದರ ಫಲವಾದ ವ್ಯಕ್ತಿ ವ್ಯಕ್ತಿಗಳ ಪರಸ್ಪರ ಅವಲಂಬನೆ ಇವು ಕೇನೋಜೋಯಿಕ್ ಯುಗದ ಅತಿ ಮುಖ್ಯ ಅಂಶಗಳು. ಈ ಮನೋವೃತ್ತಿಯ ಫಲ ಈಗಿನ ಮಾನವ ಸಮಾಜ.

ಕೇನೋಜೊಯಿಕ್ ಯುಗ ಮುನ್ನಡೆದಂತೆ ಜೀವವರ್ಗ ಬದಲಾಗುತ್ತಾ ಆಗುತ್ತಾ ಈಗಿನ ಜೀವವರ್ಗವನ್ನು ಹೆಚ್ಚು ಹೆಚ್ಚಾಗಿ ಹೋಲಲಾರಂಭಿಸಿತು.

ಯೂನಿಟಾಥೆರೆಸ್ (uintatheres) ಮತ್ತು ಟೈಟಾನೋಥೆರೆಸ್‌ಗಳಂತಹ ಒಡ್ಡೊಡ್ಡಾದ ದೊಡ್ಡ ದೊಡ್ಡ ಪ್ರಾಣಿಗಳು ಲುಪ್ತವಾಗಿ ಹೋದವು. ವಿಲಕ್ಷಣವಾಗಿದ್ದ ಕೆಲವು ಪ್ರಾಣಿಗಳು ಒಂದೇಸಮನೆ ಬದಲಾಯಿಸುತ್ತಾ ಈ ಕಾಲದ ಒಂಟೆ, ಜಿರಾಫೆ,

ಆನೆ, ಕುದುರೆ, ಜಿಂಕೆ, ನಾಯಿ, ಸಿಂಹ ಮತ್ತು ಹುಲಿ ಈ ಪ್ರಾಣಿಗಳು ರೂಪ ತಳೆದುವು. ಇವರಲ್ಲೆಲ್ಲಾ ಕುದುರೆಯ ವಿಕಾಸ ಬಂಡೆಗಳ ದಾಖಲೆಗಳಲ್ಲಿ ಬಹು ಚೆನ್ನಾಗಿ ತೋರಿಬರುತ್ತವೆ. ಕೇನೋಜೋಯಿಕ್ ಯುಗದ ಮೊದಲಭಾಗದಲ್ಲಿದ್ದ ಟಪಿರ್ ಎಂಬ ಪ್ರಾಣಿಯನ್ನು ಬಹುಮಟ್ಟಿಗೆ ಹೋಲುತ್ತಿದ್ದ ಪ್ರಾಣಿ ಕುದುರೆಗಳ ಪೂರ್ವಜ. ಅಲ್ಲಿಂದ ಇಲ್ಲಿಯವರೆಗೂ ಈ ಪ್ರಾಣಿಯ ಬೇರೆ ಬೇರೆ ರೂಪಗಳು ಹೆಚ್ಚುಕಡಿಮೆ ಪೂರ್ಣವಾಗಿ ನಮಗೆ ಸಿಕ್ಕಿವೆ. ಲಾಮಾ ಮತ್ತು ಒಂಟೆಗಳ ಬೆಳವಣಿಗೆಯನ್ನೂ ಈಗ ಬಹುಮಟ್ಟಿಗೆ ಸುಸ್ಪಷ್ಟವಾಗಿ ಜೋಡಿಸಿದ್ದಾರೆ.

9. ಕೋತಿಗಳು ಮತ್ತು ವಾನರರು

ಪ್ರಕೃತಿ ಶಾಸ್ತ್ರಜ್ಞರು ಸಸ್ತನಿಕುಲವನ್ನು ಬೇರೆ ಬೇರೆ ವರ್ಗಗಳಾಗಿ ವಿಭಾಗಿಸಿದ್ದಾರೆ. ಕಾಡುಪಾಪ, ಕೋತಿ, ವಾನರಗಳು ಮತ್ತು ಮನುಷ್ಯನನ್ನೊಳಗೊಂಡ ಪ್ರೈಮೇಟ್ ವರ್ಗಕ್ಕೆ ಇವುಗಳಲ್ಲಿ ಉಚ್ಚಸ್ಥಾನವನ್ನು ಕೊಟ್ಟಿದ್ದಾರೆ. ಇವುಗಳನ್ನು ಒಂದು ವರ್ಗಕ್ಕೆ ಸೇರಿಸಿದಾಗ ಇವುಗಳ ಶರೀರ ರಚನೆಯಲ್ಲಿನ ಸಾಮ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೇ ಹೊರತು ಇವುಗಳ ಬುದ್ಧಿಶಕ್ತಿಯನ್ನು ಪರಿಗಣಿಸಲಿಲ್ಲ.

ಭೂಗರ್ಭದ ದಾಖಲೆಗಳಿಂದ ಇವುಗಳ ಪೂರ್ವ ಚರಿತ್ರೆಯನ್ನು ತಿಳಿದುಕೊಳ್ಳುವುದು ಕಷ್ಟದ ಸಂಗತಿ, ಏಕೆಂದರೆ ಇವುಗಳ ಜೀವ್ಯವಶೇಷಗಳು ಹೆಚ್ಚಾಗಿ ಇಲ್ಲ. ಈ ಜಾತಿಯ ಪ್ರಾಣಿಗಳು ಹೆಚ್ಚಾಗಿ ಕಾಡಿನಲ್ಲಿ ವಾಸಿಸುತ್ತವೆ. ಬಬೂನ್‌ಗಳಂತೆ ಬಂಡೆಗಳಿರುವಲ್ಲಿ ವಾಸಿಸುವುವೂ ಉಂಟು. ಒಟ್ಟಿನಲ್ಲಿ ಇವು ನೀರಿನಲ್ಲಿ ಮುಳುಗಿ ಸಾಯುವ ಸಂಭವ ಕಡಿಮೆ. ನೀರಿನಲ್ಲಿ ಮುಳುಗಿ ಸತ್ತರೆ ಪ್ರಾಣಿಯ ಶರೀರ ಕೆಸರಿನಿಂದ ಮುಚ್ಚಲ್ಪಟ್ಟು ಜೀವ್ಯವಶೇಷ ಉಳಿಯುವ ಸಂಭವ ಹೆಚ್ಚು. ಇವುಗಳ ಸಂಖ್ಯೆಯೂ ಕಡಿಮೆ. ಅದರಿಂದ ಜೀವ್ಯವಶೇಷವಾಗಿ ಉಳಿಯುವ ಪ್ರಾಣಿಗಳ ಸಂಖ್ಯೆಯೂ ಕಡಿಮೆಯೇ ಇರುತ್ತವೆ. ಕುದುರೆ, ಒಂಟೆ ಮುಂತಾದ ಪ್ರಾಣಿಗಳ ಪೂರ್ವಜರ ಪಳೆಯುಳಿಕೆಗಳಷ್ಟು ಇವುಗಳದ್ದು ಕಾಣಸಿಗುವುದಿಲ್ಲ. ಹೀಗಿದ್ದರೂ ಸಹ 40,000,000 ವರ್ಷಗಳ ಹಿಂದೆಯೇ ಈ ವರ್ಗದ ಪ್ರಾಣಿಗಳಾದ ಪ್ರಾಚೀನ ಕಪಿಗಳು ಲೆಮುರ್‌ನಂಥ ಪ್ರಾಣಿಗಳು ಇದ್ದುವು ಎಂದು ಗೊತ್ತಾಗಿದೆ. ಆದರೆ ಇವು ಇವುಗಳ ವಂಶೀಕರವಷ್ಟು ಬುದ್ಧಿಶಕ್ತಿಯುಳ್ಳವಾಗಲೀ ಆಗಿರಲಿಲ್ಲ.

ಕೇನೊಜೋಯಿಕ್ ಯುಗದ ಮಧ್ಯಭಾಗ ಭೂಮಿಯ ಚರಿತ್ರೆಯಲ್ಲಿ ಒಂದು ದೊಡ್ಡ ವಸಂತಕಾಲ. ಇದು ಭೂ ಚರಿತ್ರೆಯಲ್ಲಿ ಮೂರನೆಯ ವಸಂತ. ಮೊದಲನೆಯದು ಇಂಗಾಲ ಯುಗದಲ್ಲಿ, ಎರಡನೆಯದು ಸರೀಸೃಪಗಳ ಯುಗದಲ್ಲಿ ಆಗಿಹೋದುವು. ಈಗ ಭೂಮಿ ತಿರುಗಿ ಮತ್ತೊಂದು ಹಿಮಯುಗವನ್ನು ಸಮೀಪಿಸಿತು. ಭೂಮಿ ತಣ್ಣಗಾಗಿ ತಿರುಗಿ ಸ್ವಲ್ಪಕಾಲ ಬೆಚ್ಚಗಾಗಿ ಮತ್ತೆ ತಣ್ಣಗಾಗಿ ಹೋಯಿತು. ಹೀಗಾಗುವುದಕ್ಕೆ ಮುಂಚೆ ಭೂಮಿ ಎಷ್ಟು ಬೆಚ್ಚಗಿತ್ತೆಂದರೆ ಈಗ ಪತ್ರಿಕೋದ್ಯಮಿಗಳು ತಿರುಗುವ ಲಂಡನ್ನಿನ

ಫ್ಲೀಟ್‌ಸ್ಟ್ರೀಟ್ ಇರುವಲ್ಲಿ ಸಹ ಹಿಪ್ಪೊಪೊಟಾಮಸ್‌ಗಳು ಸಮೃದ್ಧವಾಗಿ ಬೆಳೆದ ಉಷ್ಣ ವಲಯದ ಸಸ್ಯಗಳನ್ನು ಮೇಯುತ್ತಿದ್ದುವು ಮತ್ತು ಆ ಕಾಲದ ಕೋರೆಹಲ್ಲಿನ ಹುಲಿಗಳು ಬೇಟೆ ಹುಡುಕಿಕೊಂಡು ತಿರುಗುತ್ತಿದ್ದುವು. ಈ ಭೂಮಿ ತಣ್ಣಗಾಗುತ್ತಾ ಹೋದ ಹಾಗೆ ಮತ್ತೊಮ್ಮೆ ಜೀವವಂಶ (species) ಗಳಲ್ಲಿ "ಆಯ್ಕೆ" ಆರಂಭವಾಯಿತು. ಅನೇಕ ಜೀವಜಾತಿಗಳು ಲುಪ್ತವಾದುವು. ಪ್ರಕೃತಿಯಲ್ಲಿ "ಕಳೆಕೀಳುವ" ಕಾರ್ಯ ನಡೆಯಿತು. ತುಪ್ಪಟವಿದ್ದ ನೀರಾನೆಗಳು (woolly Rhinoceres) ಮಾಮತ್ ಎಂಬ ತುಪ್ಪಟವಿದ್ದ ಆನೆ ಜಾತಿಯ ಪ್ರಾಣಿ, ಆರ್ಕ್ಟಿಕ್ ಪ್ರದೇಶದ ಕಸ್ತೂರಿ ವೃಷಭ (musk ox) ಮತ್ತು ಹಿಮಸಾರಂಗಗಳು ಈಗ ಮುಂದೆ ಬಂದವು. ಶತಮಾನಗಳು ಉರುಳಿದಂತೆ ಮೊದಲು ಆರ್ಕ್‌ಟಿಕ್ ವಲಯವನ್ನು ಮಾತ್ರ ಮುಚ್ಚಿದ್ದ ನೀರ್ಗಲ್ಲಿನ ಪದರ (ice cap) ದಕ್ಷಿಣಕ್ಕೆ ಪಸರಿಸುತ್ತಾ ಇಂಗ್ಲೆಂಡಿನಲ್ಲಿ ಸುಮಾರು ಥೇಮ್ಸ್ ನದಿಯವರೆಗೂ, ಅಮೇರಿಕದಲ್ಲಿ ಓಹಿಯೋ ನದಿಯವರೆಗೂ ವ್ಯಾಪಿಸಿತು. ಅಂದರೆ ಅಷ್ಟು ಕಾಲವೂ ಚಳಿ ಒಂದೇಸಮನೆ ಹೆಚ್ಚುತ್ತಲೇ ಹೋಗಲಿಲ್ಲ. ಮಧ್ಯೆ ಮಧ್ಯೆ ಕೆಲವು ಸಾವಿರ ವರ್ಷಗಳ ಕಾಲ ಬೆಚ್ಚಗೂ ಇರುತ್ತಿತ್ತು. ಆದರೂ ಒಟ್ಟಿನಲ್ಲಿ ಮಾತ್ರ ಭೂಮಿ ತಣ್ಣಗಾಗುತ್ತಾ ಹೋಯಿತು.

ಈ ಚಳಿ ಹೆಚ್ಚಾಗಿದ್ದ ಯುಗಗಳಿಗೆ ಭೂಗರ್ಭ ಶಾಸ್ತ್ರಜ್ಞರು ಒಂದನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಹಿಮಯುಗಗಳೆಂದೂ ಇವುಗಳ ಮಧ್ಯ ಭೂಮಿ ಬೆಚ್ಚಗಿದ್ದ ಕಾಲಗಳಿಗೆ ಅಂತರ ಹಿಮಯುಗ (inter glacial periods) ಗಳೆಂದೂ ಹೆಸರಿಟ್ಟಿದ್ದಾರೆ. ಈಗಲೂ ಸಹ ಭೂಮಿ ಈ ಭಯಂಕರ ಚಳಿಗಾಲದ ಪರಿಣಾಮಗಳಿಂದ ಚೇತರಿಸಿಕೊಂಡಿಲ್ಲ. ಮೊದಲನೆ ಹಿಮಯುಗ ಈಗ 6 ಲಕ್ಷ ವರ್ಷಗಳ ಹಿಂದೆ ಆರಂಭವಾಗಿತ್ತು. ನಾಲ್ಕನೆಯದರ ಅತ್ಯಂತ ಕಠೋರ ಕಾಲ ಈಗ 50 ಸಾವಿರ ವರ್ಷಗಳ ಹಿಂದೆ ನಡೆಯಿತು. ಮಾನವ ರೂಪದ ಪ್ರಾಣಿಗಳು ಮೊದಲು ಜನ್ಮ ತಾಳಿದ್ದು ಆ ಕಾಲದಲ್ಲೇ, ಸರ್ವತ್ರ ವ್ಯಾಪಿಸಿದ್ದ ಆ ದೀರ್ಘ ಹಿಮಕಾಲದಲ್ಲೇ.

ಕೇನೊಜೋಯಿಕ್ ಯುಗದ ಮಧ್ಯಭಾಗದಲ್ಲೇ ಅರ್ಧಂಬರ್ಧ ಮಾನವನ ಎಲುಬುಗಳಂತಿರುವ ದವಡೆ ಎಲುಬು ಮತ್ತು ಕಾಲೆಲುಬುಗಳನ್ನುಳ್ಳ ವಾನರಗಳು ಕಾಣಿಸಿಕೊಂಡಿದ್ದುವು. ಆದರೆ ಹಿಮಯುಗಗಳ ಕಾಲ ಸಮೀಪಿಸುವವರೆಗೂ "ಮನುಷ್ಯ" ಎಂದು ಹೇಳಬಹುದಾದ ಪ್ರಾಣಿಗಳ ಕುರುಹು ಕಾಣಿಸುವುದಿಲ್ಲ; ಅಂದರೆ ಈ ಕುರುಹು ಗಳು ಎಲುಬುಗಳ ರೂಪದಲ್ಲಿಲ್ಲ. ಕೈಯಲ್ಲಿ ಹಿಡಿದು ಉಪಯೋಗಿಸಬಹುದಾದ ಉಪಕರಣಗಳ ರೂಪದಲ್ಲಿವೆ. ಯೂರೋಪ್ ಖಂಡದಲ್ಲಿ ½ ಮಿಲಿಯದಿಂದ 1 ಮಿಲಿಯ ವರ್ಷ ಹಳೆಯದಾದ ಉದ್ದೇಶಪೂರ್ವಕವಾಗಿ ಕೆತ್ತಿ ಸಿದ್ಧಮಾಡಿದಂತೆ ತೋರುವ ಕಲ್ಲಿನ ಮತ್ತು ಬೆಣಚು ಕಲ್ಲಿನ ಚೂರುಗಳು ಸಿಕ್ಕಿವೆ. ಸುತ್ತಿಗೆಯಂತೆ ಉಪಯೋಗಿಸಲೋಸುಗ ಅಥವಾ ಚೂಪಾದ ಅಂಚನ್ನುಪಯೋಗಿಸಿ ಹೊಡೆದಾಡಲೋ ಅಥವಾ ಏನನ್ನಾದರೂ ಕೆರೆಯಲೋಸುಗವೋ ಯಾವುದೋ ಕೈ ಕೆಲಸ ಮಾಡುವ ಪ್ರಾಣಿ ಈ ಕಲ್ಲುಗಳನ್ನು

ತಯಾರಿಸಿಕೊಂಡಿರಬೇಕೆನ್ನಿಸುತ್ತದೆ. ಇವುಗಳನ್ನು ಆದಿ ಶಿಲೋಪಕರಣಗಳು ಎಂದು ಕರೆಯುತ್ತಾರೆ. ಆದರೆ ಯೂರೋಪಿನಲ್ಲಿ ಇಂತಹ ಪ್ರಾಣಿಯ ಎಲುಬು ಯಾವುದೂ ಸಿಕ್ಕಿಲ್ಲ. ಆದುದರಿಂದ ಈ ಪ್ರಾಣಿ ಹೇಗಿತ್ತೆಂದು ಹೇಳುವುದು ಕಷ್ಟ. ಮನುಷ್ಯ ಸಂಬಂಧವೇ ಇಲ್ಲದ ಬುದ್ಧಿವಂತ ವಾನರಗಳೇ ಈ ಕಲ್ಲುಗಳನ್ನು ತಯಾರಿಸಿದ್ದರೂ ಇರ ಬಹುದು. ಆದರೆ ಜಾವಾದ ಟ್ರಿನಿಲ್ (Trinil) ಎಂಬಲ್ಲಿ ಇದೇ ಕಾಲದ ಬಂಡೆ ಗಳಲ್ಲಿ ಒಂದು ಬಗೆಯ ವಾನರನ ತಲೆಬುರುಡೆಯ ಚೂರು, ಹಲ್ಲುಗಳು ಮತ್ತು ಮೂಳೆ ಗಳು ಸಿಕ್ಕಿವೆ. ಇವರ ತಲೆಬುರುಡೆ ಈಗಿನ ವಾನರಗಳೆಲ್ಲವರ ತಲೆಬುರುಡೆಗಳಿಗಿಂತಲೂ ದೊಡ್ಡದು. ಇದು ನೆಟ್ಟಗೆ ನಡೆಯಬಲ್ಲುದಾಗಿತ್ತು ಎಂತಲೂ ಎನಿಸುತ್ತದೆ. ಈ ಪ್ರಾಣಿಗೆ ಪಿಥಿಕಾಂಥ್ರೋಪಸ್ ಎರೆಕ್ಟಸ್ (pithecanthropus erectus) ನೆಟ್ಟಗೆ ನಡೆಯಬಲ್ಲ ವಾನರ ಎಂದು ಹೆಸರಿಟ್ಟಿದ್ದಾರೆ. ಆದಿ ಶಿಲೋಪಕರಣ (Eolith) ಗಳನ್ನು ತಯಾರಿಸಿದವರು ಎಂಥವರು, ಯಾರು ಎಂದು ಊಹಿಸಿಕೊಳ್ಳಲು ನಮಗೆ ಇರುವ ಆಧಾರವೆಲ್ಲಾ ಪುಟ್ಟ ತಟ್ಟೆಯಲ್ಲಿ ಹಿಡಿಸುವ ಈ ಕೆಲವೇ ಕೆಲವು ಮೂಳೆಗಳು.

ಇದಾದಮೇಲೆ ೩ ಮಿಲಿಯ ವರ್ಷದ ಹಿಂದಿನ ಮರಳಿನ ಭಾಗದವರೆಗೂ ಕೆಳ ದರ್ಜೆ ಮಾನವನ ಅವಶೇಷ ಯಾವುದೂ ಸಿಕ್ಕದಿದ್ದರೂ ಬೇಕಾದಷ್ಟು ಆಯುಧ ಉಪ ಕರಣಗಳು ಮಾತ್ರ ಸಿಗುತ್ತವೆ. ಬಂಡೆಗಳ ದಾಖಲೆಗಳಲ್ಲಿ ನಾವು ಮುಂದೆ ಮುಂದೆ ಬಂದ ಹಾಗೂ ಇವುಗಳು ಉತ್ತಮಗೊಳ್ಳುತ್ತಾ ಹೋಗುತ್ತವೆ. ಇವು ಆದಿ ಶಿಲೋಪಕರಣ ಗಳಂತೆ ಒಡ್ಡೊಡ್ಡಾಗಿಲ್ಲ. ಅಂದವಾಗಿರುವ ಇವುಗಳನ್ನು ಸಾಕಷ್ಟು ಚಾತುರ್ಯದಿಂದ ನಿರ್ಮಿಸಿರಬೇಕು. ಇದಾದಮೇಲೆ ಬಂದ ನಿಜ ಮಾನವರು ತಯಾರಿಸಿಕೊಂಡ ಉಪಕರಣ ಗಳೆಲ್ಲವಕ್ಕಿಂತ ಇವು ದೊಡ್ಡವು. ಜರ್ಮನಿಯ ಹೈಡಲ್‌ಬರ್ಗಿನ ಮರಳುಕುಣಿ (Sand pit) ಒಂದರಲ್ಲಿ ಒಂದು ದವಡೆ ಮೂಳೆ ಸಿಕ್ಕಿದೆ. ನಿಜ ಮಾನವನ ದವಡೆಮೂಳೆಗಿಂತ ಇದು ಬಹಳ ಭಾರ, ಅದರಷ್ಟು ಅಗಲವಿಲ್ಲ ಮತ್ತು ಇದಕ್ಕೆ ಗದ್ದವೇ ಇಲ್ಲ. ಈ ಪ್ರಾಣಿಗೆ ನಾಲಿಗೆ ಆಡಿಸಿ ಮಾತಾಡಲು ಸಾಧ್ಯವಿರಲಿಲ್ಲವೆನಿಸುತ್ತದೆ. ಈ ಪ್ರಾಣಿ ಬಹುಶಃ ದೊಡ್ಡ ದೊಡ್ಡ ಕೈ ಕಾಲುಗಳು, ಒತ್ತಾದ ಮೈ ಕೂದಲು ಇದ್ದ ಭಾರಿ ಮನುಷ್ಯಾ ಕೃತಿಯ ದೈತ್ಯ ಆಗಿದ್ದಿರಬೇಕೆಂದು ಈ ದವಡೆ ಮೂಳೆಯ ಆಧಾರದ ಮೇಲೆ ವಿಜ್ಞಾನಿ ಗಳು ಊಹೆ ಮಾಡಿದ್ದಾರೆ. ಇವನನ್ನು ಹೈಡಲ್‌ಬರ್ಗ್ ಮನುಷ್ಯನೆಂದು ಕರೆದಿದ್ದಾರೆ.

ಹೀಗೆ ಈ ದವಡೆ ಮೂಳೆ ಹೈಡಲ್‌ಬರ್ಗ್ ಮಾನವನ ಮಸುಕು ಮಸುಕಾದ ದೃಶ್ಯವೊಂದನ್ನು ತೋರಿಸಿ ನಮ್ಮ ಕುತೂಹಲವನ್ನು ಕೆರಳಿಸಿ ಕೈ ಬಿಡುತ್ತದೆ. ಮಾನವ ಸಹಜ ಕುತೂಹಲಕ್ಕೆ ಇದರಷ್ಟು ಆಸೆ ತೋರಿಸಿ ಮೋಸ ಮಾಡಿರುವ ವಸ್ತು ಮತ್ತೊಂ ದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಮಬ್ಬುಮಬ್ಬಾದ ಕೆಟ್ಟ ಗಾಜಿನ ಕಿಡಿಕಿ ಯೊಂದರಿಂದ ಭೂತಕಾಲವನ್ನು ಅವಲೋಕಿಸಿದಂತಿದೆ. ಇದು ಕೊರೆಯುವ ಚಳಿಯಲ್ಲಿ ಕಾಡುಗಳಲ್ಲಿ ಅಡ್ಡಾಡುತ್ತಾ ಕತ್ತಿ ಹಲ್ಲಿನ ಹುಲಿ ಮತ್ತು ತುಪ್ಪಟದ ಖಡ್ಗಮೃಗಗಳಿಂದ ತಪ್ಪಿಸಿಕೊಳ್ಳುತ್ತಾ ಜೀವಿಸುತ್ತಿದ್ದ ಪ್ರಾಣಿಯ ಒಂದೇ ಒಂದು ಮಬ್ಬಾದ ದೃಶ್ಯ ನಮಗೆ

ಕಾಣಸಿಗುತ್ತವೆ, ಅಷ್ಟೆ. ಇನ್ನು ಸ್ವಲ್ಪ ಸೂಕ್ಷ್ಮವಾಗಿ ಈ ಪ್ರಾಣಿಯನ್ನು ಪರೀಕ್ಷಿಸೋಣ ಎನ್ನುವಷ್ಟರಲ್ಲಿ ಎಲ್ಲಾ ಮಾಯವಾಗುತ್ತವೆ. ಆದರೂ ತನ್ನ ಕಾರ್ಯಕ್ಕೋಸ್ಕರ ಈ ಪ್ರಾಣಿ ತಯಾರಿಸಿಕೊಂಡಿದ್ದ ಆಯುಧಗಳು ಹೇರಳವಾಗಿ ಸಿಗುತ್ತವೆ.

ಈ ದವಡೆ ಮೂಳೆಗಿಂತಲೂ ಸಸೆಕ್ಸ್‌ನ ಪಿಲ್ಟ್‌ಡೌನ್[8] ಎಂಬಲ್ಲಿ ಸಿಕ್ಕಿರುವ ಕೆಲವು ಮೂಳೆಗಳು ಮತ್ತು ವಸ್ತುಗಳು ರಹಸ್ಯಗರ್ಭಿತವಾಗಿವೆ. ಇವುಗಳು ಸುಮಾರು ಒಂದು ಅಥವಾ ಒಂದೂವರೆ ಲಕ್ಷ ವರ್ಷಗಳ ಹಿಂದಿನವೆಂದು ಕೆಲವರು ಊಹಿಸಿದರೆ ಮತ್ತೆ ಕೆಲವರು ಇವು ಹೈಡಲ್‌ಬರ್ಗ್ ದವಡೆ ಮೂಳೆಗಿಂತ ಹಳೆಯವೆನ್ನುತ್ತಾರೆ. ಅಲ್ಲಿ ಈ ಕೆಳಕಂಡ ವಸ್ತುಗಳು ಸಿಕ್ಕಿವೆ. 1) ಈಗಿನ ವಾನರಗಳ ತಲೆಬುರುಡೆಗಳಿಗಿಂತಲೂ ದೊಡ್ಡದಾದ ಕೆಳದರ್ಜೆ ಮಾನವನ ದಪ್ಪ ತಲೆಬುರುಡೆಯೊಂದರ ಅವಶೇಷಗಳು. 2) ಆ ಬುರುಡೆಯನು ಹೌದೋ ಅಲ್ಲವೋ ಹೇಳಲು ತಿಳಿಯದ ಚಿಂಪಾಂಜಿ ವಾನರದ ದವಡೆಯಂತಿರುವ ದವಡೆ ಮೂಳೆ. 3) ಶ್ರದ್ಧೆಯಿಂದ ಸಿದ್ಧಪಡಿಸಿದ ದಾಂಡಿನಾಕಾರದ ಆನೆ ಮೂಳೆಯ ಚೂರು. ಇದರಲ್ಲಿ ಒಂದು ತೂತು ಇತ್ತೆಂದು ತೋರುತ್ತದೆ. 4) ಕಚ್ಚು ಗುರುತುಳ್ಳ ಜಿಂಕೆಯ ತೊಡೆಯೆಲುಬು.

ಎಲುಬುಗಳಲ್ಲಿ ತೂತು ಕೊರೆಯುತ್ತಿದ್ದ ಈ ಪ್ರಾಣಿ ಎಂತಹದಿರಬಹುದು ?

ವಿಜ್ಞಾನಿಗಳು ಈ ಪ್ರಾಣಿಯನ್ನು ಇಯೋನ್‌ಥ್ರೋಪಸ್, ಅಂದರೆ ನವೋದಿತ ಮಾನವ (Eonthropus, dawn man) ಎಂದು ಕರೆದಿದ್ದಾರೆ. ಈಗ ಜೀವಿಸುವ ವಾನರಗಳನ್ನಾಗಲೀ, ಹೈಡಲ್‌ಬರ್ಗ್ ಮನುಷ್ಯನನ್ನಾಗಲೀ ಈ ಪ್ರಾಣಿ ಹೋಲುವುದಿಲ್ಲ. ಈ ಪ್ರಾಣಿಯಂತಹ ಮತ್ತಾವ ಪ್ರಾಣಿಯದೂ ಅವಶೇಷ ಸಿಕ್ಕಿಲ್ಲ.

ಆದರೆ ಲಕ್ಷ ವರ್ಷಗಳೀಚೆಗಿನ ಗ್ರಾವೆಲ್ ಪದರಗಳಲ್ಲಿ ಚಕ್ಕಮುಕ್ಕಿಕಲ್ಲು (Flint) ಮತ್ತು ಅದೇತೆರದ ಇತರ ಕಲ್ಲುಗಳ ಉಪಕರಣಗಳು ಹೆಚ್ಚು ಹೆಚ್ಚಾಗಿ ಸಿಗುತ್ತವೆ. ಇವು ಆದಿ ಶಿಲೋಪಕರಣಗಳ ಹಾಗೆ ಒರಟೊರಟಾಗಿಲ್ಲ. ಇವುಗಳಲ್ಲಿ ಬೇರೆ ಬೇರೆ ಉದ್ದೇಶಕ್ಕೋಸ್ಕರ ತಯಾರಿಸಿಕೊಂಡ ಉಪಕರಣಗಳನ್ನು ಗುರುತಿಸಿದ್ದಾರೆ. ಕೆರೆಯುವುದಕ್ಕೆ, ತೂತು ಕೊರೆಯುವುದಕ್ಕೆ ನಿರ್ಮಿಸಿದ ಆಯುಧಗಳು, ಚಾಕುಗಳು, ಎಸೆಯಲು ಸರಿಯಾಗಿರುವ ಕಲ್ಲುಗಳು ಮತ್ತು ಬಾಕುಗಳು (darts) ಕೈ ಕೊಡಲಿಗಳು ಹೀಗೆ.

ಇನ್ನೇನು, ನಾವು ನಿಜ ಮಾನವನನ್ನು ಸಮೀಪಿಸುತ್ತಿದ್ದೇವೆ. ಮುಂದಿನ ಅಧ್ಯಾಯದಲ್ಲಿ ಮಾನವನ ಪೂರ್ವಿಕರಲ್ಲೆಲ್ಲಾ ಅತಿ ವಿಚಿತ್ರರಾದ ಮನುಷ್ಯರೆಂದೇ ಎನಿಸುವ ಆದರೂ ನಿಜ ಮಾನವರಲ್ಲದ ನಿಯಾಂದರ್ ಥಾಲರ್ ಮನುಷ್ಯರನ್ನು ವರ್ಣಿಸಲಿದ್ದೇವೆ.

ಆದರೂ ಕೊನೆಗೆ ಒಂದು ಅಂಶವನ್ನು ಸ್ಪಷ್ಟವಾಗಿ ಒತ್ತಿ ಹೇಳಬೇಕು. ಅದೇನೆಂದರೆ ಹೈಡಲ್‌ಬರ್ಗ್ ಮನುಷ್ಯ ಮತ್ತು ನವೋದಿತ ಮಾನವ ಇವರು ನೇರವಾಗಿ ನಮ್ಮ ಪಿತೃಗಳೆಂದು ನಂಬುವುದಿಲ್ಲ. ಹೆಚ್ಚೆಂದರೆ ಆ ಪ್ರಾಣಿಗಳು ನಮ್ಮ ಸಂಬಂಧಿಕರೆನ್ನಬಹುದಷ್ಟೆ.

ನಿಯಾಂಡರ್ ಥಾಲರ್ ಮತ್ತು ರೊಡೀಷಿಯನ್ ಮಾನವರು

ಈಗ ಸುಮಾರು ಐವತ್ತು ಅಥವಾ ಅರವತ್ತು ಸಾವಿರ ವರ್ಷಗಳ ಹಿಂದೆ ನಾಲ್ಕನೆಯ ಹಿಮಯುಗದ ಅತ್ಯಂತ ತೀಕ್ಷ್ಣ ಕಾಲದ ಮುಂಚೆ ಭೂಮಿಯಲ್ಲಿ ಮನುಷ್ಯನೆಂದೇ ಹೇಳಬಹುದಾದೊಂದು ಪ್ರಾಣಿ ವಾಸಿಸುತ್ತಿತ್ತು. ಮಾನವನಿಗೂ ಈ ಪ್ರಾಣಿಗೂ ಅಷ್ಟು ಹೋಲಿಕೆ ಇದ್ದುದರಿಂದ ಈಗ ಕೆಲವು 4 ವರ್ಷಗಳ ಹಿಂದಿನವರೆಗೂ ಇವರ ಅವಶೇಷಗಳನ್ನು ಮಾನವನ ಅವಶೇಷಗಳೆಂದೇ ಭಾವಿಸುತ್ತಿದ್ದರು. ಈ ಪ್ರಾಣಿ ಜಾತಿಯ ತಲೆ ಬುರುಡೆಗಳು, ಎಲುಬುಗಳು, ಅದು ತಯಾರಿಸಿದ ದೊಡ್ಡ ದೊಡ್ಡ ಉಪಕರಣಗಳು ಬೇಕಾದಷ್ಟು ಸಿಕ್ಕಿವೆ. ಬೆಂಕಿಯನ್ನು ವಶಪಡಿಸಿಕೊಂಡಿದ್ದ ಈ "ಕೆಳಮಟ್ಟದ ಮಾನವ" ಚಳಿಯಿಂದ ದೂರವಾಗಲು ಗವಿಗಳಲ್ಲಿ ವಾಸಿಸುತ್ತಿದ್ದನು. ಚರ್ಮಗಳನ್ನು ತನಗೆ ಸಾಧ್ಯವಾದಷ್ಟು ಹದ ಮಾಡಿಕೊಂಡು ಬಟ್ಟೆಯಂತೆ ಧರಿಸುತ್ತಿದ್ದನು. ಮನುಷ್ಯರಂತೆಯೇ ಎಲ್ಲಾ ಕೆಲಸಗಳಿಗೂ ಬಲಗೈಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದನು.

ಆದರೂ ಮಾನವ ಕುಲ ಶಾಸ್ತ್ರಜ್ಞರು ಹೇಳುವುದು ಈ ಪ್ರಾಣಿ ನೈಜ ಮಾನವನಲ್ಲ ಎಂದು. ನಿಜ ಮಾನವ ಮತ್ತು ಈ ಪ್ರಾಣಿ ಒಂದೇ ಜಾತಿಯ ಬೇರೆ ಬೇರೆ ಪ್ರಭೇದಗಳೆಂದು ಅವರ ಅಭಿಪ್ರಾಯ. (different species of the same genus). ಈ ಮಾನವನ ದವಡೆಗಳು ಭಾರವಾಗಿ ಮುಂದಕ್ಕೆ ಚಾಚಿಕೊಂಡಿರುತ್ತಿದ್ದವು. ಹಣೆ ಬಹಳ ತಗ್ಗಾಗಿರುತ್ತಿತ್ತು. ಕಣ್ಣುಗಳ ಮೇಲೆ ದೊಡ್ಡ ಏಣಿನಂತಹ (great brow ridges) ಹುಬ್ಬುಗಳಿದ್ದವು. ಮನುಷ್ಯನ ಕೈ ಹೆಬ್ಬೆರಳಿನಂತೆ ಇವರ ಕೈ ಹೆಬ್ಬೆರಳು ಉಳಿದ ಬೆರಳುಗಳಿಗೆ ಎದುರಾಗಿರಲಿಲ್ಲ. ಇವರ ಕುತ್ತಿಗೆ ಹೇಗಿತ್ತೆಂದರೆ ತಮ್ಮ ತಲೆ ಹಿಂದಕ್ಕೆತ್ತಿ ಆಕಾಶವನ್ನು ನೋಡಲು ಈ ಮನುಷ್ಯರಿಗೆ ಆಗುತ್ತಿರಲಿಲ್ಲ. ತಲೆ ಕೆಳಕ್ಕೆ ಬಗ್ಗಿಸಿಕೊಂಡು ಕುತ್ತಿಗೆ ಮುಂದಕ್ಕೆ ಚಾಚಿ ಶರೀರವನ್ನು ಜೋಲಿಸಿಕೊಂಡು ಇವರು ನಡೆಯುತ್ತಿದ್ದರು. ಗದ್ದವೇ ಇಲ್ಲದ ಇವರ ದವಡೆ ಮೂಳೆ ಹೈಡಲ್ ಬರ್ಗ್ ದವಡೆ ಮೂಳೆಯಂತಿದೆಯೇ ಹೊರತು ನಿಜ ಮಾನವನ ದವಡೆ ಮೂಳೆಯನ್ನು ಸ್ವಲ್ಪವೂ ಹೋಲುವುದಿಲ್ಲ. ಹಲ್ಲುಗಳೂ ಅಷ್ಟೆ. ನಮ್ಮ ಹಲ್ಲುಗಳಿಗೂ ಅವರದ್ದಕ್ಕೂ ಬಹಳ ವ್ಯತ್ಯಾಸಗಳಿವೆ. ಅವರ ದವಡೆ ಹಲ್ಲುಗಳ ರಚನೆ ನಮ್ಮದಕ್ಕಿಂತಲೂ ಜಟಿಲವಾಗಿತ್ತು. ಇವುಗಳ ಬೇರಿನ ಮೊನೆ ನಮ್ಮದರಷ್ಟು ಆಳವಾಗಿರಲಿಲ್ಲ. ನಮಗಿರುವಂತಹ ಎತ್ತಿ ಕಾಣುವ ಕೋರೆಹಲ್ಲುಗಳಿರಲಿಲ್ಲ. ಈ ಅರೆ ಮಾನವರ ತಲೆಬುರುಡೆ ಒಳ ಅಳತೆ ಒಟ್ಟಿನಲ್ಲಿ ನಮ್ಮದರಷ್ಟೇ ಇದ್ದರೂ ಅವರ ಮಿದುಳಿನ ಮುಂಭಾಗ ಹಿಂಭಾಗಕ್ಕಿಂತ ಚಿಕ್ಕದಾಗಿತ್ತು. ಅವರ ಬುದ್ಧಿ ಸಾಮರ್ಥ್ಯದ ಹಂಚಿಕೆ ಬೇರೆ ವಿಧವಾಗಿತ್ತು. ಅಂತೂ ಶಾರೀರಕವಾಗಲೀ, ಮಾನಸಿಕವಾಗಿಯಾಗಲೀ ಅವರು ಮಾನವ ಶ್ರೇಣಿಗೆ ಸೇರಿದವರಲ್ಲ.

ಈ ಲುಪ್ತ ಜಾತಿ ಮಾನವನ ಅವಶೇಷಗಳು ಮುಖ್ಯವಾಗಿ ನಿಯಾಂಡರ್ ಥಾಲ್ ಎಂಬಲ್ಲಿ ಸಿಕ್ಕಿದುದರಿಂದ ಈ ಮಾನವನಿಗೆ ನಿಯಾಂಡರ್ ಥಾಲರ್ ಎಂದು ನಾಮಕರಣ

ಮಾಡಿವರು. ಈ ಮಾನವರು ಯೂರೋಪಿನಲ್ಲಿ ಅನೇಕ ಶತಮಾನಗಳು, ಏಕೆ ಅನೇಕ ಸಹಸ್ರ ವರ್ಷಗಳ ಕಾಲ ಜೀವಿಸುತ್ತಿದ್ದಿರಬೇಕು.

ಆ ಕಾಲದ ಭೌಗೋಳಿಕ ಮತ್ತು ವಾತಾವರಣ ಪರಿಸ್ಥಿತಿ ಈಗಿನದಕ್ಕಿಂತ ಬಹಳ ಬೇರೆಯಾಗಿತ್ತು. ಉದಾಹರಣೆಗೆ ಯೂರೋಪಿನಲ್ಲಿ ಥೇಮ್ಸ್ ನದಿ, ಮಧ್ಯ ಜರ್ಮನಿ ಮತ್ತು ಮಧ್ಯ ರಷ್ಯಾದವರೆಗೂ ನೀರ್ಗಲ್ಲಿನಿಂದ ಭೂಮಿ ಮುಚ್ಚಿಹೋಗಿತ್ತು. ಇಂಗ್ಲಿಷ್ ಕಡಲ್ಗಾಲುವೆ ಆಗ ಇರಲೇ ಇಲ್ಲ. ಬ್ರಿಟನ್ ಮತ್ತು ಫ್ರಾನ್ಸ್ ಬೇರೆ ಬೇರೆಯಾಗಿರಲಿಲ್ಲ. ಈಗ ಮೆಡಿಟರೇನಿಯನ್ ಮತ್ತು ಕೆಂಪು ಸಮುದ್ರಗಳಿರುವಲ್ಲಿ ದೊಡ್ಡ ಕಣಿವೆಗಳಿದ್ದುವು. ಈ ಕಣಿವೆಗಳ ತಗ್ಗಾದ ಭಾಗಗಳಲ್ಲಿ ಪ್ರಾಯಶಃ ಸಾಲುಸಾಲಾಗಿ ಸರೋವರಗಳಿದ್ದಿರಬೇಕು. ಈಗಿನ ಕಪ್ಪುಸಮುದ್ರದಿಂದ ಮಧ್ಯ ಏಷ್ಯಾದೊಳಕ್ಕೆ ಬಹು ದೂರದವರೆಗೂ ಒಳನಾಡಿನ ಸಮುದ್ರವೊಂದು ಚಾಚಿಕೊಂಡಿತ್ತು. ಸ್ಪೇಯಿನ್, ಮತ್ತಿತರ ಹಿಮಗಲ್ಲಿಂದ ಮುಚ್ಚಿಲ್ಲದಿದ್ದ ಯೂರೋಪಿನ ಭಾಗಗಳ ಕೊರೆಯುವ ಉನ್ನತ ಪ್ರದೇಶಗಳಲ್ಲಿ ವಾಯುಗುಣ ಈಗಿನ ಲ್ಯಾಬ್ರಡಾರಿನ ಹವೆಗಿಂತಲೂ ಕಠೋರವಾಗಿರುತ್ತಿತ್ತು. ದಕ್ಷಿಣಕ್ಕೆ ಹೋಗುತ್ತಾ ಬಂದರೆ ಉತ್ತರ ಆಫ್ರಿಕಾದವರೆಗೂ ಎಲ್ಲಿಯೂ ಸಮಶೀತೋಷ್ಣ ವಾತಾವರಣ ಸಹ ಇರುತ್ತಿರಲಿಲ್ಲ. ದಕ್ಷಿಣ ಯೂರೋಪಿನ ಕೊರೆಯುವ ಸ್ಟೆಪ್ಪಿಗಳಲ್ಲಿ ಬೆಳೆಯುತ್ತಿದ್ದ ಆರ್ಕ್ಟಿಕ್ ಸಸ್ಯವರ್ಗದ ನಡುವೆ ತುಪ್ಪಟವುಳ್ಳ ಮಮ್ಮಾತ್ ಮತ್ತು ಖಡ್ಗಮೃಗಗಳನ್ನು ಹೋಲುತ್ತಿದ್ದ ಕಷ್ಟಸಹಿಷ್ಣು ಪ್ರಾಣಿಗಳೂ, ದೊಡ್ಡಗಾತ್ರದ ಎತ್ತುಗಳೂ, ಹಿಮಸಾರಂಗಗಳೂ ವಾಸಿಸುತ್ತಿದ್ದುವು. ವಸಂತಕಾಲದಲ್ಲಿ ಉತ್ತರಕ್ಕೆ, ಮಾಗಿ ಕಾಲದಲ್ಲಿ ದಕ್ಷಿಣಕ್ಕೆ, ಸಸ್ಯವರ್ಗ ಯಾವಾಗ ಎಲ್ಲಿ ಅಭಿವೃದ್ಧಿಯಾಗುತ್ತಿತ್ತೋ ನೋಡಿಕೊಂಡು ಈ ಪ್ರಾಣಿಗಳು ಚಲಿಸುತ್ತಿದ್ದಿರಬೇಕು.

ಇಂಥ ಸನ್ನಿವೇಶದಲ್ಲಿ ನಿಯಾಂಡರ್‌ಥಾಲ್ ಮನುಷ್ಯ ಹಣ್ಣು ಹಂಪಲು, ಗೆಡ್ಡೆಗೆಣಸುಗಳು ಮತ್ತು ಸಣ್ಣ ಸಣ್ಣ ಪ್ರಾಣಿಗಳನ್ನು ತಿಂದು ಹೊಟ್ಟೆ ಹೊರೆದುಕೊಳ್ಳುತ್ತಿದ್ದನು. ಅವನ ಸಮತಟ್ಟಾದ ಹಲ್ಲುಗಳನ್ನು ನೋಡಿದರೆ ಪ್ರಾಯಶಃ ಅವನು ಮುಖ್ಯವಾಗಿ ಸಸ್ಯಾಹಾರವನ್ನೇ ನೆಚ್ಚಿಕೊಂಡಿದ್ದಿರಬೇಕೆಂದು ಎನಿಸುತ್ತದೆ. ಆದರೂ ಅವನ ಗುಹೆಗಳಲ್ಲಿ ದೊಡ್ಡ ದೊಡ್ಡ ಪ್ರಾಣಿಗಳ ಮೂಳೆಗಳೂ ಸಿಕ್ಕಿವೆ. ಈ ಮೂಳೆಗಳನ್ನು ಒಡೆದು ಅವುಗಳೊಳಗಿನ ನೆಣವನ್ನು ಹೊರತೆಗೆದಿದ್ದಂತೆ ತೋರುತ್ತದೆ. ಅವನ ಬಳಿ ಇರುತ್ತಿದ್ದ ಆಯುಧಗಳೇನೋ ಈ ಪ್ರಾಣಿಗಳೊಡನೆ ನೇರವಾಗಿ ಹೋರಾಡಿ ಕೊಲ್ಲಲು ಉಪಯುಕ್ತವಾಗಿರಲಾರವು. ಅವು ನದಿಗಳನ್ನು ಕಷ್ಟದಿಂದ ದಾಟುವಾಗ ಭರ್ಜಿಗಳಿಂದ ಇರಿದು ಅವುಗಳನ್ನು ಕೊಲ್ಲುತ್ತಿದ್ದಿರಬೇಕು ; ಅಥವಾ ಹಳ್ಳತೋಡಿ ಅವುಗಳಲ್ಲಿ ಪ್ರಾಣಿಗಳನ್ನು ಬೀಳಿಸಿ ಕೊಲ್ಲುವುದೂ ಪ್ರಾಯಶಃ ಅವನಿಗೆ ಗೊತ್ತಿತ್ತು. ಮೇವಿನಗಳಲ್ಲಿ ಪ್ರಾಣಿಗಳನ್ನು ಬೀಳಿಸಿ ಕೊಲ್ಲುವುದೂ ಪ್ರಾಯಶಃ ಅವನಿಗೆ ಗೊತ್ತಿತ್ತು. ಮೇವಿನ ಪ್ರಾಣಿಗಳ ಮಂದೆಗಳನ್ನು ಹಿಂಬಾಲಿಸುತ್ತಾ ಅವು ಒಂದರೊಡನೊಂದು ಹೋರಾಡಿ ಸತ್ತಾಗ ಅವುಗಳನ್ನು ತಿನ್ನುತ್ತಿದ್ದಿರಬಹುದು, ಅಥವಾ ನರಿಗಳಂತೆ ಆಗಿನ ಕತ್ತಿಹಲ್ಲಿನ ಹುಲಿಗಳು ಬೇಟೆಯಾಡಿ ತಿಂದುಬಿಟ್ಟಿದ್ದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದಿರ

ಬಹುದು. ಅನೇಕಾನೇಕ ಯುಗಗಳವರೆಗೆ ಸಸ್ಯಾಹಾರಿಯೇ ಆಗಿದ್ದು ಕಡೆಗೆ ಹಿಮಯುಗ ಬಹಳ ಕಠೋರವಾದಾಗ ಪ್ರಾಣಿಗಳನ್ನು ಕೊಲ್ಲಲು ಈ ಮನುಷ್ಯ ಮೊದಲು ಮಾಡಿರ ಬಹುದು.

ನಿಯಾಂಡರ್ ಥಾಲ್ ಮನುಷ್ಯ ನೋಡಲು ಹೇಗಿದ್ದನೆಂದು ಈಗ ಪೂರ್ತಿ ಊಹಿಸಲಾಗುವುದಿಲ್ಲ. ಒಟ್ಟಿನಲ್ಲಿ ಮೈತುಂಬ ಕೂದಲಿದ್ದು ಮನುಷ್ಯನಿಗಿಂತ ಮೃಗದಂತೆ ಕಾಣುತ್ತಿದ್ದಿರಬಹುದು. ನೆಟ್ಟಗೆ ನಿಲ್ಲಲು ಇವನಿಗೆ ಸಾಧ್ಯವಿತ್ತೇ ಎಂಬುದೂ ಸ್ವಲ್ಪ ಸಂಶಯವೇ. ಎದ್ದು ನಿಂತಾಗ ಕೈಗಿಣ್ಣುಗಳನ್ನೂ ನೆಲದ ಮೇಲೆ ಊರಿಕೊಳ್ಳುತ್ತಿದ್ದಿರ ಬಹುದು. ಇವನು ಒಂಟಿಯಾಗಿ ಜೀವಿಸುತ್ತಿದ್ದಿರಬಹುದು, ಇಲ್ಲವೇ ಸಣ್ಣ ಸಣ್ಣ ಕುಟುಂಬಗಳ ಗುಂಪು ಕಟ್ಟಿಕೊಂಡಿರುತ್ತಿದ್ದಿರಬಹುದು. ಅವನ ದವಡೆಯ ರಚನೆ ನೋಡಿ ಅವನಿಗೆ ನಮ್ಮಂತೆ ಮಾತಾಡುವ ಶಕ್ತಿ ಇರಲಿಲ್ಲವೆಂದು ಅನುಮಾನಿಸಲಾಗಿದೆ.

ಅನೇಕ ಸಾವಿರ ವರ್ಷಗಳು ಈ ಜನರು ಯೂರೋಪಿನಲ್ಲಿ ವಾಸಿಸುತ್ತಿದ್ದರು. ಅದುವರೆಗೆ ಅಲ್ಲಿದ್ದ ಜೀವಿಗಳಲ್ಲೆಲ್ಲಾ ಇವರೇ ಅತ್ಯುನ್ನತ ಮಟ್ಟದವರು. ಈಗ ಮೂವತ್ತು ಅಥವಾ ಮೂವತ್ತೈದು ಸಾವಿರ ವರ್ಷಗಳ ಹಿಂದೆ ಹವಾಗುಣ ಮತ್ತೆ ಬೆಚ್ಚಗಾಗಲು ಮೊದಲಾಯಿತು. ನಿಯಾಂಡರ್ ಥಾಲ್ ಜನರಿಗಿಂತ ಬುದ್ಧಿವಂತರೂ, ಮಾತಾಡುವ ಶಕ್ತಿಯಿದ್ದು ಒಬ್ಬರೊಡನೊಬ್ಬರು ಸಹಕರಿಸಿ ಕಾರ್ಯ ನಡೆಸಲು ಬಲ್ಲವರೂ ಆದ ಮನುಷ್ಯರು ದಕ್ಷಿಣ ದಿಕ್ಕಿನಿಂದ ನಿಧಾನವಾಗಿ ಬರಲು ಮೊದಲು ಮಾಡಿದರು. ಈಗ ನಿಯಾಂಡರ್ ಥಾಲ್ ಮನುಷ್ಯರಿಗೆ ತಮ್ಮ ಆವಾಸಸ್ಥಾನಗಳಾದ ಗುಹೆಗಳು ಮತ್ತು ಸಣ್ಣ ಗುಡಿಸಲುಗಳಿಂದ ಉಚ್ಚಾಟನೆಯಾಯಿತು. ಈ ಹೊಸಬರೇ ಭಯಪಡುವಂತಿದ್ದ ನಿಯಾಂಡರ್ ಥಾಲ್ ಜನಾಂಗವನ್ನು ನಾಶಮಾಡಿರಬೇಕು. ಇವರು ದಕ್ಷಿಣದಿಂದ ಬಂದರೋ ಪೂರ್ವದಿಂದ ಬಂದರೋ ಸರಿಯಾಗಿ ಹೇಳಲಾಗುವುದಿಲ್ಲ. ಇವರೇ ಮೊಟ್ಟ ಮೊದಲ ಆಧುನಿಕ ಮಾನವರು ; ನಮ್ಮ ರಕ್ತ ಸಂಬಂಧಿಗಳು. ಇವರ ತಲೆ ಬುರುಡೆಗಳು, ಕೈ ಹೆಬ್ಬೆರಳುಗಳು, ಕತ್ತು, ಹಲ್ಲುಗಳು ಎಲ್ಲ ನಮ್ಮಂತೆಯೇ ಇದ್ದುವು. ಕ್ರೋಮಾ ಗ್ನಾನ್ ಮತ್ತು ಗ್ರಿಮಾಲ್ಡಿ ಎಂಬೆರಡು ಸ್ಥಳಗಳಲ್ಲಿ ಈ ಮನುಷ್ಯರ ಅಸ್ಥಿಪಂಜರಗಳು ಗವಿಗಳಲ್ಲಿ ಸಿಕ್ಕಿವೆ. ಇದುವರೆಗೆ ಸಿಕ್ಕಿರುವ ನಿಜಮಾನವನ ಅವಶೇಷಗಳಲ್ಲಿ ಇವೇ ಹಳೆ ಯವು.

ಹೀಗೆ ನಮ್ಮ ಜನಾಂಗ ಬಂಡೆಗಳ ದಾಖಲೆಗಳಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ, ಮಾನವ ಕಥೆ ಮೊದಲಾಗುತ್ತದೆ.

ಆಗ ವಾಯುಗುಣ ಕಠಿಣವಾಗಿಯೇ ಇದ್ದರೂ ಭೂಮಿ ಹೆಚ್ಚು ಹೆಚ್ಚಾಗಿ ನಮ್ಮ ಕಾಲದಲ್ಲಿದ್ದಂತೆಯೇ ಆಗಲು ಪ್ರಾರಂಭವಾಗಿತ್ತು. ಯೂರೋಪಿನ ಹಿಮನದಿಗಳು ಉತ್ತರ ದಿಕ್ಕಿಗೆ ಹಿಮ್ಮೆಟ್ಟುತ್ತಿದ್ದುವು. ಸ್ಟೆಪ್ಪಿಗಳಲ್ಲಿ ಹುಲ್ಲು ಹೆಚ್ಚಾಗಿ ಬೆಳೆಯಲು ಮೊದಲಾಗುತ್ತಲೂ ಫ್ರಾನ್ಸ್ ಮತ್ತು ಸ್ಪೆಯಿನ್‌ಗಳಲ್ಲಿ ಸಾರಂಗಗಳಿರುತ್ತಿದ್ದಲ್ಲಿ ಕುದುರೆ ಗಳ ದೊಡ್ಡ ದೊಡ್ಡ ಮಂದೆಗಳು ಬಂದವು. ದಕ್ಷಿಣ ಯೂರೋಪಿನಲ್ಲಿ ಮಮ್ಮಾತ್

ಪ್ರಾಣಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದು ಕಡೆಗೆ ಅದು ಉತ್ತರ ಯೂರೋಪಿನಲ್ಲಿ ಮಾತ್ರ ಇರುವಂತಾಯಿತು.

ನೈಜ ಮಾನವರು ಎಲ್ಲಿ ಉದ್ಭವಿಸಿದರೆಂದು ಇನ್ನೂ ನಮಗೆ ನಿಖರವಾಗಿ ಗೊತ್ತಿಲ್ಲ. 1921ರ ಬೇಸಿಗೆಯಲ್ಲಿ ದಕ್ಷಿಣ ಆಫ್ರಿಕಾದ ಬ್ರೋಕನ್ ಹಿಲ್ ಎಂಬಲ್ಲಿ ಒಂದು ತಲೆ ಬುರುಡೆ ಮತ್ತು ಅಸ್ಥಿಪಂಜರವೊಂದರ ಭಾಗಗಳು ಸಿಕ್ಕಿದುವು. ಇವು ಕುತೂಹಲಜನಕವಾದವು. ಏಕೆಂದರೆ ಇವು ನಿಯಾಂಡರ್ ಥಾಲ್ ಮನುಷ್ಯನಿಗೂ ನೈಜ ಮಾನವನಿಗೂ ಮಧ್ಯವರ್ತಿಯಾದ ಬೇರೊಂದು ಬಗೆಯ ಮನುಷ್ಯನ ಅವಶೇಷಗಳೆಂದೆನಿಸುತ್ತವೆ. ಈ ಮಾನವನ ಮಿದುಳು ನಿಯಾಂಡರ್ ಥಾಲ್ ಮಾನವನ ಮಿದುಳಿಗಿಂತ ಮುಂಭಾಗದಲ್ಲಿ ದೊಡ್ಡದಾಗಿಯೂ ಹಿಂದೆ ಸಣ್ಣದಾಗಿಯೂ ಇದ್ದಿರಬೇಕು. ತಲೆ ಬುರುಡೆ, ಬೆನ್ನು ಮೂಳೆಯ ಮೇಲೆ ನಿಜ ಮಾನವರದಂತೆ ನೆಟ್ಟಗೆ ನಿಂತಿರುತ್ತಿತ್ತು. ಹಲ್ಲುಗಳೂ, ಉಳಿದ ಮೂಳೆಗಳೂ ನಿಜಮಾನವರದರಂತೆಯೇ ಇವೆ. ಮುಖದಲ್ಲಿ ಮಾತ್ರ ವಾನರಗಳ ಮುಖದಂತೆ ದೊಡ್ಡ ದೊಡ್ಡ ಏಣಿನಂತಹ ಹುಬ್ಬುಗಳೂ ತಲೆ ಬುರುಡೆಯ ಮಧ್ಯದಲ್ಲಿ ಉದ್ದಕ್ಕೂ ದೊಡ್ಡದೊಂದು ಏಣೂ ಇದ್ದುವು. ವಾನರರ ರೀತಿಯ ನಿಯಾಂಡರ್ ಥಾಲ್ ಮಾನವರ ಮುಖವನ್ನುಳ್ಳ ನಿಜ ಮಾನವ ಎಂದು ಈ ರೊಢೇಷಿಯನ್ ಮನುಷ್ಯನನ್ನು ಕರೆಯಬಹುದು. ನಿಯಾಂಡರ್ ಥಾಲ್ ಮಾನವರಿಗಿಂತ ಈ ಮನುಷ್ಯ ನಿಜ ಮಾನವರಿಗೆ ಹತ್ತಿರದ ನೆಂಟ.

ಹೀಗೆಯೇ ರೊಢೇಷಿಯನ್ ಮನುಷ್ಯನಂತಹ ಕೆಳದರ್ಜೆ ಮಾನವರ (ಹಿಮ ಯುಗದ ಆರಂಭಕ್ಕೂ ನಿಜ ಮಾನವ ಭೂಮಿಯಲ್ಲಿ ಕಾಣಿಸಿಕೊಂಡ ಕಾಲಕ್ಕೂ ನಡುವಣ ಕಾಲದಲ್ಲಿ ಜೀವಿಸುತ್ತಿದ್ದ ಕೆಳವರ್ಜೆ ಮಾನವ ಜಾತಿಗಳ) ಅವಶೇಷಗಳೂ ಇನ್ನೂ ಸಿಗಬಹುದು. ಈ ಎಲ್ಲಾ ಮಾನವರಿಗೂ ನಿಜ ಮಾನವನೇ ಉತ್ತರಾಧಿಕಾರಿ. ಪ್ರಾಯಶಃ ಇವರೆಲ್ಲರನ್ನೂ ಮುಗಿಸಿದವನೂ ಇವನೇ. ರೊಢೇಷಿಯನ ತಲೆ ಬುರುಡೆ ಎಷ್ಟು ಹಳೆಯದು ಎಂಬುದು ಇನ್ನೂ — ಈ ಪುಸ್ತಕ ಪ್ರಕಟವಾಗುವವರೆಗಂತೂ — ನಿರ್ಧಾರವಾಗಿಲ್ಲ. ಒಂದು ವೇಳೆ ಅದು ಅಷ್ಟು ಹಳೆಯದಲ್ಲದಿದ್ದರೂ ಇರಬಹುದು. ಅಂತಹ ಮನುಷ್ಯರು ದಕ್ಷಿಣ ಆಫ್ರಿಕಾದಲ್ಲಿ ಇತ್ತೀಚಿನವರೆಗೂ ಜೀವಿಸುತ್ತಿದ್ದಿದ್ದರೂ ಇರಬಹುದು.

ಮೊಟ್ಟ ಮೊದಲಿನ ನಿಜಮಾನವರು

ನಿರ್ವಿವಾದವಾಗಿ ನಮ್ಮಂತಹವರೇ ಎಂದು ಹೇಳಬಹುದಾದ ನಿಜ ಮಾನವರ ಗುರುತುಗಳು ಇದುವರೆಗೂ ಪಶ್ಚಿಮ ಯೂರೋಪಿನಲ್ಲಿ, ಅದರಲ್ಲೂ ಸ್ಪೆಯಿನ್ ಮತ್ತು ಫ್ರಾನ್ಸ್‌ನಲ್ಲಿ ಸಿಕ್ಕಿವೆ. 30000 ವರ್ಷದ ಹಿಂದಿನ, ಅಥವಾ ಇನ್ನೂ ಹಿಂದಿನವೆಂದು ಹೇಳಲಾದ ಮೂಳೆಗಳು, ಆಯುಧಗಳು, ಗೀಚು ಮಾಡಿರುವ ಬಂಡೆಗಳು ಮತ್ತು ಮೂಳೆಗಳು, ಕೊರೆದಿರುವ ಮೂಳೆಯ ಚೂರುಗಳು, ಬಂಡೆಗಳ ಮೇಲೆ ಮತ್ತು ಗವಿ

ಗಳೊಳಗೆ ಬರೆದಿರುವ ಬಣ್ಣದ ಚಿತ್ರಗಳು. ಇವೆರಡು ದೇಶಗಳಲ್ಲೂ ಸಿಕ್ಕಿವೆ. ಸದ್ಯದಲ್ಲಿ ಇಂತಹ ಅವಶೇಷಗಳು ಹೆಚ್ಚು ಹೆಚ್ಚಾಗಿ ಸಿಕ್ಕಿರುವುದು ಸ್ಪೇಯಿನಿನಲ್ಲಿ. (ಇತ್ತೀಚಿನ ಮಾಹಿತಿಗಳ ಆಧಾರದ ಮೇಲೆ ಈ ಆಧುನಿಕ ಮಾನವನ ಕಾಲವನ್ನು 50,000 ವರ್ಷಗಳೆಂದು ಊಹಿಸಲಾಗಿದೆ. ಸಂ.)

ಆದರೆ ಈಗ ಹಲವಾರು ದೇಶಗಳಲ್ಲಿ ಪ್ರಾಚ್ಯ ಸಂಶೋಧನೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಆಫ್ರಿಕಾ ಏಷ್ಯಾ ಖಂಡಗಳ ಹೆಚ್ಚು ಭಾಗಗಳಲ್ಲಿ ಸಂಶೋಧನೆ ಇರಲಿ, ಈ ಶಾಸ್ತ್ರ ಬಲ್ಲವರು ಯಾರೂ ಇಂತಹ ಅವಶೇಷಗಳು ಸಿಗಬಹುದೇ ಎಂದು ಪರಿಶೀಲನೆ ಸಹ ನಡೆಸಿಲ್ಲ. (4–5 ದಶಕಗಳಿಂದ ಪರಿಸ್ಥಿತಿ ಸುಧಾರಿಸಿದ್ದು, ಈ ದಿಶೆಯಲ್ಲಿ ಗಮನಾರ್ಹ ಸಂಶೋಧನೆಗಳು ನಡೆಯುತ್ತಿವೆ. ಸಂ.)

ಪ್ರಾಚ್ಯ ಸಂಶೋಧಕರು ಸಾಕಷ್ಟು ಸಂಖ್ಯೆಯಲ್ಲಿ ಮುಂದೆ ಬಂದು ಈ ತೆರದ ಅವಶೇಷಗಳಿರಬಹುದಾದ ಪ್ರದೇಶಗಳನ್ನೆಲ್ಲಾ ವಿವರವಾಗಿ ಪರೀಕ್ಷಿಸಿದಾಗ ಅವು ಅಧಿಕ ಸಂಖ್ಯೆಯಲ್ಲಿ ಸಿಗಬಹುದು. ಈಗ ನಡೆದಿರುವುದೆಲ್ಲಾ ಒರಿ ಪ್ರಾರಂಭೋತ್ಸವ ಅಷ್ಟೆ. ಈ ಕಾರ್ಯ ತಕ್ಕಷ್ಟು ಮುಂದುವರಿಯುವವರೆಗೂ ನಿಜಮಾನವರು ಮೊಟ್ಟ ಮೊದಲು ಪಶ್ಚಿಮ ಯೂರೋಪಿನಲ್ಲಿ ಮಾತ್ರ ವಾಸಿಸುತ್ತಿದ್ದರು ಎಂದಾಗಲೀ, ಅವರು ಭೂಮಿಯಲ್ಲಿ ಜನ್ಮ ತಾಳಿದ್ದೇ ಅಲ್ಲಿ ಎಂದಾಗಲೀ ಹೇಳುವ ಮುನ್ನ ಸ್ವಲ್ಪ ಯೋಚಿಸಬೇಕು.

ಈಗ ನಮ್ಮ ಕಣ್ಣಿಗೆ ಬಿದ್ದಿರುವ ಮಾನವ ಅವಶೇಷಗಳೆಲ್ಲದಕ್ಕಿಂತಲೂ ಹಳೆಯವು, ಏಷ್ಯಾ ಆಫ್ರಿಕಾಖಂಡಗಳಲ್ಲೋ, ಸಮುದ್ರ ತಳದ ಕೆಳಗೋ ಹೆಚ್ಚು ಹೆಚ್ಚಾಗಿ ಸಿಗಬಹುದು, ಇಲ್ಲಿ ಅಮೆರಿಕ ಖಂಡದ ಹೆಸರೆತ್ತಿಲ್ಲ. ಏಕೆಂದರೆ ಒಂದೇ ಒಂದು ಹಲ್ಲಿನ ವಿನಹ ಮತ್ತಾವುದೂ ಉಚ್ಚ ಜಾತಿಯ ಸಸ್ತನಿ ಪ್ರಾಣಿವರ್ಗ (Primate) ಗಳ (ಅಂದರೆ ವಾನರ, ಕೆಳಮಾನವ, ನಿಯಾಂಡರ್ ಥಾಲ್ ಮತ್ತು ಪ್ರಾಚೀನ ಮಾನವ ಇವರುಗಳ) ಅವಶೇಷಗಳು ಅಲ್ಲಿ ಇದುವರೆಗಂತೂ ಸಿಕ್ಕಿಲ್ಲ. ಪೂರ್ವಾರ್ಧ ಗೋಳದಲ್ಲಿ ಮಾತ್ರ ಜೀವ ಈ ಮಾರ್ಗದಲ್ಲಿ ಮುಂದುವರಿದಂತೆ ತೋರುತ್ತದೆ. ಬಹುಶಃ ಪ್ರಾಚೀನ ಶಿಲಾಯುಗದ ಕೊನೆಯ ಭಾಗದಲ್ಲಿ ಮಾನವನು ಏಷ್ಯಾ ಖಂಡದಿಂದ ಉತ್ತರ ಅಮೆರಿಕಕ್ಕೆ ಈಗಿನ ಬೆರಿಂಗ್ ಜಲಸಂಧಿಯಿರುವಲ್ಲಿ ಇದ್ದ ಭೂ ಸಂಧಿಯ ಮುಖಾಂತರ ಪ್ರವೇಶ ಮಾಡಿರಬೇಕು.

ಈ ಮೊದಲ ಮಾನವರಲ್ಲಿ ಅಷ್ಟು ಹೊತ್ತಿಗಾಗಲೇ ಕನಿಷ್ಠ ಪಕ್ಷ ಎರಡು ವಿಶಿಷ್ಟ ಬುಡಕಟ್ಟುಗಳು ಕಾಣಿಸಿಕೊಂಡಿದ್ದುವು. ಇದರಲ್ಲಿ ಒಂದು ಬುಡಕಟ್ಟಿಗೆ ಸೇರಿದವರು ಎತ್ತರವಾದ ನಿಲುವು ದೊಡ್ಡ ಗಾತ್ರದ ಮಿದುಳು ಉಳ್ಳವರಾಗಿದ್ದರು. ಈ ಪಂಗಡದ ಹೆಂಗಸೊಬ್ಬಳ ತಲೆ ಬುರುಡೆ ಈಗಿನ ಸಾಮಾನ್ಯ ಗಂಡಸಿನ ತಲೆ ಬುರುಡೆಗಿಂತಲೂ ದೊಡ್ಡದಾಗಿದೆ. ಗಂಡಸೊಬ್ಬನ ಅಸ್ಥಿ ಪಂಜರ ಆರಡಿಗಿಂತಲೂ ಎತ್ತರವಾಗಿದೆ. ಚಹರೆಯಲ್ಲಿ ಇವರು ಉತ್ತರ ಅಮೆರಿಕದ ಇಂಡಿಯನ್ನರನ್ನು ಹೋಲುತ್ತಿದ್ದರು. ಇಂತಹ ಅಸ್ಥಿ ಪಂಜರಗಳು ಮೊದಲು ಕ್ರೋಮಾಗ್ನಾನ್ ಗುಹೆಯಲ್ಲಿ ಸಿಕ್ಕಿದ್ದುದರಿಂದ ಇವರಿಗೆ

ಕ್ರೋಮಾಗ್ನಾನ್ ಮಾನವರೆಂದು ಹೆಸರು ಕೊಟ್ಟರು. ಇವರು ಅನಾಗರಿಕರು ; ಆದರೆ ಉನ್ನತ ಮಟ್ಟದ ಅನಾಗರಿಕರು. ಗ್ರಿಮಾಲ್ಡಿ ಗುಹೆಯಲ್ಲಿ ಸಿಕ್ಕಿರುವ ಅವಶೇಷಗಳು ಎರಡನೆಯ ಬುಡಕಟ್ಟಿಗೆ ಸೇರಿದುವು. ಈ ಜನರು ನೀಗ್ರೊಗಳಂತಿದ್ದು ದಕ್ಷಿಣ ಆಫ್ರಿಕದ ಹಾಟೆನ್‌ಟಾಟ್ ಮತ್ತು ಬುಷ್‌ಮೆನ್‌ರನ್ನು ಬಹುಮಟ್ಟಿಗೆ ಹೋಲುತ್ತಿದ್ದರು. ಮಾನವ ಚರಿತ್ರೆಯ ಅತಿ ಮೊದಲಲ್ಲೇ ಹೀಗೆ ಮಾನವ ಜನಾಂಗ ಎರಡು ಬುಡಕಟ್ಟಾಗಿ ವಿಂಗಡಿಸುವಂತೆ ಇದ್ದುದು ಅತಿ ಸ್ವಾರಸ್ಯದ ವಿಷಯ. ಇದನ್ನು ನೋಡಿ, ನಮ್ಮ ಮನಸ್ಸಿನಲ್ಲಿ ಮೊದಲ ಪಂಗಡದವರು ಕಂದು ಬಣ್ಣದವರಾಗಿದ್ದು ಉತ್ತರದಿಂದಲೋ ಪೂರ್ವದಿಂದಲೋ ವಲಸೆ ಬಂದವರಾಗಿರಬೇಕು ಮತ್ತು ಎರಡನೆಯವರು ಕಪ್ಪು ಬಣ್ಣದವರಾಗಿದ್ದು ದಕ್ಷಿಣದಿಂದ, ಎಂದರೆ ಸಮಭಾಜಕವೃತ್ತದಿಂದ ವಲಸೆ ಬಂದಿರಬೇಕು ಎಂಬ ಊಹೆಗಳು ಏಳಬಹುದು. ಆದರೆ ಇಂತಹ ಊಹೆಗಳಿಗೆ ಸರಿಯಾದ ಆಧಾರಗಳೇನೂ ಇಲ್ಲ.

40000 ವರ್ಷಗಳ ಹಿಂದಿನ ಈ ಅನಾಗರಿಕ ಮನುಷ್ಯರು ಕಪ್ಪೆ ಚಿಪ್ಪುಗಳನ್ನು ಪೋಣಿಸಿ ಸರ ಮಾಡುವುದು, ತಮ್ಮ ಮೈಗೆ ಬಣ್ಣ ಬಳಿದುಕೊಳ್ಳುವುದು, ಮೂಳೆ ಮತ್ತು ಕಲ್ಲಿನಲ್ಲಿ ಸಣ್ಣ ಸಣ್ಣ ಪ್ರತಿಮೆಗಳನ್ನು ಕೊರೆಯುವುದು, ಅಷ್ಟು ನಯವಾಗಿ ಅಲ್ಲದಿದ್ದರೂ ಜಾಣ್ಮೆಯಿಂದ ಪ್ರಾಣಿ ಚಿತ್ರಗಳನ್ನು ಬಂಡೆಗಳ ಮೇಲೂ ಗುಹೆಗಳಲ್ಲೂ ಬಿಡಿಸುವುದು ಇವೆಲ್ಲವನ್ನೂ ಬಲ್ಲವರಾಗಿದ್ದರು. ನಿಯಾಂಡರ್ ಥಾಲ್ ಮನುಷ್ಯರು ತಯಾರಿಸುತ್ತಿದ್ದುದಕ್ಕಿಂತ ನಾಜೂಕಾದ ಸಣ್ಣ ಗಾತ್ರದ ಅನೇಕ ಬಗೆಯ ಉಪಕರಣಗಳನ್ನು ಇವರು ತಯಾರಿಸುತ್ತಿದ್ದರು. ಈ ಸಣ್ಣ ಸಣ್ಣ ಪ್ರತಿಮೆಗಳು, ಬಂಡೆಗಳ ಮೇಲಿನ ಚಿತ್ರಗಳು ಮತ್ತು ಆಯುಧಗಳು ಇವೆಲ್ಲವನ್ನೂ ನಮ್ಮ ವಸ್ತುಸಂಗ್ರಹಾಲಯಗಳಲ್ಲಿ ನೋಡಬಹುದು.

ಮೊದ ಮೊದಲು ಇವರು ಬೇಟೆಯಾಡಿ ಜೀವಿಸುತ್ತಿದ್ದರು. ಇವರು ಮುಖ್ಯವಾಗಿ ಬೇಟೆಯಾಡುತ್ತಿದ್ದುದು, ಆಗಿನ ಕಾಲದ ಕಾಡು ಕುದುರೆ, ಎಂದರೆ ಗಡ್ಡವಿರುತ್ತಿದ್ದ ಪುಟ್ಟ ಪೋನಿಯನ್ನು. ಹೊಸ ಹೊಸ ಹುಲ್ಲುಗಾವಲುಗಳನ್ನು ಹುಡುಕುತ್ತಾ ಈ ಕುದುರೆಗಳು ತಿರುಗಿದಂತೆ ಅವುಗಳನ್ನು ಇವರು ಹಿಂಬಾಲಿಸುತ್ತಿದ್ದರು. ಕಾಡು ಕೋಣವನ್ನೂ ಇವರು ಹಿಂಬಾಲಿಸುತ್ತಿದ್ದುದುಂಟು. ಮಮ್ಮಾತ್ ಸಹ ಇವರಿಗೆ ಗೊತ್ತಿತ್ತು. ಈ ಪ್ರಾಣಿಯನ್ನು ಈ ಜನರು ಬಲು ಅಂದವಾಗಿ ಚಿತ್ರಿಸಿದ್ದಾರೆ. ಇಂತಹ ಒಂದು ಚಿತ್ರವನ್ನು ನೋಡಿದರೆ ಇದನ್ನು ಉಪಾಯದಿಂದ ಹಿಡಿದು ಕೊಲ್ಲುವುದನ್ನು ಕೂಡ ಇವರು ತಿಳಿದಿದ್ದರೇನೋ ಎಂದು ಸಂಶಯವಾಗುತ್ತದೆ.

ಎಸೆಗಲ್ಲುಗಳು (throwing stones) ಮತ್ತು ಭರ್ಜಿಗಳಿಂದ ಬೇಟೆಯಾಡುತ್ತಿದ್ದರು. ಬಿಲ್ಲು ಬಾಣದ ಬಳಕೆ, ಪ್ರಾಣಿಗಳನ್ನು ಪಳಗಿಸುವುದು ಇವೆರಡೂ ಇವರಿಗೆ ಬಹುಶಃ ಗೊತ್ತಿರಲಿಲ್ಲ. ಇವರ ಹತ್ತಿರ ನಾಯಿಗಳಿರಲಿಲ್ಲ. ಇವರು ಕುದುರೆಗಳನ್ನು ಚಿತ್ರಿಸಿದ್ದಾರೆ. ಅಂತಹ ಚಿತ್ರವೊಂದರಲ್ಲಿ ಕುದುರೆಗೆ ಕಡಿವಾಣ ಹಾಕಿರುವಂತೆ ತೋರು

ತ್ತವೆ. ಇದಕ್ಕೆ ಕಡಿವಾಣ ಎನ್ನುವುದಕ್ಕಿಂತ ಹಾಗೆ ಕಾಣುವ ಚರ್ಮದ ತುಂಡು ಎಂದರೂ ಎನ್ನಬಹುದು. ಆದರೆ ಆಗ ಆ ಪ್ರದೇಶದಲ್ಲಿರುತ್ತಿದ್ದ ಪುಟ್ಟ ಕುದುರೆಗೆ ಮನುಷ್ಯನನ್ನು ಹೊರುವ ಶಕ್ತಿ ಇಲ್ಲದಿದ್ದುದರಿಂದ ಅದನ್ನು ಬರಿ ಹೊರೆ ಹೊರಲು ಉಪಯೋಗಿಸುತ್ತಿದ್ದಿರಬಹುದು. ಪ್ರಾಣಿಗಳ ಹಾಲನ್ನು ಆಹಾರವಾಗಿ ಉಪಯೋಗಿಸುವಷ್ಟು ಇವರು ಬಹುಶಃ ಮುಂದುವರಿದಿರಲಿಲ್ಲ.

ಇವರು ಉಡುಪುಗಳೇನನ್ನೂ ತೊಟ್ಟಿದಂತೆ ಕಾಣುವುದಿಲ್ಲ : ಬರಿ ಚರ್ಮದ ಗುಡಾರ ಹಾಕಿಕೊಳ್ಳುತ್ತಿದ್ದಿರಬಹುದು. ಜೇಡಿಮಣ್ಣಿನಿಂದ ಗೊಂಬೆಗಳನ್ನು ಮಾಡುತ್ತಿದ್ದರೂ ಮಡಿಕೆ ಕುಡಿಕೆ ಮಾಡುವುದನ್ನು ಇವರು ಕಲಿಯಲೇ ಇಲ್ಲ. ಅಂದ ಮೇಲೆ ಆಹಾರವನ್ನೂ ಅಡುಗೆ ಮಾಡಿಕೊಂಡು ತಿನ್ನುತ್ತಿದ್ದರೆನ್ನುವುದು ಅನುಮಾನವೇ ; ಅಥವಾ ಒಂದು ವೇಳೆ ಅಡುಗೆ ಮಾಡಿದರೂ ಅದಕ್ಕೆ ಹೆಸರಿಗೆ ಮಾತ್ರ ಅಡುಗೆ ಎನ್ನಬಹುದಾಗಿತ್ತು ಎಂದು ಕಾಣುತ್ತದೆ. ಬೇಸಾಯ, ಬುಟ್ಟಿ ಹೆಣೆಯುವುದು, ಬಟ್ಟೆ ನೇಯುವುದು ಇವರಿಗೆ ಬರುತ್ತಿರಲಿಲ್ಲ. ಚರ್ಮ ಮತ್ತು ತುಪ್ಪುಳಗಳನ್ನು ಧರಿಸುವುದನ್ನೊಂದು ಬಿಟ್ಟರೆ ಉಳಿದಂತೆ ಇವರು ಬಣ್ಣ ಬಳಿದುಕೊಂಡು ಬರಿ ಮೈಯಲ್ಲಿರುತ್ತಿದ್ದ ಸಂಪೂರ್ಣ ಅನಾಗರಿಕರಾಗಿದ್ದರು.

ಸುಮಾರು ನೂರು ಶತಮಾನಗಳ ಕಾಲ ಇವರು ಯೂರೋಪಿನ ಸ್ಟೆಪ್ಪಿಗಳಲ್ಲಿ ಬೇಟೆಯಾಡಿ ಜೀವಿಸುತ್ತಿದ್ದರು. ಕಡೆಗೆ ವಾಯುಗುಣ ಬದಲಾದಂತೆ ಕ್ರಮೇಣ ಇವರು ತಮ್ಮ ವಾಸಸ್ಥಾನ ಬದಲಾಯಿಸಿದರು. ಯೂರೋಪಿನ ಹವಾಗುಣ ನಿಧಾನವಾಗಿ ತೇವದಿಂದ ಕೂಡಿ ಹಿತಕರವಾಗುತ್ತಾ ಹೋಯಿತು. ಹಿಮಸಾರಂಗಗಳು ಉತ್ತರಕ್ಕೂ ಪೂರ್ವಕ್ಕೂ ಹೊರಟು ಹೋದುವು. ಕಾಡುಕೋಣ ಮತ್ತು ಕುದುರೆಗಳು ಇವುಗಳನ್ನು ಹಿಂಬಾಲಿಸಿದುವು. ಆ ಬಳಿಕ ಸ್ಟೆಪ್ಪಿಗಳಿದ್ದಲ್ಲಿ ಕಾಡುಗಳು ಬೆಳೆದುವು. ಕುದುರೆ, ಕಾಡುಕೋಣಗಳ ಸ್ಥಾನದಲ್ಲಿ ಈಗ ಕೆಂಪು ಬಣ್ಣದ ಜಿಂಕೆಗಳು ಬಂದವು. ಇವೆಲ್ಲದರ ಪರಿಣಾಮವಾಗಿ ಆಗಿನ ಆಯುಧಗಳೂ ಬದಲಾದುವು. ನದಿಗಳಲ್ಲಿ ಸರೋವರಗಳಲ್ಲಿ ಮೀನು ಹಿಡಿಯುವುದು ಈಗ ಪ್ರಾಮುಖ್ಯ ಪಡೆಯಿತು. ಜನರು ಮೂಳೆಗಳಿಂದ ನಾಜೂಕಾದ ಉಪಕರಣಗಳನ್ನು ಮಾಡಲು ಮೊದಲು ಮಾಡಿದರು. “ಆಗ ಮೂಳೆಗಳಿಂದ ಮಾಡುತ್ತಿದ್ದ ಸೂಜಿಗಳು ಅದೆಷ್ಟು ಚೆನ್ನಾಗಿದ್ದುವೆಂದರೆ ಅದರಿಂದೀಚೆಗೆ ಬೌದ್ಧಿಕ ಕ್ರಾಂತಿಯ ಕಾಲದವರೆಗೂ ಅಂತಹ ಸೂಜಿಗಳನ್ನು ಯಾರೂ ತಯಾರಿಸಿರಲಿಲ್ಲ. ರೋಮನ್ನರು ಸಹ ಅಂತಹ ಸೂಜಿಗಳನ್ನು ತಯಾರಿಸಲಿಲ್ಲ” ಎಂದು ಡಿ ಮಾರ್ಟಿಲ್ಲೆ (DeMortillet) ಹೇಳುತ್ತಾರೆ.

ಈಗ ಹನ್ನೆರಡರಿಂದ ಹದಿನೈದು ಸಾವಿರ ವರ್ಷಗಳ ಹಿಂದೆ ದಕ್ಷಿಣ ಸ್ಪೈಯಿನಿಗೆ ಹೊಸ ಜನಾಂಗವೊಂದರ ಜನರು ವಲಸೆ ಬಂದರು. ಅಲ್ಲಿನ ಬಂಡೆಗಳ ಮೇಲೆ ಇವರು ಗಮನಾರ್ಹ ಚಿತ್ರಗಳನ್ನು ಬಿಟ್ಟುಹೋಗಿದ್ದಾರೆ. ಇವರನ್ನು ಅಜಿಲಿಯನ್ನರೆಂದು ಕರೆಯುತ್ತಾರೆ. ಇದಕ್ಕೆ ಅಲ್ಲಿ ಮಾಸ್ ಡಿ ಅಜಿಲಿ ಎಂಬ ಗವಿಯಿರುವುದೇ ಕಾರಣ. ಇವರು

ಬಿಲ್ಲು ಬಾಣ ಉಪಯೋಗಿಸುತ್ತಿದ್ದರು. ಪುಕ್ಕಗಳಿಂದ ತಲೆಗೆ ಅಲಂಕಾರವಾದ ಟೋಪಿಗಳನ್ನು ಮಾಡಿಕೊಳ್ಳುತ್ತಿದ್ದರು. ಇವರು ಜೀವ ಕಳೆಯಿಂದ ತುಂಬಿದ ಚಿತ್ರಗಳನ್ನು ಬರೆದರೂ ಇವುಗಳಲ್ಲಿ ಆಗಲೇ ಒಂದು ಬಗೆಯ ಸಾಂಕೇತಿಕ ನಿರೂಪಣೆ ಕಾಣುತ್ತದೆ. ಉದಾಹರಣೆಗೆ, ಮನುಷ್ಯನನ್ನು ಚಿತ್ರಿಸಬೇಕಾದರೆ ಇವರು ಒಂದು ಉದ್ದ ಗೆರೆ ಎಳೆದು ಅದರ ಮೇಲೆ ಎರಡು ಮೂರು ಅಡ್ಡಗೆರೆ ಹಾಕುತ್ತಿದ್ದರು. ಪ್ರಾಯಶಃ ಇದೇ ಬರವಣಿಗೆಯ ಉದಯ ಎನಿಸುತ್ತದೆ. ಕೆಲವು ಬೇಟೆಯ ಚಿತ್ರಗಳ ಮೇಲೆ ಕಚ್ಚು ಗುರುತುಗಳಿವೆ. ಈ ಗುರುತುಗಳನ್ನು ಎಣಿಕೆಗಾಗಿ ಉಪಯೋಗಿಸುತ್ತಿದ್ದಿರಬಹುದೆಂಬ ಊಹೆ ಬರುತ್ತದೆ. ಒಂದು ಚಿತ್ರದಲ್ಲಿ ಇಬ್ಬರು ಮನುಷ್ಯರು ಜೇನುಗೂಡೊಂದಕ್ಕೆ ಹೊಗೆ ಹಾಕುತ್ತಿರುವುದನ್ನು ಕಾಣುತ್ತೇವೆ.

ಇವರೇ ಪುರಾತನ ಶಿಲಾಯುಗದ ಕೊನೆಯ ಮನುಷ್ಯರು. ಏಕೆಂದರೆ ಇವರು ಬರಿ ಚಕ್ಕೆ ಕಲ್ಲುಗಳನ್ನು ಆಯುಧಗಳಾಗಿ ಉಪಯೋಗಿಸುತ್ತಿದ್ದರು. ಈಗ 10–12 ಸಾವಿರ ವರ್ಷಗಳ ಹಿಂದೆ ಯೂರೋಪಿನಲ್ಲಿ ಪರಿಸ್ಥಿತಿ ಬದಲಾಯಿತು. ಜನರು ಕಲ್ಲನ್ನು ಚಕ್ಕೆ ಯೆಬ್ಬಿಸಿ ಆಯುಧಗಳನ್ನು ಮಾಡುವುದಲ್ಲದೆ ಅವುಗಳಿಗೆ ಹೊಳಪು ಕೊಡುವುದು, ಸಾಣೆ ಹಿಡಿಯುವುದು ಇವೆಲ್ಲವನ್ನೂ ಕಲಿತರು. ನಾಗರಿಕತೆ ಪ್ರಾರಂಭವಾಯಿತು. ಇದೇ ನೂತನ ಶಿಲಾಯುಗದ ಆರಂಭ. (ಈ ಪುರಾತನ ಮತ್ತು ನೂತನ ಶಿಲಾಯುಗಗಳ ನಡುವಣ ಕಾಲದಲ್ಲಿ ಪರಿವರ್ತನಾ ರೂಪದ ಸೂಕ್ಷ್ಮ ಶಿಲಾಯುಗ ಅಸ್ತಿತ್ವದಲ್ಲಿತ್ತು. ಸಂ.)

ಕಳೆದ ನೂರು ವರ್ಷಗಳಲ್ಲೇ ನಮ್ಮ ಈ ಭೂಮಿಯ ಒಂದು ಮೂಲೆಯಲ್ಲಿ, ಈ ಮೊದಲ ಮನುಷ್ಯರಿಗಿಂತ ಕೆಳಮಟ್ಟದ ಮನುಷ್ಯರು ವಾಸಿಸುತ್ತಿದ್ದರೆಂದರೆ ಆಶ್ಚರ್ಯವಾಗದಿರದು. ಟಾಸ್ಮೇನಿಯದಲ್ಲಿದ್ದ ಈ ಜನರಿಗೆ ಭೂಮಿಯ ಮೇಲ್ಮೈಯ ಬದಲಾವಣೆಗಳಿಂದಾಗಿ ಉಳಿದೆಲ್ಲ ಮನುಷ್ಯರದ್ದೂ ಸಂಪರ್ಕ ಬಹು ಹಿಂದಿನಿಂದ ತಪ್ಪಿಹೋಗಿತ್ತು. ಇವರಿಗೆ ಉಳಿದ ಮನುಷ್ಯರಿಂದ ಉತ್ತೇಜನ ಸಿಗುವಂತೆಯೇ ಇರಲಿಲ್ಲ. ಇವರ ಸ್ಥಿತಿ ಬರಬರುತ್ತಾ ಉತ್ತಮಗೊಳ್ಳುವುದರ ಬದಲು ಕೆಳಮಟ್ಟಕ್ಕಿಳಿಯುತ್ತಲೇ ಹೋಯಿತು. ಯೂರೋಪಿಯನ್ ಭೂ ಸಂಶೋಧಕರು ಇವರನ್ನು ಮೊಟ್ಟಮೊದಲು ಕಂಡಾಗ ಇವರು ಚಿಪ್ಪು ಮೀನುಗಳನ್ನು ಮತ್ತಿತರ ಸಣ್ಣ ಸಣ್ಣ ಪ್ರಾಣಿಗಳನ್ನು ಹಿಡಿದು ತಿನ್ನುತ್ತಾ, ಅತಿ ಕೀಳ್ಮಟ್ಟದ ಜೀವನ ನಡೆಸುತ್ತಿದ್ದರು. ಇವರಿಗೆ ಸರಿಯಾದ ಗುಡಿಸಿಲುಗಳು ಸಹ ಇರಲಿಲ್ಲ. ಬರಿ ಕುಳಿತುಕೊಳ್ಳುವಷ್ಟರ ಮಟ್ಟಿಗಿನ ವಾಸಸ್ಥಾನಗಳನ್ನು (Squatting places) ಇವರು ನಿರ್ಮಿಸಿಕೊಳ್ಳುತ್ತಿದ್ದರು. ಇವರು ಮಾನವರೇ ಆದರೂ ಮೊದಲ ನಿಜ ಮಾನವರ ಕಾರ್ಯ ಕೌಶಲವಾಗಲೀ, ಕಲಾಶಕ್ತಿಯಾಗಲೀ ಇವರಿಗಿರಲಿಲ್ಲ.

ಪ್ರಾಚೀನ ಮಾನವನ ಮನಸ್ಸು :

ಈಗ ಒಂದು ಅತಿ ಕುತೂಹಲಕಾರಿ ಸಮಸ್ಯೆಯನ್ನು ಚರ್ಚಿಸೋಣ. ಒಂದು ವೇಳೆ ನಾವೇ ಆ ಮೊದಲ ದಿನಗಳ ಮನುಷ್ಯರಾಗಿದ್ದರೆ ನಮಗೆ ಹೇಗೆನ್ನಿಸುತ್ತಿತ್ತು ?

ಅಂದಿನ ಮನುಷ್ಯರ ಬುದ್ಧಿ ಹೇಗೆ ಕೆಲಸ ಮಾಡುತ್ತಿತ್ತು ? 40000 ವರ್ಷಗಳ ಹಿಂದಿನ, ಕೃಷಿ ಸಹ ತಿಳಿದಿರದ ಆ ಬೇಟೆ, ಅಲೆದಾಟಗಳ ಕಾಲದಲ್ಲಿ ಮನುಷ್ಯರು ಏನನ್ನು ಕುರಿತು ಯೋಚಿಸುತ್ತಿದ್ದರು ? ಅದು ಮನುಷ್ಯ ಬರೆಯಲು ಕಲಿತಿದ್ದಕ್ಕೂ ಬಲು ಹಿಂದಿನ ಕಾಲವಾದುದರಿಂದ ಈ ಪ್ರಶ್ನೆಗಳಿಗೆ ಉತ್ತರ ಪಡೆಯಲು ಖಚಿತವಾದ ಆಧಾರಗಳೇನೂ ಇಲ್ಲ. ಎಲ್ಲವನ್ನೂ ಊಹೆ ಮತ್ತು ತರ್ಕಗಳಿಂದಲೇ ತಿಳಿಯಬೇಕು.

ಪ್ರಾಚೀನ ಮನುಷ್ಯನ ಮನೋವೃತ್ತಿ ಹೇಗಿದ್ದಿರಬಹುದೆಂದು ಅರಿತುಕೊಳ್ಳಲು ವಿಜ್ಞಾನಿಗಳು ಅನೇಕಾನೇಕ ಮಾರ್ಗಗಳನ್ನು ಹಿಡಿದಿದ್ದಾರೆ. ಇತ್ತೀಚೆಗೆ ಅಭಿವೃದ್ಧಿಯಾಗಿರುವ ಮನಶ್ಶಾಸ್ತ್ರದ ಅಂಗವಾದ ಮನೋವಿಶ್ಲೇಷಣೆಯೂ ಇವುಗಳಲ್ಲೊಂದು. ಎಳೆ ಮಗುವಿನಲ್ಲಿ ಹುಟ್ಟಿನಿಂದಲೂ ಸ್ವಾರ್ಥತೆ ಮತ್ತು ರಾಗದ್ವೇಷಗಳು ಇವುಗಳ ಆವೇಗ ಬಲವಾಗಿರುತ್ತದೆ. ಆ ಮಗು ದೊಡ್ಡದಾದ ಮೇಲೆ ಸಮಾಜದಲ್ಲಿ ಬೆರೆತು ಬಾಳಬೇಕಾದರೆ ಈ ಪ್ರವೃತ್ತಿಗಳನ್ನು ಅದುಮಿ ಅಂಕೆಯಲ್ಲಿಡಬೇಕು; ಅಥವಾ ಪೂರ್ತಿ ನಿಗ್ರಹಿಸಬೇಕು ; ಇಲ್ಲವೇ ಬೇರೆ ದಿಕ್ಕಿನಲ್ಲಿ ಹಾಯುವಂತೆ ಮಾಡಬೇಕು ; ಅಥವಾ ಅದನ್ನು ಬೇರೆ ಪ್ರವೃತ್ತಿಗಳಿಂದ ಮುಚ್ಚಬೇಕು. ಇಂತಹ ಪರಿವರ್ತನೆಗಳನ್ನು ಪರಿಶೀಲಿಸುವಾಗ ಪ್ರಾಚೀನ ಮಾನವ ಸಮಾಜದ ಬೆಳವಣಿಗೆಯ ಎಷ್ಟೋ ಅಂಶಗಳ ಮೇಲೆ ಬೆಳಕು ಬೀಳುತ್ತದೆ. ಇದಲ್ಲದೆ ಈಗಲೂ ಇರುವ ಅನಾಗರಿಕ ಜನರ ಭಾವನೆಗಳು, ಸಂಪ್ರದಾಯಗಳು ಇವುಗಳ ಅಧ್ಯಯನಗಳಿಂದಲೂ ಅನೇಕ ವಿಷಯಗಳು ತಿಳಿದು ಬಂದಿವೆ. ಆಧುನಿಕ ನಾಗರಿಕರೆನಿಸಿಕೊಳ್ಳುವ ಜನರಲ್ಲೂ ಸಹ ಈಗಲೂ ಆಳವಾಗಿ ಬೇರೂರಿ ಉಳಿದುಕೊಂಡಿರುವ ಅವೈಚಾರಿಕವಾದ ಮೂಢನಂಬಿಕೆಗಳು (folklore & Superstitions) ಮತ್ತು ದಂತಕಥೆಗಳು ಹಾಗೂ ಪೂರ್ವಗ್ರಹಗಳು — (ಇವುಗಳನ್ನು ಪ್ರಾಚೀನ ಮಾನವನ ಮನೋಧರ್ಮದ "ಪಳೆಯುಳಿಕೆ" (fossil) ಗಳೆಂದು ಕರೆಯಬಹುದು) — ಇವುಗಳ ಆಧಾರದ ಮೇಲೂ ಪ್ರಾಚೀನ ಮಾನವನ ಮನಸ್ಸು ಬುದ್ಧಿ ಹೇಗೆ ಓಡುತ್ತಿತ್ತೆಂದು ಊಹಿಸಬಹುದು. ಅಲ್ಲದೆ ಅವರು ಅನೇಕ ಚಿತ್ರಗಳು, ಪುತ್ಥಳಿಗಳು, ಕೆತ್ತನೆ ಕೆಲಸದ ಸಾಮಾನುಗಳು, ಸಂಕೇತಗಳು ಮತ್ತಿಂತಹುವೇ ಅನೇಕ ಮಾಹಿತಿಗಳನ್ನು ಬಿಟ್ಟುಹೋಗಿದ್ದಾರೆ. ಇವುಗಳನ್ನು ಪರೀಕ್ಷಿಸಿದರೂ ಆ ಕಾಲದ ಮನುಷ್ಯರು ಯಾವುದಕ್ಕೆ ಪ್ರಾಮುಖ್ಯ ಕೊಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಪ್ರಾಯಶಃ ಅಂದಿನ ಮನುಷ್ಯನ ಮನಸ್ಸು ಚಿಕ್ಕ ಮಗುವಿನ ಮನಸ್ಸಿನಂತಿತ್ತು. ಅವನ ಯೋಚನಾಲಹರಿ ಕಾಲ್ಪನಿಕ ಚಿತ್ರಗಳ ಸರಣಿಯಾಗಿತ್ತು. ಅವನು ಮನಸ್ಸಿನಲ್ಲಿಯೇ ಚಿತ್ರಗಳನ್ನು ಕಲ್ಪಿಸಿಕೊಳ್ಳುತ್ತಿದ್ದನು. ಇನ್ನೂ ಸರಿಯಾಗಿ ಹೇಳುವುದಾದರೆ ಅವನ ಮನಸ್ಸಿನ ಮುಂದೆ ಕಾಲ್ಪನಿಕ ಚಿತ್ರಗಳು ಬಂದು ನಿಲ್ಲುತ್ತಿದ್ದುವು. ಇವುಗಳ ಫಲವಾಗಿ ಮೇಲೆದ್ದ ಭಾವನೆಗಳಿಗನುಸಾರವಾಗಿ ಅವನು ನಡೆದುಕೊಳ್ಳುತ್ತಿದ್ದನು. ಈಗಲೂ ಚಿಕ್ಕಮಕ್ಕಳು, ಅಶಿಕ್ಷಿತ ಜನರು ಹೀಗೆಯೇ ಇರುತ್ತಾರೆ. ಮಾನವ ಕ್ರಮಬದ್ಧವಾಗಿ ಯೋಚಿಸತೊಡಗಿದುದು ಇತ್ತೀಚೆಗೆ ಎಂತಲೇ ಎನ್ನಬೇಕು. ಈಗ 5000 ವರ್ಷಗಳಿಂದೀ

ಜೆಗೆ ಮಾತ್ರ ಈ ರೀತಿಯ ಯೋಜನೆ ಮಾನವ ಜೀವನದಲ್ಲಿ ಕಾಣಬರುತ್ತದೆ. ಈಗಲೂ ಸಹ ತಮ್ಮ ಭಾವನೆಗಳನ್ನು ಹಿಡಿಟ್ಟುಕೊಂಡು ಸರಿಯಾದ ದಾರಿಯಲ್ಲಿ ಹರಿಯಬಿಡುವಂತಹವರು ಎಷ್ಟೋ ಕೆಲವರು ಮಾತ್ರ. ಹೆಚ್ಚು ಮಂದಿ ಭಾವೋದ್ರೇಕ ಮತ್ತು ಕಲ್ಪನೆಗಳಿಗೇ ಹೆಚ್ಚು ಪ್ರಾಮುಖ್ಯ ಕೊಡುತ್ತಾರೆ.

ಮೊದ ಮೊದಲು ಮಾನವರು ಕುಟುಂಬವೇ ಆಧಾರವಾಗಿದ್ದ ಸಣ್ಣ ಸಣ್ಣ ತಂಡ ಗಳಾಗಿ ಜೀವಿಸುತ್ತಿದ್ದರು. ಹಿಂದೆ ಮೊದಲ ಸಸ್ತನಿ ಪ್ರಾಣಿಗಳಲ್ಲಿ ಇಂತಹ ಹಲವು ಸಂಸಾರಗಳು ಒಟ್ಟುಗೂಡಲಾರಂಭಿಸಿ ದೊಡ್ಡ ದೊಡ್ಡ ಮಂದೆಗಳು ಹುಟ್ಟಿಕೊಂಡವು; ಮನುಷ್ಯನಲ್ಲಿಯೂ ಹೀಗೆಯೇ ಆಗಿರಬಹುದು. ಹೀಗಾಗುವ ಮೊದಲು ಪ್ರತಿವ್ಯಕ್ತಿಯ ಮೂಲಭೂತ ಸ್ವಾರ್ಥ ಭಾವನೆಗಳ ಮೇಲೆ ನಿರ್ಬಂಧ ಬರಬೇಕಾಗುತ್ತದೆ. ಎಳೆ ವಯಸ್ಸಿ ನಲ್ಲಿ ಮಾತ್ರ ಇರುತ್ತಿದ್ದ ತಾಯಿಯ ಮೇಲಿನ ಗೌರವ ಭಾವ, ತಂದೆಯನ್ನು ಕಂಡರೆ ಭಯಭಕ್ತಿ, ವಯಸ್ಸಾದ ಮೇಲೆಯೂ ಇರಬೇಕಾಯಿತು. ಹಾಗೆಯೇ ತಂಡದಲ್ಲಿರು ತ್ತಿದ್ದ ಹಿರಿಯರು ತರುಣರ ಮೇಲಿನ ಅಸೂಯೆಯನ್ನು ಅಡಗಿಸಿಡಬೇಕಾಯಿತು. ಆದರೆ ತಾಯಿಯರು ಮಾತ್ರ ಕಿರಿಯರಿಗೆ ಮಾರ್ಗದರ್ಶಿನಿಯರೂ ರಕ್ಷಕಿಯರೂ ಆಗಿರುತ್ತಿದ್ದರು. ಮುಖ್ಯವಾಗಿ ಮನುಷ್ಯನ ಸಮಾಜ ಜೀವನದಲ್ಲಿ ಎರಡು ವಿರುದ್ಧ ಪ್ರವೃತ್ತಿಗಳಿದ್ದುವು. ಒಂದು ಕಡೆ ವಯಸ್ಸು ಬಂದಂತೆ ತಂಡದಿಂದ ಹೊರಬಿದ್ದು ತಮ್ಮದೇ ಜೋಡಿ ಕಟ್ಟಿ ಕೊಂಡು ಜೀವನ ನಡೆಸಬೇಕೆಂಬ ಕಿರಿಯರ ಸ್ವಭಾವಜನ್ಯ, ಇಚ್ಛೆ, ಮತ್ತೊಂದೆಡೆ ತಂಡದ ಹೊರಗೆ ಜೀವನ ನಡೆಸುವುದರಲ್ಲಿನ ಅಪಾಯಗಳ ಅರಿವು ಇವೆರಡು ಎಳೆತಗಳ ನಡುವೆ ಮನುಷ್ಯನ ಸಂಘ ಜೀವನ ರೂಪುಗೊಂಡಿತು. ಅನಾಗರಿಕ ಜನರಲ್ಲಿ ಈಗಲೂ ನಾವು ನೋಡಬಹುದಾದ 'ಟಾಬೂ' (Taboo) ನಿಯಮಗಳಲ್ಲಿ ಅನೇಕ ನಿಯಮ ಗಳು ಆದಿಮಾನವನ ಈ ಎಳೆದಾಟಗಳಿಂದ ಹುಟ್ಟಿದುವೆಂದು ಪ್ರತಿಭಾವಂತ ಮಾನವ ಶಾಸ್ತ್ರಜ್ಞ (anthropologist) ಜೆ.ಜೆ. ಅಟ್‌ಕಿನ್‌ಸನ್ ತಮ್ಮ 'ಆದಿನಿಯಮ ಗಳು ("Primal Law") ಎಂಬ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದಾರೆ. ಆ ಬಳಿಕ ನಡೆದ ಮನಶ್ಶಾಸ್ತ್ರ ಸಂಶೋಧನೆಗಳಿಂದಲೂ ಈ ಅಭಿಪ್ರಾಯ ದೃಢಗೊಂಡಿದೆ.

ಈ ಜನರಲ್ಲಿ ಧರ್ಮ ಹಾಗೂ ದೇವ ದೇವತೆಯರ ಕಲ್ಪನೆ ಹೇಗೆ ಹುಟ್ಟಿತೆಂದು ಕೆಲವು ಲೇಖಕರು ಹೀಗೆ ಊಹೆ ಮಾಡಿದ್ದಾರೆ. ತಂಡದ ಹಿರಿಯರ ಮೇಲಿನ ಭಯ ಭಕ್ತಿ, ರಕ್ಷಣಾಭಾವನನ್ನು ತೋರುತ್ತಿದ್ದ ಹಿರಿಯ ಹೆಂಗಸರ ಮೇಲಿನ ಗೌರವ ಭಾವನೆ ಇವು ಕನಸುಗಳಿಂದ ಮತ್ತು ಅವರ ಸ್ವಾಭಾವಿಕ ಕಲ್ಪನಾ ಶಕ್ತಿ ಇವುಗಳಿಂದ ವೃದ್ಧಿ ಗೊಂಡುವು. ಈ ಹಿರಿಯರು ಸತ್ತ ಮೇಲೂ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಇದ ರಿಂದ ಇಂತಹ ವ್ಯಕ್ತಿಗಳು ಬದುಕಿದ್ದಾಗ ಇರುತ್ತಿದ್ದ ಭಯಭಕ್ತಿಗಳು ಅವರು ಸತ್ತ ಮೇಲೆ ಇನ್ನೂ ಹೆಚ್ಚಾಗಿ ಆ ವ್ಯಕ್ತಿಗಳು ಮಾನವರ ಮನಸ್ಸಿನಲ್ಲಿ ಉನ್ನತ ಸ್ಥಾನವನ್ನು ಪಡೆಯುತ್ತಿದ್ದರು. ಸಾವೇ ಕೊನೆಯಲ್ಲ, ಸತ್ತ ಮೇಲೆಯೂ ಈ ವ್ಯಕ್ತಿಗಳು

ಯಾವುದೋ ರೂಪದಲ್ಲಿ ಬದುಕಿರುತ್ತಾರೆ; ಬದುಕಿದ್ದಾಗ ಇದ್ದುದಕ್ಕಿಂತ ಬಹು ಹೆಚ್ಚಿನ ಶಕ್ತಿಗಳನ್ನು ಪಡೆಯುತ್ತಾರೆ ಎಂದು ಇವರು ಕಲ್ಪಿಸಿಕೊಂಡರು.

ಮಕ್ಕಳು ಕಾಣುವ ಕನಸು, ಕಟ್ಟುವ ಕಲ್ಪನೆ, ಪಡುವ ಭಯ ಇವೆಲ್ಲ ದೊಡ್ಡವರದಕ್ಕಿಂತ ಉಜ್ವಲವಾಗಿರುತ್ತವೆ. ಆದಿಮಾನವನೂ ಒಂದು ರೀತಿಯ ಮಗುವೇ ಎನ್ನಬಹುದು. ಪ್ರಾಣಿಗಳೂ ಅವನಿಗೆ ನಮ್ಮಷ್ಟು ದೂರದವರಾಗಿರಲಿಲ್ಲ. ಅವುಗಳೂ ತನ್ನಂತೆಯೇ ಉದ್ದೇಶಪೂರ್ವಕವಾಗಿ ಕೆಲಸ ಮಾಡುತ್ತವೆ, ತನ್ನಂತೆಯೇ ಕ್ರಿಯೆಗೆ ಪ್ರತಿಕ್ರಿಯಿಸುತ್ತವೆಂದು ಅವನು ತಿಳಿದಿದ್ದನು. ಹೀಗಿದ್ದುದರಿಂದಲೇ ಪ್ರಾಣಿಗಳಲ್ಲೂ ಅವನು ಶತ್ರುಗಳು, ದೇವತೆಗಳು, ಸಹಾಯಕರು ಎಲ್ಲವನ್ನೂ ಕಾಣಬಲ್ಲವನಾಗಿದ್ದನು. ವಿಚಿತ್ರ ಆಕಾರದ ಬಂಡೆಗಳು, ಮರದ ತುಂಡುಗಳು, ಮರಗಳು, ಇಂತಹ ಇನ್ನೂ ಬೇರೆ ವಸ್ತುಗಳು ಈ ಮನುಷ್ಯನಿಗೆ ಅರ್ಥಪೂರಿತವಾಗಿ ಕಾಣುತ್ತಿದ್ದುವು. ಕಲ್ಪನಾಶಕ್ತಿಯುಳ್ಳ ಮಗುವಿನಂತೆ ಇವನೂ ಇವುಗಳ ಮೇಲೆ ಕಥೆ ಕಟ್ಟುತ್ತಿದ್ದನು. ಇವು ಕೇಳುವವರಿಗೆ ನಿಜವೆಂದೇ ಎನಿಸುತ್ತಿದ್ದುವು. ಇವುಗಳಲ್ಲಿ ಉತ್ತಮವಾದುವನ್ನು ಇವರು ನೆನಪಿನಲ್ಲಿಟ್ಟುಕೊಂಡು ಮತ್ತೆ ಮತ್ತೆ ಹೇಳುತ್ತಿದ್ದರು. ಇಂತಹ ಕಥೆಗಳನ್ನು ತಾಯಂದಿರು ತಮ್ಮ ಮಕ್ಕಳಿಗೆ ಹೇಳುತ್ತಿದ್ದುದರಿಂದ ಇವು ಪರಂಪರಾಗತವಾಗಿ ಉಳಿದುಕೊಳ್ಳುತ್ತಿದ್ದುವು. ಕಲ್ಪನಾಶಕ್ತಿಯುಳ್ಳ ಮಕ್ಕಳು ಈಗಲೂ ಸಹ ತಮ್ಮ ಅಚ್ಚುಮೆಚ್ಚಿನ ಬೊಂಬೆಯನ್ನೋ ಮತ್ತಾವುದಾದರೂ ಪ್ರಾಣಿಯನ್ನೋ ವಿಚಿತ್ರವಾದ ಅರ್ಧ ಮನುಷ್ಯರೂಪದ ಒಂದು ವ್ಯಕ್ತಿಯನ್ನೋ ಪ್ರಮುಖವಾಗಿಟ್ಟುಕೊಂಡು ಉದ್ದುದ್ದವಾದ ಕಥೆ ಕಟ್ಟುತ್ತಾರೆ. ಆದಿಕಾಲದ ಮನುಷ್ಯನೂ ಹೀಗೆಯೇ ಮಾಡುತ್ತಿದ್ದಿರಬೇಕು. ಒಂದು ವ್ಯತ್ಯಾಸವೇನೆಂದರೆ ಇಂದಿನ ಮಕ್ಕಳಿಗಾದರೂ ಒಂದು ವೇಳೆ ತಮ್ಮ ಕತೆ ಕಟ್ಟುಕತೆಯೆಂಬ ಅರಿವಿರಬಹುದು. ಆದಿಮಾನವ ಎಲ್ಲವನ್ನೂ ನಿಜವೆಂದೇ ಭಾವಿಸುತ್ತಿದ್ದನು. ಅಲ್ಲದೆ ನಿಜ ಮಾನವ ಬಹು ಮೊದಲಿನಿಂದಲೂ ಒಳ್ಳೆ ಹರಟೆಮಲ್ಲನಾಗಿದ್ದನೆಂದು ತೋರುತ್ತದೆ. ಮುಕ್ಕಾಲು ಪಾಲು "ಮೂಕ ಪ್ರಾಣಿ"ಯೇ ಆಗಿದ್ದ ನಿಯಾಂಡರ್ ಥಾಲ್ ಮಾನವನನ್ನು ಗೆಲ್ಲಲು ಇದೂ ಅವನಿಗೆ ಸಹಾಯಕವಾಗಿರಬೇಕು. ಆದರೂ ಆದಿಮಾನವರ ಭಾಷೆಯಲ್ಲಿ ಕೆಲವೇ ಕೆಲವು ಪದಗಳು, ಅದೂ ಬರೀ ವಸ್ತುಗಳ ಹೆಸರುಗಳು, ಇದ್ದಿರಬೇಕು. ಇವುಗಳನ್ನು ಹೇಳುವುದರೊಡನೆ ಕೈ ಸಂಜ್ಞೆಗಳನ್ನು ಮಾಡುತ್ತಾ ಅವರು ಒಬ್ಬರೊಡನೊಬ್ಬರು ಸಂಭಾಷಿಸುತ್ತಿದ್ದರೆಂಬಂತೆ ತೋರುತ್ತದೆ.

ಮನುಷ್ಯ ಎಷ್ಟೇ ಅನಾಗರಿಕನಾಗಿರಲಿ, ಅವನಲ್ಲಿ "ಕಾರಣಕಾರ್ಯಭಾವ" (science of cause and effect) ಇದ್ದೇ ಇರುತ್ತದೆ. ಆದರೆ ಕಾರ್ಯಗಳಿಗೆ ಕಾರಣಗಳನ್ನು ಹೊಂದಿಸುವಲ್ಲಿ ಅನಾಗರಿಕ ಮನುಷ್ಯನಿಗೆ ವಿವೇಚನಾ ಶಕ್ತಿ ಇರುವುದಿಲ್ಲ. ಉದಾಹರಣೆಗೆ ಈ ಎರಡು ವಾಕ್ಯಗಳನ್ನು ನೋಡಿ. "ಮಗುವಿಗೆ ಯಾವುದೋ ಕಾಡು ಹಣ್ಣು ತಿನ್ನಲು ಕೊಟ್ಟರೆ ಅದು ಸತ್ತು ಹೋಗುತ್ತದೆ" "ಶೂರನಾದ ಶತ್ರುವಿನ ಹೃದಯವನ್ನು ತಿಂದರೆ ತಿಂದವನ ಶಕ್ತಿ ಹೆಚ್ಚುತ್ತದೆ". ಇವರಲ್ಲಿ ಮೊದಲನೆಯದು ಸರಿ, ಎರಡನೆ

ಯುದು ತಪ್ಪು. ಅನಾಗರಿಕ ಮನುಷ್ಯ ಬೆಳೆಸಿಕೊಂಡಿರುವ ಇಂತಹ ಕಾರ್ಯಕಾರಣ ನಿಯಮಗಳಿಗೆ ಮೂಢನಂಬಿಕೆ (Fetish) ಎನ್ನುತ್ತೇವೆ. ಇದು ಕಾಡುಜನರ ಅಜ್ಞಾನ ಅಷ್ಟೆ. ಆಧುನಿಕ ವಿಜ್ಞಾನದಂತೆ ಇದು ವಿವೇಚನಾ ಪೂರ್ವಕವಾಗಿ ನಿಯಮಬದ್ಧವಾಗಿ ಹುಟ್ಟಿ ಬೆಳೆದಿಲ್ಲವಾದುದರಿಂದ ಇದರಲ್ಲಿ ಸರಿಯಾದ ಭಾಗಗಳಿಗಿಂತ ತಪ್ಪುಗಳೇ ಹೆಚ್ಚಾಗಿರುತ್ತವೆ.

ಎಷ್ಟೋ ಸಂದರ್ಭಗಳಲ್ಲಿ ಕಾರ್ಯಗಳಿಗೆ ಕಾರಣಗಳನ್ನು ಹುಡುಕುವುದು ಅಷ್ಟು ಕಷ್ಟವಲ್ಲ. ಅನುಭವ ಬಂದಂತೆ ಎಷ್ಟೋ ಇಂತಹ ತಪ್ಪುಗಳು ತಿದ್ದಲ್ಪಟ್ಟವು. ಆದರೂ ಆದಿಮಾನವನಿಗೆ ಅತಿಮುಖ್ಯವೆನಿಸಿದ ಎಷ್ಟೋ ಸಮಸ್ಯೆಗಳಿಗೆ ಸರಿಯಾದ ಉತ್ತರ ದೊರಕಲಿಲ್ಲ. ದೊರಕಿದ ವಿವರಣೆಗಳು ಅಷ್ಟೇನೂ ತಪ್ಪು ತಪ್ಪಾಗಿರಲಿಲ್ಲ ; ಇಲ್ಲವೇ ಅವು ತಪ್ಪೆಂದು ಅವನಿಗೆ ತಿಳಿಯುವಂತಿರಲಿಲ್ಲ. ಬೇಟೆಯ ಪ್ರಾಣಿಗಳು, ಮೀನುಗಳು ಸಮೃದ್ಧವಾಗಿದ್ದು ಸುಲಭವಾಗಿ ತನ್ನ ಕೈ ಸೇರುವುದು ಅವನಿಗೆ ಬಲು ಮುಖ್ಯವಾಗಿತ್ತು. ಇದನ್ನು ಸಾಧಿಸಬೇಕೆಂದು ಅವನು ಅದೆಷ್ಟೋ ಮಂತ್ರತಂತ್ರ ಶಕುನಗಳನ್ನು ನಂಬುತ್ತಿದ್ದನು. ಮತ್ತೊಂದು ಅತಿ ಮುಖ್ಯ ಸಮಸ್ಯೆಯೆಂದರೆ ಅನಾರೋಗ್ಯ ಮತ್ತು ಸಾವು. ಆಗಾಗ್ಗೆ ಅವರಲ್ಲಿ ಸಾಂಕ್ರಾಮಿಕ ಜಾಡ್ಯಗಳು ಹರಡಿ ಜನರು ಸಾಯುತ್ತಿದ್ದರು. ಎಷ್ಟೋ ವೇಳೆ ಜನರು ಕಣ್ಣಿಗೆ ಕಾಣುವಂತಹ ಕಾರಣವಿಲ್ಲದೆಯೇ ಕಾಯಿಲೆ ಬಿದ್ದು ಸಾಯುತ್ತಿದ್ದರು ಅಥವಾ ನಿರ್ಬಲರಾಗುತ್ತಿದ್ದರು. ಭಾವನಾ ಜೀವಿಯಾದ ಆದಿಮಾನವನ ಅವಸರ ಪ್ರಕೃತಿ ಇದರಿಂದ ಕೆರಳುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಅವನು ಕನಸುಗಳನ್ನೋ ಮತ್ಯಾವುದಾದರೂ ಊಹಾಪೋಹಗಳನ್ನೋ ನಂಬಿಕೊಂಡು ಯಾವುದೋ ಮನುಷ್ಯನೋ ಪ್ರಾಣಿಯೋ ವಸ್ತುವೋ ಇಷ್ಟಕ್ಕೆಲ್ಲಾ ಕಾರಣವೆಂದು ಆ ಮನುಷ್ಯ, ಪ್ರಾಣಿ ಇಲ್ಲವೇ ವಸ್ತುವಿನ ಮೇಲೆ ಆರೋಪ ಹೊರಿಸುತ್ತಿದ್ದನು ; ಅಥವಾ ಅವರನ್ನೇ ಸಹಾಯಕ್ಕೋಸ್ಕರ ಮೊರೆ ಹೋಗುತ್ತಿದ್ದನು. ಚಿಕ್ಕ ಮಗುವಿನಂತೆ ಇವನೂ ಬಹಳ ಬೇಗನೆ ಗಾಬರಿಯಾಗುತ್ತಿದ್ದನು.

ಇವರಲ್ಲಿಯೂ ಬಹು ಮೊದಲಿನಿಂದಲೇ, ಸಮಾಧಾನದ, ಬಲಿತ ದೃಢ ಬುದ್ಧಿಯ ಮನುಷ್ಯರು ಕೆಲವರಿದ್ದಿರಬೇಕು. ಉಳಿದವರಂತೆಯೇ ಈ ಮನುಷ್ಯರು ಭಯ ಗಾಬರಿ ಪಡುತ್ತಿದ್ದರೂ ಅವರಿಗಿಂತ ಗಟ್ಟಿ ಮನಸ್ಸಿನವರಾಗಿದ್ದುದರಿಂದ ಉಳಿದವರಿಗೆ ಇವರು ಬುದ್ಧಿವಾದ ಹೇಳತೊಡಗಿದರೆನಿಸುತ್ತದೆ. ಅಂತೂ ಇತರರು ಇವರನ್ನು ಅನುಸರಿಸಲಾರಂಭಿಸಿದರು. ಅಪಶಕುನ, ಶುಭಶಕುನಗಳು, ಏನು ಮಾಡಬೇಕು, ಏನು ಮಾಡಬಾರದು ಇವೆಲ್ಲವನ್ನೂ ಇವರು ಉಳಿದವರಿಗೆ ತಿಳಿಸಿಕೊಡುತ್ತಿದ್ದರು. ಈ "ಫೆಟಿಷ್ ತಜ್ಞರು", (fetish expert), "ಮಂತ್ರಗಾರರು" (medicine men) ಇವರೇ ಮೊದಲ "ಪುರೋಹಿತರು". ಜನರಿಗೆ ಎಚ್ಚರಿಕೆ ಕೊಡುವುದು, ಕನಸುಗಳಿಗೆ ಅರ್ಥ ಹೇಳುವುದು, ಉಪದೇಶ ಮಾಡುವುದು, ಕೇಡುಕಾಗದಿರಲು ಅಥವಾ ಒಳಿತಾಗಲು ಮಾಡುತ್ತಿದ್ದ ಮಂತ್ರತಂತ್ರಗಳನ್ನು ನಡೆಸಿಕೊಡುವುದು ಇವೆಲ್ಲ ಇವರ ಕೆಲಸವಾಗಿತ್ತು. ಆದಿಮಾನವ

ವನ "ಮತ, ಧರ್ಮ" ಕ್ಕೂ ಈಗ ನಾವು ಮತ, ಧರ್ಮ ಎನ್ನುವುದಕ್ಕೂ ದೊಡ್ಡ ವ್ಯತ್ಯಾಸವಿದೆ. ಈಗ ಮತ ಧರ್ಮಗಳಲ್ಲಿ ಜನ ಏನನ್ನು ನಂಬುತ್ತಾರೆ ಎನ್ನುವುದು ಮುಖ್ಯವಾದರೆ ಆಗ ಪ್ರತಿದಿನದ ಆಚಾರ ವ್ಯವಹಾರಗಳು ಎಲ್ಲಕ್ಕಿಂತ ಮುಖ್ಯವಾಗಿದ್ದುವು. ಅಂದಿನ ಪುರೋಹಿತನು ಒಂದು ಬಗೆಯ ಆಧಾರರಹಿತ ಆದರೆ ನಿತ್ಯ ಉಪಯೋಗಕ್ಕೆ ಬೇಕಾಗುವಂಥ ವಿಜ್ಞಾನವನ್ನು ಪ್ರತಿಪಾದಿಸುತ್ತಿದ್ದನು.

(ಮುಂದುವರೆಯುತ್ತದೆ)

ಟಿಪ್ಪಣಿಗಳು

8. 1953ರಲ್ಲಿ ಈ ಸಮಸ್ಯೆ ಕೊನೆಗಂಡಿತು. ಕೆ. ಪಿ. ಓಕ್ಲಿ ಮತ್ತು ಜೆ.ಎಸ್. ವೈನರ್ ಎಂಬ ಈ ಬ್ರಿಟಿಷ್ ವಿಜ್ಞಾನಿಗಳು ಈ ಸಂಗ್ರಹದಲ್ಲಿದ್ದ ದವಡೆ ಮೂಳೆ ಆಧುನಿಕ ವಾನರದ್ದೆಂದೂ, ಇದನ್ನು ಉದ್ದೇಶಪೂರ್ವಕವಾಗಿ ಜೀರ್ಣವಾದಂತೆ ಕಾಣಿಸಲೆಂದು ಸಿದ್ಧಪಡಿಸಲಾಗಿತ್ತೆಂದೂ ತೀರ್ಮಾನಿಸಿದರು. ಇದರೊಡನೆ ಇದ್ದ ತಲೆ ಬುರುಡೆ ಮಾತ್ರ 50000 ವರ್ಷ ಹಿಂದಿನ ಮನುಷ್ಯನದು. ಇದು ಪಿಲ್ಟ್‌ಡೌನಿನಲ್ಲಿ ಡಾಸನ್ ಎಂಬ ವಕೀಲನಿಗೆ ಮುಂಚೆ ಸಿಕ್ಕಿತು. ಕೆಲವು ಕಾಲದ ನಂತರ ಅತನೇ ಈ ದವಡೆ ಮೂಳೆ ಮತ್ತು ಬೆಣಚು ಕಲ್ಲಿನ ಆಯುಧಗಳನ್ನು ಅದೇ ಸ್ಥಳದಲ್ಲಿ ತೋರಿಸಿಕೊಟ್ಟನು. ಇವೆಲ್ಲಕ್ಕೂ ಪ್ರಾಚೀನಕಾಲ ಕಾಲದ್ದೆಂದು ತೋರುವಂತೆ ಕ್ರೋಮಿಯಮ್ ಮತ್ತು ಕಬ್ಬಿಣದ ಸಂಯುಕ್ತಗಳಿಂದ ಬಣ್ಣ ಕಟ್ಟಲಾಗಿದೆ. ಅಲ್ಲದೆ ದವಡೆ ಮೂಳೆಯಲ್ಲಿರುವ ಕೋರೆ ಹಲ್ಲನ್ನು ಸವೆದು ಹೋಗಿರುವ ಮನುಷ್ಯನ ಹಲ್ಲೆಂದು ಕಾಣುವಂತೆ ಕೃತಕವಾಗಿ ಸವೆಸಲಾಗಿದೆಯೆಂದು ಮೈಕ್ರೋಸ್ಕೋಪಿನಿಂದ ಪರೀಕ್ಷಿಸಿದಾಗ ತಿಳಿಯಿತು. ಎಕ್ಸ್–ರೇ ಪರೀಕ್ಷೆ ಮಾಡಿದಾಗ ಈ ಹಲ್ಲು ಆ ಪ್ರಾಣಿಯಲ್ಲಿ ಆಗ ತಾನೇ ಹುಟ್ಟಿದ್ದ ಹಲ್ಲೆಂದು ತಿಳಿಯಿತು. ಹಾಗಿದ್ದಲ್ಲಿ ಅದು ಸ್ವಾಭಾವಿಕವಾಗಿ ಅಷ್ಟು ಸವೆಯಲು ಹೇಗೆ ಸಾಧ್ಯ ?

ಒಟ್ಟಿನಲ್ಲಿ ಇದು ಮಾನವ ಶಾಸ್ತ್ರದ ಚರಿತ್ರೆಯಲ್ಲಿ ಒಂದು ಪರಿಹಾಸ್ಯಪೂರ್ವಕ ಘಟನೆಯಾಗಿದೆ. ಇವೆಲ್ಲವನ್ನೂ ಆಕ್ಸ್‌ಫೋರ್ಡಿನ ವಿಶ್ವವಿದ್ಯಾಲಯದ ಮ್ಯೂಸಿಯಂನಲ್ಲಿ ಮೊದಲಿದ್ದಂತೆಯೇ ಇಟ್ಟು ಈ ಸಂಗ್ರಹಕ್ಕೆ "ಪಿಲ್ಟ್‌ಡೌನ್ ಕುಚೋದ್ಯ" "Piltdown Hoax" ಎಂದು ಹೆಸರಿತ್ತಿದ್ದಾರೆ.

9. 14–16 ನೇ ಶತಮಾನಗಳಲ್ಲಿ ಯುರೋಪಿನಲ್ಲಿ ಕಲೆ, ಸಾಹಿತ್ಯ, ವಿಜ್ಞಾನಗಳಲ್ಲಾದ ಪುನರುಜ್ಜೀವನ.

ವಸ್ತುಕೋಶ

ತಮಿಳುನಾಡು-ಕೇರಳ ರಾಜ್ಯಗಳ ಪುರಾತತ್ವ

ತಂಜಾವೂರಿನಲ್ಲಿ ಸುಮಾರು ಮೂರು ವರ್ಷಗಳ ಹಿಂದೆ ಸ್ಥಾಪಿತವಾದ ತಮಿಳು ವಿಶ್ವವಿದ್ಯಾಲಯವು ಒಂದು ವಿಶಿಷ್ಟ ರೀತಿಯದೆಂದು ಹೇಳಬಹುದು. ತಮಿಳುನಾಡಿನ ದೀರ್ಘ ಸಾಂಸ್ಕೃತಿಕ ಇತಿಹಾಸ, ಸಾಹಿತ್ಯ, ಭಾಷಾವಿಜ್ಞಾನ ಮುಂತಾದ ಹಲಕ್ಷೇತ್ರಗಳ ಬಗೆಗೆ ಸಂಶೋಧನೆ ನಡೆಸಿ ಆ ಬಗ್ಗೆ ಗ್ರಂಥರಚನೆ ಮಾಡುವ ಉದ್ದೇಶದಿಂದ ಇದನ್ನು ಒಂದು ಸಂಶೋಧನಾ ಸಂಸ್ಥೆಯಾಗಿ ಹುಟ್ಟು ಹಾಕಲಾಗಿದೆ. ಈವರೆಗೆ ಅದು ಯಾವುದೇ ಪದವಿಗಳಿಗೆ ಸ್ನಾತಕರನ್ನು ತಯಾರಿಸುವ ಯೋಜನೆಯನ್ನು ಕೈಗೆತ್ತಿಕೊಂಡಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಗೆ ಆದ್ಯತೆ ನೀಡಿ ಹಲವಾರು ಸಂಶೋಧಕ ಅಧ್ಯಾಪಕರನ್ನು ನಿಯಮಿಸಿಕೊಂಡಿದೆ. ಡಾಕ್ಟರೇಟ್ ಪದವಿಗಾಗಿ ಸಂಶೋಧನೆ ನಡೆಸಲು ಅನುಕೂಲತೆಗಳನ್ನು ಏರ್ಪಡಿಸಿಕೊಡುತ್ತದೆ. ತಮಿಳುನಾಡಿನ ಇತಿಹಾಸ-ಸಂಸ್ಕೃತಿಗಳ ವಿಷಯದಲ್ಲಿ ಪ್ರೌಢಿಮೆ ಪಡೆದ ವಿದ್ವಾಂಸರನ್ನು ಕರೆಸಿ ವಿಚಾರ ಸಂಕಿರಣಗಳನ್ನು, ವಿದ್ವತ್ ಸಭೆಗಳನ್ನು, ಉಪನ್ಯಾಸಗಳನ್ನು, ಕಾರ್ಯಾಗಾರಗಳನ್ನು ಏರ್ಪಡಿಸುತ್ತದೆ. ಈರೀತಿ ಉತ್ತಮ ಜ್ಞಾನಾಭಿವೃದ್ಧಿ ಯೋಜನೆಗಳಿಗೆ ಸಮರ್ಥ ಮಾರ್ಗದರ್ಶಿಯಾಗಿ ಪ್ರಾ|| ವಿ. ಐ. ಸುಬ್ರಮಣಿಯಂ ಅವರು ಕುಲಪತಿಯಾಗಿ ದೊರಕಿರುವುದು ಆ ಸಂಸ್ಥೆಯ ಸೌಭಾಗ್ಯವೆಂದು ಹೇಳಬೇಕಾಗುತ್ತದೆ.

ಪ್ರಾ|| ಸುಬ್ರಮಣಿಯಂ ಅವರ ನೇತೃತ್ವದಲ್ಲಿ ಅಲ್ಲಿನ ಶಾಸನ-ಪುರಾತತ್ವ ಅಧ್ಯಯನ ವಿಭಾಗದವರು 1984ರ ಜೂನ್ 10-12 ನೇ ದಿನಾಂಕಗಳಂದು "ತಮಿಳುನಾಡು-ಕೇರಳಗಳ ಪುರಾತತ್ವ, ಸಾಧನೆಗಳು ಮತ್ತು ಪ್ರತೀಕ್ಷೆ"ಯ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು. ಮೂರು ದಿನಗಳ ಈ ವಿದ್ವದ್ಗೋಷ್ಠಿಯಲ್ಲಿ ಮೈಸೂರು, ಕರ್ನಾಟಕ, ಮದ್ರಾಸು, ಭಾರತೀದಾಸನ್, ಕ್ಯಾಲಿಕಟ್ ವಿಶ್ವವಿದ್ಯಾಲಯಗಳ ಇಪ್ಪತ್ತಕ್ಕೂ ಮಿಕ್ಕ ವಿದ್ವಾಂಸರಲ್ಲದೆ, ಪುರಾತತ್ವಶಾಸ್ತ್ರ ಮತ್ತು ಇತಿಹಾಸ ಕ್ಷೇತ್ರಗಳಲ್ಲಿ ಪ್ರೌಢಿಮೆ ಪಡೆದ ಇನ್ನೂ ಕೆಲವು ವಿದ್ವಾಂಸರು ಮತ್ತು ಆ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುತ್ತಿರುವ ಕಿರಿಯರೂ ಭಾಗವಹಿಸಿದ್ದರು.

ತಮಿಳುನಾಡು ಕೇರಳಗಳಲ್ಲಿ ಈವರೆಗೆ ನಡೆದಿರುವ ಪುರಾತತ್ವ ಸಂಶೋಧನೆಗಳ ಸಮೀಕ್ಷೆ, ಅವುಗಳ ಮಹತ್ವದ ಬಗ್ಗೆ ವಿಶ್ಲೇಷಣೆ, ಈಚಿನ ಸಂಶೋಧನಾ ತತ್ವಗಳಿಗನು

ಗುಣವಾಗಿ ಹಿಂದಿನ ಸಂಶೋಧನೆಗಳ ಪುನರ್ವಿಶ್ಲೇಷಣೆ ಮತ್ತು ಈ ನಂತರ ಸಂಶೋಧಕರು ಅನುಸರಿಸಬೇಕಾದ ವಿಧಾನಗಳು ಮತ್ತು ರೂಪರೇಷೆಗಳ ಬಗ್ಗೆ ಕುತೂಹಲಕರವೂ ಮಾರ್ಗದರ್ಶಕವೂ ಆದ ಚರ್ಚೆಯಾಯಿತು.

ಬಿ.ಕೆ.ಜಿ.

ನೇಪಾಳದ ಪ್ರಾಚ್ಯವಸ್ತುಗಳು

(ಇಂಡಿಯನ್ ಎಕ್ಸ್‌ಪ್ರೆಸ್, ಸೋಮವಾರ, 26-11-1984, ಪುಟ-6)

ಇಟಲಿಯ ಪ್ರಾಚ್ಯವಸ್ತು ಸಂಶೋಧನಾ ತಂಡದವರು ಇತ್ತೀಚೆಗೆ ನೇಪಾಳದ ಖಟ್ಮಂಡು ಕಣಿವೆಯಲ್ಲಿ ನಡೆಸಿದ ಸಂಶೋಧನೆಗಳಿಂದ ಬೆಳಕಿಗೆ ಬಂದ ಗಮನಾರ್ಹ ಪ್ರಾಕ್ತನ ಅವಶೇಷಗಳು ಪ್ರಾಚೀನ ಭಾರತದ ಕಲಾವಸ್ತುಗಳೊಂದಿಗೆ ಬಹಳ ಹೋಲಿಕೆಗಳನ್ನು ಹೊಂದಿರುವುದಾಗಿ ತಿಳಿದುಬಂದಿದೆ.

ಇಟಲಿಯ ಮಧ್ಯ ಮತ್ತು ದೂರ ಪ್ರಾಚ್ಯದ ಪುರಾತತ್ವ ವಿಭಾಗದವರ ಸಹವರ್ತನೆಯೊಂದಿಗೆ ನೇಪಾಳ ಸರ್ಕಾರದ ಪುರಾತತ್ವ ಇಲಾಖೆಯವರು ನೇಪಾಳದ ರಾಜಧಾನಿಯ ಪರಿಸರದಲ್ಲಿ ಮುಖ್ಯವಾಗಿ ಹಂಡಿಗಾಂವ್ ಎಂಬಲ್ಲಿ ಉತ್ಖನನಗಳನ್ನು ನಡೆಸಿ ಅನೇಕ ನಾಣ್ಯಗಳನ್ನು ಮೂರ್ತಿಶಿಲ್ಪಗಳನ್ನು ಬೆಳಕಿಗೆ ತಂದರು ; ಅವು ಪ್ರಾಚೀನ ಭಾರತದ ವಾಸ್ತು ಅವಶೇಷಗಳನ್ನು ಬಹುವಾಗಿ ಹೋಲುತ್ತವೆ.

ಪುರಾತತ್ವ ಇಲಾಖೆಯ ಸಂಶೋಧನಾಧಿಕಾರಿಯಾದ ಶ್ರೀಯುತ ಬಾಬು ಕೃಷ್ಣ ರಿಜಾಲ್ ಅವರ ಅಭಿಪ್ರಾಯದಲ್ಲಿ ಆ ಪ್ರಾಚ್ಯವಸ್ತುಗಳ ಖಚಿತ ಮೂಲವನ್ನು ವೈಜ್ಞಾನಿಕ ಅಧ್ಯಯನ ನಡೆಸುವವರೆಗೂ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಆದರೆ ಅಲ್ಲಿ ದೊರಕಿರುವ ಅವಶೇಷಗಳ ಮೇಲೆ ಕಂಡುಬರುವ ಶಾಸನಗಳು ಆ ಪ್ರದೇಶದ ಸುತ್ತಮುತ್ತ ಲಿಚ್ಛವಿ ದೊರೆಗಳ ಕಾಲದ ಜನವಸತಿಯಿದ್ದುದನ್ನು ದೃಢಪಡಿಸುತ್ತವೆಂದು ಅವರು ಹೇಳಿದ್ದಾರೆ.

ಲಿಚ್ಛವಿ ದೊರೆಗಳು ನೇಪಾಳವನ್ನು ಕ್ರಿ.ಶ. ನೂರನೇ ಶತಮಾನದ ಸುಮಾರಿನಲ್ಲಿ ಆಳುತ್ತಿದ್ದರು ; ಆ ಕಾಲವು ನೇಪಾಳದ ಇತಿಹಾಸದಲ್ಲಿ ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಬಹಳ ಪ್ರಗತಿದಾಯಕವೂ, ಸಂಪದ್ಭರಿತವೂ ಆಗಿತ್ತು. ಈಗಿನ ಬಿಹಾರದ ಮುರ್ಷಾಪುರ್ ಜಿಲ್ಲೆಯಲ್ಲಿ ನೆಲಸಿದ್ದ ಅಂದಿನ ವೈಶಾಲಿ ರಾಜ್ಯದಿಂದ ನೇಪಾಳಕ್ಕೆ ವಲಸೆ ಹೋದಾಗ ಅವರು ತಮ್ಮ ಸಂಸ್ಕೃತಿ ಕಲೆಗಳನ್ನು ಅಲ್ಲಿಗೊಯ್ದಿರಬಹುದೆಂದು ನಂಬಲಾಗಿದೆ.

ಉತ್ಖನನಗಳಲ್ಲಿ ದೊರಕಿರುವ ಅವಶೇಷಗಳಲ್ಲೊಂದಾದ ಒಂದು ಮಡಕೆ ಚೂರಿನ

ಮೇಲೆ ಮಧ್ಯಭಾಗದಲ್ಲಿ (ಹಿಂದೂಗಳು ಪೂಜಾಕಾಲದಲ್ಲಿ ಬಳಸುವ) ಪೂರ್ಣ ಕುಂಭವನ್ನು ಹೊಂದಿರುವ ವೃತ್ತಾಕಾರದ ಫಲಕ ಚಿತ್ರ ಗಮನಾರ್ಹವಾಗಿದೆ ; ಅದರ ಮೇಲೆ ಲಿಚ್ಛವಿ ದೊರೆಗಳ ಕೊನೆಗಾಲಕ್ಕೆ ಸೇರಿದ ಒಂದು ಶಾಸನವೂ ಇದೆ.

ಉತ್ತಮ ಶೈಲಿಯಲ್ಲಿ ಮೂಡಿರುವ, ಧ್ಯಾನಮಗ್ನ ಭಂಗಿಯಲ್ಲಿ ನಿಂತ, ಕೈಗಳಲ್ಲಿ ಬಳೆಗಳು ಮತ್ತು ವಿಶಾಲವಾದ ಸ್ತನಗಳನ್ನು ಹೊಂದಿರುವ ಒಂದು ಸ್ತ್ರೀ ಗೊಂಬೆಯು ಆ ಕಾಲದ ಭಾರತೀಯ ಕಲಾವಸ್ತುಗಳನ್ನು ಬಹುವಾಗಿ ಹೋಲುತ್ತದೆ. ಉತ್ಖನನದಲ್ಲಿ ಭಾಗವಹಿಸುತ್ತಿರುವ ಪುರಾತತ್ವಜ್ಞರು ಗೊಂಬೆಯನ್ನು ಮಾಡಲು ಉಪಯೋಗಿಸಿರುವ ಜೇಡಿ ಮಣ್ಣಿನ ಗುಣದ ಆಧಾರದ ಮೇಲೆ ಗೊಂಬೆಯನ್ನು ಸ್ಥಳೀಯರು ಅಲ್ಲಿ ಮಾಡಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಅವರು ವೈಶಾಲಿಯ ಕಲೆ ನೇಪಾಳವನ್ನು ಪ್ರವೇಶಿಸಿರುವ ಸಾಧ್ಯತೆಯನ್ನು ತಳ್ಳಿಹಾಕಿಲ್ಲ.

ನೂರು ಲಿಚ್ಛವಿ ನಾಣ್ಯಗಳು, ವೃಷಭ ಮತ್ತು ಅರ್ಧಚಂದ್ರ ಚಿಹ್ನೆಗಳಿರುವ ಸುಟ್ಟ ಮಣ್ಣಿನ ಫಲಕ ಮತ್ತು ಎರಡು ಮಕರದ ಮುಖನಾಳಗಳು (spout) ಉತ್ತರ ಪ್ರದೇಶದ ವಾರಾಣಸಿಯಲ್ಲಿ ಸಿಕ್ಕಿರುವ ವಸ್ತುಗಳನ್ನು ಹೋಲುತ್ತವೆ.

ಬಿ.ಕೆ.ಜಿ.

ಪುಸ್ತಕ ವಿಮರ್ಶೆ

ಸರ್ವೋದಯ ಮತ್ತು ಜನಕಲ್ಯಾಣ

(ಲೇ : ಎಂ. ಎಸ್. ಬಡಕಲಿ, ಪ್ರ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಪುಟ 58, ಬೆಲೆ 0–50 ಪೈಸೆ)

ಸರ್ವೋದಯ ತತ್ವ ರಾಷ್ಟ್ರಪಿತ ಗಾಂಧೀಜಿಯವರಿಂದ ಪ್ರಚುರವಾಗಿ ರಾಜಕೀಯ ಸಾಮಾಜಿಕ ಆರ್ಥಿಕ ಮೊದಲಾದ ಎಲ್ಲ ಸಮಸ್ಯೆಗಳಿಗೂ ಸೂಕ್ತವಾದ ಮಾರ್ಗ ಎಂದು ಭಾವಿಸಲ್ಪಟ್ಟಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಮಹಾತ್ಮರು ತಮ್ಮ ಕೊನೆಯ ಮೃತ್ಯು ಪತ್ರದಲ್ಲಿ ರಾಷ್ಟ್ರದ ಮುಖಂಡರಿಗೆ ಸೇವೆಯ ಆಧಾರದ ಮೇಲೆ ಸರ್ವೋದಯ ಶಕ್ತಿ ಬೆಳೆಸಬೇಕೆಂದು ತಿಳಿಸಿದ್ದರು. ಅನೇಕ ರಾಷ್ಟ್ರೀಯ ಮುಖಂಡರು ಸರ್ವೋದಯ ತತ್ವವನ್ನು ವ್ಯಾಪಕವಾಗಿ ಪ್ರಚಾರ ಮಾಡುತ್ತಾ ಬಂದಿದ್ದಾರೆ. ಈ ಪುಸ್ತಿಕೆಯಲ್ಲಿ ಎಂ.ಎಸ್. ಬಡಕಲಿಯವರು ಸರ್ವೋದಯ ತತ್ವದ ಅರ್ಥ ಮತ್ತು ಅದರ ಮಹತ್ವವನ್ನು ವಿವರಿಸಿದ್ದಾರೆ. ನಮ್ಮ ರಾಷ್ಟ್ರ ಜೀವನದ ಎಲ್ಲ ಸಮಸ್ಯೆಗಳಿಗೂ ಸರ್ವೋದಯವೇ ರಾಮಬಾಣವೆಂದು ಲೇಖಕರು ಭಾವಿಸಿ ಅದು ಹಲವಾರು ವಿಧಗಳಲ್ಲಿ ನಮ್ಮ ನಾಡಿನ ಏಳಿಗೆಗೆ ಅತ್ಯಗತ್ಯವೆಂದು ವಾದಿಸುತ್ತಾರೆ. "ಸರ್ವೋದಯಕ್ಕೆ ಮೊರೆ ಹೋದರೆ ಎಲ್ಲವೂ ತನ್ನಿಂದ ತಾನೇ ಸುಧಾರಿಸುವುದು" ಎಂದು ತಿಳಿಸಿರುವ ಲೇಖಕರು ಇತರ ತತ್ವಗಳನ್ನು ಪದ್ಧತಿಗಳನ್ನು ಖಂಡಿಸುತ್ತಾರೆ. ರಾಷ್ಟ್ರೀಕರಣ ಮತ್ತು ಕಮ್ಯೂನಿಸಂಗಳನ್ನು ಖಂಡಿಸುತ್ತಾ "ವಿಜ್ಞಾನದ ಅನಿಷ್ಟ ಜಗತ್ತಿಗೆ ಕಾದಿದೆ" ಎಂದು ಎಚ್ಚರಿಕೆ ನೀಡುತ್ತಾರೆ! ವಿನೋಬಾ ಭಾವೆಯವರ ಸರ್ವೋದಯ ತತ್ವ ಪ್ರಚಾರ ಮತ್ತು ಭೂದಾನ ಚಳುವಳಿಗಳು ಮಹತ್ವಪೂರ್ಣ ಸಾಧನೆಗಳೆಂದು ಬಡಕಲಿಯವರು ವಾದಿಸುತ್ತಾರೆ. ಗಾಂಧೀಜಿಯವರು ಬೋಧಿಸಿದ ಧರ್ಮದರ್ಶಿತ್ವ ಅಹಿಂಸಾತ್ಮಕ ಸಮಾಜ ರಚನೆಗೆ ಸಹಾಯಕವಾಗುತ್ತದೆ. ಅದರಲ್ಲಿಯೂ ಗ್ರಾಮ ಸ್ವರಾಜ್ಯ ತತ್ವವನ್ನು ಅನುಸರಿಸುವುದರಿಂದ ಹಳ್ಳಿಗಳ ನಾಡಾದ ಭಾರತದಲ್ಲಿ ಸರ್ವತೋಮುಖ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಲೇಖಕರು ಸರ್ವೋದಯ ತತ್ವವನ್ನು ಸರ್ಕಾರ ಮತ್ತು ಸಮಾಜದಲ್ಲಿ ಎಷ್ಟರಮಟ್ಟಿಗೆ ಅನುಸರಿಸಲಾಗಿದೆ ಎಂಬುದನ್ನೂ ವಿಶ್ಲೇಷಿಸಿ ರಾಜಕೀಯ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳು ಸರ್ವೋದಯ ಪದ್ಧತಿಯನ್ನು ಅನುಸರಿಸಬೇಕು ಎಂಬುದನ್ನು ಒತ್ತಿ ಹೇಳುತ್ತಾರೆ.

ಎಂ. ವಿ. ಶ್ರೀನಿವಾಸ್

ಇತಿಹಾಸದ ಪಾಠಗಳು

(ವಿಲ್ ಮತ್ತು ಏರಿಯಲ್ ಡ್ಯುರಾಂಟ್ ಅನುವಾದ : ಭಗವಾನ್, ಪ್ರ. ಮಹಿಮ ಪ್ರಕಾಶನ, ಮೈಸೂರು. ಪುಟ 99+14, ಬೆಲೆ ರೂ. 12-00)

ಈ ಶತಮಾನದ ಬಹು ಮಹತ್ವದ ಚರಿತ್ರಕಾರರೆಂದು ಪ್ರಸಿದ್ಧರಾಗಿರುವ ವಿಲ್ ಡ್ಯುರಾಂಟ್ ಮತ್ತು ಅವರ ಪತ್ನಿ ಏರಿಯಲ್ ಬರೆದಿರುವ Lessons of History ಎಂಬ ಗ್ರಂಥದ ಕನ್ನಡ ಅನುವಾದ ಇತಿಹಾಸದ ಪಾಠಗಳು. ವಿಲ್‌ಡ್ಯುರಾಂಟ್ ಹನ್ನೊಂದು ಬೃಹತ್ ಸಂಪುಟಗಳಲ್ಲಿ ರಚಿಸಿರುವ ನಾಗರಿಕತೆಯ ಕತೆ ಇತಿಹಾಸ ಶಾಸ್ತ್ರಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿದೆ. ಸುಮಾರು 50 ವರ್ಷಗಳ ಕಾಲ ಮೂಲಾಧಾರಗಳ ಆಳವಾದ ಅಧ್ಯಯನ ನಡೆಸಿ ಹಲವಾರು ದೇಶಗಳಿಗೆ ಭೇಟಿಕೊಟ್ಟು ಕ್ಷೇತ್ರ ಕಾರ್ಯವನ್ನು ಕೈಗೊಂಡು ರಚಿಸಿರುವ ಈ ಸಾರ್ಥಕ ಕೃತಿ ಪೂರ್ಣ ದೃಷ್ಟಿಯ ಸಮಗ್ರ ಮಾನವ ಇತಿಹಾಸವನ್ನು ರೂಪಿಸುತ್ತದೆ. ಡ್ಯುರಾಂಟರು ಹಲವಾರು ಸತ್ವಶಾಲಿ ಪುಸ್ತಕಗಳನ್ನು ಬರೆದಿದ್ದಾರೆ. ಇತಿಹಾಸವನ್ನು ಜನಪ್ರಿಯಗೊಳಿಸಿದವರಲ್ಲಿ ಅವರು ಅಗ್ರಗಣ್ಯರು. ಸಾಕ್ಷಿಪ್ರಜ್ಞೆಯ ಬರಹಗಾರರೆಂದು ವಿಲ್‌ಡುರಾಂಟ್ ಪ್ರಖ್ಯಾತರಾಗಿದ್ದಾರೆ. ಮ್ಯಾರಿಸನ್ ಹೇಳಿರುವಂತೆ "ಆಧುನಿಕ ಜಗತ್ತನ್ನು ಪ್ರಭಾವಗೊಳಿಸಿದ ವೈವಿಧ್ಯಮಯ ಆಲೋಚಕರ ಅಧ್ಯಯನಕ್ಕೆ ಸ್ವಾರಸ್ಯಕರ ಸ್ಫೂರ್ತಿದಾಯಕ ಪೀಠಿಕೆಯನ್ನು ಅವರು ಸಾಮಾನ್ಯ ಓದುಗನಿಗೆ ಒದಗಿಸಿದ್ದಾರೆ".


ತಾವು ಬರೆದ ಮಾನವ ಇತಿಹಾಸವನ್ನು ಕುರಿತ ಸಂಪುಟಗಳನ್ನು ಪರಿಶೀಲಿಸಿ ಮಾನವ ಸ್ವಭಾವದ ಮತ್ತು ರಾಷ್ಟ್ರಗಳ ನಡತೆಯ ಮೇಲೆ ಬೆಳಕು ಚೆಲ್ಲುವ ಸಂಗತಿಗಳನ್ನು ಸಂಗ್ರಹಿಸಿ ಈ ಗ್ರಂಥದಲ್ಲಿ ಅವುಗಳ ಬಗ್ಗೆ ಚರ್ಚಿಸಲಾಗಿದೆ ಎಂದು ಲೇಖಕರು ಹೇಳಿದ್ದಾರೆ. ಇಲ್ಲಿ ತಾವು ಯಾವ ಹೊಸ ವಿಚಾರಗಳನ್ನು ಹೇಳಲು ಹೊರಟಿಲ್ಲವೆಂದೂ ಇತರರು ಹೇಳಿರುವ ಅನೇಕ ವಿಚಾರಗಳನ್ನು ಪುನರುಚ್ಚರಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ. ಒಟ್ಟಿನಲ್ಲಿ ಈ ಗ್ರಂಥದಲ್ಲಿ ಮಾನವ ಅನುಭವದ ಒಂದು ಸಮರ್ಥ ಸಮೀಕ್ಷೆ ನಡೆದಿದೆ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಪ್ರಾರಂಭದಲ್ಲಿ ಲೇಖಕರು ಇತಿಹಾಸ ರಚನೆಯ ಬಗ್ಗೆ ವಿಮರ್ಶಿಸುತ್ತಾ ಅದೊಂದು ಕಲೆ ಮತ್ತು ದರ್ಶನ ಎಂಬುದನ್ನು ಒತ್ತಿ ಹೇಳುತ್ತಾರೆ. ಇತಿಹಾಸದ ಸಂಶೋಧಕ ಅನೇಕ ಮಿತಿಗಳೊಳಗೆ ಸತ್ಯವನ್ನು ಸಾವಧಾನದಿಂದ ಸಹಿಸುವುದನ್ನೂ ಇತರರ ಭ್ರಾಂತಿಗಳನ್ನು ಗೌರವಿಸುವುದನ್ನೂ ಕಲಿಯಬೇಕಾಗುತ್ತದೆ. ಲೇಖಕರು ಇತಿಹಾಸದ ಅಧ್ಯಯನಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನೂ ಶಾಸ್ತ್ರಗಳನ್ನೂ ಅವುಗಳ ಅಧ್ಯಯನದ ಪ್ರಯೋಜನವನ್ನೂ ಇಲ್ಲಿ ಪರಿಶೀಲಿಸುತ್ತಾರೆ. ಇತಿಹಾಸ ಮತ್ತು ಭೂಮಿ ಎಂಬ ವಿಚಾರವಾಗಿ ಬರೆಯುತ್ತಾ ಮಾನವನ ಜೀವನದ ಮೇಲೆ ಭೌಗೋಳಿಕ ಅಂಶಗಳ ಪ್ರಭಾವವನ್ನು ಕುರಿತು ವಿವೇಚಿಸುತ್ತಾರೆ. ಜೀವಶಾಸ್ತ್ರ ಮತ್ತು ಇತಿಹಾಸ ಎಂಬ

ಶೀರ್ಷಿಕೆಯಲ್ಲಿ ಮಾನವನ ಚಟುವಟಿಕೆ ಹೇಗೆ ಜೀವಶಾಸ್ತ್ರದ ನಿಯಮಗಳಿಗೆ ಬದ್ಧವಾಗಿದೆ ಎನ್ನುವುದನ್ನು ತಿಳಿಸುತ್ತಾರೆ. ಜನಾಂಗ ಮತ್ತು ಇತಿಹಾಸ ಎಂಬ ವಿಚಾರವಾಗಿ ಬರೆಯುವಾಗ ಜನಾಂಗವಾದದಲ್ಲಿನ ಅಪಾಯಗಳತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ವ್ಯಕ್ತಿತ್ವ ಮತ್ತು ಇತಿಹಾಸ ಎಂಬ ಶೀರ್ಷಿಕೆಯಲ್ಲಿ ಮಾನವ ಸ್ವಭಾವವನ್ನು ವಿಶ್ಲೇಷಿಸಿ ಬುದ್ಧಿಯೇ ಇತಿಹಾಸದಲ್ಲಿ ಜೀವನದ ಬಲ ; ಅದು ವಿಲೀನಕಾರಿಯಾಗಬಹುದು ಅಥವಾ ವಿನಾಶಕಾರಿಯಾಗಬಹುದು ಎಂದು ಬರೆಯುತ್ತಾರೆ. ಮುಂದೆ ಮಾನವ ಇತಿಹಾಸದಲ್ಲಿ ನೀತಿ ಸಂಹಿತೆಗಳು ಹೇಗೆ ಬದಲಾಗುತ್ತಾ ಬಂದಿವೆ ಎಂಬುದನ್ನು ವಿವರಿಸುತ್ತಾರೆ. ಧರ್ಮವು ಹೇಗೆ ಇತಿಹಾಸದ ಗತಿಯನ್ನು ರೂಪಿಸಿದೆ ಎಂಬುದನ್ನು ಧರ್ಮ ಮತ್ತು ಇತಿಹಾಸ ಎಂಬ ಅಧ್ಯಾಯದಲ್ಲಿ ಚರ್ಚಿಸುತ್ತಾರೆ. ಗತಕಾಲದ ಆರ್ಥಿಕ ವಿಶ್ಲೇಷಣೆಯಿಂದ ನಾವು ಅನಂತ ಬೋಧನೆಯನ್ನು ಪಡೆಯಬಹುದು ಎಂದು ಅರ್ಥಶಾಸ್ತ್ರ ಮತ್ತು ಇತಿಹಾಸ ಎಂಬ ಅಧ್ಯಾಯದಲ್ಲಿ ಬರೆದಿದ್ದಾರೆ. ಇತಿಹಾಸದ ಉದ್ದಕ್ಕೂ ಸಮಾಜವಾದದ ತತ್ವವು ಹೇಗೆ ವಿಕಾಸಗೊಂಡಿತು, ಸರ್ಕಾರದ ವಿವಿಧ ಪ್ರಭೇದಗಳು ಹೇಗೆ ರೂಢಿಗೆ ಬಂದವು ? ಯುದ್ಧದ ಮೂಲವೇನು ? ಮಾನವನ ಇತಿಹಾಸದಲ್ಲಿ ಅದು ಎಷ್ಟು ಮಹತ್ವ ಪಡೆದಿದೆ ? ಎಂಬ ಅಂಶಗಳನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ. ಕಡೆಯ ಅಧ್ಯಾಯವಾದ "ಪ್ರಗತಿ ವಾಸ್ತವಿಕವೇ ?" ಎಂಬ ಶೀರ್ಷಿಕೆಯಲ್ಲಿ ನಾಗರಿಕತೆಗಳ ಹುಟ್ಟು ಸಾವಿನ ಕತೆಯನ್ನು ವಿಶ್ಲೇಷಿಸಿ ಇತಿಹಾಸ ಮಾನವನ ಅಪರಾಧಗಳ ತಪ್ಪುಗಳ ಕೇವಲ ಎಚ್ಚರಿಕೆಯ ಅನುಬೋಧಕವಷ್ಟೇ ಅಲ್ಲ ಅದು ಚೈತನ್ಯದಾಯಕ ಜೀವಿಗಳ ನೆನಪಿನ ಗಣಿ ಎಂದು ತಿಳಿಸುತ್ತಾರೆ.

ಹೀಗೆ ಬೋಧಪ್ರದವೂ ವಿಚಾರಪೂರಿತವೂ ಆದ ಈ ಗ್ರಂಥ ಇತಿಹಾಸದ ವಿದ್ಯಾರ್ಥಿಗೂ ಸಾಮಾನ್ಯ ಓದುಗರಿಗೂ ಒಂದು ಅಮೂಲ್ಯವಾದ ಮಾರ್ಗದರ್ಶಿಯಾಗುತ್ತದೆ. ಇಲ್ಲಿನ ಸೂಕ್ತಿಗಳು ಲೇಖಕರ ಪಾಂಡಿತ್ಯವನ್ನು ವಿಶಾಲ ಅನುಭವವನ್ನು ಪ್ರತಿಬಿಂಬಿಸುತ್ತವೆ. ಡ್ಯುರಾಂಟರ ಪಾಂಡಿತ್ಯಪೂರ್ಣವೂ ಗಹನವೂ ಆದ ವಿಚಾರಧಾರೆಯನ್ನು ಶ್ರೀ ಭಗವಾನ್ ಕನ್ನಡಕ್ಕೆ ಸಹಜವೆನ್ನುವಂತೆ ಅನುವಾದಿಸಿದ್ದಾರೆ. ಇಲ್ಲಿ ಬಳಸಲಾಗಿರುವ ನುಡಿಗಟ್ಟು, ಶೈಲಿ ಆಕರ್ಷಕವಾಗಿರುವಂತೆ ಅನುಕರಣೀಯವೂ ಆಗಿದೆ. ಇತಿಹಾಸದ ಇಂಗ್ಲಿಷ್ ಗ್ರಂಥಗಳನ್ನು ಅನುವಾದಿಸುವ ಲೇಖಕರಿಗೆ ಈ ಪುಸ್ತಕ ಒಂದು ಮಾದರಿಯಾಗಬಲ್ಲದು. ಇಂಥ ಶ್ರೇಷ್ಠ ಗ್ರಂಥವನ್ನು ಕನ್ನಡಕ್ಕೆ ತಂದ ಶ್ರೀ ಭಗವಾನ್ ಕನ್ನಡದಲ್ಲಿ ಇತಿಹಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಎಂ. ವಿ. ಶ್ರೀನಿವಾಸ್



ಪ್ರೊ॥ ಹಾ. ಮಾ. ನಾಯಕರು

ಸಂಪಾದಕೀಯ

ಈ ಸಂಚಿಕೆಯೊಂದಿಗೆ 'ಮಾನವಿಕ ಕರ್ಣಾಟಕ'ಕ್ಕೆ ಹದಿನಾಲ್ಕು ವರ್ಷಗಳು ತುಂಬಿತು ; ಹದಿನೈದನೆಯ ವರ್ಷಕ್ಕೆ ಕಾಲಿಡುತ್ತಿರುವಾಗ ಅದರ ಜೀವನದಲ್ಲಿ ಒಂದು ಪ್ರಮುಖ ಬದಲಾವಣೆಯೂ ಆಗಿದೆ.

ಪ್ರಾರಂಭದಿಂದಲೂ ಈ ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದುಕೊಂಡು ಪ್ರೊ|| ಹಾ. ಮಾ. ನಾಯಕರು ಅದರ ಸರ್ವಾಂಗೀಣ ಪ್ರಗತಿಗೆ ಮಾರ್ಗದರ್ಶನ, ಉತ್ತೇಜನ ನೀಡುತ್ತಾ ಬಂದಿದ್ದಾರೆ. ಈಚೆಗೆ ಕಲ್ಬುರ್ಗಿ ವಿಶ್ವವಿದ್ಯಾನಿಲಯಕ್ಕೆ ಉಪ ಕುಲಪತಿಗಳಾಗಿ ನೇಮಕಗೊಂಡು ಅಲ್ಲಿ ಅಧಿಕಾರ ವಹಿಸಿಕೊಳ್ಳುವುದರೊಂದಿಗೆ ಮಾನವಿಕ ಕರ್ಣಾಟಕಕ್ಕೆ ಅವರ ವಿಧ್ಯುಕ್ತ ಸಂಪರ್ಕ ಕಳಚಿಕೊಂಡಂತಾಗಿದ್ದರೂ ಪ್ರೊ|| ನಾಯಕರ ಶುಭಕಾಮನೆಗಳೂ ಮಾರ್ಗದರ್ಶನವೂ ಮುಂದೆಯೂ ಸಿಕ್ಕುತ್ತದೆಂದು ನಂಬಿದ್ದೇವೆ. ಪ್ರೊ|| ನಾಯಕರಿಗೆ ಮಾನವಿಕ ಕರ್ಣಾಟಕದ ಸಂಪಾದಕ ವರ್ಗದವರು ಹೃತ್ಪೂರ್ವಕವಾದ ಧನ್ಯವಾದಗಳನ್ನು ತಿಳಿಸಲು, ಅವರ ಮುಂದಿನ ಜೀವನದಲ್ಲಿ ಇನ್ನು ಹೆಚ್ಚಿನ ಮೇಲ್ಮೆಯನ್ನೂ ಬಯಸಲು ಹರ್ಷಿಸುತ್ತೇವೆ.

ಹಿಂದಿನ ಸಂಚಿಕೆಯಿಂದ ಎಚ್. ಜಿ. ವೆಲ್ಸರ "ಪ್ರಪಂಚದ ಸಂಕ್ಷಿಪ್ತ ಇತಿಹಾಸ" ಎಂಬ ಗ್ರಂಥದ ಅನುವಾದವನ್ನು ನಮ್ಮ ಪತ್ರಿಕೆಯಲ್ಲಿ ಅನುಕ್ರಮವಾಗಿ ಪ್ರಕಟಿಸಲಾಗುತ್ತಿದೆಯಷ್ಟೆ. ಈ ಪ್ರೌಢಕೃತಿಯನ್ನು ಸರಳ ಕನ್ನಡದಲ್ಲಿ ಅನುವಾದಿಸಿ ಕೊಟ್ಟ ಶ್ರೀಮತಿ ಯಮುನಾಬಾಯಿ ಆರ್. ರಾವ್ ಅವರು ಇತ್ತೀಚೆಗೆ ದೈವಾಧೀನರಾದರೆಂದು ತಿಳಿಸಲು ನಮಗೆ ಬಹಳ ವಿಷಾದವಾಗುತ್ತದೆ. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಆ ಕೃತಿಯ ಮುಂದಿನ ಭಾಗಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಸಂಪಾದಕ ವರ್ಗ ನಿರ್ಧರಿಸಿದೆ. ಈ ಪ್ರಯತ್ನದಲ್ಲಿ ಸಹಕಾರ ನೀಡುತ್ತಿರುವ ದಿವಂಗತರ ಪತಿ ಡಾ|| ಎಂ. ಆರ್. ರಾಘವೇಂದ್ರರಾಯರಿಗೆ ನಮ್ಮ ಕೃತಜ್ಞತೆಗಳನ್ನು ತಿಳಿಸುತ್ತೇವೆ.

ಈ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಹೊಯ್ಸಳ ಕಾಲದ ಯುದ್ಧೋದ್ಯಮ'ದ ಅಧ್ಯಯನಕ್ಕೆ ಪೂರಕವಾದ ಪಡಿಯಚ್ಚನ್ನು 'ಆರ್ಕಿಯಾಲಾಜಿಕಲ್ ಸ್ಟಡೀಸ್' ಪತ್ರಿಕೆಯ ಸಂಪಾದಕರಾದ ಡಾ|| ಎ. ವಿ. ನರಸಿಂಹಮೂರ್ತಿಯವರು ಕೊಟ್ಟಿದ್ದಾರೆ. ಡಾ|| ಆರ್. ಶಾಮಶಾಸ್ತ್ರಿಗಳ ಚಿತ್ರವನ್ನು ಅವರ ಪುತ್ರ ಎಂ. ಎಸ್. ಶ್ರೀನಿವಾಸನ್ ಒದಗಿಸಿದ್ದಾರೆ. ಅವರೆಲ್ಲರಿಗೂ ಸಂಪಾದಕರು ಆಭಾರಿಗಳಾಗಿದ್ದಾರೆ.

ಸಂಪಾದಕರು

ಮಾನವಿಕ ಕರ್ನಾಟಕ

ವಿಷಯ ಸೂಚಿಕೆ

ಸಂಪುಟ ೧೪

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೮೩-೮೪

ವಿಷಯ ಸೂಚಿ

(ಅ) ಲೇಖನಗಳು

ಲೇಖಕ ಸೂಚಿ

(ಅ) ಲೇಖನಗಳು

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ "ಮಾನವಿಕ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	:	ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-6
2.	ನಿಯತಕಾಲಿಕತೆ	:	ತ್ರೈಮಾಸಿಕ
3.	ಮುದ್ರಕರು	:	ಟಿ. ಬಾಬು, ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
4.	ಪ್ರಕಾಶಕರ ಹೆಸರು	:	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-6
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-6
5.	ಸಂಪಾದಕರ ಹೆಸರು	:	ಡಾ॥ ಬಿ. ಕೆ. ಗುರುರಾಜರಾವ್ ಡಾ॥ ಸಿ. ಕೆ. ರೇಣುಕಾರ್ಯ
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6
6.	ಪತ್ರಿಕಾ ಸ್ವಾಮಿತ್ವ ಮತ್ತು ವಿಳಾಸ ಬಂಡವಾಳದಲ್ಲಿ ನೂರಕ್ಕೆ 1ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದವುಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ
ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು-6

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬